① ವಾದಿರಾಜರು [illegible] ವ್ಯಾಖ್ಯಾನ ಬರೆದಿದ್ದಾರೆ.

ಸರ್ವ ಶಾಸ್ತ್ರಾರ್ಥ ನಿರ್ಣಯ:

॥ ಶ್ರೀಃ ॥

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯವು

ಒಂದನೇ ಅಧ್ಯಾಯ

ಓಂ ॥ ನಾರಾಯಣಂ ಪೂರ್ಣಗುಣೈಕದೇಹಂ
ಜನ್ಮಾದಿದಂ ಜ್ಞಾನವಿಬಂಧಹೇತುಂ ॥
ವಿಶ್ವಸ್ಯ ಭಕ್ತೇತರಸೌಖ್ಯದುಃಖ-
ಸದ್ಧೇತುವಿಾಶಂ ವಿತತಂ ನಮಾವಿ ॥

ನಮಾವಿ ನೀಲಾಂಬುದಕಾಂತಿಕಾಂತಂ
ವ್ಯಾಸಂ ನಿರಸ್ತಾಖಿಲದೋಷಪುಂಜಂ ॥
ಜ್ಞಾನಾದಿದಂ ಬ್ರಹ್ಮಶಿವಾದಿಕೇಭ್ಯಃ
ಸತ್ತರ್ಕಮುದ್ರಾಭಯಯುಕ್ತಹಸ್ತಂ ॥

ನಮೋsಸ್ತು ಗುಣಪೂರ್ಣಾಯ ದೋಷಶೂನ್ಯಾಯ ವಿಷ್ಣವೇ ।
ಸಮುಸ್ತಜಗತಾಂ ಮುಖ್ಯಹೇತವೇ ಧರ್ಮಸೇತವೇ ॥
ಹೃದಬ್ಜ ಸದನಂ ವಾಜಿವದನಂ ಸತ್ವಮೋದನಂ ।
ನಮಾವ್ಯಮುದಿತಂ ಬುದ್ಧಿಶೋಧನಂ ಪಾಪಭೇದನಂ ॥

ಪ್ರಣಮ್ಯ ನೃಹರಿಂ ಮುಧ್ವಂ ಗುರೂಂಶ್ಚಾನ್ಯಾನ್ಯಥಾಮತಿ ।
ಶ್ರೀಮನ್ಮಹಾಭಾರತಸ್ಯ ನಿರ್ಣಯಂ ನಿಶ್ಚಿತಾರ್ಥದಂ ॥
~~ಶ್ರೀಮದಾನಂದ ತೀರ್ಥಾರ್ಯೈಃ ಪ್ರಣೀತಂ ಸೇವಕೇಷ್ಟದಂ ।~~
ಕರ್ಣಾಟೀಕಯಾ ವಿವ್ಯಾನ್ ತಂತ್ರಿನಾರಾಯಣಾಹ್ವಯಃ ॥

ಪ್ರಕಾಶಯತಿ ಬಾಹುಲ್ಯಾತ್ ಭಾವದೀಪಿಕಯೋದಿತಂ ।
ಪದಾರ್ಥದೀಪಿಕೋಕ್ತಂ ಚ ಸಮಾಲೋಚ್ಯ ಸತಾಂ ಮುದೇ ॥

ಶ್ರೀಮದ್ಧನುಮದ್ಭೀಮ ಮಧ್ವಾಂತರ್ಗತ ರಾಮಕೃಷ್ಣವೇದವ್ಯಾಸಾತ್ಮಕ
ಲಕ್ಷ್ಮೀಹಯಗ್ರೀವಾಯ ನಮಃ ॥ ಹರಿಃ ಓಂ ॥

ಮೂ ॥ * ನಾರಾಯಣಾಯ ಪರಿಪೂರ್ಣಗುಣಾರ್ಣವಾಯ
ವಿಶ್ವೋದಯಸ್ಥಿತಿಲಯೋನ್ನಿಯಮಪ್ರದಾಯ ॥
ಜ್ಞಾನಪ್ರದಾಯ ವಿಬುಧಾಸುರಸೌಖ್ಯದುಃಖ-
ಸತ್ಕಾರಣಾಯ ವಿತತಾಯ ನಮೋ ನಮಸ್ತೇ ॥೧॥

---

* ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರು ಪುರಾಣಾದಿಗಳಲ್ಲಿ ತೋರುವ ಪರಸ್ಪರ ವಿರೋಧವನ್ನು ಪರಿಹರಿಸುತ್ತಾ ಶ್ರುತಿಸ್ಮೃತಿಗಳನ್ನುದಾಹರಿಸಿ, ಸರ್ವ ಶಾಸ್ತ್ರಾರ್ಥನಿರ್ಣಯವನ್ನು ಮಾಡುವವರಾಗಿ ಮೂಲರಾಮಾಯಣ, ಮಹಾಭಾರತ ಇವುಗಳ ತಾತ್ಪರ್ಯವನ್ನು ಪ್ರತಿಪಾದಿಸತಕ್ಕ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಾಖ್ಯಗ್ರಂಥವನ್ನುನಿರ್ಮಿಸಿರುವರು. ಈ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಕ್ಕೆ (೧) ಭಾವಿಸಮೀರ ಶ್ರೀಮದ್ವಾದಿರಾಜ ಶ್ರೀಮಚ್ಚರಣರು ಮಾಡಿದ ಭಾವಪ್ರಕಾಶಿಕಾ, (೨) ಜನಾರ್ದನಭಟ್ಟ ವಿರಚಿತ ಪದಾರ್ಥದೀಪಿಕಾ, (೩) ವರದರಾಜೀಯ, ①

ಆ ॥ ಪರಿಪೂರ್ಣಗಳಾದ ಗುಣಗಳಿಂದ ಸಮುದ್ರದಂತೆ ಇರುವವನೂ, ಜಗತ್ತಿಗೆ ಉತ್ಪತ್ತಿ-ಸ್ಥಿತಿ-ನಾಶ ಉತ್ಕೃಷ್ಟವಾದ ಪ್ರೇರಣೆ ಇವುಗಳನ್ನು ಕೊಡುವವನೂ, ಅವರವರ ಯೋಗ್ಯತಾನುಸಾರವಾಗಿ ಜ್ಞಾನವನ್ನು ಕೊಡುವವನೂ, ಅಂದರೆ ಉತ್ತಮಾಧಿಕಾರಿಗಳಿಗೆ ಉತ್ತಮ ಜ್ಞಾನವನ್ನೂ, ಮಧ್ಯಮಾಧಿಕಾರಿಗಳಿಗೆ ಮಧ್ಯಮ ಜ್ಞಾನವನ್ನೂ, ಅಧಮಾಧಿಕಾರಿಗಳಿಗೆ ಅಧಮ ಜ್ಞಾನವನ್ನೂ ಕೊಡುವವನೂ ದೇವತೆಗಳಿಗೆ ಅಂದರೆ ಉತ್ತಮ ಜೀವರಿಗೆ ಸ್ವಾಭಾವಿಕ ಸುಖಕ್ಕೂ, ಅಸುರರಿಗೆ ಅಂದರೆ ಅಧಮಜೀವರಿಗೆ ಸ್ವಾಭಾವಿಕ ದುಃಖಕ್ಕೂ, ಮಧ್ಯಮ ಜೀವರಿಗೆ ಸುಖ ದುಃಖಗಳೆರಡಕ್ಕೂ ಉತ್ತಮ ಕಾರಣನಾದವನೂ ಮತ್ತು ವ್ಯಾಪ್ತನಾದವನೂ ಇಂತಹ ನಾರಾಯಣನಿಗೋಸ್ಕರ ನಮಸ್ಕಾರವು.

ವಿಶೇಷಾಂಶ- (1) ' **ಅಥಾತೋ ಬ್ರಹ್ಮಜಿಜ್ಞಾಸಾ** ' ಎನ್ನುವ ಪ್ರಥಮ ಸೂತ್ರದಲ್ಲಿ ಬ್ರಹ್ಮಪದದಿಂದ ಸೂಚಿತವಾದ ಲಕ್ಷಣವನ್ನು '**ಪರಿಪೂರ್ಣಗುಣಾರ್ಣವಾಯ**' ಎನ್ನುವುದರಿಂದ ಹೇಳಿದರು. ಇದರಿಂದ ಸರ್ವಸ್ವಾಮಿತ್ವ, ಸರ್ವೋತ್ತಮತ್ವರೂಪವಾದ ಲಕ್ಷಣಾಂತರವು ಸೂಚಿತವಾಯಿತು. ಗುಣಗಳು ಪ್ರತ್ಯೇಕವಾಗಿ ಪರಿಪೂರ್ಣಗಳಾಗಿವೆ ಎಂದು ಹೇಳಿದುದರಿಂದ ಅನಂತಾನಂತ ಲಕ್ಷಣಗಳು ಸಂಗೃಹೀತಗಳಾದುವು. ಒಂದೇ ಲಕ್ಷಣದಿಂದ ಲಕ್ಷ್ಯ ನಿರ್ಧಾರಣವಾಗುವುದಾದರೂ ಜೀವರದೆಶೆಯಿಂದ ಶ್ರೀ ಹರಿಗೆ ಅತ್ಯಂತ ಭೇದವನ್ನು ಸಾಧಿಸುವುದಕ್ಕಾಗಿಯೂ ಇತರ ಸಾಧಾರಣಗಳಾದ ಅನಂತ ಶುಭಗುಣಗಳು ಇದ್ದುದರಿಂದ ಶ್ರೀಹರಿಗೆ ಮಹಾಮಾಹಾತ್ಮ್ಯವನ್ನು ಬೋಧಿಸುವುದಕ್ಕಾಗಿಯೂ ಅಂತಹ ಲಕ್ಷಣಗಳನ್ನು ಹೇಳಿರುವರು. [2] ತತ್ತ್ವಾಭಿಮಾನಿ ದೇವತೆಗಳಿಗೂ ಭಗವದ್ದತ್ತವಾದ ತತ್ತ್ವಪ್ರೇರಕತ್ವವಿದ್ದುದರಿಂದ ಅದನ್ನು ವ್ಯಾವರ್ತಿಸುವುದಕ್ಕಾಗಿ ಉನ್ನಿಯತಿ– ಉತ್ಕೃಷ್ಟಪ್ರೇರಣೆಯು ಎಂದು ಹೇಳಿರುವರು. **ಯೋಽಂತಃ ಪ್ರವಿಶ್ಯ ಮಮ ವಾಚಮಿಮಾಂ ಪ್ರಸುಪ್ತಾಂ ಸಂಜೀವಯತ್ಯಖಿಲಶಕ್ತಿಧರಃ ಸ್ವಧಾಮ್ನಾ । ಅನ್ಯಾಂಶ್ಚ ಹಸ್ತಚರಣಶ್ರವಣತ್ವಗಾದೀನ್ ಪ್ರಾಣಾನ್ನಮೋ ಭಗವತೇ ಪುರುಷಾಯ ತುಭ್ಯಂ ॥** ಯಾವ ಶ್ರೀ ಹರಿಯು ನನ್ನೊಳಗೆ ಪ್ರವೇಶಿಸಿ ಮಾತನಾಡತಕ್ಕ ಶಕ್ತಿಯನ್ನೂ, ಕೈಕಾಲುಗಳು ಮೊದಲಾದ ಜ್ಞಾನೇಂದ್ರಿಯಗಳಿಗೆ ಶಕ್ತಿಯನ್ನೂ ಈಯುವನೋ ಅಂತಹ ಗುಣಪೂರ್ಣನಾದ ನಾರಾಯಣನಿಗೋಸ್ಕರ ನಮಸ್ಕಾರವು. ಸಕಲ ಜೀವರ ಸಮುದಾಯಗಳಲ್ಲಿಯೂ ಅನನ್ಯಾಧೀನವಾಗಿ ಉತ್ಕೃಷ್ಟವಾದ ಪ್ರೇರಣೆಯು ಶ್ರೀಹರಿಯಿಂದಲೇ ಆಗುತ್ತದೆ. ಇಲ್ಲಿಯೂ ಪ್ರತ್ಯೇಕವಾಗಿ ಸ್ವೇತರ ಸಕಲ ಜಗತ್ಸೃಷ್ಟ್ಯಾದಿರೂಪವಾದ ಅನೇಕ ಲಕ್ಷಣಗಳನ್ನು ತಿಳಿಯತಕ್ಕುದ್ದು, ಇದರಿಂದ '**ಶ್ರೀಮನ್ನಾರಾಯಣಃ ಪರಿಪೂರ್ಣ ಜ್ಞಾನಾನಂದಬಲಾದಿ ಗುಣವಾನ್ ಭವಿತುಮರ್ಹತಿ ಸ್ವೇತರ ಸಕಲ ಜಗತ್ಸೃಷ್ಟ್ಯತ್ವಾತ್ ಸ್ವೇತರ ಸಕಲ ಜಗತ್ಪಾಲಕತ್ವಾತ್ ಸ್ವೇತರ ಸಕಲ ಜಗತ್ಸಂಹರ್ತೃತ್ವಾತ್ ವ್ಯತಿರೇಕೇಣ ದೇವದತ್ತವತ್**' ಶ್ರೀಮನ್ನಾರಾಯಣನು ತನ್ನಿಂದ ಇತರವಾದ ಸಕಲ ಜಗತ್ತನ್ನು/ ಸೃಷ್ಟಿಸುವುದರಿಂದಲೂ, ರಕ್ಷಿಸುವುದರಿಂದಲೂ, ಸಂಹರಿಸುವುದರಿಂದಲೂ ಪರಿಪೂರ್ಣಜ್ಞಾನ-ಆನಂದ-ಬಲ ಮೊದಲಾದ ಗುಣಗಳುಳ್ಳವನಾಗಲು ಯೋಗ್ಯನಾಗಿರುತ್ತಾನೆ.

---

(೪) ಶ್ರೀನಿವಾಸತೀರ್ಥೀಯ, (೫) ರಾಘವೇಂದ್ರ ಯತಿಕೃತ ಸಾರಸಂಗ್ರಹ, (೬) ವೇದಾಂಗ ತೀರ್ಥೀಯ ಎಂದು ಆರು ವ್ಯಾಖ್ಯಾನಗಳು ಇರುತ್ತವೆ. ಇವುಗಳಲ್ಲಿ ಹೆಚ್ಚಾಗಿ ಭಾವಪ್ರಕಾಶಿಕಾ ವ್ಯಾಖ್ಯಾನಾನುಸಾರವಾಗಿಯೂ, ಅದರಲ್ಲಿ ಹೇಳದೆ ಇರುವ ವಿಷಯವನ್ನು ಪದಾರ್ಥದೀಪಿಕಾ ವ್ಯಾಖ್ಯಾನಾನುಸಾರವಾಗಿಯೂ ಹೇಳಿರುವೆವು. ವ್ಯಾಖ್ಯಾನಗಳಲ್ಲಿ ಪ್ರಮಾಣಗಳನ್ನು ಹೆಚ್ಚು ಉದಾಹರಿಸಿರುವುದಾದರೂ ಗ್ರಂಥಾಧಿಕ್ಯಭಯದಿಂದ ಅವುಗಳನ್ನೆಲ್ಲಾ ಇಲ್ಲಿ ಉದಾಹರಿಸಿರುವುದಿಲ್ಲ. ಭಾವಪ್ರಕಾಶಿಕೆಯಲ್ಲಿರತಕ್ಕ ಅತ್ಯಾವೆಶ್ಯಕ ಪ್ರಮಾಣಗಳನ್ನು ಮಾತ್ರ ಇಲ್ಲಿ ಉದಾಹರಿಸಿರುವೆವು.

ವ್ಯತಿರೇಕದಿಂದ ದೇವದತ್ತನಂತೆ; ಇತ್ಯಾದಿ ಪ್ರಕಾರ ಅನೇಕ ವ್ಯತಿರೇಕ್ಯನುಮಾನಗಳು ಹಿಂದೆ ಹೇಳಿದ ಲಕ್ಷಣಗಳು ಇವೇ ಎನ್ನುವಲ್ಲಿ ಪ್ರಮಾಣಗಳೆಂದು ತಿಳಿಯತಕ್ಕದು; ಇತ್ಯಾದ್ಯನೇಕಾರ್ಥ ಗಳನ್ನು ತಿಳಿಸುವುದಕ್ಕಾಗಿ ಶ್ರೀಮದಾಚಾರ್ಯರು ' ವಿಶ್ವೋದಯಸ್ಥಿತಿಲಯೋನ್ನಿಯತಿ ಪ್ರದಾಯ ' ಎಂದು ಹೇಳಿರುವರು. (3) ಶ್ರೀಮದಾಚಾರ್ಯರು ಒಂದು ಎರಡು ಮೂರು (೧, ೨, ೩,) ಅಧ್ಯಾಯಗಳಿಂದ ಶ್ರುತಿ–ಸ್ಮೃತಿವಚನಗಳನ್ನುದಾಹರಿಸಿ ಸಕಲ ಶಾಸ್ತ್ರಾರ್ಥ ನಿರ್ಣಯವನ್ನು ಮಾಡಲಿಚ್ಛಿಸುತ್ತಾ ಪುನಃ ಆ ಮೇಲಿನ ಆರು (೬) ಅಧ್ಯಾಯಗಳಿಂದ ಮೂಲ ರಾಮಾಯಣಕಥೆಯನ್ನೂ, ಪುನಃ ಹತ್ತನೇ (೧೦) ಒಂದು ಅಧ್ಯಾಯದಿಂದ ವ್ಯಾಸಾವತಾರ ಕಥೆಯನ್ನೂ ಸಂಗ್ರಹಿಸಲಿಚ್ಛಿಸಿದವರಾಗಿ ಪುನಃ ಇಪ್ಪತ್ತೆರಡು (೨೨) ಅಧ್ಯಾಯಗಳಿಂದ ಶ್ರೀಮನ್ಮ ಹಾಭಾರತತಾತ್ಪರ್ಯವನ್ನೂ ಸವಿಸ್ತರವಾಗಿ ನಿರೂಪಿಸಲಿಕ್ಕೆ ಇಚ್ಛಿಸಿದವರಾಗಿ, ತಾನು ಅಂತ ರಾಯ ಲೇಶರಹಿತರಾದಾಗ್ಯೂ, ನಿರಂತರದಲ್ಲಿಯೂ ಪರಮ ಪ್ರೇಮಾಸ್ಪದನಾದ ಶ್ರೀನಾರಾಯಣ ನಲ್ಲಿ ನಿರುಪಾಧಿಕ ಭಕ್ತ್ಯುದ್ರೇಕದಿಂದ ಪ್ರಾರೀಪ್ಸಿತಗ್ರಂಥದ ಪರಿಸಮಾಪ್ತ್ಯಾದಿಗಳಿಗೆ ಕಾರಣೀಭೂತ ವಾದ ಅವಿಗೀತ ಶಿಷ್ಟಾಚಾರ ಪರಂಪರಾಪ್ರಾಪ್ತವಾದ ನಾರಾಯಣ ನಮಸ್ಕಾರರೂಪಮಂಗಲ ವನ್ನು ಸಮೂಪದಲ್ಲಿಲ್ಲದಿರುವ ಶಿಷ್ಯರಿಗೆ ಶಿಕ್ಷಿಸುವುದಕ್ಕಾಗಿ ಗ್ರಂಥಾದಿಯಲ್ಲಿ ನಿಬಂಧಿಸಿರುವರು ॥೧॥

ಈಗ ೧ ಶುದ್ಧಸೃಷ್ಟಿ, ೨ ಪರಾಧೀನವಿಶೇಷಾವಾಪ್ತಿರೂಪ ಸೃಷ್ಟಿ, ೩ ಮಿಶ್ರಸೃಷ್ಟಿ, ೪ ಕೇವಲ ಸೃಷ್ಟಿ, ಹೀಗೆ ನಾಲ್ಕು ವಿಧವಾದ ಸೃಷ್ಟಿಯನ್ನು ಸೃಷ್ಟೀಕರಿಸುವುದಕ್ಕಾಗಿ ಸೃಷ್ಟಿಕರ್ತನನ್ನು ಪ್ರಸ್ತಾವಿಸುತ್ತಾ ವಿಶ್ವೋತ್ಪತ್ತ್ಯಾದಿ ಕರ್ತೃತ್ವವು ನಾರಾಯಣನಿಗೇನೇ ಎಂದು ಹೇಳುವುದಕ್ಕಾಗಿ ಯಾವನು ಯಾರ ಉತ್ಪತ್ತ್ಯಾದಿಗಳನ್ನು ಮಾಡುವವನೋ, ಅವನು ಅವರಕ್ಕಿಂತ ಮೊದಲು ಇರತಕ್ಕವನಾಗಿ ಕಾಣಲ್ಪಟ್ಟಿದ್ದಾನೆ. ಆದಕಾರಣ ನಿಖಿಲ ಜಗತ್ತನ್ನು ಸೃಷ್ಟಿಸತಕ್ಕ ಶ್ರೀಹರಿಯೇ ಸರ್ವಜಗತ್ಪಿತನಿಂದ ಮೊದಲು ಇರತಕ್ಕವನೆನ್ನುತ್ತಾರೆ.

ಮೂ ॥ ಆಸೀದುದಾರಗುಣವಾರಿಧಿರಪ್ರಮೇಯೋ
ನಾರಾಯಣಃ ಪರತಮಃ ಪರಮಾತ್ಮ ಏಕಃ ॥
ಸಂಶಾಂತಸಂವಿದಖಿಲಂ ಜಗದೇ ನಿಧಾಯ
ಲಕ್ಷ್ಮೀಭುಜಾಂತರಗತಃ ಸ್ವರತೋಽಪಿ ಚಾಗ್ರೇ ॥ ೨ ॥

ಸ್ವಪ್ರಯೋಜನ ರಹಿತ

ಅ ॥ ಉತ್ಕೃಷ್ಟಗಳಾದ ಗುಣಗಳಿಂದ ಸಮುದ್ರದಂತೆ ಇರುವವನು, (ಅನಂತಾನಂತ ಗುಣಗಳು ಇದ್ದುದರಿಂದ) ಸಂಪೂರ್ಣವಾಗಿ ತಿಳಿಯಲಶಕ್ಯನು, ಬ್ರಹ್ಮಾದಿಗಳಿಂದ ಉತ್ತಮಳಾದ ಲಕ್ಷ್ಮೀದೇವಿಯಿಂದಲೂ ಅತ್ಯುತ್ತಮನು, ಇಂತಹ ನಾರಾಯಣನೊಬ್ಬನೇ (ಅಗ್ರೇ =) ಸಕಲ ಜಗತ್ಪಿನ ಸೃಷ್ಟಿಗಿಂತ ಮೊದಲು ಅಂದರೆ, ಪ್ರಳಯಕಾಲದಲ್ಲಿ (ಉಪದೇಶ್ಯರಾದ ಬ್ರಹ್ಮಾದಿಗಳು ಪ್ರಳಯಕಾಲದಲ್ಲಿ ಇಲ್ಲದಿರುವುದರಿಂದಲೂ ಸ್ವನಿಯಮ್ಯ ಜಗತ್ತೂ ಇಲ್ಲದಿರುವುದರಿಂದಲೂ, ತನ್ನ ಬುದ್ಧಿಯಲ್ಲಿರತಕ್ಕ ಅನಂತಾನಂತ ವೇದಗಳನ್ನು ಪ್ರತಿಬೋಧಿಸುವುದಕ್ಕಾಗಿ) (ಹೃದಯ ದಲ್ಲಿಯೇ) ಚೆನ್ನಾಗಿ ನಿಗೂಢವಾದ ಜ್ಞಾನವುಳ್ಳವನಾಗಿ ಎಲ್ಲಾ ಜಗತ್ತನ್ನೂ ಹೊಟ್ಟೆಯಲ್ಲಿಟ್ಟು ಕೊಂಡು, ಲಕ್ಷ್ಮೀದೇವಿಯನ್ನು ತನ್ನ ಭುಜಗಳ ಮಧ್ಯದಲ್ಲಿ ಇಟ್ಟುಕೊಂಡವನಾಗಿಯೂ (ಸ್ವರತಃ) ಆ ಲಕ್ಷ್ಮೀದೇವಿಯಲ್ಲಿಯೂ ಚೆನ್ನಾಗಿ ರಮಿಸದೆ ಇದ್ದವನಾಗಿ ತನ್ನಲ್ಲಿಯೇ ರಮಿಸುತ್ತಾ ಅಂದರೆ, ಆನಂದವನ್ನು ಅನುಭವಿಸುವವನಾಗಿಯೇ ಇದ್ದನು. (ಅಂದರೆ — ಜಗತ್ತು ನಾಶವನ್ನು

ಹೊಂದಿದಾಗ ತಾನು ಪ್ರಳಯವನ್ನು ಹೊಂದದೆ ಮತ್ತೂ ತನಗೆ ಪ್ರಾಗಭಾವವಿಲ್ಲದಿರುವುದರಿಂದ ಮುಂದೆ ಆಗತಕ್ಕ ಜಗತ್ತಿನಂತೆ ತಾನು ಉತ್ಪತ್ತಿಯನ್ನೂ, ಹೊಂದದೆ ಸರ್ವಗುಣಪರಿಪೂರ್ಣನಾಗಿಯೇ ಪೂರ್ಣಾನಂದವನ್ನು ಅನುಭವಿಸಿಕೊಂಡೇ ಇರುತ್ತಿದ್ದನು.)

ವಿಶೇಷಾಂಶ— (1) ಲಕ್ಷ್ಮ್ಯಲಿಂಗನದಿಂದ ಲಕ್ಷ್ಮೀದೇವಿಗೆ ಆನಂದಾಭಿವ್ಯಕ್ತಿರೂಪ ಪ್ರಯೋಜನವಿದ್ದರೂ, ಶ್ರೀಹರಿಯು ಸದಾ ಅಭಿವ್ಯಕ್ತವಾದ ಆನಂದರೂಪನಾದುದರಿಂದ ಆತನಿಗೆ ಅಂತಹ ಪ್ರಯೋಜನವೂ ಇಲ್ಲವೆಂದು ಸೂಚಿಸುವುದಕ್ಕಾಗಿ 'ಸ್ವರತಃ' ಎಂದು ಹೇಳಿರುವರು ॥೨॥

ಈಗ ಜಗತ್ಸೃಷ್ಟಿಯಿಂದ ತನಗೆ ಪ್ರಯೋಜನವಿಲ್ಲವಾದರೂ ಪರರಿಗೆ ಪ್ರಯೋಜನವಿದೆ ಎಂದು ಸೂಚಿಸುತ್ತಾ, ಪ್ರೇಕ್ಷಾಪೂರ್ವಕವಾಗಿ ಸೃಷ್ಟಿಮಾಡತಕ್ಕವನೇ ಕರ್ತನು ಆಗುವುದರಿಂದ ಸೃಷ್ಟ್ಯನುಕೂಲವಾದ ಜ್ಞಾನವಿಶೇಷವು ಅಭಿವ್ಯಕ್ತವಾಯಿತೆನ್ನುತ್ತಾರೆ—

ಮೂ ॥ ತಸ್ಯೋದರಸ್ಥ ಜಗತಃ ಸದಮುಂದಸಾಂದ್ರ-
ಸ್ವಾನಂದತುಷ್ಟವಪುಷೋಽಪಿ ರಮಾರಮಸ್ಯ |
ಭೂತ್ಯೈ ನಿಜಾಶ್ರಿತಜನಸ್ಯ ಹಿ ಸ್ಪಜ್ಯಸೃಷ್ಟಾ.
(1) ವೀಕ್ಷಾ ಬಭೂವ ಪರನಾಮು ನಿಮೇಷಕಾಂತೇ ॥೩॥

ಅ ॥ ಹೊಟ್ಟೆಯಲ್ಲಿ ಇರತಕ್ಕ ಬ್ರಹ್ಮಾದಿ ಜಗತ್ತುಳ್ಳವನೂ ಅಂದರೆ ಬ್ರಹ್ಮಾದಿ ಜಗತ್ತನ್ನು ಹೊಟ್ಟೆಯಲ್ಲಿ ಧರಿಸಿಕೊಂಡು ಇರುವವನೂ, ದೋಷಲೇಶವಿಲ್ಲದಿರುವ (ಅಂದರೆ ಅನಿತ್ಯತ್ವ, ದುಃಖಯುತತ್ವ, ಅಲ್ಪತ್ವ ಮೊದಲಾದ ದೋಷಾತ್ಯಂತಾಭಾವವುಳ್ಳ) ಪೂರ್ಣವಾದ ನಿಬಿಡವಾದ, ಸ್ವರೂಪಭೂತವಾದ ಆನಂದದಿಂದ ಅಲಂಬುದ್ಧಿಯುಕ್ತವಾದ ಶರೀರವುಳ್ಳವನಾದಾಗ್ಯೂ ಆ ರಮಾರಮಣನಾದ ಶ್ರೀನಾರಾಯಣನಿಗೆ ಸ್ವಾಶ್ರಿತರಾದ ರಮಾಬ್ರಹ್ಮಾದಿಗಳ ಸಮುದಾಯದ ಐಶ್ವರ್ಯಕ್ಕಾಗಿ ಪ್ರಳಯಕಾಲೀನವಾದ ಶ್ರೀಹರಿಯ ಚಕ್ಷುರ್ನಿಮೀಲನದ ಅಂತ್ಯದಲ್ಲಿ ಅಂದರೆ ಪ್ರಳಯಕಾಲದ ಅಂತ್ಯದಲ್ಲಿ (ಸೃಷ್ಟಿಗಿಂತ ಮೊದಲು) ಸೃಷ್ಟಿಮಾಡಲಿಕ್ಕೆ ಯೋಗ್ಯಗಳಾದ ವಸ್ತುಗಳನ್ನು ಸೃಷ್ಟಿಮಾಡುವ ವಿಷಯದಲ್ಲಿ ಈಕ್ಷೆಯು ಅಭಿವ್ಯಕ್ತವಾಯಿತು.

ವಿಶೇಷಾಂಶ – (1) ನನ್ನ ಪ್ರಿಯನಾದ ಶ್ರೀಹರಿಯು ಇಂತಹ ಮಹದೈಶ್ವರ್ಯವುಳ್ಳವನೆಂದು ಹರ್ಷೋದ್ರೇಕವೇ ರಮಾದೇವಿಗೆ ಭೂತಿಯು (ಐಶ್ವರ್ಯವು.) ಇತರರಾದ ಬ್ರಹ್ಮಾದಿ ದೇವತಾದಿಗಳಿಗೆ ಸತ್ಯ ಲೋಕಾದಿ ಪ್ರಾಪ್ತಿಯೇ ಭೂತಿಯು ಎಂದು ತಿಳಿಯತಕ್ಕದು (2) ನಮ್ಮಂತೆಯೇ ನಿಮೇಷ (ರೆಪ್ಪೆಮುಚ್ಚಿ ತೆರೆಯುವ ಸಮಯ)ದ ಗಣನೆಯಿಂದ ಆಯುಸ್ಸನ್ನು ಗಣನ ಮಾಡಿದರೆ ಶ್ರೀಹರಿಗೂ ಸಾವಧಿಕವಾದ (ಅವಧಿಯಿರುವ) ಆಯುಸ್ಸೇ ಆಗಬೇಕಾಗುವುದು.
(1) ಆದುದರಿಂದ ಈ ನಿಮೇಷವು ಶ್ರೀಹರಿಗೆ ಔಪಚಾರಿಕವು, ಸ್ವಾಭಾವಿಕವಲ್ಲ, ಎಂದು ನಿಮೇಷಕ್ಕೆ ಕುತ್ಸಿತತ್ವವನ್ನು ತೋರಿಸುವುದಕ್ಕಾಗಿ ' ನಿಮೇಷಕ " ಎಂದು ಕ ಪ್ರತ್ಯಯವನ್ನು ಹೇಳಿರುವರು ॥ ೩ ॥

ಭಗವಂತನ ಉದರದಲ್ಲಿರತಕ್ಕ ಚೇತನಗಳ ಅವಸ್ಥಾದರ್ಶನಪ್ರಕಾರವನ್ನು ವರ್ಣಿಸುತ್ತಾರೆ,

ಮೂ ॥ ದೃಷ್ಟ್ವಾ ಸ ಚೇತನಗಣಾನ್ ಜಠರೇ ಶಯಾನಾ–
ನಾನಂದಮಾತ್ರವಪುಷಃ ಸೃತಿವಿಪ್ರಮುಕ್ತಾನ್ ॥

ಧ್ಯಾನಂ ಗತಾನ್ ಸೃತಿಗತಾಂಶ್ಚ ಸುಷುಪ್ತಿ ಸಂಸ್ಥಾನ್
ಬ್ರಹ್ಮಾದಿಕಾನ್ ಕಲಿಪರಾನ್ಮನುಜಾಂಸ್ತಥೈಕ್ಷತ್ ॥೪॥

ಅ॥ ಆ ಶ್ರೀಮನ್ನಾರಾಯಣನು ತನ್ನ ಹೊಟ್ಟೆಯಲ್ಲಿ ಮಲಗಿಕೊಂಡಿರುವ (ಮುಕ್ತರು ಸಂಸಾರಿಗಳು ಎನ್ನುವ ದ್ವಿವಿಧ) ಚೇತನರ ಸಮುದಾಯಗಳನ್ನು (ಸಾಮಾನ್ಯವಾಗಿ) ನೋಡಿ, (ಪುನಃ) ಸಂಸಾರದಿಂದ ವಿಶೇಷಾಕಾರವಾಗಿ ಪ್ರಮುಕ್ತರಾದ ಅಂದರೆ ಸಂಪೂರ್ಣ ಬಿಡುಗಡೆಯನ್ನು ಹೊಂದಿದ ಸ್ವರೂಪಾನಂದವೇ ಶರೀರವಾಗಿವುಳ್ಳ, ಧ್ಯಾನವನ್ನು ಮಾಡಿಕೊಂಡಿರುವ (ಉತ್ತಮ ಮುಕ್ತರನ್ನೂ) ನೋಡಿದನು. ಹಾಗೆಯೇ ಸಂಸಾರದಲ್ಲಿರತಕ್ಕ ಮತ್ತು ಸುಷುಪ್ತಿಯಲ್ಲಿರತಕ್ಕ ಬ್ರಹ್ಮಾದಿಕಾನ್=ರುದ್ರಾದ್ಯುತ್ತಮಜೀವರನ್ನೂ, (ಅಧಮಮನುಷ್ಯರನ್ನಾರಂಭಿಸಿ) ಕಲಿಯೇ ಅವಸಾನವಾಗಿವುಳ್ಳ (ಅಧಮ ಜೀವರನ್ನೂ) (ಮಧ್ಯಮ) ಜೀವರನ್ನೂ ಕೂಡ ಸುಷುಪ್ತಿಯಲ್ಲಿರತಕ್ಕವರನ್ನಾಗಿ ನೋಡಿದನು. (ಹಾಗೆಯೇ ಇದರಿಂದ ಅತಿರಿಕ್ತರಾದ ಅಧಮ ಮುಕ್ತರನ್ನೂ ಮಧ್ಯಮ ಮುಕ್ತರನ್ನೂ ಹೇಗೆ ಇದ್ದಾರೋ ಹಾಗೆಯೇ ನೋಡಿದನು).

ವಿಶೇಷಾಂಶ—(1) ಮುಕ್ತರು, ಸಂಸಾರಿಗಳು ಎಂದು ಚೇತನರು ಎರಡು ವಿಧದವರು, ಅದರಲ್ಲಿ ಲಿಂಗದೇಹದಿಂದ ಬಿಡಲ್ಪಟ್ಟವರೇ ಮುಕ್ತರೆಂದು ಹೇಳಿಸಿಕೊಳ್ಳಲ್ಪಡುತ್ತಾರೆ. ಅವರು ಉತ್ತಮರು, ಮಧ್ಯಮರು, ಅಧಮರು ಎಂದು ಮೂರುವಿಧದವರು. ಅವರಲ್ಲಿ ಸ್ವರೂಪಭೂತವಾದ ಸುಖದು:ಖದಿಂದ ಮಿಶ್ರರಾದವರು ಮಧ್ಯಮರು; ಸ್ವರೂಪಭೂತವಾದ ದು:ಖಮಾತ್ರದಿಂದ ಕೂಡಿದವರು ಅಧಮರು. ಇವರ ಅವಸ್ಥಾದ್ವಯವು ದುರವಸ್ಥಾರೂಪವಾಗಿರುವುದರಿಂದ ಅತಿಹೀನವಾದಪ್ರಯುಕ್ತ ಶ್ರೀಮದಾಚಾರ್ಯರಿಂದ ಉಪೇಕ್ಷಿತವಾಗಿದೆ ಎಂದು ಸೂಚಿಸುವುದಕ್ಕಾಗಿ ತಥಾ ಎಂದು ಸಾಮಾನ್ಯವಾಗಿ ಮುಂದಕ್ಕೆ ಹೇಳುತ್ತಾ ತದತಿರಿಕ್ತ ಮುಕ್ತರ ಮತ್ತು ಅಮುಕ್ತೋತ್ತಮರಾದ ಮಧ್ಯಮಾಧಮ ಜೀವರ ಅವಸ್ಥಾದ್ವಯವನ್ನು 'ಆನಂದಮಾತ್ರವಪುಷಃ' ಇತ್ಯಾದಿಗಳಿಂದ ಬಿಡಿಸಿ ತೋರಿಸಿದರು. (2) ಇಲ್ಲಿ ಬ್ರಹ್ಮಪದದಿಂದ ಚತುರ್ಮುಖಿ ಬ್ರಹ್ಮನು ಹೇಳಲ್ಪಡುವುದಿಲ್ಲ, ಅವನು ಪರಾಂತಕಾಲದಲ್ಲಿ ಮುಕ್ತನಾದುದರಿಂದ ಮುಕ್ತಗಣಗಳಲ್ಲಿಯೇ ಸೇರಿರುವನು. ಆದುದರಿಂದ ಭಾವೀಬ್ರಹ್ಮನಾದ ವಾಯುವನ್ನೇ ಇಟ್ಟುಕೊಳ್ಳಬೇಕು. **'ವಾಯುರ್ವಾವನಿತ್ಯಃ'** ಎನ್ನುವ ಶ್ರುತಿಯಲ್ಲಿ ನಿತ್ಯಾನಿತ್ಯಗಳಾದ ಆಕಾಶಾದಿಗಳದೆಶೆಯಿಂದ ವಿಶೇಷಾಕಾರವಾಗಿ ನಿತ್ಯತ್ವವನ್ನು ಹೇಳುವುದಕ್ಕಾಗಿ ಸ್ವರೂಪಾತಿರಿಕ್ತವಾದ ಜ್ಞಾನಕ್ಕೂ ನಿತ್ಯತ್ವವಿದೆ ಎನ್ನುವ ಅಭಿಪ್ರಾಯದಿಂದ ವಾಯುವಿಗೂ ಅತಿಶಯವಾಗಿ ನಿತ್ಯತ್ವವು ಹೇಳಲ್ಪಡುತ್ತದೆ, ಎಂದು ಟೀಕಾಕಾರರೂ ಬಾಹ್ಯಜ್ಞಾನಕ್ಕೂ ನಿತ್ಯತ್ವವನ್ನು ಹೇಳಿರುತ್ತಾರೆ. ಆದುದರಿಂದ ಸುಪ್ತಿಯು ಅವರಿಬ್ಬರಿಗೆ ಯೋಗ್ಯವಲ್ಲ; ಆದಕಾರಣ ಬ್ರಹ್ಮಾದಿ ಶಬ್ದದಿಂದ ಚತುರ್ಮುಖಿಬ್ರಹ್ಮ ವಾಯು ಇವರಿಬ್ಬರನ್ನು ಬಿಟ್ಟು ರುದ್ರಾದ್ಯುತ್ತಮ ಜೀವರನ್ನೇ ಇಟ್ಟುಕೊಳ್ಳಬೇಕು ॥ ೪ ॥

ಈಗ ಸೃಷ್ಟಿಗೆ ಅನುಕೂಲವಾದ ಶ್ರೀಹರಿಯ ಸಂಕಲ್ಪವನ್ನು ಹೇಳುತ್ತಾರೆ—

ಮೂ ॥ ಸ್ರಕ್ಷ್ಯೇ ಹಿ ಚೇತನಗಣಾನ್ ಸುಖದುಃಖಮುಧ್ಯ
ಸಂಪ್ರಾಪ್ತಯೇ ತನುಭೃತಾಂ ವಿಹೃತಿಂ ಮಮೇಚ್ಛನ್॥
ಸೋಽಯಂ ವಿಹಾರ ಇಹ ವೇ ತನುಭೃತ್ಸ್ವಭಾವ
ಸಂಭೂತಯೇ ಭವತಿ ಭೂತಿಕೃದೇವ ಭೂತ್ಯೈ ॥ ೫ ॥

ಅ ॥ (ಬ್ರಹ್ಮಾದ್ಯುತ್ತಮ) ಜೀವರಿಗೆ, (ಕೇವಲ ಸ್ವರೂಪಭೂತವಾದ) ಸುಖ, (ಕಲ್ಯಾನ್ಯಧಮ) ಜೀವರಿಗೆ (ಕೇವಲ ಸ್ವರೂಪಭೂತವಾದ) ದುಃಖ, (ನಿತ್ಯ ಸಂಸಾರಿಗಳೆಂಬ ಮಧ್ಯಮ) ಜೀವರಿಗೆ (ಸ್ವರೂಪಭೂತವಾದ) ದುಃಖಮಿಶ್ರ ಸುಖ ಇವುಗಳ ಸಂಪ್ರಾಪ್ತಿಗಾಗಿ, (ಅಂದರೆ ನಿರೋಧಕ ಲಿಂಗದೇಹಭಂಗದಿಂದ ಚೆನ್ನಾಗಿ ಅನುಭವ ಬರುವುದಕ್ಕಾಗಿ.) ತನ್ನ (ರೂಪಗಳಿಗೆ) ಕ್ರೀಡೆಯನ್ನು ಇಚ್ಛಿಸುತ್ತಾ ಚೇತನರ ಸಮುದಾಯಗಳನ್ನು ನಾನು ಸೃಷ್ಟಿಸುವೆನು. ಆ ನನ್ನ ಕ್ರೀಡೆಯು ಈ ಸಂಸಾರದಲ್ಲಿ, ಪ್ರಾಣಿಗಳಿಗೆ (ಹಿಂದೆ ಹೇಳಿದ ತ್ರಿವಿಧ) ಸ್ವಭಾವದ ಚೆನ್ನಾಗಿ ಅನುಭವ ಬರುವುದಕ್ಕಾಗಿಯೂ, (ಲಕ್ಷ್ಮೀನಿಯಮ್ಯವಾದ) ಜಡಪ್ರಕೃತಿಗೂ (ಮಹದಾದಿ ರೂಪಗಳಿಂದ) ಭೂತಿಕೃದೇವ) ಬಹುತ್ವವನ್ನು ಮಾಡುವುದಾಗಿಯೇ (ಮತ್ತು ನಿಯಾಮಕಳಾದ) ಲಕ್ಷ್ಮೀದೇವಿಗೂ ಕೂಡಾ ನಿಯಾಮಕಾನೇಕ) ರೂಪಗಳನ್ನು ಮಾಡುವುದಾಗಿಯೇ ಆಗುತ್ತದೆ.

ವಿಶೇಷಾಂಶ—ಏವಂಚ ಉತ್ತಮ-ಅಧಮ ಜೀವರಂತೆ ಮಧ್ಯಮ ಜೀವರಿಗೂ, ಸಾಂಸಾರಿಕ ಅನಿತ್ಯ ಸುಖ-ದುಃಖಗಳಿಗೆ ಸ್ವಭಾವತ್ವವು ಕೂಡದಿರುವುದರಿಂದ ಸ್ವಭಾವಭೂತಸ್ವರೂಪ ಸುಖ-ದುಃಖಗಳ ಅಭಿವ್ಯಕ್ತಿಯಾಗುತ್ತದೆ ಎಂದು ಇಟ್ಟುಕೊಳ್ಳಬೇಕು. ॥೫॥

೧ ಶುದ್ಧಸೃಷ್ಟಿ, ೨ ಪರಾಧೀನವಿಶೇಷಾವಾಪ್ತಿರೂಪಸೃಷ್ಟಿ, ೩ ಮಿಶ್ರಸೃಷ್ಟಿ, ೪ ಕೇವಲ ಸೃಷ್ಟಿ- ಹೀಗೆ ಸೃಷ್ಟಿಯು ನಾಲ್ಕು ವಿಧವು, ಅದರಲ್ಲಿ ೧ ಶುದ್ಧಸೃಷ್ಟಿ ಎಂದರೆ — ದೇಹ-ಇಂದ್ರಿಯ ಅಂತಃಕರಣಾದಿಗಳಿಗೆ ಸ್ವಲ್ಪವೂ ವಿಕಾರವಿಲ್ಲದಿದ್ದರೂ ಕೇವಲ ಲೀಲೆಯಿಂದಲೇ ಜಗತ್ತಿನ ಉಪಕಾರಕ್ಕಾಗಿ ಮೂಲರೂಪದಿಂದ ಬಹಿರಾಗಮನವು. ೨ನೇದ್ದು ಪರಾಧೀನವಿಶೇಷಾವಾಪ್ತಿರೂಪಸೃಷ್ಟಿಯು. ಲಕ್ಷ್ಮ್ಯಾದಿಗಳಿಗೆ ಸೃಷ್ಟ್ಯಾದಿಕಾಲದಲ್ಲಿ ಶ್ರೀ ಹರಿಯ ಆಜ್ಞೆಯಿಂದ ಪ್ರಕೃತಿಸ್ವಾಮಿತ್ವ ಮೊದಲಾದ ವಿಶೇಷ ಪ್ರಾಪ್ತಿಯು. ೩ ಮಿಶ್ರಸೃಷ್ಟಿಎಂದರೆ- ಚೈತನ್ಯರೂಪದಿಂದ ನಿತ್ಯರಾದ ಜೀವರಿಗೆ ಕೇವಲವಾಗಿ ಬಾಹ್ಯಶರೀರದಿಂದಲೇ ಉತ್ಪತ್ತಿಯು. ಆದರ ಮಧ್ಯದಲ್ಲಿ

ಈಗ ಶುದ್ಧಸೃಷ್ಟಿಯನ್ನು ಹೇಳುತ್ತಾರೆ—

ಮೂ ॥ ಇತ್ಥಂವಿಚಿಂತ್ಯ ಪರಮಃ ಸ ತು ವಾಸುದೇವ
ನಾಮಾ ಬಭೂವ ನಿಜಮುಕ್ತಿಪದಪ್ರದಾತಾ ॥
ತಸ್ಯಾಜ್ಞಯೈವ ನಿಯತಾಽಥ ರಮಾಽಪಿ ರೂಪಂ
ಬಭ್ರೇ ದ್ವಿತೀಯಮಪಿ ಯತ್ಪ್ರವದಂತಿ ಮಾಯಾಂ ॥ ೬ ॥

ಅ ॥ (ಪರಮಃ) ಸರ್ವೋತ್ಕೃಷ್ಟವಾದ ಬುದ್ಧಿಯುಳ್ಳ ಆ ನಾರಾಯಣನಾದರೂ ಹಿಂದೆ ಹೇಳಿದ ಪ್ರಕಾರ ಆಲೋಚಿಸಿ, ತನ್ನ ಭಕ್ತರಿಗೆ ಮುಕ್ತಿಸ್ಥಾನವನ್ನು ಕೊಡತಕ್ಕ ವಾಸುದೇವ ನಾಮಕರೂಪವುಳ್ಳವನಾದನು (೨ನೇ ಸೃಷ್ಟಿಯನ್ನು ಹೇಳುತ್ತಾರೆ.) ಆ ನಾರಾಯಣನ ಅಪ್ಪಣೆಯಿಂದಲೇ ನಿಯತಳಾದ ಲಕ್ಷ್ಮೀದೇವಿಯೂ ಕೂಡ ಯಾವ ರೂಪವನ್ನು ಮಾಯಾನಾಮಕವನ್ನಾಗಿ ಹೇಳುತ್ತಾರೋ (ಅಂತಹ) ಎರಡನೇ ರೂಪವನ್ನೂ ಕೂಡ ಹೊಂದಿದಳು.

ವಿಶೇಷಾಂಶ-(1) ವಾಸುದೇವರೂಪಿಯಾದ ಶ್ರೀ ಹರಿಗೆ ಲಕ್ಷ್ಮೀರೂಪಳಾದ ಮಾಯಾದೇವಿಯು ಹೆಂಡತಿಯಾದಳು. (2) ಲಕ್ಷ್ಮೀಯು ಶ್ರೀ ಹರಿಯಂತೆ ಸ್ವತಂತ್ರಳಲ್ಲ, ಮತ್ತೆ ಶ್ರೀ ಹರಿಯಿಂದ ನಿಯಮಿಸಲ್ಪಟ್ಟವಳೇ ಆಗಿರುತ್ತಾಳೆ. ಮತ್ತು ನಿತ್ಯದೇಹವುಳ್ಳವಳೂ ನಿತ್ಯಾವಿಯುಕ್ತಳೂ

ಆಗಿರುತ್ತಾಳೆ. (3) 'ಯತ್ತ್ವವದಂತಿ ಮಾಯಾಂ' ಎನ್ನುವುದರಿಂದ ಲಕ್ಷ್ಮೀರೂಪಳಾದ ಮಾಯೆಯನ್ನು ಆಲಿಂಗಿಸಿಕೊಂಡಿದ್ದುದರಿಂದಲೇ ಶ್ರೀ ಹರಿಗೂ ಮಾಯಿ ಎಂದು ಹೆಸರು, ಪರಾಭಿಮತವಾದ ಭ್ರಾಮಕವಾದ ಮಾಯಾಶ್ರಯತ್ವದಿಂದ ಅಲ್ಲವೆಂದು ಸೂಚಿತವಾಯಿತು. ॥೬॥

ಪುನಃ ಶುದ್ಧಸೃಷ್ಟಿಯನ್ನು ಹೇಳುತ್ತಾರೆ—

ಮೂ ॥ **ಸಂಕರ್ಷಣಃ ಸ ಚ ಬಭೂವ ಪುನಃ ಸುನಿತ್ಯಃ**
ಸಂಹಾರಕಾರಣವಪುಸ್ತದನುಜ್ಞಯೈವ ॥
ದೇವೀ ಜಯೇತ್ಯನುಬಭೂವ ಸ ಸೃಷ್ಟಿಹೇತೋಃ
ಪ್ರದ್ಯುಮ್ನತಾಮುಪಗತಃ ಕೃತಿತಾಂ ಚ ದೇವೀ ॥೭॥

ಅ ॥ ಆ ನಾರಾಯಣನು (ವಾಸುದೇವಾವತಾರವನ್ನು ಮಾಡಿದ ಮೇಲೆ) ಸುನಿತ್ಯಃ - ನಾಶರಹಿತನಾದ, (ಮತ್ತು) (ಜಗತ್ತಿನ) ಸಂಹಾರದಲ್ಲಿ ಕಾರಣೀಭೂತವಾದ ಶರೀರವುಳ್ಳ ಸಂಕರ್ಷಣನಾಮಕನಾಗಿ ಅವತರಿಸಿದನು. ಆ ಸಂಕರ್ಷಣನ ಆಜ್ಞೆಯಿಂದಲೇ ಲಕ್ಷ್ಮೀದೇವಿಯು ಜಯಾನಾಮಕಳಾದಳು. (ಪುನಃ ಶುದ್ಧ ಸೃಷ್ಟಿಯನ್ನು ಹೇಳುತ್ತಾರೆ) ಆ ನಾರಾಯಣನು (ಜಗತ್ತಿನ ಸೃಷ್ಟಿಗಾಗಿ ಪ್ರದ್ಯುಮ್ನರೂಪವನ್ನು ಹೊಂದಿದನು. ಲಕ್ಷ್ಮೀದೇವಿಯು ಶ್ರೀಹರಿಯ ಆಜ್ಞಾನುಸಾರವಾಗಿ ಕೃತಿರೂಪವನ್ನು ಹೊಂದಿದಳು.

ವಿಶೇಷಾಂಶ — (1) ಸಂಕರ್ಷಣರೂಪಿಯಾದ ಶ್ರೀ ಹರಿಗೆ ಲಕ್ಷ್ಮೀರೂಪಳಾದ ಜಯಾ ದೇವಿಯೂ, ಪ್ರದ್ಯುಮ್ನನಾಮಕ ಶ್ರೀಹರಿಗೆ ಲಕ್ಷ್ಮೀರೂಪಳಾದ ಕೃತಿದೇವಿಯೂ, ಹೆಂಡಂದಿರಾದರು. (2) **ಅನಿತ್ಯತ್ವಂ ದೇಹಹಾನಿರ್ದುಃಖಪ್ರಾಪ್ತಿರಪೂರ್ಣತಾ। ನಾಶಶ್ಚತುರ್ವಿಧೋ ಜ್ಞೇಯಸ್ತದಭಾವೋ ಹರೇಸ್ಸದಾ** ॥ ಅನಿತ್ಯತ್ವದೇಹನಾಶ, ದುಃಖಪ್ರಾಪ್ತಿ, ಅಪೂರ್ಣತ್ವ. ಹೀಗೆ ನಾಲ್ಕುವಿಧ ನಾಶವು. ಇದು ಯಾವಾಗಲೂ ಶ್ರೀಹರಿಗೆ ಇಲ್ಲವೆನ್ನುವ ಅಭಿಪ್ರಾಯದಿಂದ ಸುನಿತ್ಯಃ ಎಂದು ಹೇಳಿರುವರು. ॥ ೭ ॥

ಮೂ ॥ **ಸ್ಥಿತ್ಯೈ ಪುನಃ ಸ ಭಗವಾನನಿರುದ್ಧನಾಮಾ**
ದೇವೀ ಚ ಶಾಂತಿರಭವಚ್ಛರದಾಂ ಸಹಸ್ರಂ ॥
ಸ್ಥಿತ್ವಾ ಸ್ವಮೂರ್ತಿಭಿರಮೂಭಿರಚಿಂತ್ಯಶಕ್ತಿಃ
ಪ್ರದ್ಯುಮ್ನರೂಪಕ ಇಮಾಂಶ್ಚರಮಾತ್ಮನೇsದಾತ್ ॥೮॥

ಅ ॥ ಆ ಶ್ರೀಹರಿಯು (ಪುನಃ) ಪ್ರದ್ಯುಮ್ನಾವತಾರವನ್ನು ಮಾಡಿದಮೇಲೆ(ಬ್ರಹ್ಮಾದಿ ಜಗತ್ತಿನ) ಸ್ಥಿತಿಗೋಸ್ಕರ ಅನಿರುದ್ಧನಾಮಕನಾದನು. ಲಕ್ಷ್ಮೀದೇವಿಯು ಶಾಂತಿನಾಮಕಳಾದಳು. ಅಪರಿಮಿತ ಶಕ್ತಿಯುಳ್ಳ ಪ್ರದ್ಯುಮ್ನಸ್ವರೂಪನಾದ ಸುಖರೂಪನಾದ ಶ್ರೀ ಹರಿಯು ಈ ತನ್ನ ವಾಸುದೇವಾದಿ ಮೂರ್ತಿಗಳಿಂದ, (ಮನುಷ್ಯಮಾನದಿಂದ) ಸಾವಿರ ವರ್ಷಗಳಲ್ಲಿ ಇದ್ದು, (ತನ್ನ ಹೊಟ್ಟೆಯಲ್ಲಿರತಕ್ಕ) ಜೀವರನ್ನು ಅನಿರುದ್ಧರೂಪಿಯಾದ ಶ್ರೀಹರಿಗೋಸ್ಕರ ಕೊಟ್ಟನು.

ವಿಶೇಷಾಂಶ— (1) ಲಕ್ಷ್ಮೀರೂಪಳಾದ ಶಾಂತಿದೇವಿಯು ಅನಿರುದ್ಧನಾಮಕನಾದ ಶ್ರೀ ಹರಿಗೆ ಹೆಂಡತಿಯಾದಳು. (2) ಪ್ರದ್ಯುಮ್ನನು ಪ್ರಳಯಕಾಲದಲ್ಲಿ ಮೂಲರೂಪಿಯಾದ ಶ್ರೀ ಹರಿಯ ಉದರದಲ್ಲಿ ಇರತಕ್ಕ ಜೀವರನ್ನು ತನ್ನ ಉದರದಲ್ಲಿ ಸೆಳಕೊಂಡು ಅವರನ್ನೇ ಸೃಷ್ಟಿಮಾಡು ಎಂದು ಹೇಳಿ ಅನಿರುದ್ಧನಿಗೋಸ್ಕರ ಕೊಟ್ಟನು. ॥೮॥

(1) ಅನಿರುದ್ಧ ದೇವ ಪ್ರಾಪ್ತಿ.

ಈಗ ಮಿಶ್ರ ಸೃಷ್ಟಿ, ಕೇವಲ ಸೃಷ್ಟಿ ಇವುಗಳನ್ನು ವಿಕೀಕರಿಸಿ ಹೇಳುತ್ತಾರೆ—

ಮೂ ॥ ನಿರ್ದೇಹಕಾನ್ ಸ ಭಗವಾನನಿರುದ್ಧನಾಮಾ
ಜೀವಾನ್ ಸ್ವಕರ್ಮಸಹಿತಾನುದರೇ ನಿವೇಶ್ಯ ॥
(1) ಚಕ್ರೇಽಥ ದೇಹಸಹಿತಾನ್ ಕ್ರಮಶಃ ಸ್ವಯಂ ಭು-
ಪ್ರಾಣಾತ್ಮಶೇಷಗರುಡೇಶಮುಖಾನ್ಸಮಗ್ರಾನ್ ॥೯॥

ಅ ॥ ಅನಿರುದ್ಧನಾಮಕನಾದ ಆ ಭಗವಂತನು, (ಲಿಂಗದೇಹವು ಪ್ರಲಯಕಾಲ ದಲ್ಲಿಯೂ ಇದ್ದಪ್ರಯುಕ್ತ ಲಿಂಗದೇಹಾತಿರಿಕ್ತ ದೇಹವಿರಹಿತರೂ ಸ್ವಸ್ವಕರ್ಮಗಳಿಂದೊಡ ಗೂಡಿದವರೂ ಆದ ಜನ್ಯ) ಜೀವರನ್ನೂ (ತನ್ನ) ಉದರದಲ್ಲಿ ಇಟ್ಟುಕೊಂಡು ಆ ಮೇಲೆ ಕಾಲ ಕ್ರಮದಿಂದ, ಆಧಿಕ್ಯ ಕ್ರಮದಿಂದಲಾಗಲೀ ಬ್ರಹ್ಮನು, ಮುಖ್ಯಪ್ರಾಣನು, ಶೇಷನು, ಗರುಡನು, ರುದ್ರನು ಇವರೇ ಮೊದಲಾಗಿವುಳ್ಳ ಎಲ್ಲಾ ದೇವಾದಿಗಳನ್ನೂ (ಲಿಂಗದೇಹಕ್ಕೆ ಆವರಕವಾದ ಸೂಕ್ಷ್ಮ) ದೇಹಾಂತರದಿಂದ ಸಹಿತರನ್ನಾಗಿ ಮಾಡಿದನು.

ವಿಶೇಷಾಂಶ — (1) ಹಾಗಾದರೆ 'ನಿರ್ದೇಹಕಾನ್' ಎನ್ನುವುದರಿಂದ ಅನಿರುದ್ಧನಿಗೆ ಸೃಷ್ಟಿಕರ್ತೃತ್ವವನ್ನೇ ಹೇಳಿರುವರು. ಸ್ಥಿತಿ ಕರ್ತೃತ್ವವನ್ನು ಮೊದಲು ಪ್ರತಿಜ್ಞಾಮಾಡಿರುವರು. ಆದುದರಿಂದ ಪೂರ್ವೋತ್ತರ ವಿರೋಧವು ಎಂದರೆ —ಹೀಗೆ ಹೇಳಕೂಡದು. ಬ್ರಹ್ಮಾಂಡದ ಒಳಗೆ ಸ್ತ್ರೀಪುರುಷ ಸಾಪೇಕ್ಷವಾದ ಸೃಷ್ಟಿಯು ಪ್ರದ್ಯುಮ್ನನದೆಶೆಯಿಂದ ಆಗುತ್ತದೆ. ಕಾಮಾಂತರ್ಯಾಮಿಯಾದ ಶ್ರೀ ಹರಿಯು ಪರಸ್ಪರ ಅನುರಾಗವನ್ನು ಹುಟ್ಟಿಸಿ ಪುರುಷರದೆಸೆಯಿಂದ ಸ್ತ್ರೀಯರಲ್ಲಿ ಸಂತಾನಪರಂಪರೆಯನ್ನು ಸೃಷ್ಟಿಸುತ್ತಾನೆ. ಆಗ ಅನಿರುದ್ಧನಾದರೂ ಅದನ್ನು ರಕ್ಷಿಸುತ್ತಾನೆ. ಸಂಕರ್ಷಣನಾದರೂ ತನ್ನ ಮುಖಾಗ್ನಿಯಿಂದ ಅಂತ್ಯದಲ್ಲಿ ಸರ್ವರನ್ನೂ ಸಂಹರಿಸುತ್ತಾನೆ. ಆದುದರಿಂದ ಮೂವರಿಗೆ ಮೂರು ಕಾರ್ಯಗಳನ್ನು ಪ್ರಥಮದಲ್ಲಿ ಹೇಳಿದರು. ಅನಿರುದ್ಧನಾದರೂ ಈಗ ಅನಂತಾನಂತ ಜೀವರಿಗೆ ತನ್ನ ಶಕ್ತಿಯಿಂದಲೇ ಸ್ತ್ರೀಯರ ಅಪೇಕ್ಷೆಯಿಲ್ಲದೇನೇ ಶುದ್ಧವಾದ ಪ್ರಕೃತ್ಯಂಶದಿಂದ ನಿರ್ಮಿತವಾದ ಲಿಂಗದೇಹ ಮಾತ್ರಕ್ಕೆ ಆವರಕವಾದ ಸೂಕ್ಷ್ಮ ದೇಹರೂಪವಾದ ಸೃಷ್ಟಿಯನ್ನು ತನ್ನ ಶರೀರದ ಒಳಗೇನೇ ಕೊಡುತ್ತಾನೆ. ಅವರಾದರೂ ಪರಮಾಣು ಪ್ರದೇಶಗಳಲ್ಲಿಯೂ ಅನಂತಾನಂತರು ಇರುವವರಾಗಿ ಆ ಶರೀರಗಳಿಂದಲೇ ಸ್ವಪೋಷಕ ವಾಯ್ವಾಹಾರಾದಿಗಳಿಂದ ತೃಪ್ತರಾಗಿ ಪೂರ್ವ ಪೂರ್ವ ಕರ್ಮಗಳನ್ನು ಅನುಸರಿಸಿ ತಮತಮಗೆ ಯೋಗ್ಯಗಳಾದ ಕರ್ಮಗಳನ್ನೂ ಮಾಡುತ್ತಿರುತ್ತಾರೆ. ಅದರಲ್ಲಿ ಕೆಲವರು ಕರ್ಮ ಪರಿಪಾಕವಶದಿಂದ ಈಗಲೇ ಸ್ಥೂಲ ಶರೀರಗಳನ್ನು ಹೊಂದುವರು. ಇತರರು ಯಥಾಯೋಗ್ಯವಾಗಿ ಪ್ರತಿ ಕಲ್ಪದಲ್ಲಿ ಹೊಂದುವರು. ಆದುದರಿಂದಲೇ ಜೀವರಿಗೆ ಅನಾದ್ಯನಂತ ಕಾಲಗಳಲ್ಲಿಯೂ ಸಮಾಪ್ತಿಯಾಗುವುದಿಲ್ಲ ಅನಿರುದ್ಧನಿಂದ ಮಾಡಲ್ಪಡತಕ್ಕ ಈ ಸೃಷ್ಟಿಯು ಅತಿ ಸೂಕ್ಷ್ಮವಾದ ಪ್ರಯುಕ್ತ ಮೊದಲು ಹೇಳಲಿಲ್ಲ. ಆದಕಾರಣ ಪೂರ್ವೋತ್ತರ ವಿರೋಧವಿಲ್ಲ ॥೯॥

ಲೇಶತಃ ಉಕ್ತವಾದ ಶುದ್ಧಸೃಷ್ಟಿಯನ್ನು ವಿಸ್ತರಿಸಿ ಹೇಳುತ್ತಾರೆ.

ಮೂ ॥ ಪಂಚಾತ್ಮಕಃ ಸ ಭಗವಾನ್ ದ್ವಿಷಡಾತ್ಮಕೋಽಭೂ-
ತ್ಪಂಚದ್ವಯಾ ಶತಸಹಸ್ರಕೋಽಮಿತಶ್ಚ ॥

ವಿಕಃ ಸನೋಽಪ್ಯಖಿಲದೋಷಸಮುಚ್ಛ್ರಿತೋಽಪಿ
ಸರ್ವತ್ರ ಪೂರ್ಣಗುಣಕೋಽಪಿ ಬಹೂಪಮೋಽಭೂತ್ ॥೧೦॥

ಅ॥ ಪಂಚರೂಪಿಯಾದ ಆ ಶ್ರೀಪರಮಾತ್ಮನು ದ್ವಾದಶ (೧೨) ರೂಪಗಳುಳ್ಳವನಾದನು. ದಶ (೧೦) ರೂಪಗಳುಳ್ಳವನಾದನು. ಶತ (೧೦೦) ರೂಪಗಳುಳ್ಳವನಾದನು. ಸಹಸ್ರ (೧೦೦೦) ರೂಪಗಳುಳ್ಳವನಾದನು. ಬಹುರೂಪಗಳುಳ್ಳವನಾದನು. ಅಮಿತ ರೂಪವುಳ್ಳವನಾದನು, ಅನಂತನಾದನು. ಏಕತ್ವ ಸಂಖ್ಯೆಯುಳ್ಳವನು, (ಅಭಿನ್ನನು) ಸರ್ವರೂಪಗಳಲ್ಲಿ (ದೇಶಕಾಲಗಳಿಂದ) ಸಮನಾದಾಗ್ಯೂ, ಸರ್ವದೋಷಗಳಿಂದ ವಿರಹಿತನಾದಾಗ್ಯೂ, ಪೂರ್ಣಗಳಾದ ಗುಣಗಳುಳ್ಳವನಾದಾಗ್ಯೂ (ಸ್ವಾಭಾವಿಕವಾಗಿ) ಬಹುವಿಧರಾದ ಜೀವಾದಿಗಳ ಸಾದೃಶ್ಯವುಳ್ಳವನಾದನು.

ವಿಶೇಷಾಂಶ — (1) ನಾರಾಯಣ, ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಎಂದು ೫ ರೂಪಗಳು. (2) ಕೇಶವ, ನಾರಾಯಣ ಮೊದಲಾದುವು ೧೨ ರೂಪಗಳು. (3) ಮತ್ಸ್ಯ ಮೊದಲಾದುವು ೧೦ ರೂಪಗಳು. (4) ನಾರಾಯಣ ಮೊದಲಾದುವು ೧೦೦ ರೂಪಗಳು. (5) ವಿಶ್ವ ಮೊದಲಾದುವು ೧೦೦೦ ರೂಪಗಳು. (6) ಪರ ಮೊದಲಾದುವು ಬಹುರೂಪಗಳು. (7) ಅಜಿತ ಮೊದಲಾದುವು ಅಪರಿಮಿತ ರೂಪಗಳು. (8) ಈ ಶ್ರೀ ಭಗವಂತನಿಗೆ ವಿಶೇಷ ಶಕ್ತಿಪ್ರಸಾಧಿತವಾದುದೇ ಬಹುತ್ವವು. ಜೀವರಂತೆ ಸ್ವಾಭಾವಿಕ ಬಹುತ್ವವಲ್ಲ. ಆದುದರಿಂದ ಭಗವದ್ರೂಪಗಳಲ್ಲಿ ಭೇದವನ್ನು ಶಂಕಿಸಕೂಡದು. ॥೧೦॥

ಈಗ ಎಲ್ಲಾ ಸದಾಗಮಗಳ ಅರ್ಥವನ್ನು ಪ್ರಮಾಣಗಳಿಂದ ಉಪಪಾದಿಸುತ್ತಾರೆ —

ಮೂ ॥ ನಿರ್ದೋಷಪೂರ್ಣಗುಣವಿಗ್ರಹ ಆತ್ಮತಂತ್ರೋ
ನಿಶ್ಚೇತನಾತ್ಮಕಶರೀರಗುಣೈಶ್ಚ ಹೀನಃ ॥
ಆನಂದಮಾತ್ರಕರಪಾದಮುಖೋದರಾದಿಃ
ಸರ್ವತ್ರ ಚ ಸ್ವಗತಭೇದವಿವರ್ಜಿತಾತ್ಮಾ ॥ ೧೧ ॥

ಅ॥ ನಿರ್ದೋಷಗಳಾದ, ಪರಿಪೂರ್ಣಗಳಾದ ಜ್ಞಾನಾನಂದಾದಿ ಗುಣಗಳೇ ಶರೀರವಾಗಿ ಉಳ್ಳವನು, ಸರ್ವಸ್ವತಂತ್ರನು, ಚೇತನಸ್ವರೂಪವಾಗದಿರುವ (ಜಡ) ಶರೀರದಿಂದಲೂ, (ಜಡ) ಗುಣಗಳಿಂದಲೂ ವಿರಹಿತನು, ಕೇವಲ ಜ್ಞಾನಾನಂದಾತ್ಮಕಗಳಾದ ಹಸ್ತ-ಪಾದ-ಮುಖ-ಉದರಗಳೇ ಮೊದಲಾದವುಗಳುಳ್ಳವನು, ಎಲ್ಲಾ ಅವತಾರಗಳಲ್ಲಿಯೂ ಸ್ವಗತವಾದ ಭೇದದಿಂದ ವಿರಹಿತವಾದ ಶರೀರವುಳ್ಳವನು. ॥ ೧೧ ॥

ಸ್ವಗತಭೇದವಿಲ್ಲದಿದ್ದರೂ ಕಾಲಾದ್ಯುಪಾಧಿಗಳಿಂದ ಭೇದವು ಇರಬಹುದೆಂದರೆ —

ಮೂ ॥ ಕಾಲಾಚ್ಚ ದೇಶಗುಣತೋಽಸ್ಯ ನ ಚಾದಿರಂತೋ
ವೃದ್ಧಿಕ್ಷಯೌ ನ ತು ಪರಸ್ಯ ಸನಾತನಸ್ಯ ॥
ನೈತಾದೃಶಃ ಕ್ವ ಚ ಬಭೂವ ನ ಚೈವ ಭಾವ್ಯೋ
ನಾಸ್ಯೋತ್ತರಃ ಕಿಮು ಪರಾತ್ಪರಮಸ್ಯ ವಿಷ್ಣೋಃ ॥ ೧೨ ॥

ಅ ॥ ಯಾವಾಗಲೂ ಒಂದೇ ಪ್ರಕಾರವಿರತಕ್ಕ, ಸರ್ವೋತ್ತಮನಾದ ಶ್ರೀಹರಿಗೆ ಕಾಲದಿಂದಲೂ, ದೇಶದಿಂದಲೂ, (ಸತ್ಯಾದಿ) ಗುಣಗಳ ದೆಶೆಯಿಂದಲೂ ಪೂರ್ವಾವಧಿಯೂ, ಉತ್ತರಾವಧಿಯೂ ಇಲ್ಲವೇ ಇಲ್ಲ. ವೃದ್ಧಿಕ್ಷಯಗಳೂ ಇಲ್ಲವೇ ಇಲ್ಲ. ಶ್ರೀಹರಿಗೆ ಸಮಾನಿಕನು ಎಲ್ಲಿಯೂ ಅತೀತಕಾಲದಲ್ಲಿ ಇರಲಿಲ್ಲ. ಮುಂದಕ್ಕೆ ಹುಟ್ಟುವವನೂ ಇಲ್ಲವೇ ಇಲ್ಲ. ಲಕ್ಷ್ಮಿಯ ದೆಶೆಯಿಂದಲೂ ಉತ್ಕೃಷ್ಟನಾದ, ದೇಶ-ಕಾಲ-ಗುಣಗಳಿಂದ ವ್ಯಾಪ್ತನಾದ ಶ್ರೀಹರಿಗೆ ಸಮಾನಿಕನೇ ಇಲ್ಲವೆಂದಾದಮೇಲೆ ಉತ್ತಮನು ಇಲ್ಲವೆಂದು ಏನು ಹೇಳಬೇಕು? ॥ ೧೨ ॥

ಸಮನು ಇಲ್ಲವೆಂದು ಉಪಪಾದಿಸುವುದಕ್ಕಾಗಿ ಪೂರ್ವಾರ್ಧದಿಂದ ಈಶ್ವರಸ್ವರೂಪವನ್ನೂ, ಉತ್ತರಾರ್ಧದಿಂದ ತದಿತರರ ಸ್ವರೂಪವನ್ನು ಹೇಳುತ್ತಾರೆ. —

ಮೂ ॥ ಸರ್ವಜ್ಞ ಈಶ್ವರತನುಃ ಸ ಚ ಸರ್ವಶಕ್ತಿಃ
ಪೂರ್ಣಾವ್ಯಯಾತ್ಮಬಲಚಿತ್ಸುಖವೀರ್ಯಸಾರಃ ॥
ಯಸ್ಯಾಜ್ಞಯಾ ರಹಿತಮಿಂದಿರಯಾ ಸಮೇತಂ
ಬ್ರಹ್ಮೇಶಪೂರ್ವಕಮಿದಂ ನ ತು ಕಸ್ಯ ಚೇಶಂ ॥ ೧೩ ॥

ಅ ॥ ಆ ಶ್ರೀಹರಿಯು ಸರ್ವಜ್ಞನು, ಮುಖ್ಯ ನಿಯಾಮಕನು, ಅಂದರೆ—ನಿಯಾಮಕರಾದ ಬ್ರಹ್ಮರುದ್ರಾದಿಗಳಿಗೂ ನಿಯಾಮಕನು, ಸರ್ವವಿಷಯದಲ್ಲಿಯೂ ಸಂಪೂರ್ಣಶಕ್ತಿಯುಳ್ಳವನು, ಪೂರ್ಣಗಳಾದ ವಿನಾಶವಿಲ್ಲದಿರುವ, ವೃದ್ಧಿಹ್ರಾಸಗಳಿಲ್ಲದಿರುವ ಸ್ವರೂಪಭೂತಗಳಾದ ಬಲ-ಜ್ಞಾನ-ಸುಖ-ವೀರ್ಯಗಳಿಂದ ಶ್ರೇಷ್ಠನು. ಲಕ್ಷ್ಮಿಯಿಂದ ಯುಕ್ತವಾದ, ಬ್ರಹ್ಮರುದ್ರರೇ ಮೊದಲಾಗಿವುಳ್ಳ ಈ ಜಗತ್ತು ಯಾವ ಶ್ರೀಹರಿಯ ಆಜ್ಞೆಯಿಂದ ವಿರಹಿತವಾದುದು, ಯಾವ ಅರ್ಥವನ್ನು ಸಾಧಿಸುವವಿಷಯದಲ್ಲಿಯೂ ಸಮರ್ಥವಾದುದೂ ಆಗುವುದೇ ಇಲ್ಲ. ॥ ೧೩ ॥

ಶ್ರೀಹರಿಯ ಆಜ್ಞೆಯಿಲ್ಲದೆ ಯಾವ ಕಾರ್ಯವನ್ನೂ ಮಾಡಲಿಕ್ಕೆ ಶಕ್ತಿಯಿಲ್ಲದಿರುವ ಪ್ರಯುಕ್ತ ಸರ್ವಜಗತ್ತೂ ಶ್ರೀಹರಿಯ ಅಧೀನವೆನ್ನುತ್ತಾರೆ.

ಮೂ ॥ ಆಭಾಸಕೋಽಸ್ಯ ಪವನಃ ಪವನಸ್ಯ ರುದ್ರಃ
ಶೇಷಾತ್ಮಕೋ ಗರುಡ ಏವ ಚ ಶಕ್ರಕಾಮೌ ॥
ವೀಂದ್ರೇಶಯೋಸ್ತದಪರೇ ತ್ವನಯೋಶ್ಚ ತೇಷಾ -
ಮ್ಯಷ್ಯಾದಯಃ ಕ್ರಮುಶ ಊನಗುಣಾಃ ಶತಾಂಶಾತ್ ॥ ೧೪ ॥

ಅ ॥ ಶ್ರೀಹರಿಗೆ ಮುಖ್ಯಪ್ರಾಣನು ಆಭಾಸಕನು. (ಸ್ವಲ್ಪ ತನ್ನಲ್ಲಿರತಕ್ಕ ಸಾದೃಶ್ಯದಿಂದ ಸ್ವಬಿಂಬರೂಪವನ್ನು ಅನುಮೇಯಿಸಿಕೊಡತಕ್ಕವನು. ಆದುದರಿಂದಲೇ ದರ್ಪಣದಲ್ಲಿರತಕ್ಕ ಪ್ರತಿಮುಖವನ್ನು ನೋಡಿ ತನ್ನ ಮುಖವನ್ನೇ ನೋಡುತ್ತಾರೆ.) ಅಥವಾ ಪ್ರತಿಬಿಂಬನು, (ಅಂದರೆ — ಶ್ರೀಹರಿಯು ಅಧೀನನು, ಕಿಂಚಿತ್ ತತ್ಸದೃಶನು.) ವಾಯುದೇವರಿಗೆ ಭಾವಿಶೇಷನಾದ ರುದ್ರನೂ, ಗರುಡನೂ ಇವರಿಬ್ಬರೂ ಪ್ರತಿಬಿಂಬರು. ಗರುಡ-ರುದ್ರರಿಗೆ ದೇವೇಂದ್ರ-ಮನ್ಮಥರು ಪ್ರತಿಬಿಂಬರು. ಈ ದೇವೇಂದ್ರ-ಮನ್ಮಥರಿಗೆ ಅವರಿಂದ ಇತರರಾದ (ಅಹಂಕಾರಿಕ ಪ್ರಾಣ - ಅನಿರುದ್ಧಾದಿಗಳೂ, ಚಂದ್ರ - ಸೂರ್ಯೋದಿಗಳೂ ಪ್ರತಿಬಿಂಬರು.) ಆ ಸೂರ್ಯೋದಿಗಳಿಗೆ ಋಷ್ಯಾದಿಗಳು ಪ್ರತಿಬಿಂಬರು. ಎಲ್ಲರೂ ಕ್ರಮವಾಗಿ ಉತ್ತಮರಿಂದ, ನೂರು ಅಂಶ ದೆಶೆಯಿಂದ ಕಡಿಮೆಗುಣಗಳುಳ್ಳವರು. ॥ ೧೪ ॥

ಪುರುಷರಿಗೆ ಆಭಾಸತ್ವವಿದ್ದುದರಿಂದ ಶ್ರೀಹರಿಯ ಅಧೀನತ್ವವಿದ್ದಂತೆಯೇ ಸ್ತ್ರೀಯರಿಗೂ ಇದೆ ಎನ್ನುತ್ತಾರೆ.—

ಮೂ ॥ ಆಭಾಸಕಾ ತ್ವಥ ರಮೋಸ್ಯ ಮರುತ್ಸ್ವರೂಪಾ-
ಚ್ಛ್ರೇಷ್ಠಾಸ್ಯಜಾತ್ತದನು ಗೀಃ ಶಿವತೋ ವರಿಷ್ಠಾ ॥
ತಸ್ಯಾ ಉಮಾ ವಿಪತಿನೀ ಚ ಗಿರಸ್ತಯೋಸ್ತು
ಶಚ್ಯಾದಿಕಾಃ ಕ್ರಮುಶ ಏವ ಯಥಾ ಪುಮಾಂಸಃ ॥೧೫॥

ಅ ॥ ಮಂಗಲ ರೂಪಳಾದ ಲಕ್ಷ್ಮೀದೇವಿಯಾದರೂ ಶ್ರೀ ಹರಿಗೆ ಆಭಾಸಕಳು. (ಪ್ರತಿ ಬಿಂಬಳು.) ಲಕ್ಷ್ಮೀ, ಮುಖ್ಯಪ್ರಾಣರಿಬ್ಬರಿಗೂ ಶ್ರೀಹರಿಯ ಆಭಾಸತ್ವವಿದ್ದರೆ ಇಬ್ಬರಿಗೂ ಸಾಮ್ಯವು ಬರಬೇಕಾದೀತು. ಎಂದರೆ,) ಮುಖ್ಯಪ್ರಾಣಸ್ವರೂಪನಾದ ಚತುರ್ಮುಖನ ದೆಶೆಯಿಂದಲೂ, ಶ್ರೇಷ್ಠಳು. (ಇದರಿಂದ ಬ್ರಹ್ಮನಿಗೂ ಶ್ರೀಹರಿಯ ಆಭಾಸತ್ವವು ಲಕ್ಷ್ಮಿಯ ಆನಂತರ್ಯವೂ ಅಂದರೆ-ಲಕ್ಷ್ಮೀನಿಯಮ್ಯತ್ವವೂ ಉಕ್ತವಾಯಿತು.) ಆ ಮೇಲೆ ರುದ್ರನಿಂದ ಶ್ರೇಷ್ಠರಾದ ಸರಸ್ವತೀ-ಭಾರತಿಯರು ಲಕ್ಷ್ಮೀದೇವಿಗೆ ಆಭಾಸಕರು. ಆ ಸರಸ್ವತೀ - ಭಾರತಿಯರಿಗೆ ಪಾರ್ವತಿಯೂ-ಸೌಪರ್ಣಿಯೂ ಆಭಾಸಕರು. ಆ ಉಮಾ-ಸೌಪರ್ಣಿಯರಿಗೆ ಶಚೀದೇವಿ ಮೊದಲಾದವರು ಆಭಾಸಕರು. ಹೇಗೆ ಪುರುಷರು (ಸ್ವೋತ್ತಮರಿಗೆ ಪ್ರತಿಬಿಂಬರೋ, ಹಾಗೆಯೇ ಸ್ತ್ರೀಯರೂ) ಗುಣಕ್ರಮದಿಂದಲೇ (ಉತ್ತಮರಿಗೆ ಆಭಾಸಕರು). (ಪುರುಷಾನಂತರದಲ್ಲಿ ಸ್ತ್ರೀಯು ಎನ್ನುವ ನಿಯಮವಿಲ್ಲ. ಉಮಾ ಪ್ರತಿಬಿಂಬಳಾದ ಶಚೀದೇವಿಗೆ ಪ್ರಾಣಾವರತ್ವವು ದೃಷ್ಟವಾಗಿದೆ.)

ವಿಶೇಷಾಂಶ —(1) ಪುರುಷರಿಗೆ ಹೇಗೆ ಪರಸ್ಪರವಾಗಿ ಬಿಂಬ, ಪ್ರತಿಬಿಂಬ ಭಾವವೋ ಹಾಗೆಯೇ ಸ್ತ್ರೀಯರಿಗೂ ತಂತಮ್ಮ ಯೋಗ್ಯತಾನುಸಾರವಾಗಿ ಪರಸ್ಪರವಾಗಿ ಬಿಂಬ-ಪ್ರತಿಬಿಂಬ ಭಾವವು ಇದೆ ಎಂದು ಬಿಂಬ-ಪ್ರತಿಬಿಂಬ ಮಾತ್ರದಲ್ಲಿ ದೃಷ್ಟಾಂತವು. ಪುರುಷರ ಕ್ರಮದಂತೆ ಸ್ತ್ರೀಯರಿಗೂ ಏಕ ಪ್ರಕಾರವಾದ ಕ್ರಮವಲ್ಲ. ವಾಣೀ ಪ್ರತಿಬಿಂಬಳಾದ ಪಾರ್ವತಿಗೆ ರುದ್ರನಿಂದ ಅಧಮರಾದ ಇಂದ್ರಾದಿಗಳದೆಶೆಯಿಂದಲೂ ಉತ್ತಮತ್ವವಿದ್ದಂತೆಯೇ ಉಮಾ ಪ್ರತಿಬಿಂಬಳಾದ ಶಚೀದೇವಿಗೆ ಇಂದ್ರನದೆಶೆಯಿಂದ ಅಮರನಾದ ಪ್ರಾಣನದೆಶೆಯಿಂದಲೂ ಉತ್ತಮತ್ವವಿಲ್ಲ. ಆದುದರಿಂದ ಪುರುಷನಿಗೆ ಯಾರದೆಶೆಯಿಂದ ಉತ್ತಮತ್ವವೋ ಆ ಸ್ತ್ರೀಯರಿಗೂ ಅವನದೆಶೆಯಿಂದ ಉತ್ತಮತ್ವವು ಎನ್ನುವ ನಿಯಮವಿಲ್ಲ. ಇಂದ್ರನದೆಶೆಯಿಂದ ಅಮರನಾದ ಪ್ರಾಣನದೆಶೆಯಿಂದಲೂ ಅಮರಳಾದ ಶಚೀದೇವಿಯಲ್ಲಿ, ಮನುವಿನಿಂದಲೂ ಅಮರನಾದ ಪ್ರವಹನದೆಶೆಯಿಂದಲೂ ಅಮರಳಾದ ಮಾನವಿಯಲ್ಲಿಯೂ, ಬೃಹಸ್ಪತಿಯಿಂದಲೂ ಅಮರರಾದ ಅನೇಕ ಪುರುಷರಿಂದ ವ್ಯವಹಿತಳಾದ ತಾರಾ ದೇವಿಯಲ್ಲಿಯೂ, ವರುಣನಿಂದ ಅಮರರಾದ ಬಹು ಪುರುಷರಿಂದ ವ್ಯವಹಿತರಾದ ಗಂಗಾದಿಗಳಲ್ಲಿಯೂ ಉತ್ತಮತ್ವವಿಲ್ಲ. ಆದಕಾರಣ ತಂತಮ್ಮ ಯೋಗ್ಯತಾನುಸಾರವಾಗಿ ಬಿಂಬ-ಪ್ರತಿಬಿಂಬತ್ವ ಮಾತ್ರದಲ್ಲಿ ದೃಷ್ಟಾಂತವು. ಆದುದರಿಂದಲೇ ಮನುವಿನ ಹೆಂಡತಿಯದೆಶೆಯಿಂದ ಅವಳಿಗೆ ಸಮಾನಳಾದ ದಕ್ಷಪ್ರಜಾಪತಿಯ ಪತ್ನಿಯಾದ ಪ್ರಸೂತಿಗೆ ಅತಿನೀಚತ್ವವು ॥೧೫॥

ಪುರುಷರ ದೆಶೆಯಿಂದ ಸ್ತ್ರೀಯರಿಗೂ ಶತಗುಣನ್ಯೂನತ್ವವೋ ಏನು? ಎಂದರೆ—

ಮೂ ॥ ತಾಭ್ಯಶ್ಚ ತೇ ಶತಗುಣೈರ್ದಶತೋ ವರಿಷ್ಠಾಃ
ಪಂಚೋತ್ತರೈರಪಿ ಯಥಾ ಕ್ರಮುಶಃ ಶ್ರುತಿಸ್ಥಾಃ ॥

ಶಬ್ದೋ ಬಹುತ್ವವಚನಃ ಶತಮಿತ್ಯತಶ್ಚ
ಶ್ರುತ್ಯಂತರೇಷು ಬಹುಧೋಕ್ತಿ ವಿರುದ್ಧತಾ ನ ॥೧೬॥

ಅ ॥ ಆ ಪುರುಷರು ಸ್ರೋಯರದೆಶೆಯಿಂದ ಶತ (೧೦೦) ಗುಣಗಳಿಂದಲೂ ದಶ (೧೦) ಗುಣಗಳಿಂದಲೂ, ಪಂಚದಶ (೧೫) ಗುಣಗಳಿಂದಲೂ ಶ್ರೇಷ್ಠರು. ಯಾವ ಕ್ರಮದಿಂದ ಶ್ರುತಿಯಲ್ಲಿ ಹೇಳಲ್ಪಟ್ಟಿದ್ದಾರೋ ಆ ಕ್ರಮದಿಂದಲೇ ತಿಳಿಯಲ್ಪಡಬೇಕು. (ಹಾಗಾದರೆ, ಪ್ರಜಾಪತಿ ಶಬ್ದವಾಚ್ಯನಾದ ರುದ್ರನ ದೆಶೆಯಿಂದ ಬ್ರಹ್ಮನಿಗೆ ನೂರು ಗುಣಗಳು ಹೆಚ್ಚು ಎಂದು ತೈತ್ತಿರೀಯದಲ್ಲಿ ಹೇಳಲ್ಪಟ್ಟಿದೆ. ಛಾಂದೋಗ್ಯದಲ್ಲಿ ಸ್ಮರಶಬ್ದವಾಚ್ಯನಾದ ರುದ್ರನದೆಶೆಯಿಂದ ನೂರು ಗುಣಗಳು ಹೆಚ್ಚು ಇರುವ ಆಶಾನಾಮಕಳಾದ ಸರಸ್ವತಿಯದೆಶೆಯಿಂದ ಪ್ರಾಣನಿಗೆ ನೂರುಗುಣಗಳು ಹೆಚ್ಚು ಇವೆ ಎಂದು ಹೇಳಲ್ಪಟ್ಟಿದೆ. ಹೀಗೆ ಶ್ರುತಿಗಳಿಗೆ ವಿರೋಧವಿದ್ದುದರಿಂದ ಹೇಗೆ ತಿಳಿಯಬೇಕೆಂದರೆ—) ಶತವೆನ್ನುವ ಶಬ್ದವು ದಶ-ಶತ-ಸಹಸ್ರ ಮೊದಲಾದ ಬಹುತ್ವವನ್ನು ಹೇಳುತ್ತದೆ. ಆದುದರಿಂದ ಶ್ರುತ್ಯಂತರಗಳಲ್ಲಿ (ಹೇಳಿದ) ಅನೇಕಪ್ರಕಾರವಾದ ಉಕ್ತಿಗೆ ವಿರೋಧವಿಲ್ಲ.

ವಿಶೇಷಾಂಶ — ಶತಗುಣತ್ವವೆಂದರೆ— ಶತ ಸಂಖ್ಯಾಕಗಳಾದ ಕೆಲವು ಗುಣಗಳಿಂದ ಆಧಿಕ್ಯವು ಎಂದು ಅಲ್ಲ. ಏಕೆಂದರೆ— ಅದರಿಂದ ಇತರಗಳಾದ, ಸರ್ವ ಸಾಧಾರಣಗಳಾದ ಜ್ಞಾನಾದಿ ಗುಣಗಳಲ್ಲಿ ಸಾಮ್ಯವು ಬರಬೇಕಾಗುವುದು. ಮತ್ತೆ ರುದ್ರನಿಗೆ ಯಾವ ಜ್ಞಾನವೋ ಅಷ್ಟನ್ನು ಮೊದಲು ದ್ವಿಗುಣೀಕರಿಸಬೇಕು. ಇದೊಂದು ಗುಣವು. ಇದನ್ನು ಇಮ್ಮಡಿಮಾಡಿದಾಗ ಮೊದಲಿಗಿಂತಲೂ ಅತ್ಯಧಿಕವಾದ ಜ್ಞಾನವು. ಅದನ್ನೂ ದ್ವಿಗುಣೀಕರಿಸಬೇಕು. ಇದೇ ಗುಣತ್ರಯವು. ಹೀಗೆಯೇ ಇದನ್ನು ಇಮ್ಮಡಿಮಾಡಿದರಿಂದ ಅಧಿಕವಾದ ಯಾವ ಜ್ಞಾನವೋ ಆಜ್ಞಾನವನ್ನೇ ಪುನಃ ದ್ವಿಗುಣೀಕರಿಸಬೇಕು. ಇದು ಗುಣದ್ವಯವು. ಹೀಗೆಯೇ ದ್ವಿಗುಣೀಕರಿಸಿದಾಗ ಮೊದಲಿನಕ್ಕಿಂತಲೂ ಅತ್ಯಧಿಕವಾದ ಯಾವ ಜ್ಞಾನವೋ, ಅದನ್ನು ಪುನಃ ದ್ವಿಗುಣೀಕರಿಸಬೇಕು. ಇದು ಗುಣ ಚತುಷ್ಟಯವು. ಹೀಗೆ ಮೇಲೆ ಮೇಲೆ ಅಧಿಕಾಧಿಕ ಜ್ಞಾನಗಳಿಗೆ ಶತ ಪರ್ಯಂತವಾಗಿ ದ್ವಿಗುಣೀಕರಿಸಿದರೆ ಸ್ಥೂಲ ಸ್ಥೂಲ ಜ್ಞಾನ ಸಮೂಹದೆಶೆಯಿಂದ ಅಂತ್ಯದಲ್ಲಿ ಯಾವುದು ಮಹತ್ತರವಾದ ಜ್ಞಾನವೋ ಅದು ಶತಗುಣಾಧಿಕವೆಂದು ಹೇಳಲ್ಪಡುತ್ತದೆ. (2) ಯಾವುದು ರುದ್ರಾದಿ ಜ್ಞಾನವೋ ಅದು ಹಿಂದೆ ಹೇಳಿದ ಪ್ರಕಾರ ಸ್ವಾಪೇಕ್ಷೆಯಿಂದ ನೂರು ಗುಣಗಳಿಂದ ಅಧಿಕಳಾದ ಸರಸ್ವತಿಯ ಜ್ಞಾನದೆಶೆಯಿಂದ ನೂರು ಗುಣಗಳದೆಶೆಯಿಂದ ಊನವೆಂದು ಹೇಳಲ್ಪಡುತ್ತದೆ. ಹೀಗೆಯೇ ಸುಖಶಕ್ತ್ಯಾದಿಗಳಲ್ಲಿಯೂ ಎಂದು ವಿವೇಕವನ್ನು ಇಟ್ಟುಕೊಳ್ಳಬೇಕು. ॥ ೧೬ ॥

ಸಂಸಾರಾವಸ್ಥೆಯಲ್ಲಿ ಉಪಾಧಿವೈಚಿತ್ರ್ಯವಿದ್ದುದರಿಂದ ತಾರತಮ್ಯವಿರಲಿ, ಉಪಾಧಿನಾಶವಾದಮೇಲೆ ಮುಕ್ತಿಯಲ್ಲಿ ತಾರತಮ್ಯವಿಲ್ಲ ಎಂದರೆ—

ಮೂ ॥ ತೇಷಾಂ ಸ್ವರೂಪಮಿದಮೇವ ಯತೋಽಥ ಮುಕ್ತಾ-
ವಪ್ಯೇವಮೇವ ಸತತೋಚ್ಚವಿನೀಚರೂಪಾಃ ॥
ಶಬ್ದಃ ಶತಂ ದಶ ಸಹಸ್ರಮಿತಿ ಸ್ಮ ಯಸ್ಮಾ-
ತ್ತಸ್ಮಾನ್ನ ಹೀನವಚನೋಽಥ ತತೋಽಗ್ರ್ಯರೂಪಾಃ ॥ ೧೭ ॥

ಅ ॥ ಯಾವ ಕಾರಣದಿಂದ ಈ ತಾರತಮ್ಯವು ಜೀವರ ಸ್ವರೂಪವೇಯೋ, ಆದುದರಿಂದ ಮುಕ್ತಿಯಲ್ಲಿಯೂ ಕೂಡ ಹೀಗೆಯೇ (ಸಂಸಾರದಲ್ಲಿ ಹೇಗೆ ಉಚ್ಚನೀಚರಾಗಿ ಇರುತ್ತಾರೋ ಹಾಗೆಯೇ) ನಿರಂತರದಲ್ಲಿಯೂ ಉಚ್ಚನೀಚಭಾವವುಳ್ಳವರಾಗಿ ಇರುತ್ತಾರೆ. (ಸ್ವರೂಪವೇ ಉಪಾಧಿಯು ಅದಕ್ಕೆ ನಾಶವಿಲ್ಲ. ಸ್ವರೂಪಕ್ಕೆ ನೀಚೋಚ್ಚಭಾವವಿದ್ದುದರಿಂದ ಮುಕ್ತಿಯಲ್ಲಿಯೂ ತಾರತಮ್ಯವಿದ್ದೇಯಿದೆ.) (ಶತಶಬ್ದವುಬಹುತ್ವವನ್ನು ಹೇಳುತ್ತದೆ. ಎನ್ನುವಲ್ಲಿ ಪ್ರಮಾಣವೇನೆಂದರೆ ದಶ-ಶತಂ-ಸಹಸ್ರಂ ಎನ್ನುವುದು ಆನಂತ್ಯವಾಚಕವು ಎನ್ನುವ ಐತರೇಯೋಪನಿಷದಾತ್ಮಕವಾದ ಶಬ್ದವು ಯಾವಕಾರಣದಿಂದ ಇದೆಯೋ ಆದಕಾರಣ ಶತಶಬ್ದವು ಹೀನ (ಅಲ್ಪ) ಅರ್ಥವನ್ನು ಹೇಳುವುದಿಲ್ಲ. ಆದಕಾರಣ ಶತಾದಿ ಶಬ್ದಗಳು ಅಧಿಕಾರ್ಥವನ್ನು ಹೇಳುವುದರಿಂದ ಹಿಂದೆ ಹೇಳಲ್ಪಟ್ಟವರು ದಶ-ಶತಾದಿಗಳ ದೆಶೆಯಿಂದ ಶ್ರೇಷ್ಠರೂಪವುಳ್ಳವರು.

ವಿಶೇಷಾಂಶ- (1) ಹತ್ತನ್ನು ಹತ್ತಾವರ್ತಿ ಕೂಡಿಸಿದರೆ ನೂರು ಆಗುತ್ತದೆ. ಅಂತಹ ಹತ್ತಾವರ್ತಿ ದಶಾತ್ಮಕ ಶತಮಧ್ಯೆದಲ್ಲಿ ಹತ್ತು ಪ್ರವಿಷ್ಟಗಳಾಗಿರುವುದರಿಂದ ನೂರು ಹತ್ತು ಆಗುತ್ತವೆ. ಆದುದರಿಂದ ಹತ್ತು ಹತ್ತನ್ನು ಹೇಳತಕ್ಕ ಶತಶಬ್ದವು ಅದರ ಏಕದೇಶಭೂತಗಳಾದ ಹತ್ತಕ್ಕೂ ವಾಚಕವಾಗುತ್ತದೆ. ಇದೇ ನ್ಯಾಯದಿಂದ ಹತ್ತರ ಏಕದೇಶಭೂತಗಳಾದ ಒಂದು ಐದು ಇತ್ಯಾದಿಗಳಿಗೂ ವಾಚಕವಾಗುತ್ತದೆ. ಇದೇ ಪ್ರಕಾರ ದಶಶತಾತ್ಮಕ ಸಹಸ್ರಗಳ ಮಧ್ಯದಲ್ಲಿ ನೂರು ಪ್ರವಿಷ್ಟಗಳಾಗಿರುವುದರಿಂದ ನೂರು ಸಾವಿರವೂ ಆಗುತ್ತದೆ. ಹತ್ತು ಹತ್ತು ನೂರು. ಹತ್ತು ನೂರುಗಳು ಸಾವಿರವಾಗುತ್ತವೆ, ಹೀಗೆ ಐತರೇಯೋಪನಿಷತ್ತಿನಲ್ಲಿ ಶಬ್ದವಿದ್ದುದರಿಂದ ಶತಶಬ್ದವು ಹೀನಾರ್ಥಕವಲ್ಲ. ಯಾವ ಯಾವುಗಳಲ್ಲಿ ಎಷ್ಟುಗುಣಗಳು ಇರುತ್ತಾವೋ ಅದರಿಂದ ಹೀನವಚನವಲ್ಲ. ಹತ್ತು ಗುಣಗಳು ಇದ್ದರೆ ಅಷ್ಟನ್ನೇ ಹೇಳುತ್ತವೆ. ಹದಿನೈದು ಗುಣಗಳು ಇದ್ದರೆ ಅಷ್ಟನ್ನೇ ಹೇಳುತ್ತವೆ. ನೂರು ಗುಣಗಳು ಇದ್ದರೆ ಅಷ್ಟನ್ನೇ ಹೇಳುತ್ತವೆ. ಇನ್ನೂರು ಸಾವಿರ ಗುಣಗಳು ಇದ್ದರೆ ಅಷ್ಟನ್ನೇ ಹೇಳುತ್ತವೆ. ಅನಂತ ಎನ್ನುವ ಸಂಖ್ಯೆಯ ~~ಮಧ್ಯದಲ್ಲಿ ಸಾವಿರವೂ ಪ್ರವಿಷ್ಟವಾಗಿರುವುದರಿಂದ ಆ ಸಹಸ್ರವು ಸರ್ವವೂ ಅಥವಾ~~ ಆಗುತ್ತದೆ. ॥೧೭॥

ಹಾಗಾದರೆ ಯಾವಾಗ ಮುಕ್ತರಾದರೋ, ಆಗ ಸಂಸಾರಿಗಳಲ್ಲ. ಯಾವಾಗ ಸಂಸಾರಿಗಳೋ ಆಗ ಮುಕ್ತರಲ್ಲ. ಸಂಸಾರಿಗಳಲ್ಲಿಯೂ ಮುಕ್ತರಲ್ಲಿಯೂ ಸರ್ವದಾ ತಾರತಮ್ಯವನ್ನು ಹೇಳಿದ್ದೂ, ಸೃಷ್ಟ್ಯಾದಿಗಳನ್ನು ಹೇಳಿದ್ದೂ ಹೇಗೆ ಎಂದಾಶಂಕಿಸಿದರೆ—

ಮೂ ॥ ಏವಂ ನರೋತ್ತಮಪರಾಸ್ತು ವಿಮುಕ್ತಿಯೋಗ್ಯಾ
ಅನ್ಯೇ ಚ ಸಂಸೃತಿಪರಾ ಅಸುರಾಸ್ತಮೋಗಾಃ ॥
ಏವಂ ಸದೈವ ನಿಯಮೇನ ಕ್ವಚಿದನ್ಯಥಾ ನ
ಯಾವನ್ನ ಪೂರ್ತಿರುತ ಸಂಸೃತಿಗಾಃ ಸಮಸ್ತಾಃ ॥೧೪॥

ಅ ॥ ಕೆಲವರಿಗೆ ಮುಕ್ತಿಯಾದರೂ, ಇತರರಾದ, ನರೋತ್ತಮನಾವ ವಾಯುವೇ ಮುಖ್ಯನಾಗಿವುಳ್ಳ (ಮನುಷ್ಯೋತ್ತಮರೇ ಅಕ್ಷರರಾಗಿವುಳ್ಳವರಾದರೂ.) ವಿಮುಕ್ತಿಗೆ ಯೋಗ್ಯರಾದವರು ಇರುತ್ತಾರೆ. (ಮನುಷ್ಯೋತ್ತಮರಿಂದ) ಇತರರಾದ (ಮಧ್ಯಮ ಮನುಷ್ಯರು) ಸಂಸಾರವೇ ಚರಮಫಲವಾಗಿ ಉಳ್ಳವರಾಗಿ ಅಥವಾ ಸಂಸಾರದಲ್ಲಿಯೇ ಆಸಕ್ತರಾಗಿರುತ್ತಾರೆ.

ಅಂಧಂತಮಸ್ಸನ್ನು ಹೊಂದಲಿಕ್ಕೆ ಯೋಗ್ಯರಾದ ಅಸುರರು (ಅಂಧಂತಮಸ್ಸನ್ನು ಹೊಂದಿದವರಿಂದ ಇತರರೂ ಇರುತ್ತಾರೆ.) (ಅದುದರಿಂದ ಹಿಂದೆ ಹೇಳಿದ್ದು ಕೂಡುತ್ತದೆ.) (ಹಾಗಾದರೆ ಈ ನಿಯಮಕ್ಕೆ ಯಾವಾಗಲಾದರೂ ವ್ಯತ್ಯಾಸವು ಬರಬಹುದೋ ಏನು ಎಂದಾಶಂಕಿಸಿದರೆ) ಹೀಗೆ ಈ ನಿಯಮವು ಯಾವಾಗಲೂ ಇದ್ದೇಯಿದೆ. ಯಾವಾಗಲೂ ವ್ಯತ್ಯಾಸವಾಗುವುದೇ ಇಲ್ಲ. (ವಾಯುಪರ್ಯಂತರಾದ ಮನುಷ್ಯೋತ್ತಮರು ಮುಕ್ತಿಯೋಗ್ಯರು, ಅಸುರರು ತಮಸ್ಸಿನಲ್ಲಿರುವವರು ಎಂದಾದರೆ ಅವರು ಈಗ ಮುಕ್ತ್ಯಾದಿಗಳನ್ನು ಹೊಂದಿರುವುದರಿಂದ ತೋರದೇನೇ ಇರಬೇಕು ಎಂದಾಶಂಕಿಸಿದರೆ) ಎಷ್ಟುಕಾಲತನಕ (ಸ್ವಯೋಗ್ಯಸಾಧನ) ಸಂಪತ್ತಿಯು ಆಗುವುದಿಲ್ಲವೋ ಅಷ್ಟರವರೇಗೆ ಎಲ್ಲರೂ (ಅಂದರೆ ತ್ರಿವಿಧಜೀವರೂ ಕೂಡ) ಸಂಸಾರದಲ್ಲಿಯೇ ಇರುತ್ತಾರೆ. ॥೮೧॥

ಹಾಗಾದರೆ ಬಹುಕಾಲಗಳಲ್ಲಿ ಒಬ್ಬೊಬ್ಬರಿಗೆ ಮುಕ್ತಿತಮಸ್ಸುಗಳು ಪ್ರಾಪ್ತಗಳಾದಾಗ್ಯೂ ಹೀಗೆಯೇ ಎಲ್ಲವರಿಗೂ ಮುಕ್ತಿ ತಮಸ್ಸುಗಳು ಆಗಬೇಕಾಗುವವು. ಈ ಪ್ರಕಾರ ಮುಕ್ತಿ ತಮಸ್ಸನ್ನು ಹೊಂದುವವರೆಲ್ಲರಿಗೂ ಪರಿಸಮಾಪ್ತಿಯಾಗುವುದರಿಂದ ಪುನಃ ಮುಕ್ತಿಗೂ ತಮಸ್ಸಿಗೂ ಯೋಗ್ಯರಾದವರೇ ಇಲ್ಲವೆಂದಾಗಬೇಕಾಗುವುದು ಎಂದಾಶಂಕಿಸಿದರೆ—

ಮೂ ॥ ಪೂರ್ತಿಶ್ಚ ನೈವ ನಿಯಮಾದ್ಭವಿತಾ ಹಿ ಯಸ್ಮಾತ್
ತಸ್ಮಾತ್ಸಮಾಪ್ತಿಮಪಿ ಯಾಂತಿ ನ ಜೀವಸಂಘಾಃ ॥
ಆನಂತ್ಯಮೇವ ಗಣಶೋಽಸ್ತಿ ಯತೋ ಹಿ ತೇಷಾ-
ಮಿತ್ಥಂ ತತಃ ಸಕಲಕಾಲಗತಾ ಪ್ರವೃತ್ತಿಃ ॥ ೧೯ ॥

ಅ ॥ (ಒಬ್ಬನಿಗೆ ಸಾಧನಪೂರ್ತಿಯು ಆಗುವ ಕಾಲದಲ್ಲಿ ಸರ್ವರಿಗೂ ಸಾಧನಪೂರ್ತಿಯು ಆಗಿಯೇ ಆಗುವುದು ಎನ್ನುವ) ನಿಯಮದಿಂದ, (ಅಥವಾ ಶ್ರೀಹರಿಯ) ಸಂಕಲ್ಪದಿಂದ ಸಾಧನ ಸಮಾಪ್ತಿಯು ಯಾವಕಾರಣದಿಂದ ಆಗುವುದಿಲ್ಲವೋ, ಆದಕಾರಣ ಜೀವರ ಸಮೂಹಗಳು ಸಮಾಪ್ತಿಯನ್ನೂ ಹೊಂದುವುದಿಲ್ಲ. ಯಾವಕಾರಣದಿಂದ ಅವರಿಗೆ (ಬ್ರಹ್ಮಾದಿಪದಯೋಗ್ಯರಾದ ಜೀವರಿಗೆ) ಗಣಗಳಿಂದ ಆನಂತ್ಯವು ಇದ್ದೇಯಿದೆಯೋ ಆದುದರಿಂದ ಹೀಗೆ (ಪ್ರವಾಹಕ್ಕೆ ವಿಚ್ಛೇದವಿಲ್ಲದೇನೇ) ಎಲ್ಲಾ ಕಾಲಗಳಲ್ಲಿಯೂ ಇರತಕ್ಕ ಸೃಷ್ಟ್ಯಾದಿ ಪ್ರವೃತ್ತಿಯು ಯುಕ್ತವೇ ಆಗುತ್ತದೆ.

ವಿಶೇಷಾಂಶ— (1) ಬ್ರಹ್ಮಪದವಿಗೆ ಯೋಗ್ಯರಾದ ಜೀವರ ಗಣಗಳು, ರುದ್ರಪದವಿಗೆ ಯೋಗ್ಯರಾದ ಜೀವರಗಣಗಳು, ಇಂದ್ರಪದವಿಗೆ ಯೋಗ್ಯರಾದ ಜೀವರಗಣಗಳು, ಇತ್ಯಾದಿಪ್ರಕಾರ ಗಣಗಳಿಂದ ಆನಂತ್ಯವಿದೆ. ಇದೇ ಪ್ರಕಾರ ಗಣಗಳಿಗೂ ಆನಂತ್ಯವಿದೆ. ಗಣಾಂತರ್ಗತ ಜೀವರಿಗೂ ಪ್ರತ್ಯೇಕವಾಗಿ ಆನಂತ್ಯವಿದೆ ಎಂದು ಭಾವವು. (2) **ಯತ್ಸೈನ ಕಾಲನಿಯಮಃ ಸುರಾದಿನಿಯಮಸ್ತಥಾ । ತಸ್ಮಾನ್ನಾನೀದೃಶಂ ಕ್ವಾಪಿ ವಿಶ್ವಮೇತದ್ಭವಿಷ್ಯತಿ**, ಇತ್ಯಾದಿ ಪ್ರಮಾಣ ಪ್ರಸಿದ್ಧವು ॥೧೯॥

'ನಿರ್ದೋಷಪೂರ್ಣಗುಣವಿಗ್ರಹಃ' ಇತ್ಯಾದಿಗಳಿಂದ ಮೊದಲು ಪ್ರಸ್ತಾಪಮಾಡಿದ ಶ್ರೀಹರಿಯ ಸರ್ವೋತ್ತಮತ್ವಾದಿಗಳನ್ನು 'ಅಭಾಸಕೋಽಸ್ಯಪವನಃ' ಇತ್ಯಾದಿಗಳಿಂದ ಮಧ್ಯದಲ್ಲಿ ಸಾಧಿಸಿ ಈಗ ಉಪಸಂಹಾರಮಾಡುತ್ತಾರೆ.—

—ಮೂ ॥ ಏತೈಃ ಸುರಾದಿಭಿರತಿಪ್ರತಿಭಾದಿಯುಕ್ತೈ-
ರ್ಯುಕ್ತೈಃ ಸಹೈವ ಸತತಂ ಪ್ರವಿಚಿಂತಯದ್ಭಿಃ ॥

ಪೂರ್ತೇರಚಿಂತ್ಯಮಹಿಮಃ ಪರಮಃ ಪರಾತ್ಮಾ
ನಾರಾಯಣೋಽಸ್ಯ ಗುಣವಿಸ್ಮೃತಿರನ್ಯಥಾ ಕ್ವ ॥ ೨೦ ॥

ಸಾಮ್ಯಂ ನ ಚಾಸ್ಯ ಪರಮೇಣ(ಮಸ್ಯ)ಚ ಕೇನ ಚಾಪ್ಯಂ
ಮುಕ್ತೈಃ ಚ ಕ್ವಚಿದತಸ್ತ್ವಭಿದಾ ಕುತೋಽಸ್ಯ ॥
ಪ್ರಾಪ್ಯೇತ ಚೇತನಗಣೈಃ ಸತತಾಸ್ವತಂತ್ರೈ-
ರ್ನಿತ್ಯಸ್ವತಂತ್ರವಪುಷಃ ಪರಮಾತ್ಪರಸ್ಯ ॥ ೨೧ ॥

ಅ ॥ ನಿಖಿಲ ವೇದಶಾಸ್ತ್ರಾದಿಗಳ ಪರ್ಯಾಲೋಚನೆಯಿಂದ ಯುಕ್ತರಾದ, ಯುಕ್ತೈಃ– ಪುಂಜೀಭೂತರಾದ ಏಕಕಾಲದಲ್ಲಿಯೇ ಸರ್ವದಾ ವಿಚಾರಮಾಡತಕ್ಕ ಈ ಪ್ರಸಿದ್ಧರಾದ ದೇವಾದಿಗಳಿಂದ ಸರ್ವೋತ್ತಮನಾದ, ಸರ್ವಸ್ವಾಮಿಯಾದ ನಾರಾಯಣನು ಯಾವಕಾರಣ ದೆಶೆಯಿಂದ (ಅಪರಿಮಿತಗಳಾದ ಗುಣಗಳ ಸಮೂಹಗಳಿಂದ) ಪೂರ್ಣನಾದಪ್ರಯುಕ್ತ ಅಚಿಂತ್ಯ (ಸ್ಮರಿಸಲಿಕ್ಕೂ ಅಶಕ್ಯವಾದ) ಮಹಿಮೆಯುಳ್ಳವನೋ ಆದಕಾರಣ ನಾರಾಯಣನ ಗುಣವಿಸ್ಮಾರವು ಇತರರಾದ ಬ್ರಹ್ಮಾದಿಗಳಲ್ಲಿ ಇರತಕ್ಕುದು ಹೇಗೆ ಆಗುವುದು?

(ಸರ್ವೋತ್ತಮನಾದ) ಈ ಶ್ರೀಹರಿಯ ಸಾಮ್ಯವು(ಜೀವರ ಸಮೂಹದಿಂದ) ಉತ್ತಮರಾದ (ಅಮುಕ್ತರಾದ ಬ್ರಹ್ಮಾದಿಗಳಿಂದಲಾಗಲೀ,) (ಮುಕ್ತರಾದ ಬ್ರಹ್ಮಾದಿಗಳಿಂದಲಾಗಲೀ) ಯಾರಿಂದಲೂ(ಯಾವ ಕಾರಣದಿಂದ)ಹೊಂದಲ್ಪಡಲಾರದೋ,ಆದಕಾರಣ ನಿತ್ಯದಲ್ಲಿಯೂ ಸ್ವತಂತ್ರವಾದ ಶರೀರವುಳ್ಳ ಬ್ರಹ್ಮಾದ್ಯುತ್ತಮಳಾದ ಲಕ್ಷ್ಮಿಯಿಂದಲೂ ಉತ್ತಮನಾದ ಈ ಶ್ರೀ ನಾರಾಯಣನ ಅಭೇದವೂ ನಿರಂತರದಲ್ಲಿಯೂ ಅಸ್ವತಂತ್ರರೇ ಆದ ಚೇತನರ ಸಮುದಾಯಗಳಿಂದ ಯಾವ ಕಾಲದಲ್ಲಿ ಆಗಲೀ ಯಾವುದರಿಂದ ಹೊಂದಲ್ಪಡುವುದು? (ಯಾವುದರಿಂದಲೂ ಹೊಂದಲ್ಪಡಲಾರದು. ವಿರುದ್ಧ ಧರ್ಮವುಳ್ಳವುಗಳಿಗೆ ಅಭೇದವು ಸರ್ವಥಾ ಕೂಡಲಾರದು.) ॥೨೦॥೨೧॥

ಹೀಗೆ ಸದಾಗಮಗಳ ಅರ್ಥವನ್ನು ಹೇಳಿ, ಈ ಅರ್ಥವು ಹೇಗೆ ಸದಾಗಮ ಪ್ರತಿಪಾದ್ಯವು ಎಂದರೆ— ಸದಾಗಮಗಳಲ್ಲಿರತಕ್ಕ ವಾಕ್ಯಗಳನ್ನುದಾಹರಿಸುತ್ತಾರೆ—

ಮೂ ॥ ಅರ್ಥೋಽಯಮೇವ ನಿಖಿಲೈರಪಿ ವೇದವಾಕ್ಯೈ
ರಾಮಾಯಣೈಶ್ಚ ಸಹಿತಭಾರತಪಂಚರಾತ್ರೈಃ ॥
ಅನ್ಯೈಶ್ಚ ಶಾಸ್ತ್ರವಚನೈಃ ಸಹತತ್ತ್ವಸೂತ್ರೈ-
ರ್ನಿರ್ಣೀಯತೇ ಸಹೃದಯಂ ಹರಿಣಾ ಸದೈವ ॥ ೨೨ ॥

ಅ ॥ (ನಿರ್ದೋಷ ಪೂರ್ಣಗುಣಾತ್ಮಕ ಶರೀರವಿರುವವನು ಇತ್ಯಾದಿರೂಪವಾದ) ಈ ಅರ್ಥವೇ ಭಾರತ ಪಂಚರಾತ್ರಗಳಿಂದ ಕೂಡಿದ ಎಲ್ಲಾ ವೇದವಾಕ್ಯಗಳಿಂದಲೂ,ರಾಮಾಯಣದಲ್ಲಿರತಕ್ಕ ಎಲ್ಲಾವಾಕ್ಯಗಳಿಂದಲೂ, ಬ್ರಹ್ಮಸೂತ್ರಗಳಿಂದ ಸಹಿತಗಳಾದ, ಇತರಗಳಾದ ಸರ್ವೋತ್ತಮತ್ವಕ್ಕೆ ಅನುಕೂಲಗಳಾದ ಪುರಾಣಸ್ಮೃತಿಮೊದಲಾದ) ಶಾಸ್ತ್ರವಚನಗಳಿಂದಲೂ (ಸಾಭಿಪ್ರಾಯವಾಗಿಯೇ ಯಾವಾಗಲೂ ಶ್ರೀಹರಿಯಿಂದ ನಿಶ್ಚಯಿಸಲ್ಪಡುತ್ತದೆ. ॥೨೨॥

ಹಿಂದಿನ ಶ್ಲೋಕಗಳಲ್ಲಿ ಸಮರ್ಥಿಸಿರುವ ವಿಷ್ಣು ಸರ್ವೋತ್ತಮತ್ವಾದಿ ವಿಷಯಗಳಲ್ಲಿ ಪ್ರಮಾಣ ವಚನಗಳನ್ನು ಅರ್ಥತಃ ಸಂಗ್ರಹಿಸುತ್ತಾರೆ.

ಮೂ ॥ ನಾರಾಯಣಸ್ಯ ನ ಸಮಃ ಪುರುಷೋತ್ತಮೋಽಹಂ
ಜೀವಾಕ್ಷರೇ ಹ್ಯಧಿ(ತಿ) ಗ ತೋಽಸ್ಮಿತತೋಽನ್ಯದಾರ್ತಂ ॥
ಮುಕ್ತೋಪಸೃಪ್ಯ ಇಹ ನಾಸ್ತಿ ಕುತಶ್ಚ ಕಶ್ಚಿ-
ನ್ನಾನೇವ ಧರ್ಮಪೃಥಗಾತ್ಮದೃಗೇತ್ಯಧೋ ಹಿ ॥೨೩॥

ಅ ॥ ಶ್ರೀ ನಾರಾಯಣನಿಗೆ ಸಮಾನಿಕನು ಯಾವನೊಬ್ಬನೂ ಇಲ್ಲವೇ ಇಲ್ಲ. ಕ್ಷರಾಕ್ಷರಪುರುಷರಿಂದ ಉತ್ತಮನಾದ ನಾನು ಯಾವ ಕಾರಣದಿಂದೆಯಿಂದ ಬ್ರಹ್ಮಾದಿಜೀವರನ್ನೂ ಮಹಾಲಕ್ಷ್ಮಿಯನ್ನೂ ಅಧಿಕವಾಗಿ ಹೊಂದಿರುವೆನೋ (ಅಂದರೆ ಉತ್ತಮತ್ವವನ್ನು ಬಿಡದೇನೇ ಅವರ ಹೃದಯದಲ್ಲಿ ನಿಯಾಮಕನಾಗಿಯೇ ಇರುವೆನೋ) ಆದಕಾರಣ ಪುರುಷೋತ್ತಮನಾಗಿರುವೆನು. ಪರಮಾತ್ಮನ ಸಕಾಶ ದೆಶೆಯಿಂದ ಇತರರಾದ ಬ್ರಹ್ಮಾದಿಜೀವರ ಸಮುದಾಯವು ಚೆನ್ನಾಗಿ ದಃಖವುಳ್ಳದ್ದು. (**'ಮುಕ್ತೋಪಸೃಪ್ಯವ್ಯಪದೇಶಾತ್'** ಎನ್ನುವ ಸೂತ್ರವನ್ನು ಸಂಗ್ರಹಿಸುತ್ತಾರೆ.) ಶ್ರೀ ನಾರಾಯಣನು ಮುಕ್ತರಿಂದ ಹೊಂದಲ್ಪಡತಕ್ಕವನು.) ಈ ಪರಬ್ರಹ್ಮನಲ್ಲಿ (ಅವಯವಾವಯವಿಗಳಿಗೆ ಭೇದವಾಗಲೀ ಗುಣ-ಗುಣಿಗಳಿಗೆ ಭೇದವಾಗಲೀ) ಅವತಾರಾದಿ ನಿಮಿತ್ತದಿಂದಲೂ ಇಲ್ಲವೇ ಇಲ್ಲ. (ಈ ಬ್ರಹ್ಮನಲ್ಲಿ ಅವಯವಗುಣರೂಪಾದಿಗಳಿಂದ) ಭೇದವನ್ನಾಗಲೀ ಭೇದಾಭೇದವನ್ನಾಗಲೀ (ಯಾರು ತಿಳಿದುಕೊಳ್ಳುತ್ತಾನೋ ಅವನು ತಪಸ್ಸನ್ನು ಹೊಂದುತ್ತಾನೆ.) ಶ್ರೀ ಹರಿಯ ಧರ್ಮಗಳಿಗೇನೇ ಪರಸ್ಪರವಾಗಿ ಭೇದವನ್ನು ತಿಳಿಯುವವನು, ಅಥವಾ ಧರ್ಮಗಳ ದೆಶೆಯಿಂದ ಪ್ರತ್ಯೇಕವಾಗಿ ಪರಮಾತ್ಮನನ್ನು ನೋಡಿದವನು, ಅಧೋಲೋಕವನ್ನು (ನರಕವನ್ನು) ಹೊಂದುತ್ತಾನೆ.

ವಿಶೇಷಾಂಶ — (1) 'ನಾರಾಯಣಸ್ಯ ನ ಸಮಃ' ಎನ್ನುವುದರಿಂದ **'ನಾಸ್ತಿ ನಾರಾಯಣ ಸಮಂ ನ ಭೂತಂ ನ ಭವಿಷ್ಯತಿ'** ನಾರಾಯಣನಿಗೆ ಸಮಾನಿಕವಾದುದು ಎಲ್ಲಿಯೂ ಇರುವುದಿಲ್ಲ. ಹಿಂದೆ ಇರಲಿಲ್ಲ. ಮುಂದೆಯೂ ಇರುವುದಿಲ್ಲ. **'ಸತ್ಯಂ ಸತ್ಯಂ ಪುನಸ್ಸತ್ಯಮುದ್ಧೃತ್ಯ ಭುಜಮುಚ್ಯತೇ । ನೇದಶಾಸ್ತ್ರಾತ್ಪರಂ ನಾಸ್ತಿ ನ ದೈವಂ ಕೇಶವಾತ್ಪರಂ ॥** ಭುಜವನ್ನು ಎತ್ತಿಕೊಂಡು ವೇದಶಾಸ್ತ್ರದಿಂದ ಶ್ರೇಷ್ಠವಾದುದು ಇನ್ನೊಂದು ಶಾಸ್ತ್ರವಿಲ್ಲ. ಕೇಶವನದೆಶೆಯಿಂದ ಶ್ರೇಷ್ಠವಾದ ದೇವತೆಯು ಇಲ್ಲವೇ ಇಲ್ಲವೆಂದು ಶಪಥಪೂರ್ವಕವಾಗಿ, ಸತ್ಯವಾಗಿ ಹೇಳುವೆನು. ಇತ್ಯಾದಿ ಭಾರತವಾಕ್ಯವನ್ನು ಅರ್ಥತಃ ಸಂಗ್ರಹಿಸಿರುವರು. ಇದು **'ನೈತಾದೃಶಃ ಕ್ವ ಚ ಬಬೂವ'** ಎನ್ನುವಲ್ಲಿ ಪ್ರಮಾಣವು. (2) 'ಪುರುಷೋತ್ತಮೋಽಹಂ ಜೀವಾಕ್ಷರೇ ಹ್ಯಧಿಗತೋಽಸ್ಮಿ' ಎನ್ನುವುದರಿಂದ **'ಯಸ್ಮಾತ್ಕ್ಷರಮತೀತೋಽಹಮಕ್ಷರಾದಪಿ ಚೋತ್ತಮಃ । ಅತೋಽಸ್ಮಿ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ ॥'** ಯಾವ ಕಾರಣದಿಂದ ಎಲ್ಲಾ ಪ್ರಾಣಿಗಳನ್ನು ಅತಿಕ್ರಮಿಸಿರುವೆನೋ, ಲಕ್ಷ್ಮಿಯಿಂದಲೂ ಉತ್ತಮನಾಗಿರುವೆನೋ ಆದುದರಿಂದ ಪೌರುಷೇಯ ಗ್ರಂಥಗಳಲ್ಲಿಯೂ. ವೇದದಲ್ಲಿಯೂ ಪುರುಷೋತ್ತಮನೆಂದು ಪ್ರಸಿದ್ಧನಾಗಿರುವೆನು. ಎನ್ನುವ ಗೀತಾವಾಕ್ಯವನ್ನು ಸಂಗ್ರಹಿಸಿರುವರು. ಇದು ೧ **'ಪರತಮಃ ಪರಮಾತ್'** ೨ **'ಪರಾತ್ಪರಮಸ್ಯ'** ೩ **'ಈಶ್ವರತಮಃ'** ಎಂದು ಮೂರು ಕಡೆ ಹೇಳಿದ ಸರ್ವೋತ್ತಮತ್ವದಲ್ಲಿ ಪ್ರಮಾಣವು. (3) **'ತತೋಽನ್ಯದಾರ್ತಂ'** ಎನ್ನುವ ಶ್ರುತಿಯು

1 2 3

'ಸಂಸೃತಿಗಾಃ ಸಮುಸ್ತಾ' ಎನ್ನುವಲ್ಲಿ ಪ್ರಮಾಣವು (4) **'ಮುಕ್ತೋಪಸೃಪ್ಯ'** ಎನ್ನುವುದು **'ನಿಜಮುಕ್ತ ಪದಪ್ರದಾತಾ'** ಎನ್ನುವಲ್ಲಿ ಪ್ರಮಾಣವು. ('ಇಹ ನಾಸ್ತಿ ಕುತಶ್ಚ ಕಶ್ಚಿತ್' ಎನ್ನುವುದರಿಂದ **'ನೇಹ ನಾನಾಸ್ತಿ ಕಿಂಚನ'** ಎನ್ನುವ ಶ್ರುತಿಯನ್ನು ಅರ್ಥತಃ ಸಂಗ್ರಹಿಸಿರುವರು. ಈ ಶ್ರುತಿಯಲ್ಲಿರುವ ನಾನಾಪದದಿಂದ ಹೇಳಲ್ಪಟ್ಟ ಭೇದವು ಯಾವುದಾದರೊಂದೂ ಕೂಡ ಇಲ್ಲ. ಅಂದರೆ ಬ್ರಹ್ಮನಲ್ಲಿ ಅವತಾರಭೇದವಾಗಲೀ, ಅವಯವ ಭೇದವಾಗಲೀ, ಗುಣ-ಗುಣಿಗಳಿಗೆ ಭೇದವಾಗಲೀ, ಪರಸ್ವರವಾಗಿ ವಿರೋಧರೂಪ ಭೇದವಾಗಲೀ, ವೈಲಕ್ಷಣ್ಯರೂಪ ಭೇದವಾಗಲೀ, ವಿನಾಶರೂಪ ಭೇದವಾಗಲೀ, ವ್ಯಾಪ್ತಿಯಿರೋಣದರಿಂದ ಸ್ಥಾನಭೇದ ಪ್ರಯುಕ್ತ ಭೇದವಾಗಲೀ ಅಲ್ಲ. ಆದುದರಿಂದಲೇ ಶ್ರುತಿಯಲ್ಲಿ ಭೇದಃ ಎಂದು ಹೇಳದೆ ನಾನಾವಿಧ ಭೇದವನ್ನು ಸೂಚಿಸುವುದಕ್ಕಾಗಿ ನಾನಾ ಎಂದು ಸೂಚಿಸಿರುವರು. (6) ನಾನೇವ ಎನ್ನುವುದರಿಂದ **' ಮೃತ್ಯೋಃ ಸ ಮೃತ್ಯುಮಾಪ್ನೋತಿ ಯ ಇಹ ನಾನೇವ ಪಶ್ಯತಿ '** ಯಾರು ಭೇದವನ್ನಾಗಲೀ, ಭೇದಾಭೇದವನ್ನಾಗಲೀ ತಿಳಿಯುತ್ತಾರೋ ಅವರು ನರಕಾದ್ಯನರ್ಥವನ್ನು ಹೊಂದುತ್ತಾರೆ. ಎನ್ನುವ ಶ್ರುತಿಯನ್ನು ಸಂಗ್ರಹಿಸಿರುವರು. (7) **'ಧರ್ಮ್ಯ ಪೃಥಗಾತ್ಮ ದೃಗೇತ್ಯಥೋ ಹಿ'** ಎನ್ನುವುದರಿಂದ **' ಯಥೋದಕಂ ದುರ್ಗೇವೃಷ್ಟಂ ಪರ್ವತೇಷು ವಿಧಾವತಿ । ಏವಂ ಧರ್ಮಾನ್ ಪೃಥಕ್ಪಶ್ಯನ್ ತಾನೇವಾನು ವಿಧಾವತಿ'** ದುರ್ಗವಾದ ಶಿಖರದಲ್ಲಿ ಸುರಿಸಲ್ಪಟ್ಟ ನೀರು ಹೇಗೆ ತಗ್ಗು ಪ್ರದೇಶಕ್ಕೆ ಹೋಗುತ್ತದೋ ಹಾಗೆಯೇ ಧರ್ಮಗಳನ್ನು ಶ್ರೀಹರಿಯಿಂದ ಭಿನ್ನಗಳೆಂದು ತಿಳಿದವನು ನರಕಾದ್ಯನರ್ಥವನ್ನು ಹೊಂದುತ್ತಾನೆ ಎನ್ನುವ ಶ್ರುತಿಯನ್ನು ಸಂಗ್ರಹಿಸಿರುವರು. ತನ್ನ ಧರ್ಮಗಳಿಗೆ ಭೇದವನ್ನು ಕಂಡುದರಿಂದ ಕುಪಿತನಾದ ಪರಮಾತ್ಮನೇ ತಮಸ್ಸನ್ನು ಕೊಡುತ್ತಾನೆಂದು ಸೂಚಿಸುವುದಕ್ಕಾಗಿ 'ಧರ್ಮಪೃಥಗಾತ್ಮದೃಕ್' ಎಂದು (7) ಅಂತಿಮ ಮೂರು ವಾಕ್ಯಗಳು **' ಸರ್ವತ್ರ ಚ ಸ್ವಗತಭೇದವಿವರ್ಜಿತಾತ್ಮಾ '** ಎನ್ನುವಲ್ಲಿ ಪ್ರಮಾಣವು. ॥೨೩॥

ಮೂ ॥ ಆಭಾಸ ಏವ ಪೃಥಗೀಶತ ಏಷ ಜೀವೋ
ಮುಕ್ತಸ್ಯ ನಾಸ್ತಿ ಜಗತೋ ವಿಷಯೇ ತು ಶಕ್ತಿಃ ।
ಮಾತ್ರಾಪರೋಽಸಿ ನ ತು ತೇಽಶ್ನುವತೇ ಮಹಿತ್ವಂ
ಷಾಡ್ಗುಣ್ಯವಿಗ್ರಹಸುಪೂರ್ಣಗುಣೈಕದೇಹ ॥ ೨೪ ॥

ಅ ॥ ಜೀವನು ಪರಮಾತ್ಮನ ಪ್ರತಿಬಿಂಬನೇ. (ಸೂರ್ಯ ಸೂರ್ಯ ಪ್ರತಿಬಿಂಬಗಳಂತೆ ಭಿನ್ನನೂ ಆಗಿರುತ್ತಾನೆ). ಈ ಜೀವನು ಈಶ್ವರನಿಂದ ಭಿನ್ನನೇ. ಮುಕ್ತರಾದ ಬ್ರಹ್ಮಾದಿಗಳಿಗೆ ಜಗತ್ತನ್ನು ನಿರ್ಮಿಸುವ ವಿಷಯದಲ್ಲಿ ಶಕ್ತಿಯು ಇಲ್ಲ. ಪರಿಮಾಣದಿಂದ ಅತಿಕ್ರಾಂತನು ಆಗಿರುತ್ತಿ. (ಅಂದರೆ ದೇಶದಿಂದಲೂ, ಕಾಲದಿಂದಲೂ ಅವಧಿಯಿಲ್ಲದವನು) ನಿನ್ನ ಮಹಿಮೆಯನ್ನು ಯಾರೂ ಹೊಂದುವುದಿಲ್ಲ. ಐಶ್ವರ್ಯ ಮೊದಲಾದ ಷಡ್ಗುಣಾತ್ಮಕ ಶರೀರವುಳ್ಳವನೇ, ಅತಿ ಪೂರ್ಣಗಳಾದ ಕೇವಲ ಗುಣಾತ್ಮಕ ಶರೀರವುಳ್ಳವನೇ!

ವಿಶೇಷಾಂಶ— (1) 'ಆಭಾಸ ಏವ ಪೃಥಕ್' ಎನ್ನುವುದರಿಂದ **'ಆಭಾಸ ಏವ ಚ'** ಎನ್ನುವ ಬ್ರಹ್ಮಸೂತ್ರವನ್ನು ಸಂಗ್ರಹಿಸಿರುವರು. ಇದು **'ಆಭಾಸಕೋಽನ್ಯೋ ಪವನಃ ಪವನಸ್ಯ ರುದ್ರಃ'** ಇತ್ಯಾದಿಗಳಿಂದ ಹೇಳಲ್ಪಟ್ಟ ಅರ್ಥದಲ್ಲಿ ಪ್ರಮಾಣವು. (2) 'ಪೃಥಗೀಶತಃ' ಎನ್ನುವುದರಿಂದ **' ಪೃಥಗುಪದೇಶಾತ್ '** ಎನ್ನುವ ಸೂತ್ರವನ್ನು ಸಂಗ್ರಹಿಸಿರುವರು. ಇದು

'ಅಭಿದಾ ಕುತೋಽಸ್ಯ' ಎನ್ನುವಲ್ಲಿ ಪ್ರಮಾಣವು. (3) ೧ 'ಮುಕ್ತಸ್ಯನಾಸ್ತಿ' ಎನ್ನುವುದರಿಂದ **'ಜಗದ್ವ್ಯಾಪಾರವರ್ಜಂ'** ಎನ್ನುವ ಬ್ರಹ್ಮಸೂತ್ರವನ್ನು ಸಂಗ್ರಹಿಸಿರುವರು. ೨ **'ಸರ್ವೇಽಸ್ಮೈ ದೇವಾ ಬಲಿಮಾವಹಂತಿ'** ಎನ್ನುವ ಶ್ರುತಿಯಿಂದ ಮುಕ್ತಿಯಲ್ಲಿಯೂ ತಮ್ಮಕ್ಕಿಂತ ಅಮರರಾದವರನ್ನು ಉತ್ತರೋತ್ತರ ಮುಕ್ತರು ರಕ್ಷಿಸುತ್ತಾ ಇರುತ್ತಾರೆ. ಆದ ಕಾರಣ ಮುಕ್ತಿಯಲ್ಲಿಯೂ ಮಾಡತಕ್ಕ ಸ್ವಾವರ ನಿಯಾಮಕತ್ವರೂಪವಾದ ವ್ಯಾಪಾರವನ್ನು ವ್ಯಾವರ್ತಿಸುವುದಕ್ಕಾಗಿಯೂ, ಸಾಂಸಾರಿಕ ಜಗದ್ವ್ಯಾಪಾರವಿಶೇಷವನ್ನು ಸೂಚಿಸುವುದಕ್ಕಾಗಿಯೂ 'ತು' ಶಬ್ದವು. ಇದು 'ಸಾಮ್ಯ ನ ಚಾಸ್ಯ ಪರಮೇಣ ಚ' ಎನ್ನುವಲ್ಲಿ ಪ್ರಮಾಣವು (4) ಶ್ರೀಹರಿಯು ಸೃಷ್ಟಿ ಮೊದಲಾದ ಜಗದ್ವ್ಯಾಪಾರಗಳನ್ನು ಪ್ರತಿ ಕಲ್ಪದಲ್ಲಿಯೂ ಮಾಡುತ್ತಾನೆ. ಮುಕ್ತರಿಗೆ ಜಗದ್ವ್ಯಾಪಾರವಿಲ್ಲ. ಸಾವಧಿಕ ಭಾಗ್ಯವುಳ್ಳ ಮುಕ್ತರಿಗೆ ನಿರವಧಿಕ ನಿತ್ಯಭಾಗ್ಯವುಳ್ಳ ಪರಮಾತ್ಮನಿಂದ ಸಾಮ್ಯವು ಸರ್ವಥಾ ಬರಲಾರದು. (5) ಸೂರ್ಯಾದಿಗಳಂತೆ ಆಲೋಕದಿಂದ ವ್ಯಾಪ್ತಿಯಲ್ಲ. ಮತ್ತೆ ತನ್ವಾವೃಧಾನ-ವಿಸ್ತೃತದೇಹದಿಂದ ವೃದ್ಧನಾದವನೇ ನಿನ್ನ ಮಹಿಮೆಯನ್ನು ಯಾರೂ ಹೊಂದುವುದಿಲ್ಲ. ಇದರಿಂದ **'ಪರೋ ಮಾತ್ರಯೋ ತನ್ವಾ ವೃಧಾನ ನ ತೇ ಮಹಿತ್ವ ಮನ್ವಶ್ನುವಂತಿ'** ಎನ್ನುವ ಶ್ರುತಿಯನ್ನು ಸಂಗ್ರಹಿಸಿರುವರು ಅಂದರೆ— ಬ್ರಹ್ಮಾದಿಗಳಿಗೆ ಸಂಸಾರದಲ್ಲಿ ಮಹದಾದಿತತ್ವಗಳನ್ನು ಪ್ರವರ್ತಿಸತಕ್ಕ ದೇಹವಿದ್ದುದರಿಂದ ಅವರಿಗೆ ಕೇವಲ ತತ್ಪ್ರಮಾಣಪರಿಮಿತ ದೇಹವಿದ್ದರೂ ನಿರವಧಿಕ ಅಪರಿಚ್ಛಿನ್ನ ದೇಹವಿಲ್ಲ. ಮುಕ್ತಿಯಲ್ಲಿ ಬಾಹ್ಯದೇಹವಿಲ್ಲದಿರುವುದರಿಂದ ಸೂರ್ಯಾದಿಗಳಂತೆ ಪ್ರಕಾಶಮಾತ್ರದಿಂದ ಸ್ಥೂಲವಿದ್ದರೂ ಶರೀರದಿಂದ ಅಣುತ್ವವಿದ್ದಪ್ರಯುಕ್ತ ಸಂಸಾರದಲ್ಲಿ ಆಗಲೀ, ಮುಕ್ತಿಯಲ್ಲಿ ಆಗಲೀ ನಿನ್ನ ಮಹಿಮೆಯನ್ನು ಹೊಂದುವುದಿಲ್ಲ. ನಿನ್ನನ್ನು ಅನುಸರಿಸಿದರೂ ಸರ್ವಥಾ ಹೊಂದುವುದಿಲ್ಲ ಎಂದು ಸೂಚಿಸುವುದಕ್ಕಾಗಿ 'ಅನ್ವಶ್ನುವಂತಿ' ಎನ್ನುವಲ್ಲಿ 'ಅನು' ಎಂದು ಹೇಳಿರುವರು. ಆಚಾರ್ಯರು ಛಂಧೋಭಂಗವಾಗುತ್ತದೆ ಎನ್ನುವ ಭಯದಿಂದ **'ಅನು'** ಎನ್ನುವ ಪದವನ್ನು ಹೇಳದೆ ಅದೇ ಅರ್ಥವನ್ನು **'ತು'** ಶಬ್ದದಿಂದ ಹೇಳಿರುವರು. ಇದು **'ಸಾಮ್ಯಂ ನ ಚಾಸ್ಯ ಪರಮೇಣ ಚ'** ಎನ್ನುವಲ್ಲಿ ಪ್ರಮಾಣವು. (6) ಷಾಡ್ಗುಣ್ಯವಿಗ್ರಹ ಎನ್ನುವುದರಿಂದ **'ಜಿತಂ ತೇ ಪುಂಡರೀಕಾಕ್ಷ ಪೂರ್ಣಷಾಡ್ಗುಣ್ಯವಿಗ್ರಹ'** ಎನ್ನುವ ಪಂಚರಾತ್ರ ವಾಕ್ಯವನ್ನು ಸಂಗ್ರಹಿಸಿರುವರು. (7) 'ಸುಪೂರ್ಣಗುಣೈಕದೇಹ' ಎನ್ನುವುದರಿಂದ **'ತಸ್ಯ ಪ್ರಿಯಮೇವ ಶಿರಃ । ಮೋದೋ ದಕ್ಷಿಣಃ ಪಕ್ಷಃ । ಪ್ರಮೋದ ಉತ್ತರಃ ಪಕ್ಷಃ । ಆನಂದ ಆತ್ಮಾ । ಬ್ರಹ್ಮ ಪುಚ್ಛಂ ಪ್ರತಿಷ್ಠಾ'** ಎನ್ನುವ ಬ್ರಹ್ಮವಲ್ಲಿಯಲ್ಲಿರತಕ್ಕ ಶ್ರುತಿಯನ್ನು **'ಆನಂದೋ ಬ್ರಹ್ಮೇತಿ ವ್ಯಜಾನಾತ್'** ಎನ್ನುವ ಭೃಗುವಲ್ಲಿಯಲ್ಲಿರತಕ್ಕ ಶ್ರುತಿಯನ್ನು, **'ವಿದಿತೋಽಸಿ ಭವಾನ್ ಸಾಕ್ಷಾತ್ ಪುರುಷಃ ಪ್ರಕೃತೇಃ ಪರಃ । ಕೇವಲಾನುಭವಾನಂದಸ್ವರೂಪಃ ಸರ್ವಬುದ್ಧಿದೃಕ್'** ಶ್ರೀಕೃಷ್ಣನೇ ನೀನು ಮುಖ್ಯವಾಗಿ ಪ್ರಕೃತಿಯಿಂದ ದಾಟಿದವನು, ಪೂರ್ಣ ಷಡ್ಗುಣಗಳುಳ್ಳವನು, ಕೇವಲ ಜ್ಞಾನಾನಂದಾತ್ಮಕ ಸ್ವರೂಪವುಳ್ಳವನು, ಸರ್ವಜ್ಞನು ಎಂದು ಪ್ರಸಿದ್ಧನು, ಎನ್ನುವ ಭಾಗವತದಲ್ಲಿರತಕ್ಕ ವಸುದೇವನ ವಾಕ್ಯವನ್ನೂ, **'ಜ್ಞಾನಿನೋ ಜ್ಞಾನಯಜ್ಞೇನ ಯಜಂತಿ ಜ್ಞಾನವಿಗ್ರಹಂ'** ಜ್ಞಾನಿಗಳು ಜ್ಞಾನಾಖ್ಯ ಯಾಗದಿಂದ ಜ್ಞಾನಾತ್ಮಕಶರೀರವುಳ್ಳ ಶ್ರೀಹರಿಯನ್ನು ಪೂಜಿಸುತ್ತಾರೆ. ಎನ್ನುವ ಅಕ್ರೂರನ ವಾಕ್ಯವನ್ನೂ **'ಆನಂದಮೂರ್ತಿಮುಪಗುಹ್ಯ ಜಹುಸ್ತದಾಧಿಂ । ದೋರ್ಭ್ಯಾಂ ಸ್ತನಾಂತರಗತಂ ಪರಿರಭ್ಯ ಗಾಢಮಾನಂದಮೂರ್ತಿಮುಜಹಾದತಿದೀರ್ಘತಾಪಂ'** । ಆನಂದಮೂರ್ತಿಯಾದ ಶ್ರೀಹರಿಯನ್ನು ಹೊಂದಿ ಮನೋವ್ಯಥೆಯನ್ನು ಬಿಟ್ಟರು. ಭುಜಗಳಿಂದ ಆನಂದಮೂರ್ತಿಯನ್ನು ಚೆನ್ನಾಗಿ ಆಲಿಂಗಿಸಿ, ಅತಿ ದೀರ್ಘವಾದ ಸಂತಾಪವನ್ನು ಬಿಟ್ಟನು, ಎನ್ನುವ ಶುಕ್ರವಾಕ್ಯವನ್ನೂ ಸಂಗ್ರಹಿಸಿದರು. **ಯತ್ರಾನಂದಾಶ್ಚ ಮೋದಾಶ್ಚ ಮುದಃ ಪ್ರಮುದ ಆಸತೇ ।**

ಕಾಮಸ್ಯ ಯತ್ರಾಪ್ತಾಃ ಕಾಮಾಃ ತತ್ರ ಮಾಮಮೃತಂ ಕೃಧಿ' ॥ ಎಲ್ಲಿ ಆನಂದಾದಿಗಳೂ ಕಾಮಪೂರ್ತಿಯೂ ಇದೆಯೋ ಅಲ್ಲಿ ನನ್ನನ್ನು ಮುಕ್ತನನ್ನಾಗಿ ಮಾಡು, ಎನ್ನುವ ಶ್ರುತಿ ವಾಕ್ಯ ಸಮಾಪ್ತಿಯಿಂದ ಮುನ್ನಾಮಕವಾದುದು ಸುಖವು 'ಪ್ರಕರ್ಷೇಣ ತಿಷ್ಠತ್ಯನೇನ' ಎನ್ನುವ ವ್ಯುತ್ಪತ್ತಿಯಿಂದ ಪ್ರತಿಷ್ಠಾ ಪಾದವು. ಉತ್ತಮಾಂಗತ್ವವನ್ನು ಅಪೇಕ್ಷಿಸಿ, ಚರಮಾಂಗವಾಗಿರುವುದರಿಂದ ಪಾದಕ್ಕೆ ಪುಚ್ಛತ್ವೋಕ್ತಿಯು. ಈ ಶ್ರುತಿಯು **'ಆನಂದಮಾತ್ರಕರಪಾದ ಮುಖೋದರಾದಿಃ'** ಎನ್ನುವಲ್ಲಿ ಪ್ರಮಾಣವು **'ಸ್ಮೃತಿಗಳು ಪೂರ್ಣಗುಣ ವಿಗ್ರಹ'** ಎನ್ನುವಲ್ಲಿ ಪ್ರಮಾಣವು. ॥೨೪॥

ಮೂ ॥ ಮಾಹಾತ್ಮ್ಯದೇಹ ಸೃತಿಮುಕ್ತಿಗತೇ ಶಿವಶ್ಚ

ಬ್ರಹ್ಮಾಚ ತದ್ಗುಣಗತೌ ನ ಕಥಂ ನೇಶೌ ॥

ನ ಶ್ರೀಃ ಕುತಸ್ತದಪರೇಽಸ್ಯ ಸುಖಸ್ಯ ಮಾತ್ರಾ-

ಮಶ್ನಂತಿ ಮುಕ್ತಸುಗಣಾಶ್ಚ ಶತಾವರೇಣ ॥೨೫॥

ಅ॥ ಮಹಾಮಾಹಾತ್ಮ್ಯಯುಳ್ಳ ಶರೀರವುಳ್ಳವನೇ, ಬಂಧಮೋಕ್ಷಗಳಿಗೆ ಸ್ವಾಮಿಯಾದವನೇ (ನಿನ್ನ ಮಹಿಮೆಯನ್ನು ಬ್ರಹ್ಮರುದ್ರರೂ ಹೊಂದಲಾರರು.) ರುದ್ರನೂ ಬ್ರಹ್ಮನೂ ಕೂಡ ಆ ಶ್ರೀಹರಿಯ ಗುಣಗಳನ್ನು ಸಂಪೂರ್ಣ ತಿಳಿಯುವ ವಿಷಯದಲ್ಲಿ ಯಾವ ಪ್ರಕಾರದಿಂದಲೂ ಸಮರ್ಥರಾಗಲಾರರು. ಲಕ್ಷ್ಮೀದೇವಿಯೂ ಕೂಡಾ (ಶ್ರೀ ಹರಿಯ ಸರ್ವೋತ್ತಮತ್ವ ಮೊದಲಾದ ಮಹಿಮೆಯನ್ನು ಹೊಂದಲಿಕ್ಕೆ) ಸಮರ್ಥಳಲ್ಲ. ಇತರರು ಸಮರ್ಥರಲ್ಲವೆಂದು ಏನು ಹೇಳಬೇಕು? ಮುಕ್ತರಾದವರ ಶೋಭನ ಸಮೂಹಗಳೂ ಕೂಡ ಶತಗುಣಿತ ಆನಂದಗಳ ಅವಾಂತರ ಭಾಗದಿಂದ ಶ್ರೀಹರಿಯ ಸುಖದ ಅಂಶವನ್ನು ಅನುಭವಿಸುತ್ತಾ ಇರುತ್ತಾರೆ.

ವಿಶೇಷಾಂಶ— (1) ಸಹಸ್ರಶೀರ್ಷತ್ವ, ಸರ್ವವ್ಯಾಪ್ತತ್ವ, ಮುಖಾದ್ಯವಯವಗಳಿಂದ ಇಂದ್ರ, ಅಗ್ನಿ, ಚಂದ್ರ, ಸೂರ್ಯ, ಪ್ರಾಣ, ಭೂಮಿ, ಅಂತರಿಕ್ಷಾದಿಗಳ ಸ್ರಷ್ಟೃತ್ವ, ಮಾತ್ರಾದಿಗಳಿಂದ ಬಹಿಃ ನಿಸ್ಸರಣಕಾಲದಲ್ಲಿಯೇ ಶ್ರೀವತ್ಸ, ಕೌಸ್ತುಭ, ಶಂಖ ಚಕ್ರ, ಗದಾದಿ ತನ್ನ ಮೂಲರೂಪದ ದಿವ್ಯಲಕ್ಷಣವಿರುವಿಕೆಯು, ಬಾಲ್ಯಾವಸ್ಥೆಯಲ್ಲಿಯೂ ಸರ್ವ ಜಗತ್ತನ್ನು ಹೊಟ್ಟೆಯಲ್ಲಿ ಧರಿಸೋಣ, ಗೋಕುಲದಲ್ಲಿ ಅನೇಕ ರಜ್ಜುಗಳಿಂದಲೂ ಕಟ್ಟಲ್ಪಡದೆ ಇರುವಿಕೆಯು, ಆಗಲೇ ಗವಾದಿಗಳ ರಕ್ಷಣೆಗಾಗಿ ಗೋವರ್ಧನ ಪರ್ವತವನ್ನು ಎತ್ತೋಣ, ಅರ್ಜುನನಿಗೆ ಸಾರಥಿತನವನ್ನು ಮಾಡುತ್ತಿರುವ ಕಾಲದಲ್ಲಿದ್ದ ಸೂಕ್ಷ್ಮದೇಹಕ್ಕೇನೇ ದಿಗಂತರದಲ್ಲಿ ವ್ಯಾಪ್ತತ್ವವು, ಬ್ರಹ್ಮ, ಈಶ ಮೊದಲಾದ ಸಕಲ ದೇವತಾದಿಗಳಿಗೂ ಆಧಾರತ್ವವು, ಇದು ಮೊದಲಾದ ಮಹಾಮಾಹಾತ್ಮ್ಯವುಳ್ಳ ಶರೀರವುಳ್ಳವನು. ಇದರಿಂದ ಪುರುಷಸೂಕ್ತ, ಭಾಗವತ, ಗೀತಾದಿ ಪ್ರಮಾಣಗಳು ಸಂಗೃಹೀತಗಳಾದುವು. ಇದು ಜನನ ಮರಣಾದ್ಯಖಿಲ ದೋಷ ವರ್ಜಿತವೆನ್ನುವ ವಿಷಯದಲ್ಲಿಯೂ, ನಿಶ್ಚೇತನಾತ್ಮಕ ಶರೀರವಿದೂರನು, ಎನ್ನುವ ವಿಷಯದಲ್ಲಿಯೂ, ' ನೈತಾದೃಶಃ ಕ್ವ ಚ ಬಭೂವ ' ಎನ್ನುವಲ್ಲಿಯೂ, ' ಅಭಿದಾ ಕುತೋಽಸ್ಯ ' ಎನ್ನುವೆಲ್ಲಿಯೂ, ' ಸ ಹಿ ಸರ್ವಶಕ್ತಿಃ ' ಎನ್ನುವಲ್ಲಿಯೂ ಪ್ರಮಾಣವು. ಮಗುವು ಸರ್ವ ಜಗತ್ತನ್ನು ಹೊಟ್ಟೆಯಲ್ಲಿಟ್ಟುಕೊಂಡದೆ ಇತ್ಯಾದಿಗಳು ಅಘಟಿತ ಘಟಿಕ ಶಕ್ತಿಯಿಂದಲೇ ಕೂಡಿಸಬೇಕು. (2) ' ಸೃತಿಮುಕ್ತಿಗತೇ ' ಎನ್ನುವುದರಿಂದ **' ಉತಾಮೃತತ್ವಸ್ಯೇಶಾನೋ ಯದ-**

ನ್ಮೇನಾತಿರೋಹತಿ' ಯಾವ ಕಾರಣದಿಂದ ಮರಣಶೀಲನಾದ ಸಂಸಾರಿಯನ್ನು ಅತಿಕ್ರಮಿಸಿರುತ್ತಾನೋ, ಇದರಿಂದ ರಾಮಕೃಷ್ಣಾದಿ ಪ್ರಾದುರ್ಭಾವ ರೂಪಗಳಲ್ಲಿಯೂ ಅತಿಕ್ರಮಿಸಿಯೇ ಇರುತ್ತಾನೆ. ಸಂಸಾರಿಯಂತೆ ತಾನು ಮರಣವನ್ನು ಹೊಂದುವುದಿಲ್ಲ, ಎನ್ನುವ ಅಭಿಪ್ರಾಯದಿಂದ 'ಅತಿರೋಹತಿ' ಎಂದು ಹೇಳಿರುವರು, ಆದ ಕಾರಣ ಮುಕ್ತರ ಸಮುದಾಯಕ್ಕೆ ಸ್ವಾಮಿಯಾಗಿದ್ದಾನೆ ಎನ್ನುವ ಶ್ರುತಿಯನ್ನು ಸಂಗ್ರಹಿಸಿರುವರು. **' ಸೋಽನ್ಯತಸ್ಯಾಭಯು-ಸ್ಯೇಶೋ ಮರ್ತ್ಯಮನ್ನಂ ಯದಭ್ಯಗಾತ್ । ವರಂ ವರಯೆ ಭದ್ರಂ ತೇ ಋತೇ ಕೈವಲ್ಯಮಾತ್ಮನಃ । ಏಕ ಏನೇಶ್ವರಸ್ತಸ್ಯ ಭಗವಾನ್ವಿಷ್ಣುರವ್ಯಯಃ '** । ಶ್ರೀಹರಿಯು ಸಂಸಾರವನ್ನು ಅತಿಕ್ರಮಿಸಿಯೇ ಇರುತ್ತಾನೆ. ಮುಕ್ತವರ್ಗಕ್ಕೆ ಸ್ವಾಮಿಯು. ಮುಕ್ತಿ ಹೊರತು ಯಾವ ವರವನ್ನಾದರೂ ಬೇಡಿಕೊಳ್ಳಿ, ಮುಕ್ತಿದಾಯಕನು ಶ್ರೀಹರಿಯೇ, ಎನ್ನುವ ಸ್ಮೃತಿಯನ್ನೂ ಸಂಗ್ರಹಿಸಿರುವರು. ಅಥವಾ ಸಂಸಾರ, ಸಂಸಾರ ಪ್ರಧ್ವಂಸರೂಪವಾದ ಮೋಕ್ಷ ಇವು ಎರಡನ್ನು ಹೊಂದಿಸಿಕೊಡುವವನು, ಇದರಿಂದ **'ತ್ವಂ ನಿತ್ಯಮುಕ್ತಪರಿಶುದ್ಧ ವಿಬುದ್ಧ ಆತ್ಮಾ । ಗುಣಸ್ಯ ಮಾಯಾಮೂಲತ್ವಾತ್ ನ ನೇ ಮೋಕ್ಷೋ ನ ಬಂಧನಂ । ವಿದ್ಯಾಮಯೋ ಯಸ್ಸ ತು ನಿತ್ಯಮುಕ್ತಃ'** । ಶ್ರೀಕೃಷ್ಣನೇ ನೀನು ನಿತ್ಯಮುಕ್ತವಾದ ಶುದ್ಧ ಜ್ಞಾನರೂಪನು. ಗುಣವು ಮಾಯಾಮೂಲಕವಾಗಿರುವುದರಿಂದ ನನಗೆ ಮೋಕ್ಷವೂ ಇಲ್ಲ, ಬಂಧವೂ ಇಲ್ಲ. ಯಾವನು ಜ್ಞಾನರೂಪನೋ, ಆತನೇ ನಿತ್ಯಮುಕ್ತನು. ಇದು ಮೊದಲಾದ ಭಾಗವತ ವಾಕ್ಯವನ್ನು ಸಂಗ್ರಹಿಸಿರುವರು. (ಶ್ಲೋಕ ೨೪, ೨೫). ಇಲ್ಲಿ ೧ **' ಷಾಡ್ಗುಣ್ಯವಿಗ್ರಹ,** ೨ **ಸುಪೂರ್ಣಗುಣೈಕದೇಹ,** ೩ **ಮಾಹಾತ್ಮ್ಯದೇಹ '** ಎನ್ನುವ ಮೂರು ವಿಶೇಷಣಗಳು. **' ನಿರ್ದೋಷಪೂರ್ಣಗುಣವಿಗ್ರಹ '** ಎನ್ನುವಲ್ಲಿ ಪ್ರಮಾಣವು. 'ಸ್ಮೃತಿಮುಕ್ತಿಗತೇ' ಎನ್ನುವ ನಾಲ್ಕನೇದ್ದಾದರೂ ' ಕೇನ ಚಾಪ್ಯಂ ಮುಕ್ತೇನ ಚ ' ಎನ್ನುವಲ್ಲಿ ಪ್ರಮಾಣವು. (3)'ಶಿವಶ್ಚ ಬ್ರಹ್ಮಾ ಚ' ಇತ್ಯಾದಿಗಳಿಂದ **' ನಾಂತಂ ಗುಣಾನಾ-ಮಗುಣಸ್ಯ ಜಗ್ಮುರ್ಯೋಗೇಶ್ವರಾ ಯೇ ಭವ ಪದ್ಮ ಮುಖ್ಯಾಃ '** । ಯೋಗೇಶ್ವರರಾದ ರುದ್ರ, ಬ್ರಹ್ಮಾದಿಗಳು ಸತ್ವ–ರಜ–ಸ್ತಮೋಗುಣರಹಿತನಾದ ಶ್ರೀಹರಿಯ ಗುಣಗಳ ಅಂತರವನ್ನು ಹೊಂದಲಾರರು, ಇತ್ಯಾದಿ ಭಾಗವತ ವಾಕ್ಯವನ್ನು ಸಂಗ್ರಹಿಸಿರುವರು. (4) ' ನ ಶ್ರೀಃ ' ಎನ್ನುವುದರಿಂದ **' ಮನು ಯೋನಿರಪ್ಸ್ವಂತಸ್ಸಮುದ್ರೇ । ತತೋ ವಿತಿಷ್ಠೇ ಭುವನಾನು ವಿಶ್ವೋತಾ ಮೂಂದ್ಯಾಂವಷ್ಟ್ಯಣೋಪಸ್ಪೃಶಾಮಿ । ಪರೋದಿವಾ ಪರ ಏನಾ ಪೃಥಿವ್ಯೈತಾವತೀ ಮಹಿನಾ ಸಂಬಭೂವ, ।** ಇತ್ಯಾದಿ ವಾಕ್ಯವನ್ನು ಸಂಗ್ರಹಿಸಿರುವರು. ಅಂದರೆ— ಹಿಂದೆ ಹೇಳಿದ ಪ್ರಕಾರ ಬ್ರಹ್ಮಾದಿಗಳಿಗೆ ಜನನ ಮರಣಗಳನ್ನು ಮಾಡಲಿಕ್ಕೆ ಸಮರ್ಥಳಾದಾಗ್ಯೂ ನನಗೆ ಕಾರಣೀಭೂತನಾದವನು' ಶ್ರೀಹರಿಯು ಸಮುದ್ರದಲ್ಲಿ ಇದ್ದಾನೆ, ನಾನೇ ಸರ್ವೇಶ್ವರಿಯಲ್ಲ, ನನಗೆ ಕಾರಣೀಭೂತನಾದ ನಾರಾಯಣನ ದೆಶೆಯಿಂದ ಸುಸ್ತ ಭುವನಗಳೂ ಹುಟ್ಟಿದವು. ನಾನೇ ಮೊದಲಾದ ಸರ್ವ ಜಗತ್ತು ಹುಟ್ಟಿದ ಮೇಲೆ ವಿಶೇಷವಾಗಿ ಜಗತ್ತು ಶ್ರೀಹರಿಯಿಂದ ಧರಿಸಲ್ಪಟ್ಟಿತು. ನಾನಾದರೂ ಈ ಪೃಥಿವಿಯನ್ನೂ, ಸ್ವರ್ಗವನ್ನೂ ದೇಹದಿಂದ ಸಮೀಪದಲ್ಲಿ ಮುಟ್ಟಿಕೊಂಡು ಇರುತ್ತೇನೆ. ಆದುದರಿಂದ ಇತರರು ಸಮರ್ಥರಲ್ಲವೆಂದು ಏನು ಹೇಳಬೇಕು? ಆ ಶ್ರೀಹರಿಯೇ ಸರ್ವಜಗದ್ಧಾರಕನು. ನಾನಾದರೂ ಕೇವಲ ನಿಮಿತ್ತಕಾರಣಳು. ಆ ಪರಮಾತ್ಮನು ದ್ಯುನಾಮಕವಾದ ನನ್ನ ರೂಪದ್ದೆಶೆಯಿಂದಲೂ ಈ ಪೃಥಿವೀ ನಾಮಕ ನನ್ನ ರೂಪದ್ದೆಶೆಯಿಂದಲೂ ಉತ್ತಮನು. ನಾನಾದರೂ ಮಹಿಮೆಯಿಂದ ಅವಧಿಯುಳ್ಳವಳು ಆಗಿರುತ್ತೇನೆ. ಈ ಶ್ರುತಿಯಿಂದ ಶ್ರೀಹರಿಯು ನಿರವಧಿಕ ಮಾಹಾತ್ಮ್ಯವುಳ್ಳವನು. ಲಕ್ಷ್ಮಿಯಾದರೂ ಸಾವಧಿಕ ಭಾಗ್ಯವುಳ್ಳವಳು. ಆದುದರಿಂದ ಲಕ್ಷ್ಮಿಯೂ ಕೂಡ

ಶ್ರೀಹರಿಯ ಗುಣಗಳನ್ನು ತಿಳಿಯಲಿಕ್ಕೆ ಸಮರ್ಥಳಲ್ಲ ಎಂದುಕ್ತವಾಗಿದೆ. ಇದು **' ಅಸ್ಯ ಗುಣ ವಿಸ್ತೃತೀರನ್ಯಗಾ ಕ್ವ '** ಎನ್ನುವಲ್ಲಿ ಪ್ರಮಾಣವು. (5) ' ಅಸ್ಯ ಸುಖಸ್ಯ ' ಎನ್ನುವುದರಿಂದ **' ಏತಸ್ಯೈವಾನಂದಸ್ಯಾನ್ಯಾ ವಿಭೂತಾನಿ ಮಾತ್ರಾಮುಪಜೀವಂತಿ '** । ಎನ್ನುವ ಶ್ರುತಿಯನ್ನೂ **' ಸೈಷಾನಂದಸ್ಯ ಮೀಮಾಂಸಾ ಭವತಿ '** ಎನ್ನುವ ಆನಂದ ತಾರತಮ್ಯ ಶ್ರುತಿಯನ್ನೂ ಸಂಗ್ರಹಿಸಿರು. ಪೂರ್ವಶ್ರುತಿಯಲ್ಲಿ ಶ್ರೀ ಭಗವಂತನ ಆನಂದದ ಏಕದೇಶವನ್ನು ಹೊಂದುತ್ತಾರೆ ಎಂದು ಹೇಳಿಯದೆ. ಆ ಏಕದೇಶವೂ ಸರ್ವರಿಗೂ ಸಾಮ್ಯದಿಂದ ಅಲ್ಲ. ಮತ್ತೆ ಉತ್ತಮೋತ್ತಮರಿಂದ ನೀಚನೀಚರು ಕ್ರಮದಿಂದ, ನೂರು ನೂರು ಅಂಶದಿಂದ ಕಡಿಮೆಯಾಗಿ ಆನಂದವನ್ನು ಅನುಭವಿಸುತ್ತಾರೆ. ಹಾಗೆಯೇ ಉತ್ತಮೋತ್ತಮರು ಶತಾಧಿಕ ಭಾಗದಿಂದ ಆನಂದವನ್ನು ಅನುಭವಿಸುತ್ತಾರೆ. ಶ್ರೀ ಹರಿಯಾದರೂ **' ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾ ಸಹ । ಆನಂದಂ ಬ್ರಹ್ಮಣೋ ವಿದ್ವಾನ್ '** । ಎನ್ನುವ ಶ್ರುತಿಗಳಲ್ಲಿ ಮನೋವಚನಗಳಿಗೆ ಅಗೋಚರವಾದ, ನಿರವಧಿಕವಾದ ಆನಂದವನ್ನು ಅನುಭವಿಸುವವನು ಎಂದು ಹೇಳಿಸಿಕೊಳ್ಳಲ್ಪಡುತ್ತಾನೆ. ಆದುದರಿಂದ ಇವರಿಗೆ ಶ್ರೀಹರಿಯಿಂದ ಸಾಮ್ಯವು ಹೇಗೆ? ಇದೂ ಕೂಡ **'ಮುಕ್ತೇನಚ'** ಎನ್ನುವಲ್ಲಿಯೂ **' ಆಭಿದಾ ಕುತೋಽಸ್ಯ '** ಎನ್ನುವಲ್ಲಿಯೂ ಪ್ರಮಾಣವು. ॥ ೨೫ ॥

ಮೂ ॥ ಆಭಾಸಕಾಭಾಸಪರಾವಭಾಸ
ರೂಪಾಣ್ಯಜಸ್ರಾಣಿ ಚ ಚೇತನಾನಾಂ ॥
ವಿಷ್ಣೋಃ ಸದೈವಾತಿವಶಾತ್ತದಾಪಿ
ಗಚ್ಛಂತಿ ಕೇಶಾದಿಗಣಾ ನ ಮುಕ್ತಾ ॥ ೨೬ ॥

ಅ ॥ ವಿಷ್ಣುವಿನ ಆಭಾಸಕನು ಮುಖ್ಯಪ್ರಾಣನು. ಅತನ ಆಭಾಸಕನು ರುದ್ರನು. ರುದ್ರನಿಗೆ (ಕೆಳಗಿನಿಂದ ಗಣನೆ ಮಾಡುವಾಗ ಮೇಲೆ ಇರತಕ್ಕವನು) ದೇವೇಂದ್ರನು, ಆತನಿಗೆ ಪ್ರಾಣ ದಕ್ಷಾದಿಗಳು ಆಭಾಸರು. ಇಂತಹ ಚೇತನರ ರೂಪಗಳು ನಿತ್ಯಗಳು. (ಕ–) ಪ್ರಳಯಕಾಲೀನ ಜಲರೂಪಳಾದ ಲಕ್ಷ್ಮೀದೇವಿಯೂ, ಚತುರ್ಮುಖನೂ, ರುದ್ರನೂ ಇವರೇ ಮೊದಲಾದ ಜೀವರ ಸಮುದಾಯಗಳು ಮುಕ್ತಿಯಲ್ಲಿಯೂ, ಸಂಸಾರದಲ್ಲಿಯೂ ಯಾವಾಗಲೂ ವಿಷ್ಣುವಿನ ವಶದಲ್ಲಿಯೇ ಇದ್ದುದರಿಂದ ಅವನನ್ನು ಅತಿಕ್ರಮಿಸಿ ಹೋಗುವುದಿಲ್ಲ.

ವಿಶೇಷಾಂಶ— (1) ಭಾಸಮಾನ ಜೀವಪ್ರಕಾಶರೂಪವಾದ ಉಪಾಧಿಯು ನಿತ್ಯವಾಗಿರುವುದರಿಂದ ಅದರ ಮಧ್ಯದಲ್ಲಿರತಕ್ಕ ಜೀವಾಖ್ಯ ಪ್ರತಿಬಿಂಬಗಳು ನಿತ್ಯಗಳು. ನಶ್ವರವಾದ ದರ್ಪಣೋಪಾಧಿಕವಾದ ಪ್ರತಿಬಿಂಬದಂತೆ ನಶ್ವರಗಳಲ್ಲ. (2) ಬ್ರಹ್ಮಸೂತ್ರದಲ್ಲಿ ಹೇಳಿರುವ ಮಾರ್ಗದಿಂದ ಉತ್ತಮ, ಮಧ್ಯಮ, ಅಧಮ ಭೇದದಿಂದ ಸುರ, ನರ, ತಿರ್ಯಗಾದಿರೂಪದಿಂದ ನಾನಾವಿಧರಾದ ಚೇತನರಿಗೆ ಅಚ್ಛ, ಮಲಿನ, ಮಧ್ಯಮ ಉಪಾಧಿನಿಮಿತ್ತದಿಂದ ಪ್ರತಿಬಿಂಬದಲ್ಲಿ ಅಚ್ಛತ್ವ; ಮಲಿನತ್ವ ಮೊದಲಾದ ವೈಚಿತ್ರ್ಯವಿದ್ದಂತೆ ಅದೃಷ್ಟನಿಮಿತ್ತಕ ಸುಖಾದಿಗಳಲ್ಲಿ ವೈಚಿತ್ರ್ಯವಿದ್ದರೂ **'ಬ್ರಹ್ಮಣಿ ಬ್ರಹ್ಮರೂಪೋಽಸೌ ಶಿವರೂಪಿ ಶಿವೇ ಸ್ಥಿತಃ । ಅಥಾಸುರಾನಾವಿಶದಾಸುರೇಣ ರೂಪೇಣ ತೇಷಾಂ ಬಲವೀರ್ಯಮೂರಯನ್ । ಉದ್ದೀಪಯನ್ ದೇವಗಣಾಂಶ್ಚ ವಿಷ್ಣುಃ ದೇವೇನ ನಾಗೇಂದ್ರನುಥಾಪರೇಣ'** ॥ ಇದು ಮೊದಲಾದ ಸ್ಮೃತಿಗಳಿಂದಲೂ ಸುರಾಸುರಾಂತರ್ಗತ ವಿಚಿತ್ರ ಭಗವದಾಕಾರಸದೃಶ ಆಕಾರವತ್ವ

ಮಾತ್ರದಿಂದ ಜೀವರಿಗೆ ಯಾವುದು ಪ್ರತಿಬಿಂಬತ್ವವು ಹೇಳಲ್ಪಟ್ಟದೋ, ಅಂತಹ ಪ್ರತಿಬಿಂಬತ್ವವನ್ನು ಇಲ್ಲಿ ಹೇಳುವುದಿಲ್ಲ. ಮತ್ತು ಜ್ಞಾನಾನಂದಾದಿ ಗುಣಮಾತ್ರ ಸಾದೃಶ್ಯದಿಂದಲೂ, ವಿಷ್ಣ್ವಧೀನತ್ವದಿಂದಲೂ ಬ್ರಹ್ಮಾದಿನರೋತ್ತಮಾಂತ ಶುಭಜೀವರಿಗೆ ಯಾವುದು ಪ್ರತಿಬಿಂಬತ್ವವು ಹೇಳಲ್ಪಟ್ಟದೋ ಅದು ಇಲ್ಲಿ ವಿಚಾರಿತವಾಗುತ್ತದೆ. ಆಕಾರ ಸಾಮ್ಯವಾದರೂ ಇಲ್ಲಿ ವಿವಕ್ಷಿತವಲ್ಲ. ಹಾಗಿದ್ದರೆ ಶೇಷ-ಗರುಡರಿಗೆ ಮುಕ್ತ ಚತುರ್ಮುಖನ ಅಭಾಸತ್ವವೂ, ಇಂದ್ರನಿಗೆ ಗರುಡ-ಶೇಷರ ಅಭಾಸತ್ವವೂ ಕೂಡದೆ ಹೋಗಬೇಕಾಗುವುದು. ಸರ್ವ ಜೀವರೂ ತಮ್ಮ ತಮ್ಮ ಬಿಂಬರೂಪಗಳಿಗೇನೇ ಅಧೀನರು. ಮತ್ತೆ ಅಬಿಂಬ ಭಗವದಾದಿರೂಪಗಳಿಗೆ ಅಧೀನರಲ್ಲ. ಎನ್ನುವ ಈ ಶಂಕೆಯನ್ನು ಪರಿಹರಿಸುವುದಕ್ಕಾಗಿ ಸೂತ್ರದಲ್ಲಿರುವ ಆಭಾಸಪದ ಸೂಚಿತವಾದ ಅಧಮರಿಗೆ ಉತ್ತಮರ ಆಭಾಸತ್ವವೂ ಇಲ್ಲಿ ಉಕ್ತವಾಯಿತೆಂದು ತಿಳಿಯತಕ್ಕದ್ದು. (3) **'ಮಾರುತೇ ವೇಧಸಿ ಬ್ರಧ್ನೇ ಪುಂಸಿ ಕಃ ಕಂ ಶಿರೋಽಂಬುನೋಃ'** । ಎನ್ನುವ ವಚನ ದೆಶೆಯಿಂದ ಪ್ರಲಯಕಾಲದಲ್ಲಿರತಕ್ಕ ಜಲರೂಪಳಾದ ಲಕ್ಷ್ಮೀದೇವಿಯೂ, ಬ್ರಹ್ಮನೂ, 'ಕ' ಶಬ್ದದಿಂದ ಹೇಳಿಸಿಕೊಳ್ಳಲ್ಪಡುತ್ತಾರೆ. ಇಲ್ಲಿ ಪೂರ್ವಾರ್ಧವು **'ಆಭಾಸಕೋಽಸ್ಯ ಪವನಃ ಪವನಸ್ಯ ರುದ್ರ'ಃ** ಇತ್ಯಾದಿಗಳಿಂದ ಹೇಳಲ್ಪಟ್ಟ ಬಿಂಬಪ್ರತಿಬಿಂಬಭಾವಪರಂಪರೆಯಲ್ಲಿ ಪ್ರಮಾಣವು. ಉತ್ತರಾರ್ಧವು **' ಯಸ್ಯಾಜ್ಞಯಾ ರಹಿತಮಿಂದಿರಯಾ ಸಮೇತಂ ಬ್ರಹ್ಮೇಶ ಪೂರ್ವಕಮಿದಂ ನ ತು ಕಸ್ಯ ಚೇಶಂ'** । ಎನ್ನುವಲ್ಲಿ ಪ್ರಮಾಣವು. ॥೨೬॥

ಮೂ ॥ ಯಸ್ಮಿನ್ಪರೇಽನ್ಯೇಽಪ್ಯಜಜೀವಕೋಶಾ
ನಾಹಂ ಪರಾಯುರ್ನುಮರೀಚಿಮುಖ್ಯಾಃ ॥
ಜಾನಂತಿ ಯದ್ಗುಣಗಣಾನ್ನ ರಮಾದಯೋಽಪಿ
ನಿತ್ಯಃ ಸ್ವತಂತ್ರ ಉತ ಕೋಽಸ್ಮಿ ತದನ್ಯ ಈಶಃ ॥೨೭॥

ಅ ॥ ಯಾವ ಶ್ರೀ ಪರಮಪುರುಷನಲ್ಲಿ ನಮ್ಮಿಂದ ಇತರರಾದ ಬ್ರಹ್ಮಸಂಬಂಧಿಯರಾದ ಜೀವರ ಕೋಶಸ್ಥಾನೀಯಗಳಾದ ಬ್ರಹ್ಮಾಂಡಗಳು (ಸೃಷ್ಟಿಸಲ್ಪಡುತ್ತವೆ.) ಯಾವ ಶ್ರೀ ಹರಿಯ ಗುಣಗಳ ಸಮೂಹಗಳನ್ನು ನಾನು ತಿಳಿಯುವುದಿಲ್ಲ, ಬ್ರಹ್ಮನೂ ತಿಳಿಯುವುದಿಲ್ಲ, ಮರೀಚಿ ಮೊದಲಾದ ಋಷಿಗಳೂ ತಿಳಿಯುವುದಿಲ್ಲ. ರಮಾದಿಗಳೂ ಕೂಡಾ ತಿಳಿಯುವುದಿಲ್ಲವೋ? ಆ ಶ್ರೀಹರಿಯಿಂದ ಇತರನಾದ ಸರ್ವ ಸಮರ್ಥನು, ನಿತ್ಯ ಸ್ವತಂತ್ರನು ಯಾವನು ಇದ್ದಾನೆ? (ಯಾರೂ ಇಲ್ಲವೇ ಇಲ್ಲ.)

ವಿಶೇಷಾಂಶ— (1) ಯಸ್ಮಿನ್ಪರೇಽನ್ಯೇಽಪ್ಯಜಜೀವಕೋಶಾಃ ಎನ್ನುವುದರಿಂದ **'ವಯಂ ನ ತಾತ ಪ್ರಭವಾಮ ಭೂಮ್ನೋಭವಂತಿ ಕಾಲೇನ ಭವಂತಿ ಹೀದೃಶಾಃ । ಯಸ್ಮಿನ್ ಪರೇಽನ್ಯೇಽಪ್ಯಜಜೀವಕೋಶಾಃ ಸಹಸ್ರಶೋ ಯತ್ರ ವಯಂ ಭವಾಮಃ ।'** ಎನ್ನುವ ಭಾಗವತದಲ್ಲಿರುವ ರುದ್ರವಾಕ್ಯವನ್ನು ಸಂಗ್ರಹಿಸಿರುವರು. ಅಂದರೆ ದಯಾ ವಿಷಯನಾದ ದುರ್ವಾಸನೇ ನಾವು ಶ್ರೀ ಹರಿಯ ಸುದರ್ಶನದ್ದೆಶೆಯಿಂದ ನಿನ್ನನ್ನು ರಕ್ಷಿಸಲಿಕ್ಕೆ ಸಮರ್ಥರಲ್ಲ. ಯಾವ ಕಾರಣದ್ದೆಶೆಯಿಂದ ಸಕಲಗುಣ ಪರಿಪೂರ್ಣನಾದ ನಾರಾಯಣನದ್ದೆಶೆಯಿಂದ ನನಗೆ ಸದೃಶರಾದ ದೇವತೆಗಳು ಸೃಷ್ಟಿಕಾಲದಲ್ಲಿ ಹುಟ್ಟುತ್ತಾರೆ. ಪುನಃ ಸಂಹಾರ ಕಾಲದಲ್ಲಿ ಶ್ರೀ ಹರಿಯಿಂದ ಸಂಹೃತರಾದಪ್ಪಯುಕ್ತ ಇರುವುದಿಲ್ಲವೋ ಅದಕಾರಣ ಸಮರ್ಥರಲ್ಲ. ಅಂತೂ ಅಸ್ಮದಾದಿಗಳನ್ನು ಹುಟ್ಟಿಸುವುದರಲ್ಲಿಯೂ, ಸಂಹರಿಸುವುದರಲ್ಲಿಯೂ ಸಮರ್ಥನಾದ ಶ್ರೀ ಹರಿಯ ಆಯುಧವನ್ನು ತಿರಸ್ಕರಿಸಲಿಕ್ಕೆ ನಮಗೆ ಸರ್ವಥಾ ಶಕ್ತಿಯಿಲ್ಲ. ಶ್ರೀ ಹರಿಯು ಕೇವಲ

ನಮ್ಮ ಸೃಷ್ಟ್ಯಾದಿಗಳಲ್ಲಿಯೇ ಸಮರ್ಥನಲ್ಲ. ಮತ್ತೆ ಬ್ರಹ್ಮಾಂಡಾದಿಗಳೂ ಆತನಿಂದಲೇ ಸೃಷ್ಟಿ ಕಾಲದಲ್ಲಿ ಹುಟ್ಟುತ್ತವೆ. ಸಂಹಾರಕಾಲದಲ್ಲಿ ಸಂಹೃತಗಳಾಗುತ್ತವೆ. ಯಾವ ಬ್ರಹ್ಮಾಂಡಗಳಲ್ಲಿ ನಾವು ಸಕಲ ಜೀವರ ಮನಸ್ಸೇ ಮೊದಲಾದ ಇಂದ್ರಿಯಗಳಿಗೆ ಪ್ರೇರಕರಾಗಿ ಅಪರಿಮಿತ ರೂಪ ಗಳಿಂದ ತಿರುಗುತ್ತಾ ಇರುತ್ತೇವೆ. ಜೀವೋತ್ಪತ್ತಿ ಕಾಲದಲ್ಲಿ ಅವರವರ ಮನಸ್ಸನ್ನು ಪ್ರೇರಿಸುವು ದಕ್ಕಾಗಿ ಮೂಲರೂಪದಿಂದ ಬರುತ್ತೇವೆ. ಅವರಿಗೆ ಮರಣವಾಗುವಾಗ ಬಂದಹಾಗೆ ಪುನಃ ಮೂಲರೂಪವನ್ನೇ ಕುರಿತು ಹೋಗುತ್ತೇವೆ. ಒಂದೊಂದು ಅಂಶದಿಂದ ಆವಾವ ಜೀವಸಹಾಯ ದಿಂದ ಹೋಗುತ್ತೇವೆ. ತಥಾಚ ಆಸ್ಮದಾದಿ ಶತಕೋಟ್ಯಾಧಾರ ಬ್ರಹ್ಮಾಂಡವನ್ನು ಭೇದಿಸುವ ಶ್ರೀ ಹರಿಗೆ ನಮ್ಮ ಸಂಹಾರವು ಹೇಗೆ ಅಶಕ್ಯವಾಗುವುದು? ಶ್ರೀಹರಿಯೇ ಸರ್ವವಿಷಯದಲ್ಲಿಯೂ ಮಹಾಸಮರ್ಥನು. (2) 'ನಾಹಂ ಪರಾಯುಃ' ಎನ್ನುವುದರಿಂದ **'ನಾಹಂ ಪರಾಯುಃ ಋಷಯೋ ನ ಮರೀಚಿ ಮುಖ್ಯಾಃ ಜಾನಂತಿ ಯದ್ವಿರಚಿತಂ ಖಲು ಸತ್ವಸಂಘಾಃ'** ಎನ್ನುವ ವಾಕ್ಯವನ್ನು ಸಂಗ್ರಹಿಸಿರುವರು. (3) 'ಜಾನಂತಿ ಯದ್ಗುಣಗಣಾನ್' ಎನ್ನುವುದರಿಂದ ಪ್ರಮಾಣಾಂತರಾರ್ಥವನ್ನು ಸಂಗ್ರಹಿಸಿರುವರು. ಇದು ಹಿಂದೆ ಹೇಳಿದ ಸರ್ವೋತ್ತಮತ್ವ, ಸರ್ವ ಶಕ್ತತ್ವಾದಿಗಳಲ್ಲಿ ಪ್ರಮಾಣವು ॥೨೭॥

ಮೂ ॥ ನೈವೈಕ ಏವ ಪುರುಷಃ ಪುರುಷೋತ್ತಮೋಽಸಾ-
ವೇಕಃ ಕುತಃ ಸ ಪುರುಷೋ ಯತ ಏವ ಜಾತ್ಯಾ ।
ಅರ್ಥಾಚ್ಛ್ರುತೇಶ್ಚ ಗುಣತೋ ನಿಜರೂಪತಶ್ಚ
ನಿತ್ಯಾನ್ಯ ಏವ ಕಥಮುಸ್ಮಿನ ಇತ್ಯಪಿ ಸ್ಯಾತ್ ॥೨೮॥

ಅ ॥ ಪುರುಷನು ಒಬ್ಬನೇ ಅಲ್ಲ. ಪುರುಷೋತ್ತಮನು ಶ್ರೀ ಹರಿಯೊಬ್ಬನೇ ಅಂತಹ ಮಹಾ ಪುರುಷನು (ಜೀವನಿಂದ) ಏಕೀಭೂತನು ಯಾವುದರಿಂದ ಆದಾನು? ಯಾವ ಕಾರಣ ~~ದೆಶೆಯಿಂದ ಆ ಶ್ರೀ ಹರಿಯು ಈಶ್ವರತ್ವ ಜಾತಿಯಿಂದಲೂ, ಪ್ರಯೋಜನದೆಶೆಯಿಂದಲೂ,~~ ಶ್ರುತಿಯದೆಶೆಯಿಂದಲೂ, ಗುಣದ್ದೆಶೆಯಿಂದಲೂ, ಸ್ವರೂಪದೆಶೆಯಿಂದಲೂ ನಿತ್ಯದಲ್ಲಿಯೂ (ಜೀವನದೆಶೆಯಿಂದ) ಅತ್ಯಂತಭಿನ್ನನೋ, (ಆದಕಾರಣ ನಾನೇ) ಆ ಶ್ರೀಹರಿಯು ಆಗಿರುತ್ತೇನೆನ್ನುವ (ಅನನ್ವಿತವಾದ ತಾದಾತ್ಮ್ಯರೂಪಸಂಬಂಧವು) ಹೇಗೆ (ಉಪಪನ್ನವು) ಆಗುವುದು?

ವಿಶೇಷಾಂಶ— (1) ' ನೈವೈಕ ಏವ ' ಎನ್ನುವುದರಿಂದ **'ಬಹನಃ ಪುರುಷಾ ಬ್ರಹ್ಮನ್ನುತಾಹೋ ಏಕ ಏವ ತು । ನೈತದಿಚ್ಛಂತಿ ಪುರುಷಮೇಕಂ ಕುರುಕುಲೋದ್ವಹ । ಬಹೂನಾಂ ಪುರುಷಾಣಾಂ ಹಿ ಯಥೈಕಾ ಯೋನಿರುಚ್ಯತೇ । ತಥಾ ತಂ ಪುರುಷಂ ವಿಶ್ವಮಾಖ್ಯಾಶ್ಯಾಮಿ ಗುಣಾಧಿಕಂ '** ಎನ್ನುವ ಮೋಕ್ಷಧರ್ಮ ವಾಕ್ಯವನ್ನು ಸಂಗ್ರಹಿಸಿರುವರು. ಅಂದರೆ, ಜೀತನರು ಬಹುಮಂದಿಯೋ, ಒಬ್ಬನೆಯೋ ಎಂದು ಜನಮೇಜಯನು ಪೃಶ್ನಿಸುತ್ತಿರಲು, ಕೆಲಪರು ಪುರುಷನನ್ನೊಬ್ಬನನ್ನೇ ಹೇಳುತ್ತಾರೆ. ಪಂಡಿತರಾದರೂ ಪುರುಷೈಕತ್ವವನ್ನು ಮನಸ್ಸಿನಿಂದಲೂ ಇಚ್ಛಿಸುವುದಿಲ್ಲ. ಮರಣಾಂತ ಆಪತ್ತು ಬಂದರೂ ಬಾಯಿಯಿಂದಲೂ ಹೇಳ ಲಾರರು, ಆದರೆ ನೀನು ಪ್ರಶ್ನಿಸಿದ ಪುರುಷಬಹುತ್ವವನ್ನೇ ಇಚ್ಛಿಸುತ್ತಾರೆ. (2) ಹಾಗಾದರೆ ಅನೇಕಮಂದಿ ಪುರುಷರಿಗೂ ಸಾಮ್ಯವೆಯೋ, ಅಥವಾ ಒಬ್ಬನಿಗೆ ಆಧಿಕ್ಯವಿದೆಯೋ ಎನ್ನುವ ರಾಜನ ಹೃದ್ಗತವಾದ ಶಂಕೆಯನ್ನು ಪರಿಹರಿಸಿದರು. ಹೇಗೆ ಬಹುಪುರುಷರಿಗೆ ಒಬ್ಬ ಪುರುಷ ವ್ಯಕ್ತಿಯು ಉತ್ಪತ್ತಿ ಸ್ಥಿತ್ಯಾದಿಗಳಿಗೆ ಕಾರಣವೆಂದು **'ಜನ್ಮಾದ್ಯಸ್ಯ ಯತಃ'** ಇತ್ಯಾದಿಗಳಲ್ಲಿ ಸೂತ್ರಕಾರರಿಂದಲೂ **' ಯತೋ ವಾ ಇಮಾನಿ ಭೂತಾನಿ ಜಾಯಂತೆ '** ಇತ್ಯಾದಿ ಶ್ರುತಿ

ಯಿಂದಲೂ ಹೇಳಲ್ಪಡುತ್ತದೋ, ಹಾಗೆಯೇ ನಾನೂ ಕೂಡಾ,(ಖಿಶ್ವಂ-) ಸಕಲ ಜೀವರಿಗೂ ಅಂತಃ ಸಾಕ್ಷಿಯಾಗಿ ಪ್ರವಿಷ್ಟನಾದ ಎಲ್ಲಾ ಜೀವರಿಂದಲೂ ಸರ್ವ ಗುಣಗಳಿಂದ ಉತ್ತಮನನ್ನಾಗಿ ಹೇಳುವೆನು. ಏವಂಚ ಇಂತಹ ಮಹಾಪುರುಷನಿಗೆ ಜೀವನಿಂದ ಐಕ್ಯವು ಸರ್ವಥಾ ಬರಲಾರದು. ಹೀಗೆ ಭಾರತವಾಕ್ಯದ ಪರ್ಯವಸಿತವಾದ ಅರ್ಥವನ್ನು ಆಚಾರ್ಯರು ಹೇಳಿರುವರು. **'ಅಲ್ಪ ಶಕ್ತಿರಸಾರ್ವಜ್ಞಂ ಪಾರತಂತ್ರ್ಯಮಪೂರ್ಣತಾ । ಉಪಜೀವಕತ್ವಂ ಜೀವತ್ವಮಿಶತ್ವಂ ಶಧ್ವಿಪರ್ಯಯಃ'** ಜೀವನು ಅಲ್ಪಶಕ್ತಿಯುಳ್ಳವನು,ಅಲ್ಪಜ್ಞನು, ಪರಾಧೀನನು, ಅಪೂರ್ಣನು ಉಪಜೀವಿಸಿಕೊಂಡು ಇರುವವನು, ಅಣುಭೂತನು, ಈಶ್ವರನಾದರೂ ಪೂರ್ಣಶಕ್ತಿಯುಳ್ಳವನು, ಸರ್ವಜ್ಞನು, ಸ್ವತಂತ್ರನು, ಪೂರ್ಣನು, ದೇಹದಿಂದಲೂ ವ್ಯಾಪ್ತನು.ಎನ್ನುವ ವಚನನದ್ದೆಶೆಯಿಂದ ಜೀವತ್ವ ವಿರುದ್ಧವಾದ ಈಶ್ವರತ್ವಜಾತಿ ಇರತಕ್ಕವನು ಮತ್ತು ಜೀವರಲ್ಲಿ ಸರ್ವಥಾ ಕೂಡದೇ ಇದ್ದ ತನ್ನ ಶಕ್ತಿಯಿಂದಲೇ ಹೊಂದಲ್ಪಟ್ಟ ಸ್ವಾಪೇಕ್ಷಿತವಾದ ಸರ್ವ ಪ್ರಯೋಜನ ಸಮುದಾಯ ವಿರುವವನು ಆದುದರಿಂದ ಬಿನ್ನನೇ. **' ದ್ವಾಸುಪರ್ಣಾ ಸಯುಜಾ ಸಖಾಯೆ'** - ಇತ್ಯಾದಿ ಶ್ರುತಿಯಿಂದಲೂಜೀಪೇಶ್ವರರು ಭಿನ್ನರು.ಜೀವೇಶ್ವರರಿಗೆ ಭೇದವು ಸ್ಪಷ್ಟವಾಗಿಪ್ರತಿಪಾದಿತವಾಗಿದೆ. ಶ್ರೀಹರಿಯು ಪೂರ್ಣಗುಣವುಳ್ಳವನು,ಜೀವನುಅಲ್ಪಗುಣವುಳ್ಳವನು ಎನ್ನುವ ಗುಣದ್ದೆಶೆಯಿಂದಲೂ ಅಣುಜೀವರಲ್ಲಿ ಕೂಡದಿರುವ ವ್ಯಾಪ್ತದೇಹಾಖ್ಯಸ್ವರೂಪದ್ದೆಶೆಯಿಂದಲೂ ಶ್ರೀಹರಿಯು ಭಿನ್ನನೇ. (3) ತಥಾಚ ವಿರುದ್ಧಧರ್ಮವುಳ್ಳವುಗಳಿಗೆ ಐಕ್ಯವು ಸರ್ವಥಾ ಕೂಡಲಾರದು. ಜೀವೇಶ್ವರರು ಅಂತ್ಯಂತ ವಿರುದ್ಧಧರ್ಮವುಳ್ಳವರೇ. ಆದಕಾರಣ ವಿರುದ್ಧಧರ್ಮವಿರುವಜೀವೇಶ್ವರರಿಗೆ ಅಭೇದವು ಅಂತ್ಯಂತ ಅಯುಕ್ತವೇ. (4) ಈ ವಾಕ್ಯಗಳು ಅಭಿದಾ ಕುತೋऽಸ್ಯ ಎನ್ನುವಲ್ಲಿಯೂ 'ಪರತಮಃ ಪರಮಾತ್ಮ ಏಕಃ' ಎನ್ನುವಲ್ಲಿಯೂ ಪ್ರಮಾಣವು ॥೨೮॥

ಹಿಂದೆ ಹೇಳಿದ ಸರ್ವಾರ್ಥಗಳನ್ನು ಸಂಗ್ರಹಿಸತಕ್ಕ ಪ್ರಮಾಣಾಂತರವನ್ನುದಾಹರಿಸುತ್ತಾರೆ—

ಋೂ ॥ ಸರ್ವೋತ್ತಮೋ ಹರಿದಂ ತು ತದಾಜ್ಞಯೈವ
ಚೇತುಂ ಕ್ಷಮಂ ಸ ತು ಹರಿಃ ಪರಮಃ ಸ್ವತಂತ್ರಃ ॥
ಪೂರ್ಣಾವ್ಯಯಾಗಣಿತನಿತ್ಯಗುಣಾರ್ಣವೋऽಸಾ-
ವಿತ್ಯೇವ ವೇದವಚನಾನಿ ಪರೋಕ್ತಯಶ್ಚ ॥೨೯॥

ಅ॥ ಶ್ರೀಹರಿಯು ರಮಾ-ಬ್ರಹ್ಮ-ರುದ್ರ ಮೊದಲಾದ ಎಲ್ಲವರಿಂದಲೂ ಉತ್ತಮನು. ಈ ಜಗತ್ತಾದರೂ ಶ್ರೀಹರಿಯ ಆಜ್ಞೆಯಿಂದಲೇ ಚೇಷ್ಟಾಮಾಡಲಿಕ್ಕೂ, ತಿಳಿಯಲಿಕ್ಕೂ ಸಮರ್ಥವಾದದು. ಆ ಶ್ರೀಹರಿಯೇ ಸರ್ವೋತ್ತಮನು, ಸ್ವತಂತ್ರನು. ಈ ಹರಿಯು ವ್ಯಾಪ್ತಗಳಾದ, ಹ್ರಾಸರಹಿತಗಳಾದ, ಅಸಂಖ್ಯಾತಗಳಾದ ನಿತ್ಯಗಳಾದ ಗುಣಗಳಿಂದ ಸಮುದ್ರದಂತಿರುವವನು. ವೇದವಚನಗಳೂ ವ್ಯಾಸಸ್ವರೂಪವಾದ ಪರಮಾತ್ಮನ ಉಕ್ತಿಗಳೂ ಕೂಡ ಅಂದರೆ — ಪಂಚರಾತ್ರ-ಭಾರತ-ಪುರಾಣಾದಿಗಳೂ ಕೂಡ ಈ ಪ್ರಕಾರವಾಗಿಯೇ (ಹೇಳುತ್ತವೆ.) ॥೨೯॥

ಅಪೌರುಷೇಯವಾಗಿರುವುದರಿಂದ ವಕ್ತೃದೋಷವಿಲ್ಲದಿರುವ ವೇದದಲ್ಲಿ ದೋಷಶಂಕೆಯು ಇಲ್ಲ, ವೇದಾನುಕೂಲಗಳಾದ ಗ್ರಂಥಗಳಲ್ಲಿಯಾದರೂ ವೇದಾನುಸಾರಿತ್ವವಿದ್ದುದರಿಂದಲೇ ದೋಷಶಂಕೆಗೆ ಅವಕಾಶವಿಲ್ಲ. ಆದ ಕಾರಣ ವೇದದಲ್ಲಿಯೂ, ವೈದಿಕ ಗ್ರಂಥಗಳಲ್ಲಿಯೂ

ಪ್ರಾಮಾಣ್ಯಕ್ಕೆ ಸ್ವತಸ್ತ್ವವಿದ್ದುದರಿಂದ ಹಿಂದೆ ಉದಾಹರಿಸಿದ ಮತ್ತು ಮುಂದೆ ಉದಾಹರಿಸುವ ವಾಕ್ಯಗಳಲ್ಲಿ ಅಪ್ರಾಮಾಣ್ಯ ಶಂಕೆಯನ್ನು ಮಾಡಕೂಡದು, ಎನ್ನುವಲ್ಲಿ ಪ್ರಮಾಣವಾಕ್ಯಗಳನ್ನೇ ಉದಾಹರಿಸುತ್ತಾರೆ—

ಮೂ ॥ ಋಗಾದಯೆಶ್ಚ ಚತ್ವಾರಃ ಪಂಚರಾತ್ರಂ ಚ ಭಾರತಂ ॥
ಮೂಲರಾಮಾಯಣಂ ಬ್ರಹ್ಮಸೂತ್ರಂ ಮಾನಂ ಸ್ವತಃ ಸ್ಮೃತಂ ॥೩೦॥
ಅವಿರುದ್ಧಂ ತು (ಚ) ಯತ್ತ್ವಸ್ಯ ಪ್ರಮಾಣಂ ತಚ್ಚ ನಾನ್ಯಥಾ ॥
ಏತದ್ವಿರುದ್ಧಂ ಯತ್ತು ಸ್ಯಾನ್ನ ತನ್ಮಾನಂ ಕಥಂಚನ ॥೩೧॥

ಅ ॥ ಋಗ್ವೇದ ಮೊದಲಾದ ನಾಲ್ಕು ವೇದಗಳೂ, ಪಂಚರಾತ್ರಾಗಮವೂ, ಭಾರತವೂ, ಮೂಲರಾಮಾಯಣವೂ, ಬ್ರಹ್ಮಸೂತ್ರವೂ ಸಂವಾದ ನಿರಪೇಕ್ಷವಾಗಿಯೇ ಪ್ರಮಾಣವೆಂದು ಸ್ಮೃತವಾಗಿದೆ. ಹೀಗೆ ಪ್ರಾಮಾಣ್ಯವುಳ್ಳ ಋಗಾದಿ ಸಮುದಾಯಕ್ಕೆ ಯಾವ ಶಾಸ್ತ್ರವು ಅವಿರುದ್ಧವಾದುದೋ ಅದು ಪ್ರಮಾಣವು. ಬೇರೆ ಪ್ರಕಾರವಿದ್ದುದು ಅಲ್ಲ. ಯಾವುದು ಹಿಂದೆ ಹೇಳಿದ ಋಗ್ವೇದಾದಿಗಳಿಗೆ ವಿರುದ್ಧವೋ, ಅದು ಯಾವ ಪ್ರಕಾರದಿಂದಲೂ ಪ್ರಮಾಣವು ಆಗುವುದೇ ಇಲ್ಲ. (ಹೀಗೆ ಭವಿಷ್ಯತ್ಪರ್ವನಾಮಕ ಉಪಪುರಾಣ ವಚನವು).

ವಿಶೇಷಾಂಶ— (1) ವೇದಗಳಿಗೆ **'ನಾಚಾ ವಿರೂಪ ನಿತ್ಯಯೋ'** ಇತ್ಯಾದಿ ಶ್ರುತಿ ಸಿದ್ಧವಾದ ಅಪೌರುಷೇಯತ್ವದಿಂದ ಸಂವಾದ ನಿರಪೇಕ್ಷತ್ವರೂಪ ಸ್ವತಃ ಪ್ರಾಮಾಣ್ಯವು. ಪಂಚರಾತ್ರಾದಿಗಳಿಗಾದರೂ **'ಇತಿಹಾಸಃ ಪುರಾಣಃ ಪಂಚಮಃ ವೇದಾನಾಂ ವೇದಃ** ಎನ್ನುವ ಶ್ರುತಿಯಿಂದ ಸಂವಾದನಿರಪೇಕ್ಷತ್ವರೂಪ ಸ್ವತಃಪ್ರಾಮಾಣ್ಯವು ಸಿದ್ಧವಾಗುತ್ತದೆ. **'ಪಂಚರಾತ್ರಂ ಭಾರತಂ ಚ ಮೂಲರಾಮಾಯಣಂ ತಥಾ । ಇತಿಹಾಸ ಇತಿ ಪ್ರೋಕ್ತಃ ಬ್ರಹ್ಮಾದ್ಯಂ ಚ ಪುರಾಣಕಂ'** ಎನ್ನುವ ಪ್ರಕಾಶಿಕಾ ವಚನದಿಂದ, ಇತಿಹಾಸ ಶಬ್ದದಿಂದ ಪಂಚರಾತ್ರ ಮೊದಲಾದುದು ಮೂರನ್ನು ಇಟ್ಟುಕೊಳ್ಳಬೇಕು. (2)ಬ್ರಹ್ಮಸೂತ್ರವು ನಿರ್ಣಾಯಕವಾಗಿರುವುದರಿಂದ ಇತರಾಪೇಕ್ಷೆಯು ಅದಕ್ಕೆ ಇಲ್ಲವೇ ಇಲ್ಲ. ॥೩೦॥ ೩೧॥

ಹಾಗಾದರೆ ಭಾರತ-ಪಂಚರಾತ್ರ ಮೊದಲಾದ ಪೌರುಷೇಯ ಗ್ರಂಥಗಳಂತೆಯೇ ವೈಷ್ಣವ ಪುರಾಣಗಳಿಗೂ, ವೈಷ್ಣವ ಸ್ಮೃತಿಗಳಿಗೂ, ಸಂಗ್ರಾಹಕವಾದ ಪ್ರಾಚೀನ ವಾಕ್ಯದಲ್ಲಿ ಏಕೆ ಸಂಗ್ರಹ ಮಾಡಲಿಲ್ಲ, ಎನ್ನುವ ಚೋದ್ಯವನ್ನು ಪರಿಹರಿಸುತ್ತಾರೆ.

ಮೂ ॥ ವೈಷ್ಣವಾನಿ ಪುರಾಣಾನಿ ಪಂಚರಾತ್ರಾತ್ಮಕತ್ವತಃ ॥
ಪ್ರಮಾಣಾನ್ಯೇವ ಮನ್ವಾದ್ಯಾಃ ಸ್ಮೃತಯೋಽಪ್ಯನುಕೂಲತಃ ॥೩೨॥
ಏತೇಷು ವಿಷ್ಣೋರಾಧಿಕ್ಯಮುಚ್ಯತೇಽನ್ಯಸ್ಯ ನ ಕ್ವಚಿತ್ ॥
ಅತಸ್ತದೇವ ಮಂತವ್ಯಂ ನಾನ್ಯಥಾ ತು ಕಥಂಚನ ॥೩೩॥

ಅ ॥ ವೈಷ್ಣವ ಪುರಾಣಗಳೇ ಪಂಚರಾತ್ರಾರ್ಥವನ್ನು ಪ್ರತಿಪಾದಿಸುವುದರಿಂದ ಪ್ರಮಾಣಗಳು. ಮನುಸ್ಮೃತಿ ಮೊದಲಾದ ಸ್ಮೃತಿಗಳೂ ಕೂಡ ಅವಿರುದ್ಧಾರ್ಥವನ್ನು ಪ್ರತಿಪಾದಿಸುವುದರಿಂದಲೇ ಪ್ರಮಾಣಗಳು. (ಅನುಕೂಲಗಳಾಗದಿರುವ ಸ್ಮೃತಿಗಳು ಪ್ರಮಾಣಗಳಲ್ಲ). ಇವುಗಳಲ್ಲಿ ವಿಷ್ಣುವಿಗೇನೇ ಸರ್ವೋತ್ತಮತ್ವವು ಹೇಳಲ್ಪಡುತ್ತದೆ. ರುದ್ರಾದಿಗಳಿಗೆ ಎಲ್ಲಿಯೂ

ಉತ್ತಮತ್ವವು ಹೇಳಲ್ಪಡುವುದಿಲ್ಲ. ವೇದಾದಿಗಳಲ್ಲಿ ವಿಷ್ಣುವಿಗೇನೇ ಅಧಿಕ್ಯವನ್ನು ಹೇಳುವುದರಿಂದ ಶ್ರೀಹರಿಗೇನೇ ಅಧಿಕ್ಯವನ್ನೇ ತಿಳಿಯಬೇಕು. ಯಾವ ಪ್ರಕಾರದಿಂದಲೂ ಪಾಶುಪತಾದಿ ಆಗಮ ಗಳಲ್ಲಿ ಹೇಳಿದ ಪಶುಪತ್ಯಾದ್ಯುತ್ತಮತ್ವವನ್ನು ತಿಳಿಯಕೂಡದು.

ವಿಶೇಷಾಂಶ— (1) ಸರ್ವ ಪುರಾಣಗಳಿಗೂ ಸರ್ವ ಸ್ಮೃತಿಗಳಿಗೂ ಪ್ರಾಮಾಣ್ಯವು ಇಲ್ಲದಿರುವುದರಿಂದ ಪಂಚರಾತ್ರಾದಿಗಳಿಂದ ಸಹ ಪಾಠ ಮಾಡಲಿಲ್ಲ. ಅವಿರುದ್ಧಗಳಾದ ಪುರಾಣ ಗಳೂ, ಸ್ಮೃತಿಗಳೂ ಪ್ರಮಾಣಗಳು (2) ಪಂಚರಾತ್ರಗಳಲ್ಲಿಯೂ ವೈಷ್ಣವ ಪುರಾಣ ಗಳಲ್ಲಿಯೂ ವಿಷ್ಣುಸರ್ವೋತ್ತಮತ್ವಾದಿರೂಪವಾದ ಒಂದೇ ಅರ್ಥವನ್ನು ಪ್ರತಿಪಾದಿಸುವುದರಿಂದ 'ಪಂಚರಾತ್ರಾತ್ಮಕತ್ವತಃ ಎಂದು ಹೇಳಿದ್ದು. ॥೩೨॥೩೩॥

ಪಾಶುಪತಾದಿಗಳಲ್ಲಿ ಹೇಳಿದ ರುದ್ರ ಸರ್ವೋತ್ತಮತ್ವಾದಿಗಳನ್ನು ಏಕೆ ಸ್ವೀಕರಿಸ ಕೂಡದು ಎಂದರೆ—

ಮೂ ॥ ಮೋಹಾರ್ಥಾನ್ಯನ್ಯಶಾಸ್ತ್ರಾಣಿ ಕೃತಾನ್ಯೇವಾಜ್ಞಯಾ ಹರೇಃ
ಅತಸ್ತೇಷೊಕ್ತಮುಗ್ರಾಹ್ಯಮಸುರಾಣಾಂ ತಮೋ ಗತೇಃ ॥೩೪॥
ಯೆಸ್ಮಾತ್ಕೃತಾನಿ ತಾನೀಹ ವಿಷ್ಣುನೋಕ್ತೈಃ ಶಿವಾದಿಭಿಃ ॥
ವಿಷಾಂ ಯನ್ನ ವಿರೋಧಿ ಸ್ಯಾತ್ತತ್ರೋಕ್ತಂ ತನ್ನ ವಾರ್ಯತೇ॥೩೫॥

ಅ ॥ ಪಾಶುಪತಾದಿ ಶಾಸ್ತ್ರಗಳು ವಿಪರೀತ ಜ್ಞಾನವೇ ಪ್ರಯೋಜನವಾಗಿವುಳ್ಳವುಗಳು. ಅಂದರೆ ವಿಪರೀತ ಜ್ಞಾನವನ್ನು ಹುಟ್ಟಿಸತಕ್ಕವುಗಳು. (ಮೋಹಕಶಾಸ್ತ್ರವನ್ನು ಮಾಡಿದರಿಂದ ಪಾಪವು ಬರುವುದು ಎಂದರೆ—) ಶ್ರೀಹರಿಯ ಆಜ್ಞೆಯಿಂದಲೇ ಮಾಡಲ್ಪಟ್ಟವುಗಳು. ಅಸುರರಿಗೆ ತಮಸ್ಸು ಪ್ರಾಪ್ತಿಯಾಗುವುದಕ್ಕಾಗಿ ವಿಷ್ಣುವಿನಿಂದ ಆಜ್ಞಾಪಿಸಿಕೊಳ್ಳಲ್ಪಟ್ಟ ರುದ್ರಾದಿಗಳಿಂದ ಈ ಭೂಲೋಕದಲ್ಲಿ ಆ ಪಾಶುಪತಾದಿಗಳು ಯಾವ ಕಾರಣದ್ದೆಶೆಯಿಂದ ಮಾಡಲ್ಪಟ್ಟಿದ್ದಾವೋ ಆದಕಾರಣ ಪಾಶುಪತಾದಿಗಳಲ್ಲಿ ಹೇಳಿದ್ದನ್ನು ಸ್ವೀಕರಿಸಕೂಡದು. ಪಾಶುಪತಾದಿ ಶಾಸ್ತ್ರದಲ್ಲಿ ಹೇಳಿದ ಯಾವ ಪ್ರಮೇಯವು ವೇದಾದಿಗಳಿಗೆ ವಿರೋಧಿಯಾಗುವುದಿಲ್ಲವೋ, ಪಾಶುಪತಾದಿ ಗಳಲ್ಲಿ ಹೇಳಿದ ಅವಿರುದ್ಧಗಳಾದ ಆ ಅರ್ಥಗಳ ಸಮುದಾಯವು ನಿಷೇಧಿಸಿಕೊಳ್ಳಲ್ಪಡುವು ದಿಲ್ಲ ॥೩೪॥೩೫॥

ಮೂ ॥ ವಿಷ್ಣ್ವಧಿಕ್ಯವಿರೋಧಿನಿ ಯಾನಿ ವೇದವಚಾಂಸ್ಯಪಿ ॥
ತಾನಿ ಯೋಜ್ಯಾನ್ಯಾನುಕೂಲ್ಯಾದ್ವಿಷ್ಣ್ವಧಿಕ್ಯಸ್ಯ ಸರ್ವಶಃ ॥೩೬॥

ಅ ॥ ವಿಷ್ಣುಸರ್ವೋತ್ತಮತ್ವಕ್ಕೆ ವಿರೋಧಿಗಳಾದ ('ಜನಿತೋತ ವಿಷ್ಣೋಃ' ಇದು ಮೊದಲಾದ) ಯಾವ ವೇದ ವಚನಗಳು ಇದ್ದಾವೋ, ಆ ಎಲ್ಲಾ ವಾಕ್ಯಗಳನ್ನೂ ವಿಷ್ಣುಸರ್ವೋ ತ್ತಮತ್ವಕ್ಕೆ ಅನುಕೂಲಗಳನ್ನಾಗಿಯೇ ಕೂಡಿಸಬೇಕು.

ವಿಶೇಷಾಂಶ— ಸೋಮಪದವಾಚ್ಯನಾದ ಮುಖ್ಯಪ್ರಾಣನು ಪ್ರತಿಕಲ್ಪದಲ್ಲಿಯೂ ಜ್ಞಾನ ಕಾರ್ಯಕ್ಕಾಗಿ ಮಧ್ವಾಖ್ಯ ತೃತೀಯರೂಪದಿಂದ ಅವತರಿಸಿ ಶ್ರೀ ವಿಷ್ಣುವಿನ ಸರ್ವೇಶ್ವರತ್ವ-ಸರ್ವ ಜ್ಞತ್ವಾದಿ ವಿಷಯಕಗಳಾದ ಶೋಭನಮತಿಗಳನ್ನು ದಿನೇ ದಿನೇ ಬ್ರಹ್ಮಸೂತ್ರಾದಿ ವ್ಯಾಖ್ಯಾನವನ್ನು ಮಾಡಿ ಹುಟ್ಟಿಸುವವನು. ಇತ್ಯಾದಿ ಪ್ರಕಾರ ಅನೇಕಾರ್ಥಗಳನ್ನು ಇಟ್ಟುಕೊಳ್ಳಬೇಕು ॥೩೬॥

ಮೂ ॥ ಅವತಾರೇಷು ಯತ್ಕಿಂಚಿದ್ದರ್ಶಯೇನ್ನರವದ್ಧರಿಃ॥
ತಚ್ಚಾಸುರಾಣಾಂ ಮೋಹಾಯ ದೋಷಾ ವಿಷ್ಣೋರ್ನಹಿಕ್ವಚಿತ್ ॥
॥೩೭॥

ಅ ॥ ಅವತಾರಗಳಲ್ಲಿ ಶ್ರೀ ಹರಿಯು ಮನುಷ್ಯನಂತೆ ಸ್ತ್ರೀ ವಿಯೋಗಾದಿ ಕೆಲವು ವಿಷಯಗಳನ್ನು ತೋರಿಸುವನು. ಅದಾದರೂ ಅಸುರರಿಗೆ ಮಿಥ್ಯಾಜ್ಞಾನ ಹುಟ್ಟುವುದಕ್ಕಾಗಿ (ಹಾಗೆ ತೋರಿಸುವುದು.) ಯಾವ ಅವತಾರದಲ್ಲಿಯೂ, ವಿಷ್ಣುವಿಗೆ ದೋಷಗಳು ಇಲ್ಲವೇ ಇಲ್ಲ॥೩೭॥

ಮೂ ॥ ಅಜ್ಞತ್ವಂ ಪಾರವಶ್ಯಂ ವಾ ಭೇಧಭೇದಾದಿಕಂ ತಥಾ ॥
ತಥಾ ಪ್ರಾಕೃತದೇಹತ್ವಂ ದೇಹತ್ಯಾಗಾದಿಕಂ ತಥಾ ॥೩೮॥
ಅನೀಶತ್ವಂ ಚ ದುಃಖಿತ್ವಂ ಪಾಮ್ಯಮನ್ಯೈಶ್ಚ ಹೀನತಾಂ ॥
ಪ್ರದರ್ಶಯತಿ ಮೋಹಾಯ ದೈತ್ಯಾದೀನಾಂ ಹರಿಃ ಸ್ವಯಂ ॥೩೯॥

ಅ ॥ ಅಜ್ಞಾನವನ್ನೂ, ಪರಾಧೀನತ್ವವನ್ನೂ, ಹಾಗೆಯೇ ಆಯುಧಾದಿಗಳಿಂದ ಹೊಡಿಸಿಕೊಳ್ಳಲ್ಪಡುವಿಕೆಯನ್ನೂ, ಶೀಳುವಿಕೆಯು ಇದುಮೊದಲಾದುದನ್ನೂ, ಹಾಗೆಯೇ ಪ್ರಾಕೃತಶರೀರ ತನವಿರುವುದನ್ನೂ ಶರೀರ ಪರಿತ್ಯಾಗಮೊದಲಾಪುದನ್ನೂ, ಹಾಗೆಯೇ ಈಶತ್ವಾಭಾವವನ್ನೂ, ದುಃಖವನ್ನೂ, ಇತರರಿಂದ ಸಾಮ್ಯವನ್ನೂ, ಇತರರಿಂದ ಹೀನತ್ವವನ್ನೂ, ಶ್ರೀಹರಿಯು ತಾನೇ ದೈತ್ಯಾದಿಗಳಿಗೆ ಮಿಥ್ಯಾಜ್ಞಾನವು ಹುಟ್ಟುವುದಕ್ಕಾಗಿ ತೋರಿಸುತ್ತಾನೆ. ॥೩೮ ೩೯॥

ಮೂ ॥ ನ ತಸ್ಯ ಕಶ್ಚಿದ್ದ್ವೇಷೋಽಸ್ತಿ ಪೂರ್ಣಾಖಿಲಗುಣೋ ಹ್ಯಸೌ ॥
ಸರ್ವದೇಹಸ್ಥರೂಪೇಷು ಪಾದುರ್ಭಾವೇಷು ಚೇಶ್ವರಃ ॥೪೦॥

ಅ ॥ ಸರ್ವ ದೇಹದಲ್ಲಿರತಕ್ಕ ಅಂತರ್ಯಾಮಿ ರೂಪಗಳಲ್ಲಿಯೂ ಎಲ್ಲಾ ಅವತಾರಗಳಲ್ಲಿಯೂ ಆ ವಿಷ್ಣುವಿಗೆ ಯಾವ ದೋಷವೂ ಇಲ್ಲ. ಏಕೆಂದರೆ– ಶ್ರೀ ಹರಿಯು ದೇಶದಿಂದಲೂ, ಕಾಲದಿಂದಲೂ ವ್ಯಾಪ್ತಗಳಾದ ಸಮಸ್ತ ಗುಣಗಳುಳ್ಳವನೂ ಸರ್ವೇಶ್ವರನೂ ಆಗಿರುತ್ತಾನೆ ॥೪೦॥

ಸರ್ವ ದೇಹದಲ್ಲಿರತಕ್ಕ ರೂಪಗಳಿಗೆ ಬ್ರಹ್ಮಾದಿ ಜೀವರಿಂದ ಅಭೇದವಿರುವುದಾದರೆ ಮತ್ತೂ ದೋಷಿಯೇ ಆಗುವನು ಎಂದರೆ—

ಮೂ ॥ ಬ್ರಹ್ಮಾದ್ಯಭೇದಃ ಪಾಮ್ಯಂ ವಾ ಕುತಸ್ತಸ್ಯ ಮಹಾತ್ಮನಃ ॥
ಯದೇವಂ ವಾಚಕಂ ಶಾಸ್ತ್ರಂ ತದ್ಧಿ ಶಾಸ್ತ್ರಂ ಪರಂ ಮತಂ ॥೪೧॥

ಅ ॥ ಆ ಮಹಾನುಭಾವನಾದ ಶ್ರೀಹರಿಗೆ ಬ್ರಹ್ಮ-ರುದ್ರ ಮೊದಲಾದ ದೇವತೆಗಳಿಂದ ಅಭೇದವಾಗಲೀ, ಸಾಮ್ಯವಾಗಲೀ ಯಾವುದರಿಂದ ಬಂದೀತು? ಯಾವ ಶಾಸ್ತ್ರವು ಅಸುರರನ್ನು ಮೋಹಿಸುವುದಕ್ಕಾಗಿ ಅಜ್ಞತ್ವಾದಿಗಳೆನ್ನು ತೋರಿಸಿದ್ದು ಎಂದು ಪ್ರತಿಪಾದಿಸುತ್ತದೋ ಆ ಶಾಸ್ತ್ರವೇ ಉತ್ತಮ ಶಾಸ್ತ್ರವೆಂದು ಸಮ್ಮತವು । ೪೧॥

ಮೂ ॥ ನಿರ್ಣಯಾಯೈವ ಯತ್ಪ್ರೋಕ್ತಂ ಬ್ರಹ್ಮಸೂತ್ರಂ ತು ವಿಷ್ಣುನಾ ॥
ವ್ಯಾಸರೂಪೇಣ ತದ್ಗ್ರಾಹ್ಯಂ ತತ್ಪ್ರೋಕ್ತಾಃ ಸರ್ವನಿರ್ಣಯಾಃ ॥೪೨॥

ಅ ॥ ಸರ್ವ ಶಾಸ್ತ್ರಾರ್ಥವನ್ನು ನಿರ್ಣಯಿಸುವುದಕ್ಕಾಗಿಯೇ ಯಾವ ಬ್ರಹ್ಮಸೂತ್ರವು ವ್ಯಾಸರೂಪಿಯಾದ ವಿಷ್ಣುವಿನಿಂದ ಹೇಳಲ್ಪಟ್ಟಿದೋ, ಅದನ್ನಾದರೂ ಅವಶ್ಯವಾಗಿ ಸ್ವೀಕರಿಸ ಬೇಕು. ಅಲ್ಲಿ ಹೇಳಿವ ಸರ್ವನಿರ್ಣಾಯಕ ಯುಕ್ತಿಗಳನ್ನೇ ತಿಳಿಯಬೇಕು ॥೪೨॥

ಮೂ ॥ ಯೆಥಾರ್ಥವಚನಾನಾಂ ಚ ಮೋಹಾರ್ಥಾನಾಂ ಚ ಸಂಶಯಂ ॥
ಅಪನೇತುಂ ಹಿ ಭಗವಾನ್ ಬ್ರಹ್ಮಸೂತ್ರಮುಚೀಕ್ಲೃ ಪತ್ ॥ ೪೩ ॥

ಅ ॥ ಯಥಾರ್ಥವಚನಗಳು ಮತ್ತು ಮೋಹಕಗಳಾದ ವಚನಗಳು ಪರಸ್ಪರವಿರುದ್ಧ ಗಳಾದ ಈ ಎರಡು ವಾಕ್ಯಗಳ ಶ್ರವಣದಿಂದುಂಟಾದ ಜನರ ಸಂದೇಹವನ್ನು ಕಳೆಯುವುದಕ್ಕಾ ಗಿಯೇ ಪೂಜ್ಯರಾದ ವೇದವ್ಯಾಸರು ಬ್ರಹ್ಮಸೂತ್ರವನ್ನು ನಿರ್ಮಿಸಿರುವರು ॥೪೩॥

ಮೂ ॥ ತಸ್ಮಾತ್ಸೂತ್ರಾರ್ಥಮಾಗೃಹ್ಯ ಕರ್ತವ್ಯಃ ಸರ್ವನಿರ್ಣಯಃ ॥
ಸರ್ವದೋಷವಿಹೀನತ್ವಂ ಗುಣೈಃ ಸರ್ವೈರುದೀರ್ಣತಾ ॥೪೪॥
ಅಭೇದಃ ಸರ್ವರೂಪೇಷು ಜೀವಭೇದಃ ಸದೈವ ಹಿ ॥
ವಿಷ್ಣೋರುಕ್ತಾನಿ ಸೂತ್ರೇಷು ಸರ್ವವೇದೇಡ್ಯತಾ ತಥಾ ॥ ೪೫ ॥
ತಾರತಮ್ಯಂ ಚ ಮುಕ್ತಾನಾಂ ವಿಮುಕ್ತಿರ್ವಿದ್ಯಯಾತಥಾ ॥
ತಸ್ಮಾದೇತದ್ವಿರುದ್ಧಂ ಯನ್ಮೋಹಾರ್ಥಂ ತದುದಾಹೃತಂ ॥ ೪೬॥

ಅ ॥ ಆದುದರಿಂದ ಬ್ರಹ್ಮಸೂತ್ರಾರ್ಥವನ್ನು ಚೆನ್ನಾಗಿ ತಿಳಿದುಕೊಂಡೇ ಸರ್ವ ಶಾಸ್ತ್ರಾರ್ಥದ ನಿರ್ಣಯವು ಮಾಡತಕ್ಕುದು. (ಸೂತ್ರಾರ್ಥವು ಯಾವುದು ? ಯಾವುದನ್ನು ಅನುಸರಿಸಿ ಸರ್ವ ನಿರ್ಣಯವನ್ನು ಮಾಡುವುದು ಎಂದರೆ) ಸರ್ವ ದೋಷಗಳಿಂದ ರಾಹಿತ್ಯವು, ಸರ್ವಗುಣಸಂಪೂರ್ಣತ್ವವು, ಸರ್ವರೂಪಗಳಲ್ಲಿ ಅಭೇದವು. ಯಾವಾಗಲೂ ಜೀವರಿಗೆ ಪರಸ್ಪರ ಭೇದವು, ಅಥವಾ ಶ್ರೀಹರಿಯಿಂದ ಜೀವರಿಗೆ ಭೇದವು, ಸೂತ್ರಗಳಲ್ಲಿ ಅನೇಕ ಸ್ಥಳಗಳಲ್ಲಿ ಹೇಳಲ್ಪಟ್ಟಿದೆ. ಹಾಗೆಯೇ ಸರ್ವ ವೇದಗಳಿಂದ ಸ್ತುತಿಸಿಕೊಳ್ಳಲ್ಪಡುವಿಕೆಯು, ಮುಕ್ತರಿಗೆ ನೀಚೋಚ್ಚಭಾವವು, ಹಾಗೆಯೇ ವಿದ್ಯೆಯಿಂದ ವಿಮುಕ್ತಿಯು. ಆದುದರಿಂದ ಈ ಸೂತ್ರಗಳಿಗೆ ವಿರುದ್ಧವಾದುದು ಯಾವುದಿದೆಯೋ ಅದು ಮೋಹಿಸುವುದಕ್ಕಾಗಿ ಎಂದು ಹೇಳಿಸಿಕೊಳ್ಳಲ್ಪಟ್ಟಿದೆ. (ಎಂದು ತಿಳಿಯಬೇಕು.)

ವಿಶೇಷಾಂಶ— (1) ಸರ್ವದೋಷವಿಹೀನತ್ವವು ೨ನೇ ಅವಿರೋಧಾಧ್ಯಾಯದಲ್ಲಿ ಹೇಳಿಸಿಕೊ ಳ್ಳಲ್ಪಟ್ಟಿದೆ. ಆದುದರಿಂದಲೇ **'ಸರ್ವದೋಷೋಜ್ಝಿತಸ್ತಸ್ಮಾದ್ಭಗವಾನ್ಪುರುಷೋತ್ತಮಃ'** ಎಂದು ೨ನೇ ಅಧ್ಯಾಯದ ತಾತ್ಪರ್ಯವನ್ನು ಅಣುಭಾಷ್ಯದಲ್ಲಿ ಹೇಳಿರುವರು. (2) ಸರ್ವ ಗುಣಪರಿಪೂರ್ಣತ್ವವು, ೧ನೇ ಸಮನ್ವಯಾಧ್ಯಾಯದಲ್ಲಿ ಹೇಳಲ್ಪಟ್ಟಿದೆ. **'ಶಬ್ದೈರತೋಽನಂತ ಗುಣೋ ಯಚ್ಛಬ್ದಾಯೋಗವೃತ್ತಯಃ'** ಎಂದು ಪ್ರಥಮಾಧ್ಯಾಯದ ತಾತ್ಪರ್ಯವನ್ನು ಹೇಳಿರುವರು. (3)ಸರ್ವರೂಪಗಳಲ್ಲಿ ಅಭೇದವು **'ನ ಸ್ಥಾನತೋಽಪಿ ಪರಸ್ಯೋಭಯ ಲಿಂಗಂ ಸರ್ವತ್ರ ಹಿ'** ಎನ್ನುವಲ್ಲಿ ಹೇಳಲ್ಪಟ್ಟಿದೆ. (4) ಜೀವಭೇದವು ೧ **' ಭೇದವ್ಯಪದೇಶಾ ಚ್ಚಾನ್ಯಃ'** ೨ **'ಶಾರೀರಶ್ಚೋಭಯೇಽಪಿ ಹಿ ಭೇದೇನೈನಮಧೀಯತೇ'** ೩ **' ವಿಶೇಷಣ ಭೇದವ್ಯಪದೇಶಾಭ್ಯಾಂಚ ನೇತರೌ'** ೪ **'ಸುಷುಪ್ತ್ಯುತ್ಕ್ರಾಂತ್ಯೋರ್ಭೇದೇನ'** ೫ **'ಪೃಥ ಗುಪದೇಶಾತ್'** ಇತ್ಯಾದ್ಯಧಿಕರಣದಲ್ಲಿ ಅನೇಕ ಸ್ಥಳಗಳಲ್ಲಿ ಸೂತ್ರಕಾರರಿಂದ ಪ್ರತಿಪಾದಿತ

ವಾಗಿದೆ. (5) ಸರ್ವ ವೇದಗಳಿಂದ ಸ್ತೋತ್ರ ಮಾಡಿಸಿಕೊಳ್ಳಲ್ಪಡುವಿಕೆಯು **'ಶಾಸ್ತ್ರಯೋನಿತ್ವಾತ್, ತತ್ತು ಸಮನ್ವಯಾತ್, ಈಕ್ಷತೇರ್ನಾಶಬ್ದಂ'** ಈ ಅಧಿಕರಣಗಳಲ್ಲಿ ಸಮರ್ಥಿತವಾಗಿದೆ. (6) ಮುಕ್ತರಿಗೆ ನೀಚೋಚ್ಚಭಾವವು, **'ಇಯದಾಮನನಾತ್, ತನ್ಮನಃ ಪ್ರಾಣ ಉತ್ತರಾತ್, ಸೋಧ್ಯಕ್ಷೇ ತದುಪಗಮಾದಿಭ್ಯಃ'** ಇತ್ಯಾದಿಗಳಲ್ಲಿ ನಿರೂಪಿಸಿಕೊಳ್ಳಲ್ಪಟ್ಟಿದೆ. (7) ವಿದ್ಯೆಯಿಂದ ಮುಕ್ತಿಯು, **'ವಿದ್ಯೈವ ತು ನಿರ್ಧಾರಣಾತ್'** ಇತ್ಯಾದಿಗಳಲ್ಲಿ ನಿರೂಪಿತವಾಗಿದೆ. ॥೪೪॥೪೫॥೪೬॥

ಮೂ ॥ ತಸ್ಮಾದ್ಯೇಯೇ ಗುಣಾ ವಿಷ್ಣೋರ್ಗ್ರಾಹ್ಯಾಸ್ತೇ ಸರ್ವ ಏವ ತು॥
ಇತ್ಯಾದ್ಯುಕ್ತಂ ಭಗವತಾ ಭವಿಷ್ಯತ್ಪರ್ವಣಿ ಸ್ಫುಟಂ ॥೪೭॥

ಅ ॥ ಆದುದರಿಂದ (ಅಣುತ್ವ ಮಹತ್ವ ಮೊದಲಾದ) ಯಾವ ಯಾವ ಗುಣಗಳು ವಿಷ್ಣುವಿಗೆ (ವೇದದಲ್ಲಿ ಹೇಳಿಸಿಕೊಳ್ಳಲ್ಪಟ್ಟಿದ್ದಾವೋ) ಅವುಗಳಿಲ್ಲವೂ ಗ್ರಾಹ್ಯಗಳೇ. (ಅಂದರೆ ಲೋಕದೃಷ್ಟಿಯಿಂದ ವಿರುದ್ಧಗಳೆಂದು ಪ್ರಮಾಣದಲ್ಲಿ ಹೇಳಿದ್ದನ್ನು ಬಿಡಬಾರದು) ಇದು ಮೊದಲಾದ ಪ್ರಮೇಯವು ಶ್ರೀವೇದವ್ಯಾಸರಿಂದ ಭವಿಷ್ಯತ್ಪರ್ವದಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ॥೪೭॥

ಇತರ ಶಾಸ್ತ್ರಗಳು ಮೋಹಕಗಳು ಎನ್ನುವ ಅರ್ಥದಲ್ಲಿಯೂ, ವಿಷ್ಣುವಿಗೆ ಸರ್ವೋತ್ತಮತ್ವ ರೂಪ ಅರ್ಥದಲ್ಲಿಯೂ ಪ್ರಮಾಣಾಂತರವನ್ನು ಹೇಳುತ್ತಾರೆ.

ಮೂ ॥ ಏಷ ಮೋಹಂ ಸೃಜಾಮ್ಯಾಶು ಯೋ ಜನಾನ್ಮೋಹಯಿಷ್ಯತಿ॥
ತ್ವಂ ಚ ರುದ್ರ ಮಹಾಬಾಹೋ ಮೋಹಶಾಸ್ತ್ರಾಣಿ ಕಾರಯ ॥೪೮॥
ಅತಥ್ಯಾನಿ ವಿತಥ್ಯಾನಿ ದರ್ಶಯಸ್ವ ಮಹಾಭುಜ ॥
ಪ್ರಕಾಶಂ ಕುರು ಚಾತ್ಮಾನಮಪ್ರಕಾಶಂ ಚ ಮಾಂ ಕುರು ॥೪೯॥

ಇತಿ ವರಾಹವಚನಂ ಬ್ರಹ್ಮಾಂಡೋಕ್ತಂ ತಥಾಪರಂ ॥
ಅಮೋಹಾಯ ಗುಣಾ ವಿಷ್ಣೋರಾಕಾರಶ್ಚಿಚ್ಛರೀರತಾ ॥೫೦॥
ನಿರ್ದೋಷತ್ವಂ ತಾರತಮ್ಯಂ ಮುಕ್ತಾನಾಮಪಿ ಚೋಚ್ಯತೇ ॥
ಏತದ್ವಿರುದ್ಧಂ ಯತ್ಪರ್ವಂ ತನ್ಮೋಹಾಯೇತಿ ನಿರ್ಣಯಃ ॥೫೧॥

ಅ ॥ ಮಹಾಬಾಹುವುಳ್ಳ ರುದ್ರನೇ, ವಿಷ್ಣುವಾದ ನಾನು, ಯಾವ ಮೋಹವು ಜನರನ್ನು ಮೋಹಿಸುವುದೋ, ಅಂತಹ ಮೋಹಕ ಗ್ರಂಥವಾದ ಬೌದ್ಧಶಾಸ್ತ್ರವನ್ನು, ಅಥವಾ ಕೈಲಾಸ ಯಾತ್ರಾದಿಗಳನ್ನು, ಅಥವಾ ನಟನ (ಅವಿದ್ಯಮಾನವಾದ ಆಕಾರಪ್ರದರ್ಶನ)ವನ್ನು, ವಂಚನ (ವಿದ್ಯಮಾನಾಕಾರಾಚ್ಛಾದನ) ವನ್ನು, ಸೃಷ್ಟಿಸುವೆನು. ಅಂತಹ ಮೋಹಕ ಶಾಸ್ತ್ರಗಳನ್ನು ನೀನು (ದಧೀಚ್ಯಾದಿ ಋಷಿಗಳಿಂದ) ಮಾಡಿಸು. ನೀನು ಕೂಡ ಮಾಡು. ಎಲೋ ಮಹತ್ತಾದ ಭುಜಗಳುಳ್ಳ ರುದ್ರನೇ, (ಅತಥ್ಯಾನಿ-) ಎಲ್ಲಿಯೂ ಅವಿದ್ಯಮಾನಗಳಾದ ಲಿಂಗಮೂಲಾನ್ವೇಷಣ ಅಸಕೃದ್ಭಸ್ಮಧಾರಣ ಲಿಂಗಧಾರಣಾದಿಗಳಿಂದ ಕೈಲಾಸಗಮನಾದಿಗಳನ್ನೂ (ವಿತಥ್ಯಾನಿ-) ನಿನ್ನಿಂದ ವಿಪರೀತನಾದ ನನ್ನಲ್ಲಿ ಯಥಾರ್ಥವಾಗಿರುವ ನಿನ್ನಲ್ಲಿ ಸರ್ವಥಾ ಇಲ್ಲದಿರುವ ಸರ್ವಜ್ಞತ್ವ ಮೊದಲಾದವುಗಳನ್ನು (ನಿನ್ನಲ್ಲಿ) ತೋರಿಸಿಕೊಳ್ಳು. ತನ್ನನ್ನು ಪ್ರಸಿದ್ಧನನ್ನಾಗಿ ಮಾಡಿಕೊಳ್ಳು. ನನ್ನನ್ನು ಅಪ್ರಸಿದ್ಧನನ್ನಾಗಿ ಮಾಡು. ಹೀಗೆ ವಾರಾಹಪುರಾಣದ ವಚನವಿದೆ. ಹಾಗೆಯೇ ಹಿಂದೆಹೇಳಿದ ಅರ್ಥವನ್ನು ಪ್ರತಿಪಾದಿಸುವ,ಬ್ರಹ್ಮಾಂಡ ಪುರಾಣದಲ್ಲಿ ಹೇಳಿದಉತ್ತರಾರ್ಧವನ್ನು

ಪ್ರತಿಪಾದಿಸುವುದರಿಂದ ಉತ್ತಮವಾದ ವಚನವಿದೆ. (ಹೇಗೆ ಶಿವಾದಿಗಳ ಮಹಿಮೆಯು ಪಾಶುಪತಾದಿಗಳಲ್ಲಿ ಮೋಹಕ್ಕೋಸ್ಕರ ಹೇಳಲ್ಪಟ್ಟಿದೋ ಹಾಗೆಯೇ ವಿಷ್ಣುವಿನ ಗುಣಗಳೂ ವೇದಾದಿಗಳಲ್ಲಿ ಮೋಹಕ್ಕಾಗಿ ಹೇಳಲ್ಪಟ್ಟಿದ್ದಾವೆಂದು ಏಕೆ ಆಗಲಾರವು? ಎಂದರೆ ಪ್ರಮಾಣದಿಂದ ಅದನ್ನು ನಿರಾಕರಿಸುತ್ತಾರೆ.) ವಿಷ್ಣುವಿನ ಗುಣಗಳು, 'ಸಹಸ್ರಶೀರ್ಷಾ' ಇತ್ಯಾದ್ಯಾಕಾರವು, ಶರೀರಕ್ಕೆ ಜ್ಞಾನಾತ್ಮಕತ್ವವು, ಅಥವಾ ಅಕಾರವು ಜ್ಞಾನಾತ್ಮಕವೇ, (ಪ್ರಾಕೃತವಲ್ಲ) ದೋಷಾತ್ಯಂತಾಭಾವವೂ, ಮುಕ್ತರಿಗೂ ತಾರತಮ್ಯವೂ (ಇತ್ಯಾದಿಗಳೆಲ್ಲವೂ) (ಮೋಹ ನಾಶಕ್ಕಾಗಿಯೂ ಜ್ಞಾನಕ್ಕಾಗಿಯೂ) ಹೇಳಲ್ಪಡುತ್ತದೆ. ಹಿಂದೆ ಹೇಳಿದ್ದಕ್ಕೆ ವಿರುದ್ಧವಾದುದು ಯಾವುದಿದೆಯೋ ಅದೆಲ್ಲಾ ಮೋಹಕ್ಕಾಗಿಯೂ ಅಜ್ಞಾನಕ್ಕಾಗಿಯೂ ಎಂದು ನಿಶ್ಚಯವು ॥೪೮॥ ೪೯॥ ೫೦॥ ೫೧॥

ಸ್ಕಾಂದ ಪುರಾಣವು ತಾಮಸವಾಗಿರುವುದರಿಂದ ಅದರಲ್ಲಿ ಹೇಳಿದ್ದನ್ನು ಹೇಗೆ ಸ್ವೀಕರಿಸುವುದು ಎಂದರೆ—ಸಾಕ್ಷಾತ್ ತಂದೆಯೇ ಮಗನಿಗೆ ಉಪದೇಶಕೊಟ್ಟಿದ್ದರಿಂದ ಸ್ವೀಕರಿಸಬೇಕು ಎನ್ನುತ್ತಾರೆ—

ಮೂ ॥ ಸ್ಕಾಂದೇಽಪ್ಯುಕ್ತಂ ಶಿವೇನೈವ ಷಣ್ಮುಖಾಯೈವ ಸಾದರಂ ॥
ಶಿವಶಾಸ್ತ್ರೇಽಪಿ ತದ್ಗ್ರಾಹ್ಯಂ ಭಗವಚ್ಛಾಸ್ತ್ರಯೋಗಿ ಯತ್ ॥೫೨॥
ಪರಮೋ ವಿಷ್ಣುರೇವೈಕಸ್ತಜ್ಜ್ಞಾನಂ ಮುಕ್ತಿ (ಮೋಕ್ಷ) ಸಾಧನಂ ॥
ಶಾಸ್ತ್ರಾಣಾಂ ನಿರ್ಣಯೆಸ್ತ್ವೇಷಸ್ತದನ್ಯನ್ಮೋಹನಾಯ ಹಿ ॥೫೩॥

ಅ ॥ ಸ್ಕಾಂದ ಪುರಾಣದಲ್ಲಿಯೂ ರುದ್ರನಿಂದಲೇ ಮಗನಾದ ಷಣ್ಮುಖನಿಗೋಸ್ಕರವೇ ವಿಶ್ವಾಸಪೂರ್ವಕವಾಗಿಯೇ ಹೇಳಲ್ಪಟ್ಟಿದೆ. ಯಾವುದು ಭಗವಂತನ ಶಾಸ್ತ್ರಕ್ಕೆ ಸಂಬಂಧಿಯಾದುದೋ, ಅಂತಹುದು ಶಿವಶಾಸ್ತ್ರದಲ್ಲಿ ಹೇಳಿದ್ದೂ (ಭಗವಚ್ಛಾಸ್ತ್ರಕ್ಕೆ ಅನುಕೂಲವಾದುದು) ಗ್ರಾಹ್ಯವೇ. ವಿಷ್ಣು ಒಬ್ಬನೇ ಸರ್ವೋತ್ತಮನು. ವಿಷ್ಣುಜ್ಞಾನವೇ ಮೋಕ್ಷಸಾಧನವು. ಇದೇವೇ ಸರ್ವ ಶಾಸ್ತ್ರಗಳ ನಿರ್ಣೀತವಾದ ಅರ್ಥವು. ಅದರಿಂದ ಇತರವಾದುದು ಮೋಹಿಸುವುದಕ್ಕಾಗಿಯೇ ಎಂದು ಪ್ರಸಿದ್ಧವು. ॥ ೫೨ ॥ ೫೩ ॥

ಮೂ ॥ ಜ್ಞಾನಂ ವಿನಾ ತು ಯಾ ಮುಕ್ತಿಃ ಸಾಮ್ಯಂ ಚ ಮನು ವಿಷ್ಣುನಾ ॥
ತೀರ್ಥಾದಿಮಾತ್ರತೋ ಜ್ಞಾನಂ ಮನೂಧಿಕ್ಯಂ ಚ ವಿಷ್ಣುತಃ ॥೫೪॥
ಅಭೇದಶ್ಚಾಸ್ಮದಾದೀನಾಂ ಮುಕ್ತಾನಾಂ ಹರಿಣಾ ತಥಾ ॥
ಇತ್ಯಾದಿ ಸರ್ವಂ ಮೋಹಾಯ ಕಥ್ಯತೇ ಪುತ್ರ ನಾನ್ಯಥಾ ॥೫೫॥

ಅ ॥ ಜ್ಞಾನವಿಲ್ಲದೆ ಕಾಶೀಮರಣಾದಿಗಳಿಂದಲೇ ಯಾವುದು ಮುಕ್ತಿಯೋ, ನನಗೆ ವಿಷ್ಣುವಿನಿಂದ ಸಾಮ್ಯವು, ತೀರ್ಥಯಾತ್ರಾ ಕ್ಷೇತ್ರವಾಸಾದಿಗಳಿಂದಲೇ ಜ್ಞಾನವು ಹುಟ್ಟುತ್ತದೆ ಎನ್ನುವುದು ಶಿವನಾದ ನನಗೆ ವಿಷ್ಣುವಿನಿಂದ ಅಧಿಕ್ಯವು, ನಾವೇ ಮೊದಲಾದ ಸಂಸಾರಿಗಳಿಗೆ ಶ್ರೀ ಹರಿಯಿಂದ ಅಭೇದವು, ಹಾಗೆಯೇ ಮುಕ್ತರಾದ ನಾನೇ ಮೊದಲಾದವರಿಗೆ ಶ್ರೀ ಹರಿಯಿಂದ ಅಭೇದವು, ಇದು ಮೊದಲಾದುದೆಲ್ಲವೂ ಮಗನಾದ ಷಣ್ಮುಖನೇ (ಅಯೋಗ್ಯರಿಗೆ) ಮೋಹಕ್ಕಾಗಿ ಹೇಳಲ್ಪಟ್ಟದ್ದು ತತ್ವಜ್ಞಾನ ಹುಟ್ಟುವುದಕ್ಕಾಗಿ ಹೇಳಿದ್ದಲ್ಲ ॥೫೪ ॥ ೫೫ ॥

ವರಾಹ ಪುರಾಣದಲ್ಲಿ ಹೇಳಿದ್ದನ್ನು ಪಾದ್ಮಪುರಾಣವಚನದಿಂದಲೂ ಉಪಪಾದಿಸುತ್ತಾರೆ–

ಮೂ ॥ ಉಕ್ತಂ ಪಾದ್ಮಪುರಾಣೇ ಚ ಶೈವ ಏವ ಶಿವೇನ ತು ॥
ಯದುಕ್ತಂ ಹರಿಣಾ ಪೂರ್ವಮುಮಾಯೈ ಪ್ರಾಹ ತದ್ಧರಃ ॥೫೬॥

ಅ ॥ (ಹಿಂದೆ ಹೇಳಿದ ಅರ್ಥಸಮುದಾಯವು) ಶಿವನಿಗೆ ಸರ್ವೋತ್ತಮತ್ವವನ್ನು ಹೇಳ ತಕ್ಕ ಪೂರ್ವಕಾಂಡದಲ್ಲಿ ಪಾದ್ಮಪುರಾಣದಲ್ಲಿಯೇ ರುದ್ರನಿಂದ ಹೇಳಲ್ಪಟ್ಟದ್ದು ಇದೆ. (ಹಾಗಾದರೆ ಆ ಪ್ರಮಾಣವಾಕ್ಯದಲ್ಲಿ ಶಂಭೋ ಎಂದು ಸಂಬೋಧಿಸಿದ್ದು ಹೇಗೆ ಕೂಡುತ್ತದೆಂದರೆ?) ಯಾವ ಪ್ರಮೇಯವು ಶ್ರೀ ಹರಿಯಿಂದ ತನಗೋಸ್ಕರ ಹೇಳಲ್ಪಟ್ಟದೋ ಅದನ್ನು (ಪಾರ್ವತಿಗೋಸ್ಕರ ರುದ್ರನು ಉಪದೇಶಿಸಿದನು.

ವಿಶೇಷಾಂಶ— ಪಾದ್ಮ ಪುರಾಣದಲ್ಲಿ ಪೂರ್ವಕಾಂಡ, ಉತ್ತರಕಾಂಡವೆಂದು ಎರಡು ಪ್ರಕಾರವಿದೆ. ಅದರಲ್ಲಿ ಪೂರ್ವಕಾಂಡವು ಸಾತ್ವಿಕಗಳಾದ ಗಾರುಡಾದಿ ಐದು ಪುರಾಣಗಳಿಗೆ ವಿರುದ್ಧವಾದ ಅರ್ಥವನ್ನು ಬೋಧಿಸುವುದರಿಂದ ಪೂರ್ವಪಕ್ಷಗ್ರಂಥವು. ಉತ್ತರಕಾಂಡವಾದರೂ ಗಾರುಡಾದಿ ಐದು ಪುರಾಣಗಳಿಗೆ ಅನುಕೂಲಗಳಾಗಿರುವುದರಿಂದ ಸಿದ್ಧಾಂತಗ್ರಂಥವು. ಆದುದ ರಿಂದಲೇ 'ಶೈವೇ ಪಾದ್ಮಪುರಾಣೇ' ಎಂದು ಹೇಳಿರುವರು ॥೫೬॥

ಆ ಪ್ರಮಾಣವಾಕ್ಯವನ್ನುದಾಹರಿಸುತ್ತಾರೆ—

ಮೂ ॥ ತ್ವಾಮಾರಾಧ್ಯ ತಥಾ ಶಂಭೋ ಗ್ರಹೀಷ್ಯಾಮಿ ವರಂ ಸದಾ ॥
ದ್ವಾಪರಾದೌ ಯುಗೇ ಭೂತ್ವಾ ಕಲಯಾ ಮಾನುಷಾದಿಷು ॥೫೭॥

ಅ ॥ ಎಲೋ ರುದ್ರನೇ- *ದ್ವಾಪರಯುಗ, ತ್ರೇತಾಯುಗ, ಕೃತಯುಗಗಳಲ್ಲಿ ಮನು ಷ್ಯಾದಿಗಳಲ್ಲಿ (ಕಲಯಾ) ಸ್ವರೂಪಾಂಶದಿಂದ ಅವತಾರಮಾಡಿ (ಸದಾ) ಮಧ್ಯದಲ್ಲಿ ತಡೆಯಿಲ್ಲದೆ ~~ಹನ್ನೆರಡು ಸಂವತ್ಸರ ಮೊದಲಾದ ಕಾಲಗಳಲ್ಲಿ, ಅಥವಾ ಪ್ರತಿ ಬ್ರಹ್ಮದಿವಸದಲ್ಲಿಯೂ ನಿನ್ನನ್ನೇ~~ ಚೆನ್ನಾಗಿ ಪೂಜಿಸಿ (ತಥಾ) ಹಾಗೆಯೇ ಪೂಜಿಸಿ ಸಂತೋಷೀಕರಿದ ಮೇಲೆ (ನಿನ್ನಿಂದ) ವರವನ್ನು ತೆಗೆದುಕೊಳ್ಳುವೆನು ॥೫೭॥

ಮೂ ॥ ಸ್ವಾಗಮೈಃ ಕಲ್ಪಿತೈಸ್ತ್ವಂಚ ಜನಾನ್ಮದ್ವಿಮುಖಾನ್ ಕುರು ॥
ಮಾಂ ಚ ಗೋಪಯ ಯೇನ ಸ್ಯಾತ್ಸೃಷ್ಟಿರೇಷೋತ್ತರಾಧರಾ ॥೫೮॥

ಅ ॥ (ಯೇನ) ನನ್ನಿಂದಲೂ ನಿನ್ನಿಂದಲೂ ಮಾಡಲ್ಪಟ್ಟ ವಿಪರೀತಾಚಾರದಿಂದ ಈದಾವ ಸೃಷ್ಟಿಯು †ಉತ್ತರಾಧರಾ– ಅಯೋಗ್ಯರು ಕೃತಯುಗಾದಿಗಳಲ್ಲಿ ಸತ್ಕರ್ಮದಲ್ಲಿ ಪ್ರವರ್ತಿಸಿ ದವರು ದುರ್ಮಾರ್ಗದಲ್ಲಿ ಆಸಕ್ತರಾಗಬೇಕು, ಅಥವಾ ಯಾವ/ಮರೆಮಾಡೋಣದರಿಂದ ಕೃತ ಯುಗಾದಿಗಳಲ್ಲಿ ಸದಾಚಾರದಿಂದ ಊರ್ಧ್ವಲೋಕಕ್ಕೆ ಹೋಗಲಿಕ್ಕೆ ಉದ್ಯುಕ್ತರಾದ ಆಸಜ್ಜನರು

*ದ್ವಾವೇವ ಪರೌ ಧರ್ಮಮಾರ್ಗೌ ಯಸ್ಮಿನ್ ಸಃ ದ್ವಾಪರಃ। ದ್ವಾಪರಃ ಆದಿಃ ಯಸ್ಯ ತತ್ ವ್ಯುತ್ಪತ್ತಿಮದಿಂದ ಯಾವುಗಳಿಗೆ ದ್ವಾಪರವು ಆದಿಯು ಅಂದರೆ ಕೃತಯುಗ, ತ್ರೇತಾಯುಗ, ದ್ವಾಪರ ಯುಗಗಳು ಎಂಬರ್ಥವು. ಕಲಿಯುಗದಲ್ಲಿ ಅವತಾರವಿಲ್ಲ.

†ಉತ್ತರಾಃ- ಕೃತಯುಗಾದಿಗಳಲ್ಲಿ ಉತ್ತಮ ಮಾರ್ಗವಲ್ಲಿ ಪ್ರವರ್ತಿಸತಕ್ಕ ದೈತ್ಯರು, ಅಧರಾಃ- ಅಧಮಮಾರ್ಗದಲ್ಲಿರುವವರು, ಯಸ್ಯಾಂ-ಯಾವ ಸೃಷ್ಟಿಯಲ್ಲಿ ಆಗುತ್ತಾರೋ ಆ ಸೃಷ್ಟಿಯು ಉತ್ತರಾಧರಾ ಎನ್ನಿಸುತ್ತದೆ.

ನರಕಾದ್ಯಧೋಲೋಕಕ್ಕೆ ಹೋಗಲಿಕ್ಕೆ ಹೇಗೆ ಉದ್ಯುಕ್ತರಾಗುವರೋ, ಹಾಗೆಯೇ ನೀನು ಅಯಥಾರ್ಥಗಳಾದನಿನಗೇನೇ ಉತ್ತಮತ್ವವನ್ನು ಪ್ರತಿಪಾದಿಸತಕ್ಕ ಆಗಮಗಳಿಂದ ಜನರನ್ನು ನನ್ನಲ್ಲಿ ವಿಮುಖರನ್ನಾಗಿ ಮಾಡು ಮತ್ತು ನನ್ನನ್ನಾದರೂ ಅಡಗಿಸು ॥೫೮॥

ಹಾಗಾದರೆ— ವೈಷ್ಣವ ಶಾಸ್ತ್ರಗಳಲ್ಲಿ ವಿಷ್ಣುವಿಗೂ ರುದ್ರನಿಗೂ ಉತ್ತಮತ್ವವು; ಶೈವ ಶಾಸ್ತ್ರದಲ್ಲಿ ಶಿವನಿಗೂ ವಿಷ್ಣುವಿಗೂ ಉತ್ತಮತ್ವವು ಹೇಳುತ್ತದೆ. ಹೀಗಾದರೆ ನಿರ್ಣಯವು ಹೇಗಾಗುವುದು ಎಂದರೆ—

ಮೂ ॥ ನ ಚ ವೈಷ್ಣವಶಾಸ್ತ್ರೇಷು ವೇದೇಷ್ವಪಿ ಹರೇಃ ಪರಃ ।
ಕ್ವಚಿದುಕ್ತೋಽನ್ಯಶಾಸ್ತ್ರೇಷು ಪರಮೋ ವಿಷ್ಣುರೀರಿತಃ ॥೫೯॥

ಅ ॥ ವೈಷ್ಣವ ಶಾಸ್ತ್ರಗಳಲ್ಲಿಯೂ ವೇದಗಳಲ್ಲಿಯೂ ಶ್ರೀ ಹರಿಯದ್ದೆಶೆಯಿಂದ ಮತ್ತೋಬ್ಬನು ಸರ್ವೋತ್ತಮನು ಯಾವ ಭಾಗದಲ್ಲಿಯೂ ಹೇಳಿಸಿಕೊಳ್ಳಲ್ಪಡಲಿಲ್ಲ. ಶೈವಶಾಸ್ತ್ರಗಳಲ್ಲಿ ಕೆಲವು ಭಾಗಗಳಲ್ಲಿ ಶ್ರೀ ಹರಿಯೇ ಸರ್ವೋತ್ತಮನೆಂದು ಹೇಳಿಸಿಕೊಳ್ಳಲ್ಪಟ್ಟಿದ್ದಾನೆ. ಅದಕಾರಣ ಶೈವಾದಿಶಾಸ್ತ್ರಗಳು ಸ್ವವಿರುದ್ಧಗಳಾಗಿರುವುದರಿಂದ ವೇದಾದಿಗಳಂತೆ ನಂಬಲಿಕ್ಕೆ ಯೋಗ್ಯಗಳಲ್ಲ ॥೫೯॥

ಮೂ ॥ ನಿರ್ದೋಷತ್ವಾಚ್ಚ ವೇದಾನಾಂ ವೇದೋಕ್ತಂ ಗ್ರಾಹ್ಯಮೇವ ಹಿ ।
ವೇದೇಷ್ವಪಿ (ಷುಚ) ರೋವಿಷ್ಣುಃ ಸರ್ವಸ್ಮಾದುಚ್ಯತೇ ಸದಾ ॥೬೦॥

ಅ ॥ (ವೇದಗಳು ಅಪೌರುಷೇಯಗಳಾಗಿರುವುದರಿಂದ) ಅವುಗಳಿಗೆ ವಕ್ತೃದೋಷ ನಿಬಂಧನ ದೋಷಗಳಿಲ್ಲದಿರುವುದರಿಂದ ವೇದಗಳಲ್ಲಿ ಹೇಳಲ್ಪಟ್ಟ ಪ್ರಮೇಯವು ಗ್ರಾಹ್ಯವೇ ಆಗಿದೆ ಎಂದು ಪ್ರಸಿದ್ಧವು. ವೇದಗಳಲ್ಲಿಯೂ ಶ್ರೀ ಹರಿಯು ಬ್ರಹ್ಮರುದ್ರಾದಿ ನಿಖಿಲದೇವತೆಗಳಿಂದ ಯಾವಾಗಲೂ ಉತ್ತಮನೆಂದು ಹೇಳಿಸಿಕೊಳ್ಳಲ್ಪಡುತ್ತಾನೆ ॥೬೦॥

ವಿಷ್ಣು ಸರ್ವೋತ್ತಮತ್ವಾದಿಗಳನ್ನು ಹೇಳತಕ್ಕ ವೇದಗಳನ್ನು ಪಠನಮಾಡುತ್ತಾರೆ—

ಮೂ ॥ ಅಸ್ಯ ದೇವಸ್ಯ ಮಿಹ್ಳುಷೋ ವಯಾ
ವಿಷ್ಣೋರೇಷಸ್ಯ ಪ್ರಭೃಥೇ ಹವಿರ್ಭಿಃ ॥
ವಿದೇಹಿ ರುದ್ರೋ ರುದ್ರಿಯಂ ಮಹಿತ್ವಂ
ಯಾಸಿಷ್ಟಂ ವರ್ತಿರಶ್ವಿನಾವಿರಾವತ್ ॥೬೧॥

ಅ ॥ 'ಮಿಹ್ಳುಷಃ' ಭಕ್ತರಿಗೆ ಇಷ್ಟಗಳಾದ ಸಕಲ ಪುರುಷಾರ್ಥಗಳನ್ನು ಕೊಡತಕ್ಕವನು, 'ಏಷಸ್ಯ' ಚೆನ್ನಾಗಿ ಅಪ್ರತಿಹತವಾದ ಇಚ್ಛೆಯುಳ್ಳವನು, 'ದೇವಸ್ಯ' ಕ್ರೀಡಾದಿಗುಣಗಳಿಂದ ವಿಶಿಷ್ಟನಾದ, 'ಅಸ್ಯ' ಸಕಲಜಗತ್ತುಗಳಿಂದ ಭಿನ್ನನಾಗಿರುವುದರಿಂದ ಆಕಾರವಾಚ್ಯನಾದ, ವಿಷ್ಣೋಃ-ವಿಷ್ಣುವಿಗೆ, ಹವಿರ್ಭಿಃ-ಯಜ್ಞಸಂಬಂಧಿಯಾದ, ಹವಿಸ್ಸುಗಳಿಂದ * ಪ್ರಭೃಥೇ-ಭಕ್ತಿಪೂರ್ವಕವಾಗಿ ಪೂಜಾದಿಗಳು ಮಾಡಲ್ಪಡುತ್ತಿರಲು, ವಯಾಃ-ಅಹಂಕಾರರೂಪದಿಂದ ಬಂಧಕನಾದ, ರುದ್ರಃ – ರುದ್ರನು, ರುದ್ರಿಯಂ - ರುದ್ರಸಂಬಂಧಿಯಾದ ಮಹಿಮೆಯನ್ನು ವಿದೇಹಿ-ಹೊಂದಿರುವನಷ್ಟೇ, (ಆದಕಾರಣದಿಂದ) ಅಶ್ವಿನೌ-ಅಶ್ವಿನೀದೇವತೆಗಳಿರಾ, (ನೀವೂ

* ಭೃತಮೇವ ಭೃಥಂ ಪ್ರಕರ್ಷೇಣ ಭೃತಂಪ್ರಭೃಥಂ-ಚನ್ನಾಗಿ ಭರಣವು, ಉದರಪೂರಣವು·

ಕೂಡ), (ವಿಷ್ಣುವಿಗೆ ಪೂಜಾದಿಗಳನ್ನು ಮಾಡಿ) ಇರಾವತ್-(ಇರೇತ್ಯನ್ನನಾಮ ಎನ್ನುವ ಬ್ರಾಹ್ಮಣ ವಚನದ್ದೆಶೆಯಿಂದ) ಯಜ್ಞಾಹುತಿರೂಪವಾದ ಅನ್ನವುಳ್ಳವೃತ್ತಿಯನ್ನು, ಯಾಸಿಷ್ಠಂ-ಹೊಂದುವಿರಿ.

ವಿಶೇಷಾಂಶ— (1) ಮಹಾಸಮರ್ಥನಾದ ರುದ್ರನೂ ಕೂಡ ಯಾವ ಕಾರಣದಿಂದ ಶ್ರೀ ವಿಷ್ಣುವಿನ ಪೂಜೆಯಿಂದಲೇ ರುದ್ರಪದಪ್ರಾಪ್ತ್ಯಾದಿರೂಪವಾದ ಮಾಹಾತ್ಮ್ಯವನ್ನು ಹೊಂದಿರುವನೋ, ಆದಕಾರಣ ರುದ್ರನಿಂದಲೂ ಅತಿ ನೀಚರಾದ ಅಶ್ವಿನೀದೇವತೆಗಳಿಗೆ ವಿಷ್ಣುವಿನ ಪೂಜೆಯಿಂದಲೇ, ಯಜ್ಞಭೋಕ್ತೃತ್ವರೂಪವಾದ ವೃತ್ತಿಯು ಆಯಿತೆಂದು ಸುತರಾಂ ಸಿದ್ಧವಾಯಿತು. (2) ಪೂಜಾಮಾಡುವವನಿಂದ ಪೂಜಿಸಿಕೊಳ್ಳುವವನಿಗೆ ಉತ್ತಮತ್ವವು ಸರ್ವಜನಸಿದ್ಧವಾಗಿದೆ. ಈ ಶ್ರುತಿಯಿಂದ ರುದ್ರಾದಿಗಳ ದೆಶೆಯಿಂದಲೂ ಶ್ರೀ ವಿಷ್ಣುವು ಉತ್ತಮನೆಂದು ಸಿದ್ಧವಾಯಿತು. ಮತ್ತು ರುದ್ರನನ್ನು ದೃಷ್ಟಾಂತವಾಗಿ ಹೇಳಿರುವುದರಿಂದ ರುದ್ರನು ಅರ್ಚಕನೆಂದೂ, ವಿಷ್ಣುವು ಪೂಜ್ಯನೆಂದೂ, ವಿಷ್ಣುವೇ ರುದ್ರಪದವಿಯನ್ನು ಕೊಟ್ಟವನೆಂದೂ ಸಿದ್ಧವಾಯಿತು. ॥೬೧॥

ಮೂ ॥ ಸ್ತುಹಿ ಶ್ರುತಂ ಗರ್ತಸದಂ ಯುವಾನಂ
ಮೃಗಂ ನ ಭೀಮಮುಪಹತ್ನುಮುಗ್ರಂ ॥
ಯಂ ಕಾಮಯೇ ತಂ ತಮುಗ್ರಂ ಕೃಣೋಮಿ
ತಂ ಬ್ರಹ್ಮಾಣಂ ತಮೃಷಿಂ ತಂ ಸುಮೇಧಾಂ ॥೬೨॥

ಅ ॥ (ಎಲೋರುದ್ರನೇ) 'ಗರ್ತಸದಂ ಗರ್ತೇ ಸದಃಯಸ್ಯ' ಎನ್ನುವ ವ್ಯುತ್ಪತ್ತಿಯಿಂದ ಹೃದಯಗುಹೆಯಲ್ಲಿ ಇರುವವನು, ಯುವಾನಂ-ನಿತ್ಯದಲ್ಲಿಯೂ ತರುಣನಾದವನು, ಮೃಗಂ ನ-ಸಿಂಹದಂತೆ, ಭೀಮಂ-ಭಯಂಕರನಾದವನು, ಉಪಹತ್ನುಂ- (ಸಿಂಹವು ಹೇಗೆ ಶತ್ರುಗಳಾದ ಮೃಗಗಳ ಸಮೀಪಕ್ಕೆ ಹೋಗಿ ಹೋಗಿ ಹೇಗೆ ಕೊಲ್ಲುವುದೋ ಹಾಗೆಯೇ ಹಾರಿ ಹಾರಿ ಹಿರಣ್ಯಕಶಿಪುವಿನ ಸೇನೆಗಳನ್ನು ಕೊಂದವನು, ಅಥವಾ ಹಿರಣ್ಯಕಶಿಪುವನ್ನು ತನ್ನ ಅಂಕದಲ್ಲಿಯೇ ಕೊಂದಿರುವುದರಿಂದ ಸಮೀಪದಲ್ಲಿ ಕೊಲ್ಲುವವನು, ಅಥವಾ ಸಮೀಪದಲ್ಲಿರತಕ್ಕ ಪ್ರಹ್ಲಾದನನ್ನು ಕೊಲ್ಲದೆ ಇರುವುದರಿಂದ ತನ್ನನ್ನು ಕೊಲ್ಲಲಿಕ್ಕೆ ಬಂದವರನ್ನೇ ಕೊಲ್ಲುವವನು, ಉಗ್ರಂ-ಶತ್ರುಗಳಿಗೆ ಭಯವನ್ನುಂಟಮಾಡುವವನು, ಇಂತಹ, ಶ್ರುತಂ- ಶ್ರುತಿಪ್ರತಿಪಾದ್ಯನಾದ ನರಸಿಂಹನನ್ನು, ಸ್ತುಹಿ- ಸ್ತೋತ್ರಮಾಡು. ಯಾರ್ಯಾರನ್ನು ರುದ್ರನನ್ನು ಮಾಡಲಿಕ್ಕೆ ಇಚ್ಛಿಸುವನೋ, ಅವರವರನ್ನು ರುದ್ರನನ್ನಾಗಿ ಮಾಡುವೆನು. ಹೀಗೆಯೇ ಯಾರ್ಯಾರನು ಬ್ರಹ್ಮನನ್ನಾಗಲೀ, ಋಷಿಯನ್ನಾಗಲೀ, ಜ್ಞಾನಿಯನ್ನಾಗಲೀ ಮಾಡಲಿಕ್ಕೆ ಇಚ್ಛಿಸುವೆನೋ ಅವರವರನ್ನು ಬ್ರಹ್ಮನನ್ನಾಗಲೀ, ಋಷಿಯನ್ನಾಗಲೀ, ಜ್ಞಾನಿಯನ್ನಾಗಲೀ ಮಾಡುವೆನು.

ವಿಶೇಷಾಂಶ – (1) ಸ್ತುಹಿ ಈ ಋಕ್ಕಿನ ಉತ್ತರಾರ್ಧವು '**ಮೃಳಾ ಚರಿತ್ರೇ ರುದ್ರ ಸ್ತವಾನೋ ಅನ್ಯಂ ತೇ ಅಸ್ಮನ್ನಿವಪಂತು ಸೇನಾಃ**' ನರಸಿಂಹನನ್ನು ಸ್ತೋತ್ರಮಾಡತಕ್ಕ ನೀನು ನಿನ್ನ ಸ್ತೋತ್ರದಿಂದ ನರಸಿಂಹನ ಸ್ತೋತ್ರವನ್ನು ಮಾಡತಕ್ಕ ನನಗೋಸ್ಕರ, ರಕ್ಷಕನಾಗು. ನಿನ್ನ ಭೂತ ಪಿಶಾಚಾದಿ ಸೇನೆಗಳು ನಮ್ಮಿಂದ ಇತರರಾದ ಅವೈಷ್ಣವ ಜನರನ್ನು ಜೆನ್ನಾಗಿ ನಾಶ ಮಾಡಲಿ. ಇದರಿಂದ ಶಿವನಲ್ಲಿ ಅಂತರ್ಗತನಾಗಿರುವುದರಿಂದಲೂ ಶಿವನಿಂದ ಸ್ತುತ್ಯನಾಗಿರುವುದರಿಂದಲೂ ಶಿವಾದಿಗಳಿಂದಲೂ ಅವಧ್ಯರಾದ ದೈತ್ಯರನ್ನು ಸಂಹರಿಸುವುದರಿಂದಲೂ ರುದ್ರನ ದೆಶೆಯಿಂದ ಅತ್ಯಂತ ಭೇದವೂ ರುದ್ರನ ದೆಶೆಯಿಂದ ಉತ್ತಮತ್ವವೂ, ಸರ್ವೋತ್ತಮತ್ವವೂ

ಸಿದ್ಧವಾಯಿತು. (2) 'ಯಂ ಕಾಮಯೇ' ಎನ್ನುವುದು ಲಕ್ಷ್ಮೀದೇವಿಯ ವಚನವು. ಇದರಿಂದ ವಿಷ್ಣುವಿನ ಪ್ರಿಯಳಾದ ಲಕ್ಷ್ಮೀದೇವಿಯ ಅಧೀನದಲ್ಲಿರುವ ಬ್ರಹ್ಮರುದ್ರಾದಿಗಳಿಗೆ ವಿಷ್ಣುವಿನ ಅಧೀನತ್ವವು ಸುತರಾಂ ಸಿದ್ಧವಾಯಿತು. ॥೬೨॥

ಮೂ ॥ ಏಕೋ ನಾರಾಯಣ ಆಸೀನ್ನ ಬ್ರಹ್ಮಾ ನ ಚ ಶಂಕರಃ ॥
ವಾಸುದೇವೋ ವಾ ಇದಮಗ್ರ ಆಸೀನ್ನ ಬ್ರಹ್ಮಾ ನ ಚ ಶಂಕರಃ ॥೬೩॥

ಅ ॥ ನಾರಾಯಣನೊಬ್ಬನೇ ಇರುತ್ತಿದ್ದನು. ಚತುಮುಖ ಬ್ರಹ್ಮನೂ ಇರಲಿಲ್ಲ. ರುದ್ರನೂ ಇರಲಿಲ್ಲ, ವಾಸುದೇವನೇ ರಮಾಬ್ರಹ್ಮಾದಿ ಜಗತ್ತಿಗಿಂತ ಆದಿಯಲ್ಲಿ (ಪ್ರಲಯ ಕಾಲದಲ್ಲಿ) ಇರುತ್ತಿದ್ದನು. ಅಥವಾ ರಮಾಬ್ರಹ್ಮಾದಿ ಜಗತ್ತನ್ನು ಅಪೇಕ್ಷಿಸಿ ಅಗ್ರ್ಯನು (ಗುಣಶ್ರೇಷ್ಠನು) ಆಗಿರುವನು. ಬ್ರಹ್ಮನೂ ಇರಲಿಲ್ಲ, ರುದ್ರನೂ ಇರಲಿಲ್ಲ.

ವಿಶೇಷಾಂಶ— ಇದಂ ಸರ್ವಮುಪೇಕ್ಷ್ಯಾಸೌ ಕಾಲತೋ ಗುಣತಸ್ತಥಾ । ಅಗ್ರ್ಯ ಏವ ಸಮಸ್ತೇಶಃ ಈ ಎಲ್ಲಾ ಜಗತ್ತನ್ನು ಅಪೇಕ್ಷಿಸಿ ಕಾಲದಿಂದಲೂ ಗುಣದಿಂದಲೂ ಶ್ರೇಷ್ಠನೇ ಆಗಿರುವನು. ಎಂದು ಸ್ಮೃತಿಯು ॥೬೩॥

ಮೂ ॥ ಯದಾ ಪಶ್ಯಃ ಪಶ್ಯತೇ ರುಕ್ಮವರ್ಣಂ
ಕರ್ತಾರಮೀಶಂ ಪುರುಷಂ ಬ್ರಹ್ಮಯೋನಿಂ ॥
ತದಾ ವಿದ್ವಾನ್ಪುಣ್ಯಪಾಪೇ ವಿಧೂಯ
ನಿರಂಜನಃ ಪರಮಂ ಸಾಮ್ಯಮುಪೈತಿ ॥೬೪॥

ಅ ॥ ಸುವರ್ಣದಂತೆ ವರ್ಣವುಳ್ಳವನು, ಸರ್ವಜಗತ್ಕರ್ತನು, (ಸರ್ವರಿಗೂ) ಸ್ವಾಮಿಯಾದವನು, ಪೂರ್ಣಷಡ್ಗುಣಗಳುಳ್ಳವನು, ಚತುರ್ಮುಖಬ್ರಹ್ಮನಿಗೆ ಕಾರಣನಾದವನು, ಇಂತಹ *(ಪರಮಂ=) ಸರ್ವೋತ್ತಮನಾದ ಶ್ರೀನಾರಾಯಣನನ್ನು, ಯಾವಾಗ †(ಪಶ್ಯಃ–) ಜೀವನು ನೋಡುತ್ತಾನೋ, (ಅಂದರೆ ಅಪರೋಕ್ಷೀಕರಿಸಿ ತಿಳಿಯುತ್ತಾನೋ,) ಆಗ ಅಪರೋಕ್ಷ ಜ್ಞಾನಿಯು, (ಮೋಕ್ಷಕ್ಕೆ ಪ್ರತಿಬಂಧಕವಾದ ಅಪ್ರಾರಬ್ಧವಾದ) ಪುಣ್ಯವನ್ನೂ, ಪಾಪವನ್ನೂ ಬಿಟ್ಟು ಅಂಜನಪದವಾಚ್ಯವಾದ ಅವಿದ್ಯೆಯಿಂದ ವಿರಹಿತನಾದವನಾಗಿ, (ಪರಮಂ– ನಿರ್ದುಃಖಿತ್ವ, ನಿರಂಜನತ್ವ, ನಿತ್ಯಾನಂದತ್ವ, ನಿಸ್ಸಂಸಾರಿತ್ವ ಮೊದಲಾದುಗಳಿಂದ) ಉತ್ಕೃಷ್ಟವಾದ ಸಾಮ್ಯವನ್ನು ಹೊಂದುತ್ತಾನೆ.

ವಿಶೇಷಾಂಶ — ಚೇತನತ್ವಾದಿಗಳಿಂದ ಯತ್ಕಿಂಚಿತ್ ಸಾಮ್ಯವು ಸಂಸಾರಿಗಳಲ್ಲಿಯೂ, ತಪೋಯೋಗ್ಯರಲ್ಲಿಯೂ ಇದೆ. ಆದುದರಿಂದ 'ಪರಮಂ' ಎಂದು ಹೇಳಿರುವರು. ತನ್ನ ದೆಶೆಯಿಂದ ಉತ್ತಮೋತ್ತಮನಾದ ಶ್ರೀ ನಾರಾಯಣನಂತೆ ತನ್ನಲ್ಲಿ ಸರ್ವೋತ್ತಮತ್ವವು ಕೂಡದಿರುವುದರಿಂದ ಸರ್ವ ಸಾಮ್ಯವಿಲ್ಲ. (2) ಇದರಿಂದ ೧ ಶ್ರೀ ವಿಷ್ಣುವು ಉಕ್ತ ವಿಶೇಷಣಾದಿಗಳಿಂದ ವಿಶಿಷ್ಟನೆಂದೇ ಅಪರೋಕ್ಷ ಜ್ಞಾನವು. ೨ ಶ್ರೀ ವಿಷ್ಣುವು ಕರ್ತೃತ್ವಾದಿ ಗುಣಗಳಿಂದ ಪರಿಪೂರ್ಣನು ನಿರ್ಗುಣನಲ್ಲ. ೩ ಸರ್ವೋತ್ತಮನು. ೪ ಮುಕ್ತಿಯಲ್ಲಿಯೂ ಜೀವನಿಗೆ ಸಾಮ್ಯವೇ, ಅಭೇದವಲ್ಲ ಎಂದು ಪ್ರಮೇಯ ಚತುಷ್ಟಯವು ಸಿದ್ಧವಾಯಿತು ॥೬೪॥

---

*ಪರಾ–ಬ್ರಹ್ಮಾದಿಗಳಿಂದಲೂ ಉತ್ತಮಳಾದ, ಮಾ-ಲಕ್ಷ್ಮೀದೇವಿಯು ಹೆಂಡತಿಯು, ಯಸ್ಯ – ಯಾರಿಗೋ, ಆ ಶ್ರೀ ಹರಿಯು ಪರಮನು.

†ಪಶ್ಯತೀತಿ ಪಶ್ಯಃ- ಜೀವನು.

ಮೂ ॥ ಯೋ ವೇದ ನಿಹಿತಂ ಗುಹಾಯಾಂ ಪರಮೇ ವ್ಯೋಮನ್ ॥
ಸೋಽಶ್ನುತೇ ಸರ್ವಾನ್ಕಾಮಾನ್ಸಹ ಬ್ರಹ್ಮಣಾ ವಿಪಶ್ಚಿತಾ ॥೬೫॥

ಅ ॥ ಯಾವಾತನು ಹೃದಯ ಗುಹೆಯಲ್ಲಿ ಹೃತ್ಪದ್ಮಾಕಾಶದಲ್ಲಿ, ಇರತಕ್ಕ ಶ್ರೀ ನಾರಾಯಣನನ್ನು ಅಪರೋಕ್ಷವಾಗಿ ತಿಳಿದುಕೊಳ್ಳುತ್ತಾನೋ ಆತನು ಮುಕ್ತ್ಯನಂತರದಲ್ಲಿ ಸರ್ವಜ್ಞನಾದ ಪರಬ್ರಹ್ಮನಿಂದ ಕೂಡಿಕೊಂಡು ಸ್ವಯೋಗ್ಯಗಳಾದ ಸರ್ವವಿಷಯಗಳನ್ನು ಅನುಭವಿಸುತ್ತಾನೆ.

ವಿಶೇಷಾಂಶ— (1) **'ಬ್ರಹ್ಮವಿದಾಪ್ನೋತಿ ಪರಂ । ಸತ್ಯಂ ಜ್ಞಾನಮನಂತಂ ಬ್ರಹ್ಮ'** ಎಂದು ಪರಬ್ರಹ್ಮನೇ ಪ್ರಸ್ತುತನಾಗಿರುವನು. (2) ಸಾಯುಜ್ಯ ಪದವಿಯಲ್ಲಿ ಯಾವುದು ಭೋಗವೋ ಅದು ಮನುಷ್ಯನ ಶರೀರವನ್ನು ಪ್ರವೇಶಿಸಿದ ಪಿಶಾಚಿಯಂತೆ ಶ್ರೀ ಹರಿಯ ಶರೀರವನ್ನು ಪ್ರವೇಶಿಸಿ ಶ್ರೀ ಹರಿಯ ಚರಣದಿಂದಲೇ ಹೋಗುವುದರಿಂದಲೂ, ಆತನ ಕಣ್ಣಿನಿಂದಲೇ ನೋಡುವುದರಿಂದಲೂ, ಆತನ ಮೂಗಿನಿಂದಲೇ ಪರಿಮಳ ತೆಗೆದುಕೊಳ್ಳುವುದರಿಂದಲೂ, ಆತನ ನಾಲಿಗೆಯಿಂದಲೇ ರುಚಿ ತೆಗೆದುಕೊಳ್ಳುವುದರಿಂದಲೂ ಸಹಭೋಗವೆನ್ನಿಸಿಕೊಳ್ಳುತ್ತದೆ. ಅದರಲ್ಲಿಯೂ ಲಕ್ಷ್ಮ್ಯಾದಿಭೋಗವೂ, ನಿರವಧಿಕವಾದ ಶ್ರೀ ಹರಿಯ ಉತ್ಕೃಷ್ಟವಾದ ಆನಂದ ಭೋಗವೂ ಮುಕ್ತರಲ್ಲಿಯೂ ಇಲ್ಲವೇ ಇಲ್ಲ. ಆದುದರಿಂದ ತಮತಮಗೆ ಯೋಗ್ಯಳಾದ ಮುಕ್ತಿಯಲ್ಲಿರುವ ವಿಷಯಗಳನ್ನೇ ಇಟ್ಟುಕೊಳ್ಳಬೇಕು. ಆದುದರಿಂದಲೇ 'ಕಾಮ್ಯಂತೇ ಇತಿ ಕಾಮಾಃ ಎನ್ನುವ ವ್ಯುತ್ಪತ್ತಿಯಿಂದ ಕಾಮಕ್ಕೆ ಯೋಗ್ಯಗಳಾದ ವಿಷಯಗಳನ್ನು ಬೋಧಿಸಿಕೊಡತಕ್ಕ ಕಾಮಾನ್ ಎನ್ನುವ ಪದವನ್ನೇ ಹೇಳಿರುವರು. (3) ಇಲ್ಲಿ 'ಬ್ರಹ್ಮಣಾ ಸಹ' ಎಂದು ಹೇಳಿರುವುದರಿಂದ ಮುಕ್ತಿಯಲ್ಲಿಯೂ ಅಭೇದವಲ್ಲವೆಂದು ಸಿದ್ಧವಾಯಿತು. **(4)'ವಿದ್ಯುದ್ವನ್ಮಾನುಷಾ ವಿದ್ಯುಃ ಸೂರ್ಯಮಂಡಲವತ್ಸುರಾಃ । ಪ್ರತಿಬಿಂಬವಚ್ಚ ಗಿರಿಶೋಬ್ರಹ್ಮೈನಂ ಪಶ್ಯತಿ ಸ್ಫುಟಂ'** ಇತ್ಯಾದಿಪ್ರಕಾರ ಅಪರೋಕ್ಷ ಜ್ಞಾನದಲ್ಲಿ ಹರಿವಂಶದಲ್ಲಿ ಹೇಳಿದಪ್ರಕಾರ ವಿಶೇಷವನ್ನು ಇಟ್ಟುಕೊಳ್ಳುವರು ॥೬೫॥

ಈಗ ಯಾರು ಶ್ರೀ ಹರಿಯ ಸ್ವರೂಪವನ್ನು ಮಾತ್ರ ಅಂಗೀಕರಿಸಿ ಸೃಷ್ಟಿ ಕರ್ತೃತ್ವ, ಪಾಲಕತ್ವ ಮೊದಲಾದ ಭಗವತ್ಕರ್ಮಗಳಿಗೂ, ಕರಚರಣಾದ್ಯಾಕಾರಕ್ಕೂ, ಚಕ್ಷುರಾದಿ ಕರಣಗಳಿಗೂ, ಸರ್ವಜ್ಞತ್ವ ಮೊದಲಾದ ಗುಣಗಳಿಗೂ ಪ್ರಮಾಣ ಪ್ರಮೇಯಾದಿ ಜಗತ್ತುಗಳಿಗೂ ಮಿಥ್ಯಾತ್ವವನ್ನು ಹೇಳುತ್ತಾರೋ, ಇತರರನ್ನು ವಂಚಿಸುವುದಕ್ಕಾಗಿ ಕಥಂಚಿತ್ ಸತ್ಯತ್ವವನ್ನು ಹೇಳುವವರಾದಾಗ್ಯೂ ಸ್ವಕಪೋಲಮಾತ್ರ ಕಲ್ಪಿತವಾದ ವ್ಯಾವಹಾರಿಕ ಸತ್ಯತ್ವವನ್ನೇ ಹೇಳುತ್ತಾರೋ, ಬ್ರಹ್ಮನಂತೆ ಪಾರಮಾರ್ಥಿಕ ಸತ್ಯತ್ವವನ್ನು ಅಂಗೀಕರಿಸುವುದಿಲ್ಲ. ಅಂತಹ ಮಾಯಾವಾದಿಗಳ ಮತವನ್ನು ತಿರಸ್ಕರಿಸುವುದಕ್ಕಾಗಿ ತ್ರೈಕಾಲಿಕ ನಿಷೇಧಾಭಾವರೂಪವಾದ ಪಾರಮಾರ್ಥಿಕ ಸತ್ಯತ್ವವನ್ನು ಸಾಧಿಸತಕ್ಕ ಶ್ರುತಿಗಳನ್ನು ಪಠನಮಾಡುತ್ತಾರೆ—

ಮೂ ॥ ಪ್ರಘಾನ್ವಸ್ಯ ಮಹತೋ ಮಹಾನಿ
ಸತ್ಯಾ ಸತ್ಯಸ್ಯ ಕರಣಾನಿ ವೋಚಂ ॥
ಸತ್ಯಮೇನನುನು ವಿಶ್ವೇ ಮದಂತಿ
ರಾತಿಂ ದೇವಸ್ಯ ಗೃಣತೋ ಮಘೋನಃ ॥೬೬॥

ಅ ॥ ಪಾರಮಾರ್ಥಿಕ ಸತ್ಯನೂ, ಸರ್ವೋತ್ತಮನೂ ಆದ ಶ್ರೀ ಹರಿಯು ಮಹತ್ತಾದ ಜಗತ್ಸೃಷ್ಟಿತ್ವ, ಪಾಲಕತ್ವ ಮೊದಲಾದ ಕರ್ಮಗಳನ್ನು, ಸತ್ಯಾ ಘಾ- ಯಥಾರ್ಥಾಗಳ ನ್ನಾಗಿಯೇ, (ಪ್ರವೋಚಂ ನು-) ನಿಶ್ಚಯವಾಗಿಯೇ ಹೇಳಿರುವೆನು. ಸ್ತೋತ್ರಮಾಡತಕ್ಕ ಪೂಜ್ಯನಾದ ಇಂದ್ರನ, (ರಾತಿಂ-) ಬಲಿ (ಪೂಜೆ) ಯನ್ನು (ಸ್ವೀಕರಿಸಿ) ಎಲ್ಲಾ ದೇವತೆಗಳು, ತ್ರೈಲೋಕ್ಯವನ್ನು ಕೊಡತಕ್ಕ ಶ್ರೀ ಹರಿಯನ್ನು ಅನುಸರಿಸಿ (ಶ್ರೀ ಹರಿಯ ತ್ರೈಲೋಕ್ಯದಾನವು) ಪಾರಮಾರ್ಥಿಕ ಸತ್ಯವೆಂದು ಸಂತೋಷಪಡುತ್ತಾರೆ. (ಅಂದರೆ ತ್ರೈಲೋಕ್ಯವನ್ನು ಕೊಡತಕ್ಕ ಶ್ರೀ ಹರಿಯು ಸತ್ಯನು, ದಾನವೂ ಸತ್ಯವು. ದೇಯವಾದ ತ್ರೈಲೋಕ್ಯವೂ ಸತ್ಯವೇ. ಇಲ್ಲವಾದರೆ ವಂಚಕನಾಗಿ ಕೊಡತಕ್ಕ ಪುರುಷನಂತೆ ಕೊಡತಕ್ಕವನೇ ಅಪಹಾಸ್ಯಾಸ್ಪದನಾಗುವನು, ಆದುದರಿಂದ ಶ್ರೀ ಹರಿಯು ಕೊಟ್ಟ ಎಲ್ಲಾ ನಮ್ಮ ಭೋಗಾರ್ಹವಾದ ಜಗತ್ತು ಯುಕ್ತಿಬಲದಿಂದಲೇ ಪಾರಮಾರ್ಥಿಕ ಸತ್ಯವೆಂದು ಸಿದ್ಧವಾಗುತ್ತದೆ.)

ವಿಶೇಷಾಂಶ— (1) 'ಕರಣಾನಿ' ಎನ್ನುವಲ್ಲಿ ಭಾವಾರ್ಥದಲ್ಲಿ ಲ್ಯುಟ್ ಪ್ರತ್ಯಯವು. ಭಾವವೆಂದರೆ— ಕರ್ಮಕರಣಾದಿ ವ್ಯುತ್ಪತ್ತಿಯನ್ನು ಹೊರತು ಕೇವಲ ಧಾತುವಿನ ಸ್ವಭಾವ ಭೂತವೇ ಆದುದು. ಏವಂಚ ಪರಾಪೇಕ್ಷೆಯಿಲ್ಲದೆ ಸ್ವಾಭಾವಿಕವಾಗಿಯೇ ಯಾವಾಗಲೂ ಇರುತ್ತದೆ ಎನ್ನುವ ಅರ್ಥವು ಸಿಗುವುದರಿಂದ ಶ್ರೀಹರಿಯು ಕರ್ಮಗಳೂ ಸ್ವಾಭಾವಿಕವಾಗಿಯೇ ಯಾವಾಗಲೂ ಇರುತ್ತವೆ. ಯಾವಾಗಲಾದರೂ ಕರ್ಮಗಳು ಇಲ್ಲವೆಂದು ಅಲ್ಲ ಆದುದರಿಂದ ತ್ರೈಕಾಲಿಕಾಭಾವಾಪ್ರತಿಯೋಗಿತ್ವರೂಪವಾದ ಪಾರಮಾರ್ಥಿಕತ್ವವೇ ಸಿದ್ಧವಾಯಿತು. ಪರರು ಹೇಳುವ ಮಿಥ್ಯಾತ್ವವೂ ವ್ಯಾವಹಾರಿಕ ಸತ್ಯತ್ವವೂ ಸರ್ವಥಾ ಅಯುಕ್ತವೇ. ಅತ ಏವ **ಸ್ವಾಭಾವಿಕೀ ಜ್ಞಾನಬಲಕ್ರಿಯಾ ಚ'** ಎಂದು ಶ್ರುತಿಯು. (2) ಅಥವಾ ಕರಣಾನಿ- ಸೃಷ್ಟ್ಯುಪಯುಕ್ತಗಳಾದ ಕಣ್ಣು-ಹಸ್ತ ಮೊದಲಾದ ದಶೇಂದ್ರಿಯಗಳನ್ನು ಮಹಿದೀ—ಮಹೀಧರ ಮೊದಲಾದ ಮಹಾಕಾರ್ಯಗಳನ್ನು ಎಂದು ಅರ್ಥವು. ಕೈ-ಕಾಲು ಕಣ್ಣು ಇತ್ಯಾದಿಗಳು ಇಲ್ಲದವರಿಗೆ ಕಾರ್ಯಗಳನ್ನು ಮಾಡಲು ಸಾಧ್ಯವಿಲ್ಲದಿರುವುದರಿಂದ ಭಗವತ್ಕರ್ಮೋಪಯುಕ್ತ ಗಳಾದ ಕರಣಗಳು ಯಾವಾಗಲೂ ಇರತಕ್ಕವುಗಳಾದುದರಿಂದ ಅವುಗಳಿಗೆ ಪಾರಮಾರ್ಥಿಕತ್ವವೇ ಸಿದ್ಧವಾಗುತ್ತದೆ. (3) ಮತ್ತು **'ಬ್ರಾಹ್ಮಣೋಽಸ್ಯ ಮುಖಮಾಸೀತ್ । ಬಾಹೂ ರಾಜನ್ಯಃ ಕೃತಃ । ಊರೂ ತದಸ್ಯ ಯದ್ವೈಶ್ಯಃ । ಪದ್ಭ್ಯಾಂ ಶೂದ್ರೋಅಜಾಯತ । ಚಂದ್ರಮಾ ಮನಸೋಜಾತಃ । ಚಕ್ಷೋಃ ಸೂರ್ಯೋ ಅಜಾಯತ । ಮುಖಾದಿಂದ್ರ- ಶ್ಚಾಗ್ನಿಶ್ಚ । ಪ್ರಾಣಾದ್ವಾಯುರಜಾಯತ । ನಾಭ್ಯಾ ಆಸೀದಂತರಿಕ್ಷಂ । ಶೀರ್ಷ್ಣೋ ದ್ಯೌಃ ಸಮವರ್ತತ । ಪದ್ಭ್ಯಾಂ ಭೂಮಿರ್ದಿಶಃ ಶ್ರೋತ್ರಾತ್ । ತಥಾ ಲೋಕಾನ್ ಅಕಲ್ಪಯನ್'** । ಇದು ಮೊದಲಾದ ಶ್ರುತಿಗಳಲ್ಲಿ ಹೇಳಿದಪ್ರಕಾರ ಸದಾತನವಾದ ಬ್ರಾಹ್ಮಣಾದಿ ಸೃಷ್ಟ್ಯುತ್ವವು ಸಾರ್ವಕಾಲಿಕವಾದ ಮುಖಾದ್ಯವಯವಗಳೂ, ಚಕ್ಷುರಾದಿಕರಣಗಳೂ ಇಲ್ಲವಾದರೆ ಹೇಗೆ ಕೂಡುವುದು? ಇದರಿಂದಲೂ ಬ್ರಾಹ್ಮಣಾದಿಗಳಿಗೆ ಅಸಾಧಾರಣಕಾರಣವಾಗಿ ಕರಣ ಗಳೆನ್ನಿಸಿಕೊಳ್ಳುವ ಶ್ರೀ ಹರಿಯ ಮುಖಾದ್ಯಂಗಗಳೂ, ಸೂರ್ಯಾದಿಗಳಿಗೆ ಅಸಾಧಾರಣ ಕಾರಣಗಳಾದ ಚಕ್ಷುರಾದಿ ಕರಣಗಳೂ ಪಾರಮಾರ್ಥಿಕ ಸತ್ಯಗಳೆಂದು ಸಿದ್ಧಗಳಾದವು (4) ಅಥವಾ ಜೀವರಲ್ಲಿ ಅಸಂಭಾವಿತವಾದ ಪೃಥಿವೀ—ಜಲ-ತೇಜಸ್ಸು-ವಾಯು ಮೊದಲಾದ ಮಹತ್ತರ ವಾದ ವಿಜಾತೀಯ ವಸ್ತುಗಳನ್ನು ಸೃಷ್ಟಿಸುವಿಕೆ ಇತ್ಯಾದಿಗಳಲ್ಲಿ ಅಸಾಧಾರಣಕಾರಣವಾಗಿ ಉಪ ಯುಕ್ತಗಳಾಗಿರುವುದರಿಂದ, ಕರಣಾನಿ-ಸರ್ವಜ್ಞತ್ವ, ಸರ್ವೇಶ್ವರತ್ವ, ಸರ್ವಶಕ್ತತ್ವ ಮೊದಲಾವ ಭಗವಲ್ಲಕ್ಷಣಗಳೂ ಸರ್ವದಾ ಸೃಷ್ಟ್ಯುಪಯುಕ್ತವಾಗಿರುವುದರಿಂದ ಕಾಲತ್ರಯದಲ್ಲಿಯೂ

ಅಬಾಧ್ಯಗಳೆಂದು ಸಿದ್ಧವಾಯಿತು. (5) ಮತ್ತು **' ಅನಾದ್ಯನಂತಂ ಜಗದೇತದೀದೃಕ್ ಪ್ರವರ್ತತೇ ನಾತ್ರ ವಿಚಾರ್ಯಮಸ್ತಿ '**। ಎನ್ನುವ ಶ್ರುತಿಯದ್ದೆಶೆಯಿಂದ ಅನಾದ್ಯನಂತ ಕಾಲದಲ್ಲಿರತಕ್ಕ ಭೂ-ಭೂಧರ-ಸಮುದ್ರ ಮೊದಲಾದ ಕಾರ್ಯಗಳ ಸೃಷ್ಟಿಯಲ್ಲಿ ಅಂತರಂಗ ಕಾರಣಗಳಾಗಿರುವುದರಿಂದ, ಕರಣಾನಿ ಕರಣಗಳಾದ ಮಣ್ಣು ಮೊದಲಾದ ಉಪಾದಾನ ಕಾರಣಗಳಿಲ್ಲದೆ ಅವುಗಳ ಸೃಷ್ಟಿಯು ಶ್ರೀ ಹರಿಗೆ ಹೇಗೆ ಆಗುವುದು? ಆದಕಾರಣ ಅವುಗಳೂ ಪಾರಮಾರ್ಥಿಕ ಸತ್ಯಗಳೆಂದು ಸಿದ್ಧವಾಯಿತು. ॥೬೬॥

ಮೂ ॥ ಯಚ್ಚಿಕೇತ ಸತ್ಯಮಿತ್ತನ್ನ ಮೋಘಂ
ವಸು ಸ್ಪಾರ್ಹಮುತ ಜೇತೋತ ದಾತಾ ॥
ಸತ್ಯಃ ಸೋ ಅಸ್ಯ ಮಹಿಮಾ ಗೃಣೇ ಶವೋ
ಯಜ್ಞೇಷು ವಿಪ್ರರಾಜ್ಯೇ ॥೬೭॥

ಅ ॥ ಸ್ಪೃಹಣೀಯವಾದ, (ವಸು ತ್ರೈಲೋಕ್ಯಾದಿ ವಸ್ತುವನ್ನು, ಬಲಿಚಕ್ರವರ್ತಿಯಿಂದ ಗೆದ್ದು ತಂದವನು, ಮತ್ತು (ದಾತಾ ಉತ=) ಇಂದ್ರನಿಗೋಸ್ಕರ ಕೊಟ್ಟವನು, ಇಂತಹ ಶ್ರೀ ಪರಮಾತ್ಮನು ಯಾವ ಜಗತ್ತನ್ನು ಸೃಷ್ಟಿಮಾಡಿರುವನೋ, ಆ ಜಗತ್ತು ಸತ್ಯವೇ. ಮಿಥ್ಯಾ ಭೂತವಾದುದು ಅಲ್ಲ. ಬ್ರಾಹ್ಮಣರೆ ಪ್ರಧಾನರಾಗಿವುಳ್ಳಯಜ್ಞಗಳಲ್ಲಿ (ಶವಃ =) ಸುಖವನ್ನುದ್ದೇಶಿಸಿ (ಶ್ರೀ ಹರಿಯ ಯಾವ ಮಹಿಮೆಯನ್ನು **' ಇದಂ ವಿಷ್ಣುರ್ವಿಚಕ್ರಮೇ '** ಇತ್ಯಾದಿಗಳಿಂದ) ಸ್ತೋತ್ರಮಾಡುತ್ತೇನೋ, (ಆಸ್ಯ=) ಈ ದಾವ, ಯಜ್ಞಗಳನ್ನು ಭೋಗಿಸುವ, ಯಜ್ಞಗಳ ಫಲವನ್ನು ಕೊಡತಕ್ಕ, ಯಜ್ಞೇಶ್ವರನಾದ, ಮತ್ತು ಯಜ್ಞರಕ್ಷಕನೂ ಆದ ಶ್ರೀ ವಿಷ್ಣುವಿನ ಆ ಮಹಿಮೆಯು ಸತ್ಯವೇ.

ವಿಶೇಷಾಂಶ— (1) ಲೋಕದಲ್ಲಿ ಕೃಷೀವನು ತಾನು ಮಾಡಿದ ಕೃಷಿಯು ನಿಷ್ಪ್ರಯೋಜನವಾದರೆ ಹೇಗೆ ದೀನನಾಗುವನೋ ಹಾಗೆಯೇ ಶ್ರೀ ಹರಿಯು ತಾನು ಸೃಷ್ಟಿಸಿರುವ ಜಗತ್ತೂ ಅಸತ್ಯವಾದರೆ ಸೃಷ್ಟಿಸಿರುವ ಶ್ರೀಹರಿಯೇ ಅಕುಶಲನಾಗಬೇಕಾಗುವನು. ಆದಾನಕ್ಕೂ ದಾನಕ್ಕೂ ಅನುಪಯುಕ್ತವೂ ಆಗುವುದು. ಜಗದ್ರಕ್ಷಣಾರ್ಥವಾಗಿ ತನ್ನ ಅವತಾರವೂ ವ್ಯರ್ಥವಾಗುವುದು, ಎನ್ನುವುದನ್ನು ಸೂಚಿಸುವುದಕ್ಕಾಗಿ 'ಸತ್ಯಮಿತ್' ಎಂದುಕ್ತವಾಗಿದೆ. (2) **' ಯಜ್ಞಭುಗ್ಯಜ್ಞಫಲದೋ ಯಜ್ಞೇಶೋ ಯಜ್ಞಭಾವನಃ । ಯಜ್ಞತ್ರಾತಾ ಯಜ್ಞಪುಮಾನ್ ವನಮಾಲೀ ದ್ವಿಜಪ್ರಿಯಃ '** ಎಂದು ವಾಸುದೇವ ಸಹಸ್ರನಾಮದಲ್ಲಿ ಹೇಳಿರುವ ಪ್ರಯುಕ್ತ ಯಜ್ಞಭೋಕ್ತನು ಇತ್ಯಾದ್ಯರ್ಥವು ಯುಕ್ತವಾಗುವುದು ॥೬೭॥

ಶ್ರೀ ಹರಿಯ ಗುಣಗಳಿಗೆ ಸತ್ಯತ್ವವನ್ನು ದೃಢೀಕರಿಸುತ್ತಾ, ಜೀವೇಶ್ವರರ ಭೇದಕ್ಕೆ ಸತ್ಯತ್ವವನ್ನು ಸಾಧಿಸುತ್ತಾ ಜಗತ್ತು ಮಿಥ್ಯೆಯೊದರೆ ಜಗತ್ಕರ್ತೃತ್ವಾದಿಗಳೂ ಮಿಥ್ಯೆಯಾಗಬೇಕಾಗುವುವು. ಆದಪ್ರಯುಕ್ತ ಜಗತ್ತಿಗೆ ಸತ್ಯತ್ವವನ್ನೂ ಸಮರ್ಥಿಸುತ್ತಾರೆ—

ಮೂ ॥ ಸತ್ಯಾ ವಿಷ್ಣೋರ್ಗುಣಾಃ ಸರ್ವೇ ಸತ್ಯಾ ಜೀವೇಶಯೋರ್ಭಿದಾ ॥
ಸತ್ಯೋ ಮಿಥೋ ಜೀವಭೇದಃ ಸತ್ಯಂ ಚ ಜಗದೀದೃಶಂ ॥೬೮॥

ಅ ॥ ಶ್ರೀ ಹರಿಯ ಎಲ್ಲಾ (ಆನಂದಾದಿ) ಗುಣಗಳೂ ಯಥಾರ್ಥಗಳೇ ಜೀವೇಶ್ವರ ಭೇದವೂ ಯಥಾರ್ಥವೇ, ಪರಸ್ಪರ ಜೀವರ ಭೇದವೂ ಸತ್ಯವೇ. ಅರ್ಥಕ್ರಿಯೆಗಳಲ್ಲಿ ಉಪಯುಕ್ತವಾದ ಜಗತ್ತೂ ಸತ್ಯವೇ ॥೬೮॥

ಜೀವರಲ್ಲಿ ಪರಸ್ಪರ ಭೇದವಿದ್ದಂತೆಯೇ ತನ್ನ ಅವತಾರಗಳಲ್ಲಿ ಪರಸ್ಪರ ಭೇದವು ಇಲ್ಲ ವೆನ್ನುತ್ತಾರೆ—

ಮೂ ॥ ಅಸತ್ಯಃ ಸ್ವಗತೋ ಭೇದೋ ವಿಷ್ಣೋರ್ನಾನ್ಯದಸತ್ಯಕಂ ॥
ಜಗತ್ಪ್ರವಾಹಃ ಸತ್ಯೋಽಯಂ ಪಂಚಭೇದಸಮನ್ವಿತಃ ॥೬೯॥

ಅ ॥ ಶ್ರೀ ವಿಷ್ಣುವಿಗೆ ತನ್ನ ಅವತಾರಗಳಲ್ಲಿಯೂ, ತನ್ನ ಅವಯವಗಳಲ್ಲಿಯೂ ಇರುವ ಭೇದವು ಅಸತ್ಯವು. ಬೇರೆಯಾವುದೂ ಅಸತ್ಯವಾದುದು ಇಲ್ಲ, (ಅಂದರೆ ಶ್ರೀ ಹರಿಯ ಅವತಾರ ಅವಯವ ಗುಣಕ್ರಿಯಾದಿಗಳು ಅಸತ್ಯಗಳಾದವುಗಳಲ್ಲ.) (ಈಗ ಇರತಕ್ಕ ಜಗತ್ತಿನಂತೆ ಅನಾದ್ಯನಂತಕಾಲದಲ್ಲಿರತಕ್ಕ ಸಕಲ ಜಗತ್ತುಗಳೂ ಸತ್ಯಗಳೆನ್ನುತ್ತಾರೆ.) ಪಂಚಭೇದಗಳಿಂದ ಯುಕ್ತವಾದ ಈ ಜಗತ್ಪ್ರವಾಹವು ಸತ್ಯವೇ. (ಭೇದಗಳು ಅನಂತಗಳು ಆದಾಗ್ಯೂ ರಾಶಿಯನ್ನು ಅಪೇಕ್ಷಿಸಿ 'ಪಂಚಭೇದಸಮನ್ವಿತಃ' ಎಂದು ಹೇಳಿರುವರು.) ॥೬೯॥

ಪಂಚಭೇದಗಳು ಯಾವುವು ಎಂದರೆ—

ಮೂ ॥ ಜೀವೇಶಯೋರ್ಭಿದಾ ಚೈವ ಜೀವಭೇದಃ ಪರಸ್ಪರಂ ॥
ಜಡೇಶಯೋರ್ಜಡಾನಾಂ ಚ ಜಡಜೀವಭಿದಾ ತಥಾ ॥೭೦॥
ಪಂಚಭೇದಾ ಇಮೇ ನಿತ್ಯಾಃ ಸರ್ವಾವಸ್ಥಾ ಸು ನಿತ್ಯಶಃ ॥
ಮುಕ್ತಾನಾಂ ಚ ನ ಹೀಯಂತೇ ತಾರತಮ್ಯಂ ಚ ಸರ್ವದಾ ॥೭೧॥

ಅ ॥ ೧ ಜೀವರಿಗೂ, ಶ್ರೀ ಪರಮಾತ್ಮನಿಗೂ ಭೇದವು. ೨ ಪರಸ್ಪರವಾಗಿ ಜೀವರಿಗೆ ಭೇದವು. ೩ ಜಡಗಳಿಗೂ, ಈಶ್ವರನಿಗೂ ಭೇದವೇ. ೪ ಜಡಗಳಿಗೂ ಪರಸ್ಪರ ಭೇದವು. ೫ ಹಾಗೆಯೇ ಜಡಗಳಿಗೂ, ಜೀವರಿಗೂ ಭೇದವು. (ಹೀಗೆ) ಎಲ್ಲಾ ಈ ಐದು ಭೇದಗಳೂ ಸಂಸಾರಾವಸ್ಥೆಯಲ್ಲಿಯೂ ಮುಕ್ತ್ಯವಸ್ಥೆಯಲ್ಲಿಯೂ ನಿತ್ಯಗಳು. (ಯಾವಾಗಲಾದರೂ ಒಂದು ಭೇದಕ್ಕೂ ನಾಶವಿಲ್ಲವೇ ಇಲ್ಲ.) (ಬ್ರಹ್ಮನಿಗೆ ಸಾಯುಜ್ಯವನ್ನು ಹೇಳಿದರಿಂದ ಶ್ರೀ ಹರಿಗೆ ಮುಕ್ತಬ್ರಹ್ಮನಿಂದ ಐಕ್ಯವು ಬರಬಹುದು ಎಂದರೆ—) ಎಲ್ಲಾ ಮುಕ್ತರ ಭೇದಗಳೂ ನಾಶವನ್ನು ಹೊಂದುವುದಿಲ್ಲ, ಅಥವಾ ಈ ಪಂಚಭೇದಗಳೂ ಸೃಷ್ಟಿ-ಪ್ರಲಯ-ಪಾಲನಾದ್ಯವಸ್ಥೆಗಳಲ್ಲಿ ಎಲ್ಲವೂ ನಿತ್ಯದಲ್ಲಿರತಕ್ಕವುಗಳು ನಿತ್ಯಗಳು, ಸಂಸಾರದಲ್ಲಿಯೂ, ಮುಕ್ತಿಯಲ್ಲಿಯೂ, ತಾರತಮ್ಯವೂ ಕೂಡ ನಷ್ಟವಾಗುವುದಿಲ್ಲ. ॥ ೭೦ ॥ ೭೧ ॥

ಯಾರನ್ನಾರಂಭಿಸಿ ಎಷ್ಟರವರೆಗೆ ತಾರತಮ್ಯವೆಂದರೆ—

ಮೂ ॥ ಕ್ಷತಿಪಾ ಮನುಷ್ಯಗಂದರ್ವಾ ದೇವಾಶ್ಚ ಪಿತರಶ್ಚಿರಾಃ ॥
ಅಜಾನಜಾಃ ಕರ್ಮಜಾಶ್ಚ ದೇವಾ ಇಂದ್ರಃ ಪುರಂದರಃ ॥೭೨॥
ರುದ್ರಃ ಸರಸ್ವತೀ ವಾಯುರ್ಮುಕ್ತಾಃ ಶತಗುಣೋತ್ತರಾಃ ॥
ಏಕೋ ಬ್ರಹ್ಮಾ ಚ ವಾಯುಶ್ಚ ವೀಂದ್ರೋ ರುದ್ರಸಮಸ್ತಥಾ ॥೭೩॥
ಏಕೋ ರುದ್ರಸ್ತಥಾ ಶೇಷೋ ನ ಕಶ್ಚಿದ್ವಾಯುನಾ ಸಮಃ ॥
ಮುಕ್ತೇಷು ಶ್ರೀಸ್ತಥಾ ವಾಯೋಃ ಸಹಸ್ರಗುಣಿತಾ ಗುಣೈಃ ॥೭೪॥

ತತೋಽನಂತಗುಣೋ ವಿಷ್ಣುರ್ನಕಶ್ಚಿತ್ತತ್ಸಮಃ ಸದಾ ॥
ಇತ್ಯಾದಿ ವೇದವಾಕ್ಯಂ ವಿಷ್ಣೋರುತ್ಕರ್ಷಮೇವ ವಕ್ತ್ಯುಚ್ಚೈಃ ॥೭೫॥

ಅ ॥ (೧ ಮನುಷ್ಯೋತ್ತಮರು,) ೨ ಚಕ್ರವರ್ತಿಗಳು, (ಅವರಲ್ಲಿಯೂ ಸ್ವಲ್ಪ ಸ್ವಲ್ಪ ತಾರತಮ್ಯವಿದ್ದೇ ಇದೆ.) ೩ ಮನುಷ್ಯಗಂಧರ್ವರು (ಅಂದರೆ ದೇವತೆಗಳ ದೂತರು ದೇವತೆಗಳಿಂದ ಪರಮುಖದಿಂದಲೇ ಕಾರ್ಯದಲ್ಲಿ ನಿಯೋಜ್ಯರಾದವರು,) ೪ ದೇವಗಂಧರ್ವರು, (ಸ್ವಮುಖದಿಂದಲೇ ದೇವತೆಗಳಿಂದ ಕಾರ್ಯದಲ್ಲಿ ನಿಯೋಜ್ಯರಾಗತಕ್ಕವರು) ೫ ಪಿತೃಗಣಗಳು, ೬ (ಚಿರಾಃ=) ಪಿತೃಗಣಗಳಲ್ಲಿ ಉತ್ತಮರಾದ ಪಿತೃಗಳು, (ಗಂಧರ್ವರಲ್ಲಿ ಮನುಷ್ಯಗಂಧರ್ವರು ದೇವಗಂಧರ್ವರು ಎಂದು ಎರಡು ಪ್ರಕಾರವಿದ್ದಂತೆಯೇ ಪಿತೃಗಣಗಳಲ್ಲಿಯೂ ಪಿತೃಗಳು ಚಿರ ಪಿತೃಗಳು ಎಂದು ಎರಡು ಪ್ರಕಾರವಿದೆ.) ೭ ಆಜಾನಜಾಃ – ಹುಟ್ಟಿದಲಾಗಾಯಿತು ದೇವತೆಗಳಾಗಿಯೇ ಹುಟ್ಟಿದವರು, (ದೇವತೆಗಳ ಪುತ್ರರಾದಪ್ರಯುಕ್ತವೇ ದೇವತೆಗಳು. ಜಯಂತಾದಿಗಳು.) ೮ ಕರ್ಮದಿಂದ ದೇವತ್ವವನ್ನು ಹೊಂದಿದವರು, (ಪೃಥು, ಬಲಿಚಕ್ರವರ್ತಿ ಮೊದಲಾದ ದೇವತೆಗಳು.) ೯ ದೇವತೆಗಳದೆಶೆಯಿಂದ ಉತ್ಪತ್ತಿಯನ್ನೂ, ಕರ್ಮವನ್ನೂ ಕೂಡ ಹೊರತು ಸ್ವಭಾವದಿಂದಲೇ ದೇವತೆಗಳಾದವರು. (ತಾರತಮ್ಯ ಗಣನೆ ಮಾಡುವಾಗ ಸ್ಪಷ್ಟವಾಗಿ ಹೇಳಲ್ಪಟ್ಟ ದೇವತೆಗಳದೆಶೆಯಿಂದ ಅತಿರಿಕ್ತರಾದ ಶತಸ್ಥ ದೇವತೆಗಳು.) ೧೦ (ಇಂದ್ರಃ=) ದೇವತೆಗಳಿಗೆ ಗುರುವಾದ ಬೃಹಸ್ಪತ್ಯಾಚಾರ್ಯರು, ೧೧ ಪುರಂದರನು (ಶತಕ್ರತುವು) ೧೨ ರುದ್ರನು, ೧೩ ಸರಸ್ವತಿಯು, ೧೪ ವಾಯುವು. ಈ ಪ್ರಕಾರವಾಗಿ ಮುಕ್ತರೂ ಕೂಡ ಕ್ರಮವಾಗಿ ಶತಗುಣಾಧಿಕರು. (ತಾರತಮ್ಯವನ್ನು ಹೇಳುತ್ತಾ ಬರುವಾಗ ಚತುರ್ಮುಖಬ್ರಹ್ಮ-ಶೇಷ-ಗರುಡರನ್ನು ಏಕೆ ಗಣನೆ ಮಾಡಲಿಲ್ಲ ಎಂದರೆ–) ಬ್ರಹ್ಮದೇವರೂ, ವಾಯುದೇವರೂ ಕೂಡ ಒಬ್ಬರೇ. (ಅಂದರೆ ಸಮಾನಿಕರು, ವಾಯುದೇವರೇ ಬ್ರಹ್ಮಪದವಿಯನ್ನು ಹೊಂದುವರು ಸ್ವರೂಪೈಕ್ಯವಲ್ಲ.) ಹಾಗೆಯೇ ಗರುಡನು ರುದ್ರನಿಗೆ ಸಮಾನಿಕನು. (ರುದ್ರ-ಗರುಡರು ಸಮಾನಿಕರಾದುದರಿಂದ ಗರುಡನನ್ನು ಪ್ರತ್ಯೇಕ ಹೇಳಲಿಲ್ಲ.) ಹಾಗೆಯೇ ರುದ್ರನೂ, ಶೇಷನೂ ಕೂಡ ಒಬ್ಬನೇ. (ಸಮಾನಿಕರು ತಥಾಚ ರುದ್ರ-ಶೇಷರು ಸಮಾನಿಕರಾದುದರಿಂದ ಶೇಷನನ್ನು ಪ್ರತ್ಯೇಕ ಹೇಳಲಿಲ್ಲಿ) ಮುಕ್ತರಲ್ಲಿಯೂ ಯಾವನೊಬ್ಬನೂ ವಾಯುವಿನಿಂದ ಸಮಾನನು ಇಲ್ಲವೇ ಇಲ್ಲ.(ಅಂದರೆ ವಾಯುವೇ ಜೀವೋತ್ತಮನು) ಹಾಗೆಯೇ ಲಕ್ಷ್ಮೀದೇವಿಯು ವಾಯು ದೇವರದೆಶೆಯಿಂದ ಗುಣಗಳಿಂದ ಸಹಸ್ರ ಗುಣಗಣನೆಯಿಂದ ಜಾಸ್ತಿಯಿದ್ದವಳು. (ತಥಾಚ ಒಂದೊಂದು ಗುಣವನ್ನು ಗಣನೆ ಮಾಡುವಾಗಲೂ ಸಾವಿರಾರು ಗುಣ ಜಾಸ್ತಿ ಇರತಕ್ಕವಳು. ಸಹಸ್ರಸಂಖ್ಯಾಕ ಗುಣಗಳಿಂದಲೂ ಅಧಿಕಳಲ್ಲ. ಆದುದರಿಂದ ಮಹಾಭೇದವಿದೆ.) ಆ ಮಹಾ ಲಕ್ಷ್ಮೀಯದೆಶೆಯಿಂದ ಶ್ರೀ ಪರಮಾತ್ಮನು ಅನಂತಾನಂತ ಗುಣಗಳುಳ್ಳವನು. ಯಾರೊಬ್ಬನೂ ಯಾವಾಗಲೂ ಆ ವಿಷ್ಣುವಿಗೆ ಸಮಾನಿಕನು ಇಲ್ಲವೇ ಇಲ್ಲ. ಇದು ಮೊದಲಾದ ವೇದವಾಕ್ಯವು (ಉಚ್ಚೈಃ=) ತಾತ್ಪರ್ಯಪೂರ್ವಕವಾಗಿಯೇ ವಿಷ್ಣುವಿಗೆ ಸರ್ವೋತ್ತಮತ್ವವನ್ನೇ ಪ್ರತಿಪಾದಿಸುತ್ತದೆ ॥ ೭೨ ॥ ೭೩ ॥ ೭೪ ॥ ೭೫ ॥

ಈ ಹೇಳಿದ ಅರ್ಥದಲ್ಲಿ ಹಿಂದೆ ಉದಾಹರಿಸಿದ ವಾಕ್ಯಗಳಿಗೆ ತಾತ್ಪರ್ಯವಿಲ್ಲವಾದರೆ ಈ ಅರ್ಥವು ಸಿದ್ಧವಾಗಲಾರದು. ಆದುದರಿಂದ ಆ ಅರ್ಥದಲ್ಲಿ ತಾತ್ಪರ್ಯವಿದೆ ಎನ್ನುವಲ್ಲಿ ಪ್ರಮಾಣವನ್ನು ಸೂಚಿಸುತ್ತಾ ಹೇಳುತ್ತಾರೆ.—

ಮೂ ॥ **ತಾತ್ಪರ್ಯಂ ಮಹದತ್ರೇತ್ಯುಕ್ತಂ**
ಯೋ ಮಾಮಿತಿ ಸ್ವಯಂ ತೇನ ॥
ಭೂಮ್ನೋ ಜ್ಯಾಯಸ್ತ್ವಮಿತ್ಯು(ತಿಹ್ಯು)ಕ್ತಂ
ಸೂತ್ರೇಷು ನಿರ್ಣಯೋತ್ತೇನ ॥ ೭೬ ॥

ಅ ॥ ಆ ವಿಷ್ಣುವಿನಿಂದ ಸ್ವಕೀಯವಾದ ಕೃಷ್ಣರೂಪದಿಂದಲೇ ವಿಷ್ಣುವಿನ ಗುಣೋತ್ಕರ್ಷದಲ್ಲಿಯೇ (ಎಲ್ಲಾ ವೇದಶಾಸ್ತ್ರಗಳಿಗೆ) ಮಹಾ ತಾತ್ಪರ್ಯವಿದೆ ಎಂದು **'ಯೋ ಮಾಮೇವ ಮಸಂಮೂಢಃ'** ಎನ್ನುವ ಗೀತಾವಾಕ್ಯದಿಂದ ಹೇಳಲ್ಪಟ್ಟಿದೆ. (ಶ್ರೀ ಪರಮಾತ್ಮನಲ್ಲಿರುವ ಪೂರ್ಣತ್ವಾಖ್ಯಗುಣಕ್ಕೆ ಶ್ರೈಷ್ಠ್ಯವನ್ನು ಹೇಳುವಾಗ ಗುಣಗುಣಿಗಳಿಗೆ ಭೇದವಿಲ್ಲದಿರುವುದರಿಂದ ಶ್ರೀ ಹರಿಗೇನೇ ಉತ್ತಮತ್ವವನ್ನು ಹೇಳಿದಂತೆ ಆಯಿತು ಎನ್ನುತ್ತಾರೆ) ಆ ವೇದವ್ಯಾಸರಿಂದ ನಿರ್ಣಯಮಾಡಿ, ೧ **'ಜನ್ಮಾದ್ಯಸ್ಯ ಯತಃ, ೨ ದ್ಯುಭ್ವಾದ್ಯಾಯತನಂ ಸ್ವಶಬ್ದಾತ್, ೩ ಅಕ್ಷರಮಂಬರಾಂತಧೃತೇಃ, ೪ ಸರ್ವೋಪೇತಾ ಚ ತದ್ದರ್ಶನಾತ್'** ಇತ್ಯಾದಿ ಸೂತ್ರಗಳಲ್ಲಿ ಸರ್ವ ಗುಣಗಳ ಮಧ್ಯದಲ್ಲಿ ಭೂಮ ಗುಣಕ್ಕೆ ಮುಖ್ಯವಾಗಿ ವೇದಪ್ರತಿಪಾದ್ಯತ್ವವೆಂದು ಹೇಳಲ್ಪಟ್ಟಿದೆ.

ವಿಶೇಷಾಂಶ— (1) ಯೋ ಮಾಂ ಎನ್ನುವುದರಿಂದ **'ಯೋ ಮಾಮೇವಮಸಂಮೂಢೋ ಜಾನಾತಿ ಪುರುಷೋತ್ತಮಮನಂ। ಸ ಸರ್ವವಿದ್ಭಜತಿ ಮಾಂ ಸರ್ವಭಾವೇಧನ ಭಾರತ। ಇತಿ ಗುಹ್ಯತಮಂ ಶಾಸ್ತ್ರಮಿದಮುಕ್ತಂ ಮಯಾನಘ। ಏತದ್ ಬುಧ್ವಾ ಬುದ್ಧಿಮಾನ್ ಸ್ಯಾತ್ ಕೃತಕೃತ್ಯಶ್ಚ ಭಾರತ'** ಎನ್ನುವ ಗೀತಾವಾಕ್ಯವನ್ನು ಸಂಗ್ರಹಿಸಿಸಿರುವರು. ಇಲ್ಲಿ ಸರ್ವವಿತ್ ಎಂದು ತಿಳಿದವನನ್ನು ಸ್ತೋತ್ರಮಾಡಿರುವುದರಿಂದಲೂ 'ಗುಹ್ಯತಮಂ' ಎಂದು ಶಾಸ್ತ್ರವನ್ನು ಸ್ತುತಿಸುವುದರಿಂದಲೂ, ಬುದ್ಧಿಮಾನ್–ಅಪರೋಕ್ಷಜ್ಞಾನಿಯು, ಕೃತಕೃತ್ಯಃ–ಮುಕ್ತನು, ಎಂದು ಎರಡುವಿಧ ಫಲಗಳನ್ನು ಹೇಳಿರುವುದರಿಂದಲೂ ತಾನು ಹೇಳಿದ ಪುರುಷೋತ್ತಮತ್ವದಲ್ಲಿ ತಾತ್ಪರ್ಯವು ಇದೆ ಎಂದು ತಿಳಿಯಲ್ಪಡುತ್ತದೆ. ಆ ಪುರುಷೋತ್ತಮತ್ವವು, 'ದ್ವಾವಿಮೌ' ಎನ್ನುವಲ್ಲಿ ಹೇಳಿದ ಜೀವೇಶ್ವರಾದಿ ಭೇದವೂ ಕೂಡ ಹೇಳಿದ ವೇದವಚನಗಳಲ್ಲಿಯೂ ಹೇಳಲ್ಪಡುತ್ತದೆ, ಆದಕಾರಣ ಇಲ್ಲಿಯೂ ವೇದವಚನಗಳಿಗೆ ತಾನು ಹೇಳಿದ ಅರ್ಥದಲ್ಲಿ ತಾತ್ಪರ್ಯವು ತಿಳಿಯಲ್ಪಡುತ್ತದೆ ಎಂದು 'ತಾತ್ಪರ್ಯಂ ಮಹದತ್ರ' ಎಂದು ಹೇಳಿರುವರು. ॥೭೬॥

'ಯಸ್ಯ ಪ್ರಸಾದಾತ್ಪರ ಮಾರ್ತಿರೂಪಾದಸ್ಮಾತ್ಯಂಸಾರಾನ್ಮುಚತೇ ನಾಪರೇಣ' ಎನ್ನುವ ಶ್ರುತ್ಯರ್ಥವನ್ನು ಸೂಚಿಸುತ್ತಾ ಸರ್ವೋತ್ತಮತ್ವದಲ್ಲಿಯೇ ತಾತ್ಪರ್ಯವೆನ್ನುವ ವಿಷಯದಲ್ಲಿ ಯುಕ್ತಿಯನ್ನು ಹೇಳುತ್ತಾರೆ—

ಮೂ ॥ **ತತ್ಪ್ರೀತ್ಯೈವಚ ಮೋಕ್ಷಃ ಪ್ರಾಪ್ಯತ್ತೇನೈವ ನಾನ್ಯೇನ ॥ ೭೭ ॥**

ಅ ॥ ಶ್ರೀ ಹರಿಯಿಂದಲೇ ಶ್ರೀ ಹರಿಯ ಪ್ರೀತಿಯಿಂದಲೇ ಮೋಕ್ಷವು ಹೊಂದಲರ್ಹವಾದುದು. ಬೇರೆ ಯಾವುದರಿಂದಲೂ (ಪ್ರವಚನಾದಿಗಳಿಂದಲೂ) ಮೋಕ್ಷವು ಹೊಂದಲರ್ಹವಾಗಲಾರದು.

ವಿಶೇಷಾಂಶ— **ನ ತಾದೃಶೀ ಪ್ರೀತಿರೀಡ್ಯಸ್ಯ ವಿಷ್ಣೋರ್ಗುಣೋತ್ಕರ್ಷಜ್ಞಾತರಿ ಯಾದೃಶೀ ಸ್ಯಾತ್। ತತ್ಪ್ರೀಣನಾನ್ಮೋಕ್ಷಮಾಪ್ನೋತಿ ಸರ್ವಸ್ತತೋವೇದಾಸ್ತತ್ಪರಾಃ ॥**

ಸರ್ವ ಏವ' ಇತ್ಯಾದಿ ಶ್ರುತಿಗಳಿಂದ ಸರ್ವ ಶಾಸ್ತ್ರಗಳಿಗೂ ಶ್ರೀಹರಿಯ ಗುಣೋತ್ಕರ್ಷದಲ್ಲಿಯೇ ತಾತ್ಪರ್ಯವೆಂದು ತಿಳಿಯುತ್ತದೆ ॥೭೭॥

ಶ್ರೀಹರಿಯ ಪ್ರೀತಿಯಿಂದಲೇ ಮೋಕ್ಷವೆಂದು ಹೇಳಲ್ಪಟ್ಟಿತು. ಅದರಲ್ಲಿ ಪ್ರಮಾಣವನ್ನು ಹೇಳುತ್ತಾರೆ—

ಮೂ ॥ ನಾಯಮಾತ್ಮಾ ಪ್ರವಚನೇನ ಲಭ್ಯೋ
ನ ಮೇಧಯಾ ನ ಬಹುನಾ ಶ್ರುತೇನ ॥
ಯಮೇವೈಷ ವೃಣುತೇ ತೇನ ಲಭ್ಯಃ
ತಸ್ಯೈಷ ಆತ್ಮಾ ವಿವೃಣುತೇ ತನೂಂ ಸ್ವಾಂ ॥೭೮॥

ಆ ॥ ಈ ಶ್ರೀ ಪರಮಾತ್ಮನು ವ್ಯಾಖ್ಯಾನದಿಂದಲೂ ಸಿಗಲಾರನು, ಪ್ರಜ್ಞೆಯಿಂದಲೂ ಸಿಗಲಾರನು, ಅನೇಕ ಶಾಸ್ತ್ರಶ್ರವಣದಿಂದಲೂ ಸಿಗಲಾರನು. ಈ ಪರಮಾತ್ಮನು ಯಾವ ಪುರುಷನನ್ನು (ತನ್ನ) ಗುಣೋತ್ಕರ್ಷ ಜ್ಞಾನದ್ದೆಶೆಯಿಂದ ಸ್ನೇಹರೂಪವಾದ ಪ್ರೀತಿಯಿಂದ ನನ್ನ ಭಕ್ತನೆಂದು ಸ್ವೀಕರಿಸುತ್ತಾನೋ (ಅಂದರೆ ಯಾರಿಗೆ ಪ್ರಸನ್ನನಾಗುತ್ತಾನೋ) ಆ ಪುರುಷನಿಂದಲೇ ಹೊಂದಲ್ಪಡುತ್ತಾನೆ. ಆ ಪುರುಷನಿಗೇನೇ ಈ ಪರಮಾತ್ಮನು ಕೇವಲ ಸಚ್ಚಿದಾನಂದಾತ್ಮಕವಾದ ಜೀವಶರೀರವನ್ನೂ ಪೂರ್ಣ ಜ್ಞಾನಾನಂದಾದ್ಯಾತ್ಮಕವಾದ ಬಿಂಬಭೂತವಾದ ತನ್ನ ಶರೀರವನ್ನೂ ಕೂಡ ಪ್ರಕಟೀಕರಿಸುತ್ತಾನೆ. (ಅದಕಾರಣ ಗುಣೋತ್ಕರ್ಷಜ್ಞಾನದ್ದೆಶೆಯಿಂದ ಸ್ನೇಹರೂಪವಾದ ಪ್ರೀತಿಯಿಂದ ಶ್ರೀ ವಿಷ್ಣುವೇ ಮೋಕ್ಷವನ್ನು ಕೊಡತಕ್ಕವನಾದ ಪ್ರಯುಕ್ತ ಎಲ್ಲಾ ಆಗಮಗಳಿಗೂ ಶ್ರೀ ವಿಷ್ಣುವಿನ ಗುಣೋತ್ಕರ್ಷದಲ್ಲಿಯೇ ಮಹಾತಾತ್ಪರ್ಯವು ॥೭೮॥

ಶ್ರೀ ವಿಷ್ಣುವೇ ಮೋಕ್ಷವನ್ನು ಕೊಡತಕ್ಕವನೆನ್ನುವ ಅರ್ಥದಲ್ಲಿ ಭವಿಷ್ಯತ್ವರ್ವವಚನವನ್ನು ಹೇಳುತ್ತಾರೆ—

ಮೂ ॥ ವಿಷ್ಣುರ್ಹಿ ದಾತಾ ಮೋಕ್ಷಸ್ಯ ವಾಯುಶ್ಚ ತದನುಜ್ಞಯಾ ॥
ಮೋಕ್ಷೋ ಜ್ಞಾನಂ ಚ ಕ್ರಮಶೋ ಮುಕ್ತಿಗೋ ಭೋಗ ಏವಚ ॥೭೯॥
ಉತ್ತರೇಷಾಂ ಪ್ರಸಾದೇನ ನೀಚಾನಾಂ ನಾನ್ಯಥಾ ಭವೇತ್ ॥
ಸರ್ವೇಷಾಂ ಚ ಹರಿರ್ನಿತ್ಯಂ ನಿಯಂತಾ ತದ್ವಶಾಃ ಪರೇ ॥೮೦॥

ಅ ॥ ಶ್ರೀ ವಿಷ್ಣುವೇ ಮುಕ್ತಿಯುನ್ನು ಕೊಡತಕ್ಕವನು. ವಾಯುದೇವರೂ (ರಮಾ ದೇವಿಯೂ ಕೂಡ) ಶ್ರೀ ಹರಿಯ ಆಜ್ಞೆಯಿಂದಲೇ ಮುಕ್ತಿಯನ್ನು ಕೊಡತಕ್ಕವರು. ಕ್ರಮವಾಗಿ ಶ್ರೇಷ್ಠರಾದವರ ಪ್ರಸಾದದಿಂದಲೇ ಅಧಮರಿಗೆ ಮುಕ್ತಿಯೂ, ಜ್ಞಾನವೂ, ಮುಕ್ತಿಯಲ್ಲಿರತಕ್ಕ ಭೋಗವೂ ಕೂಡ ಆಗುತ್ತವೆ. ಪ್ರಸಾದವಿಲ್ಲವಾದರೆ ಮುಕ್ತ್ಯಾದಿಗಳು ಆಗಲಾರವು. ಶ್ರೀ ಹರಿಯು ನಿತ್ಯದಲ್ಲಿಯೂ ಸರ್ವರಿಗೂ ನಿಯಾಮಕನು. ಇತರರೆಲ್ಲರೂ ಶ್ರೀ ಹರಿಯ ಅಧೀನರು ॥ ೭೯ ॥ ೮೦ ॥

ಮೂ ॥ ತಾರತಮ್ಯಂ ತತೋ ಜ್ಞೇಯಂ ಸರ್ವೋಚ್ಚತ್ವಂ ಹರೇಸ್ತಥಾ॥
ಏತದ್ವಿನಾ ನ ಕಸ್ಯಾಪಿ ವಿಮುಕ್ತಿಃ ಸ್ಯಾತ್ಕಥಂಚನ ॥೮೧॥

86 ನೇ ಶ್ಲೋ ಎಕೆಗೆ

ಅ ॥ ಮೋಕ್ಷಕ್ಕಾಗಿ ತಾರತಮ್ಯವನ್ನು ತಿಳಿಯಬೇಕು. ಹಾಗೆಯೇ ಶ್ರೀಹರಿಗೆ ಸರ್ವೋತ್ತಮತ್ವವನ್ನು ತಿಳಿಯಬೇಕು. ತಾರತಮ್ಯಜ್ಞಾನ, ಸರ್ವೋತ್ತಮತ್ವಜ್ಞಾನ ಇವುಗಳನ್ನು ಹೊರತು ಯಾರಿಗೂ ಯಾವಪ್ರಕಾರದಿಂದಲೂ ಮೋಕ್ಷವು ಸರ್ವಥಾ ಆಗಲಾರದು ॥೪೧॥

ಕೇವಲ ಲಕ್ಷ್ಮೀಬ್ರಹ್ಮಾದಿಗಳ ತಾರತಮ್ಯ ಜ್ಞಾನದಿಂದಲೂ, ಶ್ರೀವಿಷ್ಣು ಸರ್ವೋತ್ತಮತ್ವ ಜ್ಞಾನದಿಂದಲೂ ಮುಕ್ತಿಯಾಗಲಾರದು. ಮತ್ತೆ ಮುಕ್ತಿಗಾಗಿ ಪಂಚಭೇದಾದಿ ಜ್ಞಾನವೂ, ಭಕ್ತಿಯೂ ಅವಶ್ಯಕವೆನ್ನುತ್ತಾರೆ–

ಮೂ ॥ ಪಂಚಭೇದಾಂಶ್ಚ ತ್ಥಿ ವಿಜ್ಞಾಯ ವಿಷ್ಣೋಃ ಸ್ವಾಭೇದಮೇವ ಚ ॥
ನಿರ್ದೋಷತ್ವಂ ಗುಣೋದ್ರೇಕಂ ಜ್ಞಾತ್ವಾಮುಕ್ತಿರ್ನ ಚಾನ್ಯಥಾ ॥೪೨॥

ಅ ॥ ಪಂಚಭೇದಗಳನ್ನೂ ತಿಳಿದು ಶ್ರೀ ವಿಷ್ಣುವಿನ ಅವಯವಗಳಿಗೂ, ಅವತಾರಗಳಿಗೂ ಶ್ರೀ ಹರಿಯಿಂದ ಅಭೇದವನ್ನೇ ತಿಳಿದು ಶ್ರೀಹರಿಗೆ ದೋಷಾತ್ಯಂತಾಭಾವವನ್ನೂ, ಸರ್ವಗುಣ ಪರಿಪೂರ್ಣತ್ವವನ್ನೂ ತಿಳಿದರೇನೇ ಮುಕ್ತಿಯು ಬೇರೆ ಪ್ರಕಾರದಿಂದ ಮುಕ್ತಿಯು ಆಗಲಾರದು ॥೪೨॥

ಮೂ ॥ ಅವತಾರಾನ್ಹರೇರ್ಜ್ಞಾತ್ವಾ ನಾವತಾರಾ ಹರೇಶ್ಚ ಯೇ ॥
ತದಾವೇಶಾಂಸ್ತಥಾ ಸಮ್ಯಗ್ಜ್ಞಾತ್ವಾ ಮುಕ್ತಿರ್ನ ಚಾನ್ಯಥಾ ॥೪೩॥

ಅ ॥ ಶ್ರೀಹರಿಯ ಅವತಾರಗಳನ್ನೂ, ಯಾವುವು ಶ್ರೀಹರಿಯ ಅವತಾರಗಳಲ್ಲವೋ (ಅವುಗಳನ್ನೂ ಕೂಡ) ತಿಳಿದು, ಚ-ಮತ್ತು (ದೇವತೆಗಳ ಅವತಾರಗಳನ್ನೂ, ಅವತಾರಗಳಲ್ಲದಿದ್ದವುಗಳನ್ನೂ ತಿಳಿದು,) ಹಾಗೆಯೇ ಶ್ರೀಹರಿಯ ಆವೇಶಗಳನ್ನೂ, ಚೆನ್ನಾಗಿ ತಿಳಿದು (ಆದರೆ ತಿಳಿದರೆ) ಮುಕ್ತಿಯಾಗುತ್ತದೆ. ಇಲ್ಲವಾದಲ್ಲಿ ಮುಕ್ತಿಯಾಗಲಾರದು.॥೪೩॥

ಮೂ ॥ ಸೃಷ್ಟಿರಕ್ಷಾಹೃತಿಜ್ಞಾನನಿಯತ್ಯಜ್ಞಾನಬಂಧನಾತ್(ನ್) ॥
ಮೋಕ್ಷಂ ಚ ವಿಷ್ಣುತಸ್ತ್ವೇವ ಜ್ಞಾತ್ವಾ ಮುಕ್ತಿರ್ನ ಚಾನ್ಯಥಾ ॥೪೪॥

ಅ ॥ ಜಗತ್ಸೃಷ್ಟಿಯು, ರಕ್ಷಣೆಯು, ಸಂಹಾರವು, ಜ್ಞಾನವು, ನಿಯಮವವು, ಅಜ್ಞಾನವು, *ಕಾಮಕರ್ಮಾದಿರೂಪ ಬಂಧನವು ಇವುಗಳನ್ನೂ ಮುಕ್ತಿಯನ್ನೂ ಕೂಡ ವಿಷ್ಣುವಿನಿಂದಲೇ ಎಂದು ತಿಳಿದು ಮೋಕ್ಷವು (ಆಗುತ್ತದೆ.) ಬೇರೆ ಪ್ರಕಾರದಿಂದ ಮೋಕ್ಷವಾಗುವುದಿಲ್ಲ. ॥೪೪॥

ಮೂ ॥ ವೇದಾಂಶ್ಚ ಪಂಚರಾತ್ರಾಣಿ ಸೇತಿಹಾಸಪುರಾಣಕಾನ್ ॥
ಜ್ಞಾತ್ವಾ ವಿಷ್ಣುಪರಾನೇವ ಮುಚ್ಯತೇ ನಾನ್ಯಥಾ ಕ್ವಚಿತ್ ॥೪೫॥

ಅ ॥ ಇತಿಹಾಸವು (ಮಹಾಭಾರತ, ರಾಮಾಯಣಗಳು,) ಪುರಾಣಗಳೂ ಇವುಗಳಿಂದ ಕೂಡಿದ ವೇದಗಳನ್ನೂ, ಪಂಚರಾತ್ರಗಳನ್ನೂ ಕೂಡಾ ಮುಖ್ಯವಾಗಿ ವಿಷ್ಣುಪರಗಳನ್ನಾಗಿಯೇ ತಿಳಿದು ಮುಕ್ತನಾಗುತ್ತಾನೆ. ಎಲ್ಲಿಯೂ ಬೇರೆ ಪ್ರಕಾರದಿಂದ ಮುಕ್ತನಾಗುವುದಿಲ್ಲ. ॥೪೫॥

*ಬಧ್ನಂತೀತಿ ಬಂಧನಾಃ-ಕಾಮ ಕರ್ಮಾದಿಗಳು, ತಾನ್-ಅವುಗಳನ್ನು ಎಂದು ವ್ಯುತ್ಪತ್ತಿಯು.

ಜ್ಞಾನಪ್ರಕಾರವನ್ನು ಹೇಳಿ ಈಗ ಭಕ್ತಿಸ್ವರೂಪವನ್ನು ಹೇಳುತ್ತಾರೆ—

ಮೂ ॥ ಮಾಹಾತ್ಮ್ಯಜ್ಞಾನಪೂರ್ವಸ್ತು ಸುದೃಢಃ ಸರ್ವತೋಽಧಿಕಃ
ಸ್ನೇಹೋ ಭಕ್ತಿರಿತಿ ಪ್ರೋಕ್ತಸ್ತಯಾ ಮುಕ್ತಿರ್ನ ಚಾನ್ಯಥಾ ॥೪೬॥

ಆ ॥ ಮಾಹಾತ್ಮ್ಯಜ್ಞಾನಪೂರ್ವಕವಾದ, ಮರಣಾಂತ ಆಪತ್ತಿನಲ್ಲಿಯೂ ಹಿಂದಾಡಲ್ಪಡದಿರತಕ್ಕ, ಸ್ರಕ್ ಚಂದನ ವನಿತಾದಿ ವಿಷಯಗಳದ್ದೆಶೆಯಿಂದಲೂ (ಸ್ವಾತ್ಮಾತ್ಮೀಯ ಸಮಸ್ತ ವಸ್ತುಗಳಿಂದಲೂ) ಅಧಿಕವಾದ ಸ್ನೇಹವು ಭಕ್ತಿಯೆಂದು ಹೇಳಿಸಿಕೊಳ್ಳಲ್ಪಡುತ್ತದೆ. ಆ ಭಕ್ತಿಯಿಂದಲೇ ಮುಕ್ತಿಯು. ಬೇರೆ ಪ್ರಕಾರದಿಂದ ಆಗಲಾರದು.

ವಿಶೇಷಾಂಶ—**'ಸಂಧ್ಯೇ ಸೃಷ್ಟಿರಾಹ ಹಿ'** ಇತ್ಯಾದಿ ಸೂತ್ರಗಳಲ್ಲಿ ಹೇಳಿದ ಪ್ರಕಾರ ಪ್ರತಿದಿವಸದಲ್ಲಿಯೂ ಸರ್ವಾಪೇಕ್ಷಿತವಾದ ಸುಖವನ್ನು ಮಾಡತಕ್ಕ ಸ್ವಾಪ್ನಪದಾರ್ಥವನ್ನು ಸೃಷ್ಟಿಸುವಿಕೆ, ಸುಷುಪ್ತಿಯನ್ನು ಕೊಡುವಿಕೆ, ಜಾಗ್ರದವಸ್ಥೆಯನ್ನು ಪ್ರವರ್ತಿಸುವಿಕೆ ಇತ್ಯಾದಿ ರೂಪವಾದುದು ಮಾಹಾತ್ಮ್ಯಜ್ಞಾನವು. ॥೪೬॥

ಶ್ರೀಹರಿಯೇ ಮೋಕ್ಷದಾಯಕನೆಂದು ಹೇಳಲ್ಪಟ್ಟಿತು. ಹಾಗಾದರೆ ಎಲ್ಲಾ ಜೀವರಿಗೂ ಮೋಕ್ಷವನ್ನು ಕೊಡತಕ್ಕವನೋ ಏನು ಎಂದರೆ ಎಲ್ಲವರಿಗೆ ಕೊಡುವುದಿಲ್ಲವೆನ್ನುವ ಅಭಿಪ್ರಾಯದಿಂದ ಜೀವರು ತ್ರಿವಿಧರಾಗಿರುತ್ತಾರೆನ್ನುವುದನ್ನು ಪ್ರಮಾಣದಿಂದಲೇ ತೋರಿಸುತ್ತಾರೆ.

ಮೂ ॥ ತ್ರಿವಿಧಾ ಜೀವಸಂಘಾಸ್ತು ದೇವಮಾನುಷದಾನವಾಃ ॥
ತತ್ರ ದೇವಾ ಮುಕ್ತಿಯೋಗ್ಯಾ ಮಾನುಷೇಷೂತ್ತಮಾಸ್ತಥಾ॥೪೭॥
ಮಧ್ಯಮಾ ಮಾನುಷಾ ಯೇ ತು ಸೃತಿಯೋಗ್ಯಾಃ ಸದೈವ ಹಿ ॥
ಅಧಮಾ ನಿರಯೊಂಯ್ಯೈವ ದಾನವಾಸ್ತು ತಮೋಲಯಾಃ ॥ ೪೪ ॥

ಅ॥ ಜೀವರ ಸಮುದಾಯಗಳಾದರೂ ದೇವತೆಗಳು, ಮನುಷ್ಯರು, ದಾನವರು–ಹೀಗೆ ಮೂರು ಪ್ರಕಾರವುಳ್ಳವರು. ಅವರೆ ಮಧ್ಯದಲ್ಲಿ ದೇವತೆಗಳು ಮೋಕ್ಷಕ್ಕೆ ಯೋಗ್ಯರು. ಹಾಗೆಯೇ ಮನುಷ್ಯರಲ್ಲಿ ಉತ್ತಮರೂ ಮೋಕ್ಷಕ್ಕೆ ಯೋಗ್ಯರು. ಯಾರು ಮಧ್ಯಮಮನುಷ್ಯರೋ, (ಅವರು) ಯಾವಾಗಲೂ ಸಂಸಾರಯೋಗ್ಯರು. ಮನುಷ್ಯಾಧಮರು ತಾಮಿಸ್ರಾಖ್ಯ ನರಕಕ್ಕೇನೇ (ಹೋಗುತ್ತಾರೆ.) ದಾನವರಾದರೂ ಅಂಧತಾಮಿಸ್ರವೇ ಆಲಯವಾಗಿವುಳ್ಳವರು.

ವಿಶೇಷಾಂಶ— (1) ತಮಸ್ಸಿನಲ್ಲಿಯೇ ತಾಮಿಸ್ರ, ಅಂಧತಾಮಿಸ್ರ ಎಂದು ಅವಾಂತರ ಭೇದವಿದೆ. ಆದರಲ್ಲಿ ಅತಿನಿಬಿಡವಾದ ತಮಸ್ಸು ಎಲ್ಲಿದೆಯೋ ಅದು ಅಂಧತಾಮಿಸ್ರವೆನ್ನಿಸುತ್ತದೆ. ಅದಕ್ಕಿಂತ ಸ್ವಲ್ಪ ಕಡಿಮೆ ತಮಸ್ಸು ಎಲ್ಲಿದೆಯೋ ಅದು ತಾಮಿಸ್ರವೆನ್ನಿಸುತ್ತದೆ. ನಿರ್ಗತಂ ಅಯನುಂ ಯಸ್ಮಾತ್= ಯಾವುದರ ದೆಶೆಯಿಂದ ಉದ್ಗಮನವು ಹೊರಟುಹೋಗಿದೆಯೋ ಏನ್ನುವ ವ್ಯುತ್ಪತ್ತಿಯಿಂದ ತಾಮಿಸ್ರಕ್ಕೇನೇ ನಿರಯವೆಂದು ನಾಮವು. ಅವರಲ್ಲಿ ಮನುಷ್ಯಾಧಮರೂ ಅವರಕ್ಕಿಂತಲೂ ಅಧಮರಾದ ಕೆಲವು ದಾನವರೂ ಕೂಡ ತಾಮಿಸ್ರಾಖ್ಯವಾದ ನಿರಯದಲ್ಲಿ ಬೀಳುತ್ತಾರೆ. ಅಧಮಾಧಮರಾದ ಕಲಿಮೊದಲಾದವರಾದರೂ ಅಂಧತಾಮಿಸ್ರದಲ್ಲಿ ಬೀಳುತ್ತಾರೆ. ಈ ಅಭಿಪ್ರಾಯದಿಂದಲೇ ದಾನವಾಸ್ತು ಎಂದು 'ತು' ಶಬ್ದವು. ಇಲ್ಲವಾದರೆ ನರಕವನ್ನು ಪಾಪ ಮಾಡಿದ ಉತ್ತಮ ಮತ್ತು ಮಧ್ಯಮ ಜೀವರೂ ಹೊಂದುವುದರಿಂದ **'ಅಧಮಾನಿರಯೊಂಯ್ಯೈವ'** ಎನ್ನುವ ಉಕ್ತಿಯು ಕೂಡದೆ ಹೋಗುವುದು. ॥೪೭॥೪೪॥

ಸ್ವರ್ಗಾದಿಗಳಂತೆಯೇ ಮುಕ್ತಿಯೂ ತಮಸ್ಸೂ ಕೂಡ ಅನಿತ್ಯವೋ ಏನು? ಎಂದರೆ ಅಲ್ಲವೆನ್ನುತ್ತಾರೆ—

ಮೂ ॥ **ಮುಕ್ತಿರ್ನಿತ್ಯಾ ತಮಶ್ಚೈವ ನಾವೃತ್ತಿಃ ಪುನರೇತಯೋಃ ॥**
ದೇವಾನಾಂ ನಿರಯೋ ನಾಸ್ತಿ ತಮಶ್ಚಾಪಿ ಕಥಂಚನ ॥೮೯॥
ನಾಸುರಾಣಾಂ ತಥಾ ಮುಕ್ತಿಃ ಕದಾಚಿತ್ಕೇನಚಿತ್ಕ್ವಚಿತ್ ॥
ಮಾನುಷಾಣಾಂ ಮಧ್ಯಮಾನಾಂ ನೈವೈತದ್ದ್ವಯಮಾಪ್ಯತೇ ॥೯೦॥

ಅ ॥ ಮೋಕ್ಷವೂ ನಿತ್ಯವೇ; ತಮಸ್ಸೂ ನಿತ್ಯವೇ. ಈ ಮುಕ್ತಿ-ತಮಸ್ಸುಗಳ ಸಕಾಶದೆಸೆಯಿಂದ ಪುನರಾವೃತ್ತಿಯಿಲ್ಲ. ದೇವತೆಗಳಿಗೆ (ಪಾಪಕರ್ಮದಿಂದಲೂ) ನಿರಯಪ್ರಾಪ್ತಿಯಾಗುವುದಿಲ್ಲ. ಮಹಾಪಾತಕಾದಿಗಳಿಂದಲೂ ತಮಸ್ಸೂ ಆಗುವುದಿಲ್ಲ. [ದೈತ್ಯರಿಗೆ ಪುಣ್ಯಕರ್ಮದಿಂದ ಸ್ವರ್ಗಪ್ರಾಪ್ತಿಯಂತೆ ಮುಕ್ತಿಯು ಆಗುವುದೋ ಎಂದರೆ—] ತಥಾ—ದೇವತೆಗಳಿಗೆ ನರಕಾದಿಗಳು ಹೇಗೆ ಇಲ್ಲವೋ, ಹಾಗೆಯೇ, ಅಸುರರಿಗೆ ಮುಕ್ತಿಯು ಯಾವ ಕಾಲದಲ್ಲಿಯೂ ಯಾವ ಉಪಾಯದಿಂದಲೂ, ಯಾವ ದೇಶದಲ್ಲಿಯೂ ಆಗುವುದಿಲ್ಲ. [ಹಾಗಾದರೆ ಮಧ್ಯಮ ಮನುಷ್ಯರಿಗೆ ಯಾವ ಗತಿಯು ಎಂದರೆ—] ಮಧ್ಯಮರಾದ ಮನುಷ್ಯರಿಗೆ ಮುಕ್ತಿಯೂ, ತಮಸ್ಸೂ-ಇವೆರಡೂ ಹೊಂದಲಿಕ್ಕೆ ಯೋಗ್ಯವಾಗಲಾರದು.

ವಿಶೇಷಾಂಶ— (1) ಮಧ್ಯಮ ಜೀವರಿಗೆ ಸ್ವರೂಪಭೂತವಾದ. ಸುಖದುಃಖಾತ್ಮಕವಾದ ನರಕಾನುಭವವು ನಿತ್ಯವಾಗಿದ್ದಾಗ್ಯೂ '**ತ್ರಿದಿವ ನಿರಯಭೂಗೋಚರಾನ್**' ಎಂದು ಅನಿತ್ಯಲೋಕಗಳಲ್ಲಿಯೇ ಸಂಚಾರವನ್ನು ಹೇಳಿರುವುದರಿಂದ, ಲೋಕಕ್ಕೆ ನಿತ್ಯತ್ವವಿಲ್ಲದಿರುವುದರಿಂದ ಎರಡೇ ಲೋಕಗಳಿಗೆ ನಿತ್ಯತ್ವವನ್ನು ಹೇಳಿದ್ದು ಎಂದು ತಿಳಿಯತಕ್ಕದ್ದು. ॥ ೮೯ ॥ ೯೦ ॥

ಹಾಗಾದರೆ ಅನಂತಾನಂತ ಜೀವರಲ್ಲಿ ಇವರು ಅಸುರರು, ಇವರಿಗೆ ತಮಸ್ಸು, ಇವರಾದರೂ ದೇವತೆಗಳು ಇವರಿಗೆ ಮುಕ್ತಿಯು ಎಂದು ಯಾವ ಉಪಾಯದಿಂದ ಯಾವಾಗ ನಿಶ್ಚಯಿಸಲಿಕ್ಕೆ ಶಕ್ಯವಾಗುತ್ತದೆಂದಾಶಂಕಿಸಿದರೆ—

ಮೂ ॥ **ಅಸುರಾಣಾಂ ತಮಃ ಪ್ರಾಪ್ತಿಸ್ತದಾ ನಿಯಮತೋ ಭವೇತ್ ॥**
ಯದಾ ತು ಜ್ಞಾನಿಸದ್ಭಾವೇ ನೈವ ಗೃಹ್ಣಂತಿ ತತ್ಪರಂ ॥೯೧॥
ತದಾ ಮುಕ್ತಿರ್ಹಿ ದೇವಾನಾಂ ಯದಾ ಪ್ರತ್ಯಕ್ಷಗೋ ಹರಿಃ ॥
ಸ್ವಯೋಗ್ಯಯೋಪಾಸನಯಾ ತನ್ವಾ ತದ್ಯೋಗ್ಯಯಾ ತಥಾ ॥೯೨॥

ಅ ॥ ಜ್ಞಾನಿಗಳಾದ ಉಪದೇಶಕರು ಇದ್ದರೂ ಯಾವಾಗ ಸರ್ವೋತ್ತಮವಾದ ನಾರಾಯಣಾಖ್ಯವಸ್ತುವನ್ನು [ಜ್ಞಾನಿಗಳಲ್ಲಿ ದ್ವೇಷದಿಂದಲೂ, ಜ್ಞಾನದಲ್ಲಿ ವಿಶ್ವಾಸವಿಲ್ಲದಿರುವುದರಿಂದಲೂ ಶ್ರೀ ಹರಿಯಲ್ಲಿ ದ್ವೇಷದಿಂದಲೂ ಯಾರು] ಸ್ವೀಕರಿಸುವುದೇ ಇಲ್ಲವೋ [ಅಂದರೆ ಜ್ಞಾನಿಗಳ ಮುಖದಿಂದ ಕೇಳಿ ತಮ್ಮ ಹೃದಯದಲ್ಲಿ ಧರಿಸಿಕೊಳ್ಳುವುದಿಲ್ಲವೋ] ಆಗ [ಅವರು ಅಸುರರು,] ಆ ಅಸುರರಿಗೆ ನಿಯಮದಿಂದ ಅಂಧಂತಮಸ್ಸಿನ ಪ್ರಾಪ್ತಿಯಾಗುವುದು. [ಎಂದು ನಿಶ್ಚಯಿಸಲಿಕ್ಕೆ ಶಕ್ಯವಾಗುತ್ತದೆ.] [ಹಾಗಾದರೆ ದೇವಾದಿಯೋಗ್ಯರಿಗೆ ಸದ್ಗುರುಗಳ ಉಪದೇಶವಾದ ಮೇಲೆ ನಿಯಮದಿಂದ ಮುಕ್ತಿಯಾಗುತ್ತದೋ ಏನು? ಎಂದಾಶಂಕಿಸಿದರೆ—]

ಯಾವಾಗ ಶ್ರೀಹರಿಯು ತಮತಮಗೆ ಯೋಗ್ಯವಾದ ಉಪಾಸನೆಯಿಂದ, ಅಪರೋಕ್ಷಜ್ಞಾನಕ್ಕೆ ಯೋಗ್ಯವಾದ ತಮ್ಮ ತಮ್ಮ ಬಿಂಬಮೂರ್ತಿಯಿಂದ ದೇವತೆಗಳಿಗೆ (ಅಂದರೆ ಉತ್ತಮ ಜೀವರಿಗೆ) ಪ್ರತ್ಯಕ್ಷ ವಿಷಯನಾಗುತ್ತಾನೋ, (ಅವರು ದೇವಾದ್ಯುತ್ತಮಜೀವರು). ಆಗ ಆ ದೇವಾದಿ ಗಳಿಗೆ ಮುಕ್ತಿಯು (ಎಂದು ನಿರ್ಣಯಿಸಲಿಕ್ಕೆ ಶಕ್ಯವಾಗುತ್ತದೆ.) ಶ್ರುತ್ಯಾದಿ ಪ್ರಸಿದ್ಧವು.

ವಿಶೇಷಾಂಶ — (1) ಸಜ್ಜನರ ಸಮಾಗಮವಿಲ್ಲದಿರುವುದರಿಂದ ಉತ್ತಮ ಜೀವರಿಗೂ ಕೆಲವು ವೇಳೆ ಶ್ರೀಹರಿ ಜ್ಞಾನಾಭಾವವೂ ಕೂಡಬಹುದಾದುದರಿಂದ ಅವರಿಗೂ ತಮಃಪ್ರಾಪ್ತಿ ಯಾಗಬೇಕಾಗುವುದು ಎಂದರೆ— 'ಜ್ಞಾನಿಸದ್ಭಾವೇ' ಎಂದು ಹೇಳಿರುವರು. (2) ಪರಾಂತ ಕಾಲದಲ್ಲಿಯೇ ಬ್ರಹ್ಮಾದ್ಯುತ್ತಮಜೀವರಿಗೆ ಮುಕ್ತಿಯು. ಕಲ್ಯಾದ್ಯಧಮಜೀವರಿಗೆ ಅಂಧಂತಮಃ ಪ್ರಾಪ್ತಿಯು, ಎಂದು ಸಿದ್ಧಾಂತರಹಸ್ಯವು ॥೯೧ ೯೨॥

'ಸ್ವಯೋಗ್ಯೋಪಾಸನಯಾ' ಎಂದು ಉಪಾಸನೆಯಲ್ಲಿ ವೈಚಿತ್ರ್ಯವು ಸೂಚಿತವಾಯಿತು. ಅದನ್ನು ಬಿಡಿಸಿ ತೋರುತ್ತಾರೆ—

ಮೂ ॥ ಸರ್ವೈರ್ಗುಣೈರ್ಬ್ರಹ್ಮಣಾ ತು ಸಮುಪಾಸ್ಯೋ ಹರಿಃ ಸದಾ॥
ಆನಂದೋಜ್ಞಃ ಸದಾತ್ಮೇತಿ ಹ್ಯುಪಾಸ್ಯೋ ಮಾನುಷೈರ್ಹರಿಃ ॥೯೩॥

ಆ ॥ ಚತುರ್ಮುಖನಿಂದಲಾದರೂ ಶ್ರೀಹರಿಯು ಯಾವಾಗಲೂ ಅನಂತ ವೇದಗಳಲ್ಲಿ ಹೇಳಲ್ಪಟ್ಟ ಗುಣಗಳಿಂದ ಭಕ್ತಿಪೂರ್ವಕವಾಗಿ ಉಪಾಸನಾರ್ಹನು. ಮನುಷ್ಯೋತ್ತಮರಿಂದ ಶ್ರೀ ಹರಿಯು ಆನಂದರೂಪನು, ಜ್ಞಾನರೂಪನು, ನಿರ್ದೋಷನು, ಸ್ವಾಮಿಯು, ಹೀಗೆ (ನಾಲ್ಕು ಗುಣಗಳಿಂದ) ಧ್ಯಾನಮಾಡಿಸಿಕೊಳ್ಳಲ್ಪಡಲಿಕ್ಕೆ ಯೋಗ್ಯನು; ಪ್ರಸಿದ್ಧವು. ॥೯೩॥

ಮೂ ॥ ಯೆಥಾಕ್ರಮಂ ಗುಣೋದ್ರೇಕಾತ್ತದನ್ಯೈರಾವಿರಿಂಚತಃ ॥
ಬ್ರಹ್ಮತ್ವಯೋಗ್ಯಾ ಋಜವೋ ನಾನುದೇವಾಃ ಪೃಥಗ್ಗಣಾಃ ॥೯೪॥

ಆ ॥ ಮನುಷ್ಯೋತ್ತಮರಿಂದ ವ್ಯತಿರಿಕ್ತರಾದ, ಆವಿರಿಂಚತಃ ಚತುರ್ಮುಖಪರ್ಯಂತವಾಗಿ ಇರತಕ್ಕ ಋಷಿ, ಗಂಧರ್ವ ಮೊದಲಾದ ಉತ್ತಮ ಜೀವರಿಂದ ಕ್ರಮಾನುಸಾರವಾಗಿ, ತಮತಮಗೆ ಯೋಗ್ಯಗಳಾದ ಗುಣಗಳ ಬಾಹುಲ್ಯದಿಂದ (ಶ್ರೀಹರಿಯು ಉಪಾಸ್ಯನು.) (ಹಾಗಾದರೆ ಮನುಷ್ಯಾದಿಗಳಿಗೇನೇ ತಮಸ್ಸು ಮೊದಲಾದವುಗಳಿಂದ ಕದಾಚಿತ್ ಬ್ರಹ್ಮಪದವಿಯು ಲಭಿಸುವುದಾದರೆ ಈ ವಿಭಾಗವೇ ವ್ಯರ್ಥವು ಎಂದರೆ—) ಬ್ರಹ್ಮತ್ವಕ್ಕೆ ಯೋಗ್ಯರಾದ ಪ್ರತ್ಯೇಕ ರಾಶಿಭೂತರಾದ ಋಜುಗಳು ಎಂದು ಪ್ರಸಿದ್ಧರಾದ ದೇವತೆಗಳು ಇದ್ದಾರೆ. ॥೯೪॥

ಮೂ ॥ ತೈರೇವಾಸ್ಯಂ ತತ್ಪದಂ ತು(ಪದು ತತ್ತು) ನೈವಾನ್ಯೈಃ ಸಾಧನೈರಪಿ ॥
ಏವಂ ಸರ್ವಪತಾನಾಂ ತು (ಚ) ಯೋಗ್ಯಾಃ ಸಂತಿಪೃಥಗ್ಗಣಾಃ ॥೯೫॥

ಆ ॥ ಆ ಬ್ರಹ್ಮಪದವಿಯಾದರೂ ಬ್ರಹ್ಮತ್ವಕ್ಕೆ ಯೋಗ್ಯರಾದ ಋಜುಗಳಿಂದಲೇ ಹೊಂದಲ್ಪಡಲಿಕ್ಕೆ ಯೋಗ್ಯವು. ಇತರರಾದ ರುದ್ರಾದಿ ಪದಯೋಗ್ಯರಾದ ಜೀವರಿಂದ ಸಾಧನಗಳಿಂದಲೂ ಹೊಂದಲ್ಪಡುವುದಿಲ್ಲ. ಹೀಗೆಯೇ (ಅಂದರೆ—ಬ್ರಹ್ಮಪದವಿಗೆ ಯೋಗ್ಯವಾದ ಋಜುಗಣವು ಹೇಗೆ ಪ್ರತ್ಯೇಕವಿರುತ್ತದೋ ಇದೇ ಪ್ರಕಾರ) ರುದ್ರಾದಿ ಪದಗಳಿಗೂ ಯೋಗ್ಯರಾದ ಪ್ರತ್ಯೇಕ ರಾಶಿಭೂತರಾದ ದೇವತೆಗಳು ಇರುತ್ತಾರೆ, ॥೯೫॥

ಮೂ ॥ **ತಸ್ಮಾದನಾದ್ಯನಂತಂ ಹಿ ತಾರತಮ್ಯಂ ಚಿದಾತ್ಮನಾಂ ॥**
ತಚ್ಚ ನೈವಾನ್ಯಥಾ ಕರ್ತುಂ ಶಕ್ಯಂ ಕೇನಾಪಿ ಕುತ್ರಚಿತ್ ॥೯೬॥

ಅ॥ ಆದುದರಿಂದ ಚಿದ್ರೂಪರಾದ ಜೀವರ ತಾರತಮ್ಯವು ಆದ್ಯಂತ ರಹಿತವಾದುದು: ಪ್ರಸಿದ್ಧವು. ಆ ತಾರತಮ್ಯವು ಯಾವ ಪುರುಷನಿಂದಲೂ, ಯಾವ ದೇಶದಲ್ಲಿಯೂ ವ್ಯತ್ಯಾಸ ಪಡಿಸಲಿಕ್ಕೆ ಸರ್ವಥಾ ಶಕ್ಯವಲ್ಲ. ॥೯೬॥

ಸ್ಪೋತ್ತಮಪದಪ್ರಾಪ್ತಿಯು ಅಶಕ್ಯವು ಎಂದೇ ಅಲ್ಲ.ಮತ್ತೆ ಉತ್ತಮಪದವಿಯನ್ನು ಇಚ್ಛಿಸಿ ದರೂ ಅನರ್ಥವದೆ ಎನ್ನುತ್ತಾರೆ.—

ಮೂ ॥ **ಅಯೋಗ್ಯಮಿಚ್ಛನ್ಪುರುಷಃ ಪತತ್ಯೇವ ನ ಸಂಶಯಃ ॥**
ತಸ್ಮಾದ್ಯೋಗ್ಯಾನುಸಾರೇಣ ಸೇವ್ಯೋ ವಿಷ್ಣುಃ ಸದೈವ ಹಿ ॥೯೭॥

ಅ ॥ ಅಯೋಗ್ಯವನ್ನು ಇಚ್ಛಿಸುವ ಪುರುಷನು ನಿಶ್ಚಯವಾಗಿಯೂ ಬೀಳುತ್ತಾನೆ. ಸಂಶಯವಿಲ್ಲ. ಆದುದರಿಂದ ಯೋಗ್ಯತಾನುಸಾರವಾಗಿಯೇ ಯಾವಾಗಲೂ ಶ್ರೀಹರಿಯು ಸೇವಿಸಿಕೊಳ್ಳಲಿಕ್ಕೆ ಯೋಗ್ಯನು ॥೯೭॥

ಉಪಾಸನೆಯಿಂದ ಶ್ರೀ ಹರಿಯು ಪ್ರತ್ಯಕ್ಷವಿಷಯನಾಗುತ್ತಾನೆಂದು ಹೇಳಲ್ಪಟ್ಟಿತು. ಆ ಉಪಾಸನೆಯು ಯಾವುದು ಎಂದರೆ — ಅದನ್ನು ಬಿಡಿಸುತ್ತಾ ಸಹಕಾರ್ಯಂತರವನ್ನು ಹೇಳುತ್ತಾರೆ—

ಮೂ ॥ **ಅಚ್ಛಿದ್ರಸೇವನಾಚ್ಚೈವ ನಿಷ್ಕಾಮತ್ವಾಚ್ಚ ಯೋಗ್ಯತಃ ॥**
ದ್ರಷ್ಟುಂ ಶಕ್ಯೋ ಹರಿಃ ಸರ್ವೈರ್ನಾನ್ಯಥಾ ತು ಕಥಂಚನ ॥೯೮॥

ಆ ॥ (ತೈಲಧಾರೆಯಂತೆ) ಮಧ್ಯದಲ್ಲಿ ವಿಚ್ಛೇದವಿಲ್ಲದಿರುವ ಧ್ಯಾನದೆಶೆಯಿಂದಲೂ, ಫಲೇಚ್ಛೆಯಿಲ್ಲದಿರುವುದರಿಂದಲೂ, ಯೋಗ್ಯತೆಯಿಂದಲೂ, (ಆ ಸಾಧನಗಳಿಂದಲೇ) ಸರ್ವರಿಂದ ಶ್ರೀ ಹರಿಯು ನೋಡಲಿಕ್ಕೆ ಶಕ್ಯನು. ಸೇವಾದಿಗಳು ಇಲ್ಲದೆ ಬೇರೆ ಯಾವ ಉಪಾಯದಿಂದಲೂ ನೋಡಲಿಕ್ಕೆ ಶಕ್ಯನಲ್ಲ.

ವಿಶೇಷಾಂಶ —(1) 'ಸ್ವಕೃತ ಸಂಧ್ಯಾವಂದನ ಯಜ್ಞದಾನಾದಿ ಕರ್ಮಣಾಂ ನಿರ್ಗತಃ ಕಾಮಃ–ಫಲೇಚ್ಛಾ ಯಸ್ಯ ಸಃ ನಿಷ್ಕಾಮಃ, ತಸ್ಯ ಭಾವಃ' ಎನ್ನುವ ವ್ಯುತ್ಪತ್ತಿಯಿಂದ ತಾನು ಮಾಡಿದ ಸಂಧ್ಯಾವಂದನ, ಯಜ್ಞ, ದಾನ ಮೊದಲಾದ ಕರ್ಮಗಳ ಫಲೇಚ್ಛೆಯಿಲ್ಲದಿರುವುದರಿಂದ, ಅಂದರೆ ಶ್ರೀ ವಿಷ್ಣುವಿನ ಪ್ರೀತಿಗೋಸ್ಕರವೇ ನಿತ್ಯನೈಮಿತ್ತಿಕ ಕರ್ಮಗಳನ್ನು ಮಾಡ ಬೇಕು. (2) **'ವಿವಿದಿಷಂತಿ ಯಜ್ಞೇನ ದಾನೇನ ತಪಸಾ ನಾಶಕೇನ'** ಯಜ್ಞದಿಂದಲೂ, ದಾನದಿಂದಲೂ, ತಪಸ್ಸಿನಿಂದಲೂ, ಅನಶನವ್ರತದಿಂಲೂ ತಿಳಿಯಲಿಚ್ಛಿಸುತ್ತಾರೆ. ಎನ್ನುವ ಶ್ರುತಿಯಿಂದ 'ಸ್ವರ್ಗಕಾಮಃ ಪಶುಕಾಮಃ ಇತ್ಯಾದಿಗಳಿಂದ ಹೇಳಲ್ಪಟ್ಟ ಫಲವನ್ನು ಅಪೇಕ್ಷಿಸ ಬಾರದು. ನಿಷ್ಕಾಮಕರ್ಮವೂ ಕೂಡಾ ಜ್ಞಾನದಲ್ಲಿ ಸಹಕಾರ್ಯಂತರವು ॥೯೮॥

ಪ್ರಬಲರಾದ ರಾಕ್ಷಸರಿಂದಲೂ ಈ ಕ್ರಮವನ್ನುಲ್ಲಂಘಿಸಕೂಡದು. ಎನ್ನುವಲ್ಲಿ ಹೇತುವನ್ನು ಹೇಳುತ್ತಾರೆ.—

ಮೂ ॥ ನಿಯಮೋಽಯಂ ಹರೇರ್ಯಸ್ಮಾನ್ನೋಲ್ಲಂಘ್ಯಃ ಸರ್ವಚೇತನೈಃ ॥
ಸತ್ಯಸಂಕಲ್ಪತೋ ವಿಷ್ಣುರ್ನಾನ್ಯಥಾ ತು(ಚ) ಕರಿಷ್ಯತಿ ॥೯೯ ॥

ಅ ॥ ಯಾವ ಕಾರಣದಿಂದೆಯಿಂದ ಶ್ರೀ ಹರಿಯ ಈ ನಿಯಮನವು(ಆಜ್ಞೆಯು) ಎಲ್ಲಾ ಚೇತನದಿಂದ ಉಲ್ಲಂಘಿಸಲಿಕ್ಕೆ ಸಾಧ್ಯವಾದುದಲ್ಲವೋ (ಶ್ರೀ ಹರಿಯಿಂದಲೇ ಕೆಲವು ವೇಳೆ ಈ ನಿಯಮವು ವ್ಯತ್ಯಾಸವಾಗಿ ಮಾಡಲ್ಪಡುವುದಾದರೆ ಉಲ್ಲಂಘಿಸಕೂಡದು ಎನ್ನುವುದು ಹೇಗೆ ಕೂಡುತ್ತದೆಂದರೆ) ಶ್ರೀ ವಿಷ್ಣುವು ಸತ್ಯಸಂಕಲ್ಪನಾದುದರಿಂದ ತಾನು ಮಾಡಿದ ನಿಯಮಕ್ಕೆ ವ್ಯತ್ಯಾಸವನ್ನು ಮಾಡಲಾರನು. (ಅಂದರೆ ಮಾಡುವುದೇ ಇಲ್ಲವು.) ॥೯೯॥

ಭಕ್ತಿ ಜ್ಞಾನಗಳಿಂದಲೇ ಮುಖ್ಯವಾಗಿ ಮೋಕ್ಷವೆಂದು ಹೇಳಿದ್ದು ಅಯುಕ್ತವು. ಕೆಲವು ಕಡೆ ದಾನಾದಿಗಳಿಂದಲೂ ಮೋಕ್ಷಾದಿಗಳು ಶ್ರುತಗಳಾಗಿವೆ ಎಂದರೆ—

ಮೂ ॥ ದಾನತೀರ್ಥತಪೋಯಜ್ಞ ಪೂರ್ವಾಃಸರ್ವೇಽಪಿ ಸರ್ವದಾ ॥
ಅಂಗಾನಿ ಹರಿಸೇವಾಯಾಂ ಭಕ್ತಿಸ್ತ್ವೇಕಾ ವಿಮುಕ್ತಯೇ ॥೧೦೦ ॥
ಭವಿಷ್ಯತ್ಪರ್ವವಚನಮಿತ್ಯೇತದಖಿಲಂ ಪರಂ ॥೧೦೧॥

ಅ ॥ ಮಹಾದಾನ, ಗಂಗಾದಿ ತೀರ್ಥಸ್ನಾನ, ಕೃಚ್ಛ್ರ ಚಾಂದ್ರಾಯಣಾದಿತಪಸ್ಸು, ಅಶ್ವಮೇಧಯಜ್ಞ ಮೊದಲಾದ ಎಲ್ಲಾ ಕರ್ಮಗಳೂ ಯಾವಾಗಲೂ ಶ್ರೀ ಹರಿಯ ನಿರಂತರ ಧ್ಯಾನಾಖ್ಯಸೇವೆಯಲ್ಲಿಯೂ (ಭಕ್ತಿಯಲ್ಲಿಯೂ ಕೂಡ) ಅಂಗಗಳೇ. ಮೋಕ್ಷಕ್ಕಾಗಿ ಭಕ್ತಿಯೇ ಮುಖ್ಯವಾದ ಸಾಧನವು. (ಅಂದರೆ ಜ್ಞಾನ ವೈರಾಗ್ಯಗಳು ಮುಕ್ತಿಗಾಗಿ ಅಪೇಕ್ಷಿತಗಳಾದರೂ ಭಕ್ತಿಯೇ ಮುಖ್ಯಸಾಧನವಾಗಿರುವುದರಿಂದ 'ಏಕಾ' ಎಂದು ಹೇಳಿರುವರು. ಹೀಗೆ ಹಿಂದೆ ಹೇಳಿದ ಅಖಿಲಾರ್ಥವನ್ನು ಪ್ರತಿಪಾದಿಸತಕ್ಕುದು ಶ್ರೀ ಹರಿಗೆ ಸರ್ವೋತ್ತಮತ್ವವನ್ನು ಪ್ರತಿಪಾದಿಸುವುದರಿಂದ ಉತ್ತಮವಾದುದು ಇಂತಹ ಭವಿಷ್ಯತ್ಪರ್ವದಲ್ಲಿರುವ ವಾಕ್ಯವು ಇದೆ.

ವಿಶೇಷಾಂಶ — (1) **'ಕರ್ಮಣಾ ಜ್ಞಾನಮಾತನೋತಿ'** ಕರ್ಮದಿಂದ ಜ್ಞಾನವನ್ನು ಹೊಂದುತ್ತಾನೆನ್ನುವ ಶ್ರುತಿಯಿಂದ ದಾನಾದಿಗಳು ಅಂತಃಕರಣಶುದ್ಧಿದ್ವಾರಾ ಜ್ಞಾನಕ್ಕೆ ಅಂಗಗಳು (2) ದೇವತೆಗಳು ಮುಕ್ತಿಯೋಗ್ಯರು, ಅಸುರರು ತಮೋಯೋಗ್ಯರು. ಮಧ್ಯಮ ಮನುಷ್ಯರು ನಿತ್ಯಸಂಸಾರಿಗಳು ಈ ನಿಯಮವನ್ನು ಬಿಟ್ಟು ಅಯೋಗ್ಯವಾದುದನ್ನು ಇಚ್ಛಿಸಿದರೆ ಅಧಃಪಾತವು ಎನ್ನುವ ಅರ್ಥವನ್ನು ಪ್ರತಿಪಾದಿಸತಕ್ಕ ಪರಮಪುರುಷರಾದ ವ್ಯಾಸರು ಮಾಡಿರುವುದರಿಂದ ನಿರ್ದೋಷವಾದ ಭವಿಷ್ಯತ್ಪರ್ವದ ವಚನವಿದೆ ॥೧೦೦ ॥ ೧೦೧ ॥

ದೇವತೆಗಳು ಮುಕ್ತಿಯೋಗ್ಯರು ಇತ್ಯಾದಿಗಳಿಂದ ಹೇಳಲ್ಪಟ್ಟ ಅರ್ಥವನ್ನು ಶ್ರುತಿಯಿಂದಲೂ ಸಮರ್ಥಿಸುತ್ತಾರೆ—

ಮೂ ॥ ಶೃಣ್ವೇ ವೀರ ಉಗ್ರಮುಗ್ರಂ ದಮಾಯ-
ನ್ನನ್ಯಮನ್ಯಮತಿ ನೇನೀಯಮಾನಃ ॥
ಏಧಮಾನದ್ವಿಳುಭಯಸ್ಯ ರಾಜಾ
ಚೋಷ್ಕೂಯತೇ ವಿಶ ಇಂದ್ರೋ ಮನುಷ್ಯಾನ್ ॥೧೦೨ ॥

ಅ ॥ ವೀರಃ-ಪ್ರಾರಬ್ಧಾಂತಗಾಮಿಯಾದ ನಾರಾಯಣನು, ಉಗ್ರಮುಗ್ರಂ-ಲೋಕಕ್ಕೆ ಉಪದ್ರವವನ್ನು ಮಾಡುವುದರಿಂದ ಅತಿಕ್ರೂರರಾದ ದೈತ್ಯರ ಸಮೂಹವನ್ನು, ದಮಾಯನ್– ಅತಿದೀರ್ಘಕಾಲದಲ್ಲಿ ಅಂಧಂತಮಸ್ಸಿನಲ್ಲಿ ಶಿಕ್ಷಿಸುತ್ತಾ ಅನ್ಯಮನ್ಯಂ- ಕ್ರೂರರಿಂದ ಇತರರಾದ ಶಮಾದಿಗುಣಯುಕ್ತರಾದ ಬ್ರಹ್ಮ ಮೊದಲಾದ ಸಜ್ಜರ ಸಮುದಾಯವನ್ನು, ಅತಿ–ಅತಿಶಯಿತವಾದ ಸ್ಥಾನವನ್ನು, ನೇನೀಯಮಾನಃ- ಅತ್ಯಂತವಾಗಿ ಹೊಂದಿಸಿಕೊಡುವವನಾಗಿ, ಶೃಣ್ವೇ– ಕೇಳಲ್ಪಡುತ್ತಾನೆ. (ದೇವತೆಗಳಿಗೂ ಅಸುರರಿಗೂ ಇಬ್ಬರಿಗೂ ಸ್ವಾಧೀನತ್ವವಿದ್ದುದರಿಂದ ಯಾರಿಗೂ ವ್ಯತ್ಯಾಸಮಾಡಲಿಕ್ಕೆ ಸಾಧ್ಯವಿಲ್ಲವೆನ್ನುತ್ತಾರೆ.) ಉಭಯಸ್ಯ-ದೇವತೆಗಳ ವರ್ಗಕ್ಕೂ ಅಸುರರ ವರ್ಗಕ್ಕೂ, ರಾಜಾ-ನಿಯಾಮಕನಾದ, ಇಂದ್ರಃ–ಪರಮೈಶ್ವರ್ಯವುಳ್ಳ ನಾರಾಯಣನು, (ಭಕ್ತನಾದ ಬಲಿಯನ್ನು ಏಕೆ ಅಧೋಲೋಕಕ್ಕೆ ಒಯ್ದಿದ್ದನು ಎಂದರೆ—) ಏಧಮಾನದ್ವಿಟ್–ಕ್ರೂರವಾದ ತಪಸ್ಸು ಮೊದಲಾದವುಗಳ ಶಕ್ತಿಯಿಂದ ಯೋಗ್ಯತೆಯನ್ನು ಅತಿಕ್ರಮಿಸಿ ಅಭಿವೃದ್ಧನಾದವನನ್ನು ದ್ವೇಷಿಸುವವನಾಗಿ, (ಅಂದರೆ ತದತಿಕ್ರಮವನ್ನು ಸಹಿಸದೆ ಇರುವವನಾಗಿ) ವಿಶಃ-ಕೃಷೀವಲಾದಿಗಳಂತೆಯೇ ಪ್ರಾಯಶಃ ತನ್ನ ಉದರಪೂರಣಕ್ಕೆ ಉಪಯುಕ್ತವಾದ ಮಧ್ಯಮಮಾರ್ಗವನ್ನೇ ಹೊಂದಿರುವ, ಮನುಷ್ಯಾನ್-ದೈತ್ಯಾದಿಗಳಂತೆಯೇ ಅತ್ಯುಗ್ರರೂ ಆಗದಿರುವ ದೇವಾದಿಗಳಂತೆಯೇ ಅತಿಶಾಂತರೂ ಆಗದಿರುವ ಮನುಷ್ಯರನ್ನು, ಅಥವಾ ವಿಶಃ– ಕೆಲವುವೇಳೆ ಅಧಮರನ್ನು ಪ್ರವೇಶಿಸುವ,ಕೆಲವುವೇಳೆ ಉತ್ತಮರನ್ನು ಪ್ರವೇಶಿಸುವ,ಮನುಷ್ಯಾನ್ ಮಧ್ಯಮಜೀವರನ್ನು, ಚೋಷ್ಕೂಯತೇ - ಸ್ವರೂಪಭೂತವಾದ ಸುಖದುಃಖಾಖ್ಯವಾದ ನಿತ್ಯ ಸಂಸಾರದಲ್ಲಿಯೇ ಪ್ರವರ್ತಿಸುತ್ತಾನೆ.

ವಿಶೇಷಾಂಶ—ಕ್ರೂರವಾದ ತಪ ಆದಿ ಶಕ್ತಿಯಿಂದ ಅಭಿವೃದ್ಧನಾದವನ ಅತಿಕ್ರಮವನ್ನು ಸಹಿಸುವುದಿಲ್ಲ. ಆದುದರಿಂದಲೇ ತನ್ನಕ್ಕಿಂತ ಉತ್ತಮನಾದ ಗರುಡನಿಗೆ ದ್ರೋಹವನ್ನು ಮಾಡಿದ ಕಾಳಿಂಗನನ್ನು ಮರ್ದಿಸಿರುವನು. ಗರುಡ ಕಾಳಿಂಗ ಇವರಿಬ್ಬರಿಗೂ ಅಂತ್ಯದಲ್ಲಿ ಮಹತ್ತಾದ ಐಶ್ವರ್ಯವನ್ನು ಕೊಟ್ಟುದರಿಂದ ತಾತ್ಕಾಲಿಕವೇ ದ್ವೇಷವು. ದೈತ್ಯಾದಿಗಳಲ್ಲಿ ಇದ್ದಂತೆಯೇ ಸದಾತನವಲ್ಲವೆಂದು ತಿಳಿಯತಕ್ಕುದು ॥೧೦೨॥

ದೈತ್ಯರು ಬಹುತರ ಸೇವೆಯನ್ನು ಮಾಡಿದರೂ, ಶ್ರೀಹರಿಯು ಆಂಗೀಕರಿಸುವುದಿಲ್ಲವೆನ್ನುವಲ್ಲಿ ಶ್ರುತಿಯನ್ನು ಹೇಳುತ್ತಾರೆ—

ಮೂ ಪರಾ ಪೂರ್ವೇಷಾಂ ಸಖ್ಯಾ ವೃಣಕ್ತಿ
ವಿತರ್ತುರಾಣೋ ಅಪರೇಭಿರೇತಿ ॥
ಆನಾನುಭೂತೀರವಧೂನ್ವಾನಃ
ಪೂರ್ವೀರಿಂದ್ರಃ ಶರದಸ್ತರ್ತರೀತಿ ॥೧೦೩॥

ಅ ॥ ಇಂದ್ರಃ-ಪರಮೈಶ್ವರ್ಯವುಳ್ಳ ಶ್ರೀಹರಿಯು, ಪೂರ್ವೇಷಾಂ–ಪೂರ್ವೋಕ್ತರಾದ ದೈತ್ಯರ, ಸಖ್ಯಾ–ಮೈತ್ರ್ಯಗಳನ್ನು, ಪರಾವೃಣಕ್ತಿ–ದೂರದಲ್ಲಿಯೇ ಭೇದಿಸುತ್ತಾನೆ. (ಅಂದರೆ ಪರಿತ್ಯಾಗಮಾಡುತ್ತಾನೆ). (ಆದುದರಿಂದ ಸುರದ್ವೇಷಿಗಳಿಗೆ ಯಾವಾಗಲೂ ಊರ್ಧ್ವಗತಿ ಇಲ್ಲ.) ವಿತರ್ತುರಾಣಃ-ವಿಶೇಷವಾಗಿ ವೇಗವುಳ್ಳವನು, ಅಪರೇಭಿಃ-ಉತ್ತರದಲ್ಲಿ ಹೇಳಲ್ಪಟ್ಟ ದೇವತೆಗಳಿಂದ, ಸಖ್ಯಾ = ಮೈತ್ರ್ಯಗಳನ್ನು, ಏತಿ - ಹೊಂದುತ್ತಾನೆ. ಆನಾನುಭೂತೀಃ–

ಕೇವಲ ಕ್ರೂರರೆಲ್ಲ ಮತ್ತೆ ಶ್ರೀ ಹರಿಯ ಜ್ಞಾನವಿರಹಿತರೂ ಆದವರನ್ನು, ಅವಧೂನ್ವಾನಃ= ಅಧೋಲೋಕವಾದ ತಮಸ್ಸಿನಲ್ಲಿ ಇರಿಸುವ, ಇಂದ್ರಃ– ಪರಮೈಶ್ವರ್ಯಸಂಪನ್ನನಾದ ಶ್ರೀ ಹರಿಯು, ಪೂರ್ವೀಃ=ಮೊದಲಿನ, ಶರದಃ–ಸಂವತ್ಸರಗಳನ್ನು, (ಹೀಗೆಯೇ ದಾಟಿರುವನು.) (ಈಗ ಇರತಕ್ಕ) ಶರದಃ – ಸಂವತ್ಸರಗಳನ್ನು, ತರ್ತರೀತಿ – ಅತಿಶಯವಾಗಿ ದಾಟುತ್ತಾನೆ. (ಮುದಿನ ಸಂವತ್ಸರಗಳನ್ನೂ ದಾಟುವನು.)

ವಿಶೇಷಾಂಶ— 'ಪೂರ್ವೀಃ' ಎಂದು ಅತೀತಪ್ರಯೋಗವನ್ನೂ 'ತರ್ತರೀತಿ' ಎಂದು ವರ್ತಮಾನಪ್ರಯೋಗವನ್ನೂ ಮಾಡಿರುವುದರಿಂದ ಭವಿಷ್ಯತ್ಕಾಲಕ್ಕೂ ಉಪಲಕ್ಷಕವಾಗಿ ಕಾಲ ತ್ರಯ ತರಣವೂ ಅಭಿಪ್ರೇತವಾಗಿದೆ. ॥ ೧೦೩ ॥

ಜ್ಞಾನವೇ ಮೋಕ್ಷಸಾಧನವು, ಬೇರೆಯಲ್ಲ, ಎನ್ನುವಲ್ಲಿ ಶ್ರುತಿಯನ್ನು ಹೇಳುತ್ತಾರೆ—

ಮೂ ॥ **ತಮೇವಂ ವಿದ್ವಾನಮೃತ ಇಹ ಭವತಿ**
ನಾನ್ಯಃ ಪಂಥಾ ಅಯನಾಯ ವಿದ್ಯತೇ ॥
ತಮೇವಂ (ನ) ವಿದಿತ್ವಾತಿಮೃತ್ಯುಮೇತಿ
ನಾನ್ಯಃ ಪಂಥಾ ವಿದ್ಯತೇ ಅಯನಾಯ ॥ ೧೦೪ ॥

ಅ ॥ ಆ ಪರಮಾತ್ಮನನ್ನು,**'ಸಹಸ್ರಶೀರ್ಷಾ ಪುರುಷಃ'** ಇತ್ಯಾದಿಪ್ರಕಾರದಿಂದ ಇಲ್ಲಿ ತಿಳಿದವನು (ಕೊನೆಗೆ) ಮುಕ್ತನಾಗುತ್ತಾನೆ. ಮೋಕ್ಷಕ್ಕಾಗಿ ಬೇರೆ ಮಾರ್ಗವಿಲ್ಲ. ಆ ಪರಮಾತ್ಮನನ್ನು ಹೀಗೆ ತಿಳಿದುಕೊಂಡು, ಮೃತ್ಯುವನ್ನು ಅತಿಕ್ರಮಿಸಿರತಕ್ಕ ಮೋಕ್ಷವನ್ನು ಹೊಂದುತ್ತಾನೆ. ಮೋಕ್ಷಕ್ಕೋಸ್ಕರ ಬೇರೆ ಮಾರ್ಗವಿಲ್ಲ. ॥೧೦೪॥

ಮುಮುಕ್ಷುವಿಗೆ ಶ್ರೀ ಹರಿಯ ಭಕ್ತಿಯಂತೆ ಗುರುಭಕ್ತಿಯೂ ಅಪೇಕ್ಷಿತವಾಗಿದೆ. ಎನ್ನುವುದನ್ನು ಪ್ರಮಾಣದಿಂದ ದೃಢೀಕರಿಸುತ್ತಾರೆ—

ಮೂ ॥ **<u>ಯಸ್ಯ ದೇವೇ ಪರಾ ಭಕ್ತಿರ್ಯಥಾ ದೇವೇ ತಥಾ ಗುರೌ</u> ॥**
ತಸ್ಯೈತೇ ಕಥಿತಾ ಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ ॥೧೦೫॥

ಅ ॥ ಯಾರಿಗೆ ಶ್ರೀಹರಿಯಲ್ಲಿ ಉತ್ಕೃಷ್ಟವಾದ ಭಕ್ತಿಯಿದೆಯೋ, ಬ್ರಹ್ಮಾದಿದೇವತೆಗಳಲ್ಲಿ ಯೋಗ್ಯತಾನುಸಾರವಾಗಿ ಭಕ್ತಿಯು. ಹಾಗೆಯೇ ಗುರುಗಳಲ್ಲಿಯೂ ಯೋಗ್ಯತಾನುಸಾರವಾಗಿ ಭಕ್ತಿಯಿದೆಯೋ, ಅಂತಹ ಮಹಾನುಭಾವನಿಗೆ ಹೇಳಲ್ಪಟ್ಟ ಈ ಅರ್ಥಗಳು(ಶಮದಮಾದಿಗಳು) ಪ್ರಕಾಶಿಸುತ್ತವೆ. ॥೧೦೫॥

ದಾನಾದಿಗಳು ಭಕ್ತಿಕಾರಣಗಳು, ಭಕ್ತಿಯೇ ಮುಕ್ತಿಸಾಧನವು ಎನ್ನುವಲ್ಲಿ ಶ್ರುತಿಯನ್ನು ಉದಾಹರಿಸುತ್ತಾರೆ—

ಮೂ ॥ **ಭಕ್ತ್ಯರ್ಥಾನ್ಯಖಿಲಾನ್ಯೇವ ಭಕ್ತಿರ್ನೋತ್ಪತ್ತ್ಯೈ ಕೇವಲಾ ॥**
ಮುಕ್ತಾನಾಮಪಿ ಭಕ್ತಿರ್ಹಿ ನಿತ್ಯಾನಂದಸ್ವರೂಪಿಣೀ ॥೧೦೬॥

ಆ ॥ ದಾನಾದಿಗಳೆಲ್ಲವೂ ಭಕ್ತಿಯೇ ಪ್ರಯೋಜನವಾಗಿ ಉಳ್ಳವುಗಳೇ. (ಅಂದರೆ ಭಕ್ತಿಯು ಹುಟ್ಟುವುದಕ್ಕಾಗಿಯೇ.) ಭಕ್ತಿಯು ಕೇವಲ ಮೋಕ್ಷಕ್ಕಾಗಿ. (ಫಲಪ್ರಾಪ್ತಿಪರ್ಯಂತವಾಗಿ ಭಕ್ತಿಯು, ಆ ಮೇಲೆ ಭಕ್ತಿಯು ನಿವೃತ್ತವಾಗುತ್ತದೋ ಏನು? ಎಂದರೆ—) ಮುಕ್ತರಿಗೂ ಕೂಡ ನಿತ್ಯವಾದ ಆನಂದಸ್ವರೂಪವುಳ್ಳ ಭಕ್ತಿಯಿದೆಯಷ್ಟೆ! ॥ ೧೦೬

ಭಕ್ತಿಲಕ್ಷಣವನ್ನು ಹೇಳುತ್ತಾರೆ—

ಮೂ ॥ **ಜ್ಞಾನಪೂರ್ವಃ ಪರಃ ಸ್ನೇಹೋ ನಿತ್ಯೋ ಭಕ್ತಿರಿತೀರ್ಯತೇ ॥**
ಇತ್ಯಾದಿ ವೇದವಚನಂ ಸಾಧನಪ್ರವಿಧಾಯಕಂ ॥೧೦೭ ॥

ಅ ॥ ಮಾಹಾತ್ಮ್ಯಜ್ಞಾನಪೂರ್ವಕವಾದ (ಪುತ್ರ-ಮಿತ್ರ-ಕಳತ್ರಾದಿಗಳಿಂದ) ಶ್ರೇಷ್ಠವಾದ ಸುದೃಢವಾದ ಸ್ನೇಹವು ಭಕ್ತಿಯೆಂದು ಹೇಳಿಸಿಕೊಳ್ಳಲ್ಪಡುತ್ತದೆ. 'ತಮೇವಂ ವಿದ್ವಾನ್' ಇದು ಮೊದಲಾದ ವೇದವಾಕ್ಯವು ಭಕ್ತ್ಯಾದಿಸಾಧನವನ್ನು ವಿಧಿಸುವುದು (ಆಗುತ್ತದೆ.) ॥೧೦೭॥

ಭಕ್ತಿಯೇ ಶ್ರೇಷ್ಠಸಾಧನವು ಎನ್ನುವಲ್ಲಿ ಸ್ಮೃತಿಯನ್ನು ಉದಾಹರಿಸುತ್ತಾರೆ.—

ಮೂ ॥ **ನಿಃಶೇಷಧರ್ಮಕರ್ತಾಪ್ಯಭಕ್ತಸ್ತೇ ನರಕೇ ಹರೇ ॥**
ಸದಾ ತಿಷ್ಠತಿ ಭಕ್ತಶ್ಚೇದ್ಬ್ರಹ್ಮಹಾಪಿ ವಿಮುಚ್ಯತೇ॥ ೧೦೮ ॥

ಅ ॥ ಎಲೋ ಶ್ರೀ ಹರಿಯೇ, ನಿನ್ನ ಅಭಕ್ತನು ಪರಿಪೂರ್ಣ ಧರ್ಮಗಳನ್ನು ಮಾಡುವವನಾದಾಗ್ಯೂ ನರಕದಲ್ಲಿಯೇ ಯಾವಾಗಲೂ ಇರುತ್ತಾನೆ. ಬ್ರಹ್ಮಹತ್ಯೆಯನ್ನು ಮಾಡಿದವನಾದಾಗ್ಯೂ ಭಕ್ತನಾದರೆ ವಿಮುಕ್ತನಾಗುತ್ತಾನೆ. ॥೧೦೮॥

ಮೂ ॥ **ಧರ್ಮೋ ಭವತ್ಯಧರ್ಮೋಽಪಿ ಕೃತೋ ಭಕ್ತ್ಯೈಸ್ತವಾಚ್ಯುತ ॥**
ಸಾಪಂ ಭವತಿ ಧರ್ಮೋಽಪಿ ಯೋ ನಭಕ್ತ್ಯೈಃ ಕೃತೋ ಹರೇ ॥೧೦೯ ॥

ಅ ॥ ಎಲೋ ವಿನಾಶವಿಲ್ಲದಿರುವ ಶ್ರೀ ಹರಿಯೇ! ನಿನ್ನ ಭಕ್ತರಿಂದ ಮಾಡಲ್ಪಟ್ಟದ್ದು ಅಧರ್ಮವಾದಾಗ್ಯೂ ಧರ್ಮವಾಗುತ್ತದೆ. ಎಲೋ ಶ್ರೀ ಹರಿಯೇ! ಅಭಕ್ತರಿಂದ ಯಾವುದು ಮಾಡಲ್ಪಡುತ್ತದೋ (ಅದು) ಧರ್ಮವಾದಾಗ್ಯೂ ಯಜ್ಞಮೊದಲಾದುದು, ಪಾಪ ಫಲ-ಸಾಧನವಾಗುತ್ತದೆ. ॥೧೦೯॥

ಮೂ ॥ **ಭಕ್ತ್ಯಾ ತ್ವನನ್ಯಯಾ ಶಕ್ಯ ಅಹಮೇವಂವಿಧೋಽರ್ಜುನ ॥**
ಜ್ಞಾತುಂ ದ್ರಷ್ಟುಂ ಚ ತತ್ತ್ವೇನ ಪ್ರವೇಷ್ಟುಂ ಚ ಪರಂತಪ ॥ ೧೧೦ ॥

ಅ ॥ ಎಲೋ ಶತ್ರು ಸಂತಾಪಕನಾದ ಅರ್ಜುನನೇ! ಹೀಗೆ ವಿಶ್ವರೂಪನಾದ ನಾನು *ಅನನ್ಯಯಾ ರಮಾಬ್ರಹ್ಮಾದಿಗಳಲ್ಲಿ ಮಾಡಲ್ಪಡತಕ್ಕ ಭಕ್ತಿಯದೆಶೆಯಿಂದ ಅತಿಶಯಿತವಾದ ಭಕ್ತಿಯಿಂದ ಯಥಾಯೋಗ್ಯವಾಗಿ ಪರೋಕ್ಷವಾಗಿ ತಿಳಿಯಲಿಕ್ಕೂ (ಅಪರೋಕ್ಷವಾಗಿ) ನೋಡಲಿಕ್ಕೂ (ಮುಕ್ತಿಯಲ್ಲಿ) ಪ್ರವೇಶಮಾಡಲಿಕ್ಕೂ ಶಕ್ಯನು (ಆಗುವೆನು.) ೧೧೦॥

* ನ ವಿದ್ಯತೇ ಅನ್ಯಃ ವಿಷಯಃ ಯಸ್ಯಾಃ ಸಾ-ಯಾವುದಕ್ಕೆ ಬೇರೆ ವಿಷಯವು ಇಲ್ಲವೋ ಅದು ಅನನ್ಯಾ ಎಂದು ವ್ಯುತ್ಪತ್ತಿಯು.

ಮೋಕ್ಷಸಾಧನವನ್ನು ಹೇಳಿ ತಮಸ್ಸಾಧನವನ್ನು ಹೇಳುತ್ತಾರೆ—

ಮೂ ॥ ಅನಾದಿದ್ವೇಷಿಣೋ ದೈತ್ಯಾ ವಿಷ್ಣೌ ದ್ವೇಷೋ ವಿವರ್ಧಿತಃ ॥
ತಮಸ್ಯಂಧೇ ಪಾತಯತಿ ದೈತ್ಯಾನಂತೇ ವಿನಿಶ್ಚಯಾತ್ ॥೧೧೧ ॥

ಅ ॥ ದೈತ್ಯರು ಅನಾದಿಲಾಗಾಯಿತು (ವಿಷ್ಣುವಿನಲ್ಲಿಯೂ, ವಿಷ್ಣುಭಕ್ತರಲ್ಲಿಯೂ) ದ್ವೇಷವುಳ್ಳವರು. ಶ್ರೀ ವಿಷ್ಣುವಿನಲ್ಲಿ ಚೆನ್ನಾಗಿ ಅಭಿವೃದ್ಧವಾದ ದ್ವೇಷವು ದೈತ್ಯರನ್ನು ಅಂತ್ಯದಲ್ಲಿ (ಅಂದರೆ ದ್ವೇಷಸಮೃದ್ಧಿಯಾದ ಮೇಲೆ ಅಥವಾ ಪ್ರಲಯಾಂತ್ಯದಲ್ಲಿ) ವಿನಿಶ್ಚಯವಾಗಿ ಅಂಧಂ ತಮಸ್ಸಿನಲ್ಲಿ ಬೀಳಿಸುತ್ತದೆ. ॥೧೧೧॥

ಹಾಗಾದರೆ ದ್ವೇಷವು ಸಾಧನವಾಗಿರುವುದರಿಂದ ಫಲಪರ್ಯಂತವಾಗಿ ಇರುತ್ತದೆ. ಫಲವು ಸಿಕ್ಕಿದ ಮೇಲೆ ದ್ವೇಷವು ಇರುವುದಿಲ್ಲವೆಂದರೆ—

ಮೂ ॥ ಪೂರ್ಣದುಃಖಾತ್ಮಕೋ ದ್ವೇಷಃ ಸೋಽನಂತೋ ಹ್ಯವತಿಷ್ಠತೇ
ಪತಿತಾನಾಂ ತಮಸ್ಯಂಧೇ ನಿಃಶೇಷಸುಖವರ್ಜಿತೇ ॥೧೧೨ ॥

ಅ ॥ ಪರಿಪೂರ್ಣದುಃಖಸ್ವರೂಪವಾದ ನಿತ್ಯವಾದ; ಆ ದ್ವೇಷವು ಸ್ವಲ್ಪವೂ ಸುಖ ಸಂಬಂಧವಿಲ್ಲದಿರುವ ಅಂಧಂತಮಸ್ಸಿನಲ್ಲಿ ಬಿದ್ದವರಿಗೆ ಇರುತ್ತದೆ. ॥೧೧೨॥

ದ್ವೇಷಗಳು ಯಾವುವು ಎಂದರೆ ಅವುಗಳನ್ನು ತೋರಿಸುತ್ತಾರೆ.—

ಮೂ ॥ ಜೀವಾಭೇದೋ ನಿರ್ಗುಣತ್ವಮಪೂರ್ಣಗುಣತಾ ತಥಾ ॥
ಸಾಮ್ಯಾಧಿಕ್ಯೇ ತದನ್ಯೇಷಾಂ ಭೇದಸ್ತದ್ಗತ ಏವ ಚ ॥೧೧೩॥
ಸ್ಯಾದುರ್ಭಾವವಿಪರ್ಯಾಸಸ್ತದ್ಭಕ್ತದ್ವೇಷ ಏವ ಚ
ತತ್ಪ್ರಮಾಣಸ್ಯ ನಿಂದಾ ಚ ದ್ವೇಷಾ ಏತೇಽಖಿಲಾ ಮತಾಃ ॥ ೧೧೪ ॥

ಅ ॥ ಜೀವರಿಂದ ಅಭೇದವಿಷಯಕ ಜ್ಞಾನವೂ, (ಶ್ರೀ ಹರಿಗೆ) ನಿರ್ಗುಣತ್ವಜ್ಞಾನವೂ, ಪರಿಪೂರ್ಣ ಗುಣಗಳು ಇಲ್ಲವೆನ್ನುವ ಜ್ಞಾನವೂ, ಹಾಗೆಯೇ ಶ್ರೀ ಹರಿಗೂ ಇತರರಾದ ಬ್ರಹ್ಮಾದಿ ಗಳಿಗೂ ಸಾಮ್ಯಜ್ಞಾನವೂ, ಬ್ರಹ್ಮಾದಿಗಳಿಗೆ ಶ್ರೀ ಹರಿಯ ಸಕಾಶದಿಂದ ಆಧಿಕ್ಯಜ್ಞಾನವೂ, ಆ ಶ್ರೀ ಹರಿಯ ಅವಯವಗಳಲ್ಲಿರತಕ್ಕ ಅಥವಾ ಅವತಾರಗಳಲ್ಲಿರತಕ್ಕ ಭೇದಜ್ಞಾನವೂ, ಅವತಾರ ಗಳಲ್ಲಿ ಉತ್ಪನ್ನತ್ವ, ಮೃತತ್ವ, ಪ್ರಾಕೃತತ್ವ ಮೊದಲಾದ ಭ್ರಾಂತಿಯೂ, ಶ್ರೀ ಹರಿಯ ಭಕ್ತರ ವಿರೋಧವೂ, ಶ್ರೀ ಹರಿಗೆ ಸರ್ವೋತ್ತಮತ್ವ, ಗುಣಪರಿಪೂರ್ಣತ್ವ ಮೊದಲಾದುವುಗಳನ್ನು ಪ್ರತಿ ಪಾದಿಸತಕ್ಕ ವೇದಾದಿ ಪ್ರಮಾಣಗಳ ನಿಂದೆಯೂ, ಹೀಗೆ ಜೀವಾಭೇದ ಮೊದಲಾದ ಎಲ್ಲಾ ಒಂಭತ್ತು ವಿಧ (೯) ದ್ವೇಷಗಳು (ಪ್ರಾಮಾಣಿಕರಿಗೆ) ಸಮ್ಮತಗಳು ॥೧೧೩॥೧೧೪॥

ಭಕ್ತಿವಿಶೇಷವನ್ನು ಹೇಳುತ್ತಾರೆ—

ಮೂ ॥ ಏತೈರ್ವಿಹೀನಾ ಯಾ ಭಕ್ತಿಃ ಸಾ ಭಕ್ತೇರಿತಿ ನಿಶ್ಚಿತಾ ॥
ಅನಾದಿಭಕ್ತಿರ್ದೇವಾನಾಂ ಕ್ರಮಾದ್ವೃದ್ಧಿಂ ಗತೈವ ಸಾ ॥ ೧೧೫ ॥

ಅಪರೋಕ್ಷದೃಶೇರ್ಹೇತುರ್ಮುಕ್ತಿಹೇತುಶ್ಚ ಸಾ ಪುನಃ ॥
ಸೈವಾನಂದಸ್ವರೂಪೇಣ ನಿತ್ಯಾ ಮುಕ್ತೇಷು ತಿಷ್ಠತಿ ॥೧೧೬॥
ಯಥಾ ಶೌಕ್ಲ್ಯಾದಿಕಂ ರೂಪಂ ಗೋರ್ಭವತ್ಯೇವ ಸರ್ವದಾ ॥
ಸುಖಜ್ಞಾನಾದಿಕಂ ರೂಪಮೇವಂ ಭಕ್ತೇರ್ನ ಚಾನ್ಯಥಾ ॥೧೧೭॥

ಅ ॥ ಹಿಂದೆ ಹೇಳಿದ ಒಂಭತ್ತು ವಿಧಗಳಾದ ದ್ವೇಷಗಳಿಂದ ವಿರಹಿತವಾದುದು ಯಾವುದು ಭಕ್ತಿಯೋ, ಅದು ಭಕ್ತಿಯೆಂದು ನಿಶ್ಚಿತವಾಗಿದೆ. (ಇಂತಹ ಭಕ್ತಿಯು ಯಾರಿಗೆ ಇದೆ ಎಂದರೆ) ಅನಾದಿಯಾದ ಭಕ್ತಿಯು ದೇವತೆಗಳಿಗೆ ಇದೆ. ಕ್ರಮದಿಂದ ವೃದ್ಧಿಯನ್ನೇ ಹೊಂದಿದ ಆ ಭಕ್ತಿಯು ಅಪರೋಕ್ಷಜ್ಞಾನಕ್ಕೆ ಕಾರಣವು. ಪುನಃ ವೃದ್ಧಿಯನ್ನು ಹೊಂದಿದ ಆ ಭಕ್ತಿಯು ಮೋಕ್ಷಕ್ಕೂ ಕಾರಣವಾಗಿದೆ. ಆ ಭಕ್ತಿಯೇ ಮುಕ್ತರಲ್ಲಿ ಆವಾವ ಜೀವಾನಂದ ಸ್ವರೂಪದಿಂದ ನಿತ್ಯವಾದುದಾಗಿ ಇರುತ್ತದೆ. (ಆ ವಿಷಯದಲ್ಲಿ ದೃಷ್ಟಾಂತವನ್ನು ಹೇಳುತ್ತಾರೆ.) ಹೇಗೆ ಸರ್ವದಾ ಇರತಕ್ಕ ಶೌಕ್ಲ್ಯಮೊದಲಾದುದು (ವಸ್ತುವಿರುವತನಕ ಇರುವುದರಿಂದ ಸವಿಶೇಷಾಭಿನ್ನವಾದ ಪ್ರಯುಕ್ತ) ಗೋಪಿಂಡದ ಸ್ವರೂಪವು ಆಗಿಯೇ ಆಗುತ್ತದೋ? ಹೀಗೆಯೇ (ಮುಕ್ತಿಯಲ್ಲಿ) ಸುಖ ಜ್ಞಾನ ಮೊದಲಾದುದುಭಕ್ತಿಯ ಸ್ವರೂಪವು. ಕೇವಲ ನಿರ್ವಿಶೇಷಾ ಭೇದದಿಂದ ಅಲ್ಲ.

ವಿಶೇಷಾಂಶ — (1) ಭಕ್ತಿಯೂ ಜೀವಸ್ವರೂಪವಾಗಿರುವುದರಿಂದ ಆನಂದಜ್ಞಾನಾದಿ ಗಳಿಗೂ ಜೀವಸ್ವರೂಪತ್ವವಿದ್ದುದರಿಂದ ಭಕ್ತಿಯೇ ಆನಂದಸ್ವರೂಪದಿಂದ ಇರುತ್ತದೆಂದು ಹೇಳಿದ್ದು. (2) ಹೇಗೆ ಶೌಕ್ಲ್ಯಾದಿಗಳು ಗೋಪಿಂಡದ ಸ್ವರೂಪವೋ ಹಾಗೆಯೇ ಮುಕ್ತಿಯಲ್ಲಿ ಆನಂದ ಜ್ಞಾನ ಭಕ್ತ್ಯಾದಿಗಳಿಗೆ ಜೀವನಿಂದ ಕೂಡಿಯೂ ಅನ್ಯೋನ್ಯವಾಗಿಯೂ ಸವಿಶೇಷಾಭೇದ ವಿದ್ದಪ್ರಯುಕ್ತ ಭಕ್ತಿಗೂ ಆನಂದಸ್ವರೂಪತ್ವವಿದೆ. ಕೇವಲ ನಿರ್ವಿಶೇಷಾಭೇದದಿಂದ ಅಲ್ಲ. ಕೇವಲ ನಿರ್ವಿಶೇಷಾಭೇದವೇ ಆಗಿದ್ದರೆ ಅಪರ್ಯಾಯಶಬ್ದವಾಚ್ಯತ್ವವು ಬಾರದೆ ಹೋಗಬೇಕಾಗುವುದು. ನಿರ್ವಿಶೇಷಾಭಿನ್ನಗಳಾದ ಘಟ ಕರೀರ ಕಲಶ ಮೊದಲಾದವುಗಳನ್ನು ಹೇಳುವ ಈ ಶಬ್ದಗಳಲ್ಲಿ ಪರ್ಯಾಯದಿಂದಲೇ ವಾಚ್ಯತ್ವವಿರುವುದು. ಸಹ ಪ್ರಯೋಗವಿರುವುದಿಲ್ಲ. ಪೌನರುಕ್ತ್ಯವು ಬರಬೇಕಾಗುವುದು. ಜ್ಞಾನ - ಆನಂದ- ಭಕ್ತಿ ಮೊದಲಾದ ಶಬ್ದಗಳಾದರೂ ಪರ್ಯಾಯದಿಂದ (ಏಕಾರ್ಥಪ್ರತಿಪಾದಕತ್ವದಿಂದ) ಪ್ರಯುಕ್ತಗಳಾಗುವುದಿಲ್ಲ. ಮತ್ತೆ ಒಟ್ಟಿಗೇನೇ ಪ್ರಯುಕ್ತಗಳಾಗುತ್ತವೆ. ಈ ಅಪರ್ಯಾಯ ಶಬ್ದವಾಚ್ಯತ್ವವು ಭಿನ್ನಗಳಾದ ಘಟಪಟಾದಿಗಳಲ್ಲಿಯೂ ಭಿನ್ನಾಭಿನ್ನಗಳಾದ ಮೃದ್ಘಟಾದಿಗಳಲ್ಲಿಯೂ ಭೇದದಿಂದಲೇ ನಿರ್ವಾಹಮಾಡಲಿಕ್ಕೆ ಶಕ್ಯವಾಗುತ್ತದೆ. ಭೇದವಿಲ್ಲದಿರುವುದರಿಂದ ಅಭಿನ್ನಗಳಾದ ಸ್ವರೂಪಭೂತಗಳಾದ ಜ್ಞಾನ, ಆನಂದ ಮೊದಲಾದವುಗಳಲ್ಲಿಯೂ, ಮತ್ಸ್ಯಕೂರ್ಮಾದ್ಯವತಾರಗಳಲ್ಲಿಯೂ, ಶ್ರೀ ಹರಿಯ ಹಸ್ತಪಾದಾದಿಗಳಲ್ಲಿಯೂ ಭೇದಪ್ರತಿನಿಧಿಯಾದುದರಿಂದ ಒಂದು ಇದ್ದರೂ ಅವರ ನಾಶಾಖ್ಯವಾದ ಭೇದಾಸಾಧಾರಣಕಾರ್ಯವನ್ನು ಹೊರತು ಅದರಿಂದ ಇತರಗಳಾದ ಎಲ್ಲಾ ಭೇದಕಾರ್ಯಗಳನ್ನು ಮಾಡತಕ್ಕ ವಿಶೇಷದಿಂದಲೇ ಎಲ್ಲಾ ಕಡೆಗಳಲ್ಲಿಯೂ ನಿರ್ವಹಿಸತಕ್ಕುದು ॥೧೧೫॥ ೧೧೬ ॥ ೧೧೭ ॥

ಭಕ್ತಿಯಿಂದಲೇ ಮುಕ್ತನಾಗುತ್ತಾನೆ, ಎಂದು ಹೇಳಿದ್ದು ಅಯುಕ್ತವು. ಭಕ್ತಿಯು ಕೇವಲ ಭಗವತ್ಪ್ರಸಾದಸಾಧ್ಯವಾಗಿದೆ ಎಂದರೆ ಸತ್ಯವೇ; ಭಕ್ತಿಯಿಂದಲೇ ಶ್ರೀ ಹರಿಯು ಸಂತುಷ್ಟನಾಗುತ್ತಾನೆಂದು ಹೇಳುತ್ತಾರೆ—

ಮೂ ॥ ಭಕ್ತ್ಯೈವ ತುಷ್ಟಿಮಭ್ಯೇತಿ ವಿಷ್ಣುರ್ನಾನ್ಯೇನ ಕೇನಚಿತ್ ।।
ಸ ಏವ ಮುಕ್ತಿದಾತಾ ಚ ಭಕ್ತಿಸ್ತತ್ರೈವ (ಕ) ಕಾರಣಂ ॥೧೧೮॥
ಬ್ರಹ್ಮಾದೀನಾಂ ಚ ಮುಕ್ತನಾಂ ತಾರತಮ್ಯೇತು ಕಾರಣಂ ॥
ತಾರತಮ್ಯಸ್ಥಿತಾನಾದಿರ್ನಿತ್ಯಾ ಭಕ್ತಿರ್ನ ಚೇತರತ್ ॥೧೧೯॥

ಅ ॥ ಶ್ರೀ ಹರಿಯು ಭಕ್ತಿಯಿಂದಲೇ ಸಂತೋಷವನ್ನು ಹೊಂದುತ್ತಾನೆ. ಬೇರೆ ಯಾವುದರಿಂದಲೂ ಸಂತೋಷವನ್ನು ಹೊಂದುವುದಿಲ್ಲ. ಆ ಶ್ರೀ ಹರಿಯೇ ಮೋಕ್ಷವನ್ನು ಕೊಡ ತಕ್ಕವನು, ಭಕ್ತಿಯೇ ಮೋಕ್ಷದಲ್ಲಿ ಮುಖ್ಯ ಕಾರಣವು. ಬ್ರಹ್ಮನೇ ಮೊದಲಾದ ಮುಕ್ತರಿಗೂ ನೀಚೋಚ್ಚ ಭಾವದಲ್ಲಿ ತಾರತಮ್ಯದಿಂದ ಇರತಕ್ಕ ಅನಾದಿಯಾದ ನಿತ್ಯವಾದ ಭಕ್ತಿಯೇ ಕಾರಣವು ಇತರರಾದ ಕರ್ಮಮೊದಲಾದುದು ತಾರತಮ್ಯಕ್ಕೆ ಕಾರಣವಲ್ಲ. ॥೧೧೮॥೧೧೯॥

ಮನುಷ್ಯಾಧಮರಿಗೆ ತಮಸ್ಸು, ಮಧ್ಯಮರಿಗೆ ಮಿಶ್ರಫಲವು, ಉತ್ತಮಮನುಷ್ಯರಿಗೆ ಮುಕ್ತಿಯು ಎಂದು ಹಿಂದೆ ಹೇಳಲ್ಪಟ್ಟಿದೆ. ಆ ವಿಷಯದಲ್ಲಿ ಕ್ರಮದಿಂದ ಹೇತುವನ್ನು ಹೇಳುತ್ತಾರೆ—

ಮೂ ॥ ಮಾನುಷೇಷ್ವಧಮಾಃ ಕಿಂಚಿದ್ದ್ವೇಷಯುಕ್ತಾಃ ಸದಾ ಹರೌ ।।
ದುಃಖನಿಷ್ಠಾಸ್ತತಸ್ತೇಽಪಿ ನಿತ್ಯಮೇವ ನ ಸಂಶಯಃ ॥೧೨೦॥

ಅ ।। ಮನುಷ್ಯರಲ್ಲಿ ಅಧಮರಾದವರು ಯಾವಾಗಲೂ ಶ್ರೀಹರಿಯಲ್ಲಿ ಕಿಂಚಿತ್ ಕಲ್ಯಾದಿ ಗಳ ಅಪೇಕ್ಷೆಯಿಂದ ಸ್ವಲ್ಪ ದ್ವೇಷದಿಂದ ಕೂಡಿದವರು. ದ್ವೇಷದಿಂದ ಕೂಡಿರುವುದರಿಂದ ಮನುಷ್ಯಾಧಮರೂ ಕೂಡ ನಿತ್ಯದಲ್ಲಿಯೂ ದುಃಖದಲ್ಲಿ ಆಸಕ್ತರಾದವರೇ. (ಅಂದರೆ ದುಃಖ ಯುಕ್ತರೇ.) ಸಂದೇಹವಿಲ್ಲ.

ವಿಶೇಷಾಂಶ— 'ಸದಾ' ಎನ್ನುವುದರಿಂದ ಮನುಷ್ಯಾಧಮರಿಗೆ ಮಧ್ಯಮಧ್ಯದಲ್ಲಿ ಯಾವಾಗಲೂ ಭಕ್ತಿಗೆ ಅವಕಾಶವೇ ಇಲ್ಲವೆಂದು ಸೂಚಿತವಾಯಿತು. ಅದರಿಂದ ಮಧ್ಯಮ ಜೀವರದೆಶೆಯಿಂದ ವೈಲಕ್ಷಣ್ಯವೂ ಸಿದ್ಧವಾಯಿತು. ॥ ೧೨೦ ॥

ಮೂ ॥ ಮಧ್ಯಮಾ ಮಿಶ್ರಭೂತತ್ವಾನ್ನಿತ್ಯಂ ಮಿಶ್ರಫಲಾಃ ಸ್ಮೃತಾಃ ॥
ಕಿಂಚಿದ್ಭಕ್ತಿಯುತಾ ನಿತ್ಯಮುತ್ತಮಾಸ್ತೇನ ಮೋಕ್ಷಿಣಃ ॥ ೧೨೧॥

ಅ ॥ ಮಧ್ಯಮ ಮನುಷ್ಯರು ಶ್ರೀ ವಿಷ್ಣುಸರ್ವೋತ್ತಮತ್ವಾದಿ ವಿಷಯದಲ್ಲಿ ಸಂಶಯ ವುಳ್ಳವರಾದುದರಿಂದ ನಿತ್ಯದಲ್ಲಿಯೂ ಮಿಶ್ರವಾದ ಫಲವುಳ್ಳವರು(ಅಂದರೆ ಸುಖದುಃಖಾತ್ಮಕವಾದ ಮಿಶ್ರಫಲವುಳ್ಳವರು,) ಎಂದು ಹೇಳಲ್ಪಡುತ್ತಾರೆ. ಮನುಷ್ಯೋತ್ತಮರು ನಿತ್ಯದಲ್ಲಿಯೂ ಬ್ರಹ್ಮಾದಿಗಳ ಅಪೇಕ್ಷೆಯಿಂದ ಸ್ವಲ್ಪ ಭಕ್ತಿಯಿಂದ ಕೂಡಿದವರು. ಆದುದರಿಂದ ಮುಕ್ತಿಯುಳ್ಳವ ರಾಗುತ್ತಾರೆ.

ವಿಶೇಷಾಂಶ— ಮಾಹಾತ್ಮ್ಯಜ್ಞಾನದಲ್ಲಿ ಸಂಶಯವಿದ್ದುದರಿಂದ ಭಕ್ತಿಗೆ ಮಿಶ್ರತ್ವವು. ಮಿಶ್ರವಾದ ಭಕ್ತಿಯಿದ್ದುದರಿಂದಲೇ ಮಿಶ್ರಭೂತರು. ಅಥವಾ ಇತರರಾದ ಬ್ರಹ್ಮಾದಿಗಳಿಗೆ ಅಧಿಕ್ಯವಿಲ್ಲ. ಶ್ರೀ ವಿಷ್ಣುವಿಗೇನೇ ಸರ್ವೋತ್ತಮತ್ವವು ಎನ್ನುವ ಜ್ಞಾನದಲ್ಲಿ ಸಂಶಯವಿದ್ದುದರಿಂದ ಮಿಶ್ರಭೂತರು ॥೧೨೧॥

ಮೂ ॥ ಬ್ರಹ್ಮಣಃ ಪರಮಾ ಭಕ್ತಿಃ ಸರ್ವೇಭ್ಯಃ ಪರಮಸ್ತತಃ ॥
ಇತ್ಯಾದೀನಿ ಚ ವಾಕ್ಯಾನಿ ಪುರಾಣೇಷು ಪೃಥಕ್ಪೃಥಕ್ ೧೨೨॥

ಅ ॥ ಚತುರ್ಮುಖಬ್ರಹ್ಮನಿಗೆ ಎಲ್ಲರ ದೆಶೆಯಿಂದಲೂ ಉತ್ಕೃಷ್ಟವಾದ ಭಕ್ತಿಯು ಇದೆ. ಸರ್ವರ ದೆಶೆಯಿಂದ ಪರಮಭಕ್ತಿಯಿದ್ದುದರಿಂದಲೇ (ಚತುರ್ಮುಖಬ್ರಹ್ಮನು ಎಲ್ಲಾ ಜೀವರ ದೆಶೆಯಿಂದಲೂ) ಉತ್ತಮನು. ಹೀಗೆ ಉದಾಹರಿಸಿದ ವಾಕ್ಯವೇ ಆದಿಯಾಗಿವುಳ್ಳ ವಾಕ್ಯಗಳು ಪುರಾಣಗಳಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ಇರುತ್ತವೆ. ॥೧೨೨॥

'ಯಥಾ ದೇವೇ ತಥಾ ಗುರೌ' ಎಂದು ಗುರುಗಳು ಪ್ರಸಕ್ತರಾಗಿರುತ್ತಾರೆ. ಅವರಿಗೆ ಲಕ್ಷಣವನ್ನು ಹೇಳುತ್ತಾರೆ—

ಮೂ ॥ ಷಣ್ಣವತ್ಯಂಗುಲೋ ಯಸ್ತು ನ್ಯಗ್ರೋಧಪರಿಮಂಡಲಃ ।
ಸಪ್ತಪಾದಶ್ಚತುರ್ಹಸ್ತೋ ದ್ವಾತ್ರಿಂಶಲ್ಲಕ್ಷಣೈರ್ಯುತಃ ॥೧೨೩॥
ಅಸಂಶಯಃ ಸಂಶಯಚ್ಛಿದ್ಗುರುರ್ಮುಖ್ಯೋ ಮನೀಷಿಭಿಃ ।
ತಸ್ಮಾದ್ಬ್ರಹ್ಮಾ ಗುರುರ್ಮುಖ್ಯಃ ಸರ್ವೇಷಾಮೇವ ಸರ್ವದಾ ॥೧೨೪॥

ಅ ॥ ಯಸ್ತು – ಯಾವನು, ಷಣ್ಣವತ್ಯಂಗುಲಃ-ಪಾದವನ್ನಾರಂಭಿಸಿ ಕೇಶಪರ್ಯಂತ ಔನ್ನತ್ಯವನ್ನು ಎಣಿಕೆ ಮಾಡುವಾಗ ತೊಂಭತ್ತಾರು (೯೬) ಅಂಗುಲಿಗಳುಳ್ಳವನೋ (ಅಂದರೆ ಎಂಟು (೮) ವಿತಸ್ತಿ ಪ್ರಮಾಣವುಳ್ಳವನೋ) ನ್ಯಗ್ರೋಧಪರಿಮಂಡಲಃ-ನ್ಯಗ್ರೋಧಾಖ್ಯ ಸಂಖ್ಯೆಯಿಂದ (೪೮ ಅಂಗುಲಿಗಳಿಂದ) ಉದರದಲ್ಲಿ ಸುತ್ತಮುತ್ತಲೂ ಮಂಡಲಾಕಾರವುಳ್ಳವನೋ, ಸಪ್ತಪಾದ-ಇದೇ ಪರಿಮಾಣವನ್ನು ಪಾದದಿಂದ ಗಣನೆ ಮಾಡುವಾಗ ಏಳು ಪಾದ (ಹೆಜ್ಜೆ) ಗಳುಳ್ಳವನೋ, ನಾಲ್ಕು ಹಸ್ತ (ಮೊಳ)ಗಳುಳ್ಳವನೋ, ಮೂವತ್ತ್ಎರಡು (೩೨) ಲಕ್ಷಣಗಳಿಂದ ಕೂಡಿದವನೋ (ತಾನು) ಸಂಶಯವಿರಹಿತನೋ, (ಪರರ) ಸಂಶಯವನ್ನು ಪರಿಹರಿಸುವನೋ, (ಆತನು) ಜ್ಞಾನಿಗಳಿಂದ ಗುರುವು ಎಂದು (ಯಾವ ಕಾರಣದಿಂದ) ಹೇಳಿಸಿಕೊಳ್ಳಲ್ಪಡುತ್ತಾನೋ, ಆದುದರಿಂದ ಸರ್ವರಿಗೂ ಯಾವಾಗಲೂ ಚತುರ್ಮುಖಬ್ರಹ್ಮನೇ ಮುಖ್ಯ ಗುರುವು ಎಂದು ಹೇಳಿಸಿಕೊಳ್ಳಲ್ಪಡುತ್ತಾನೆ.

ವಿಶೇಷಾಂಶ... (1) ಎಂಟು (೮) ವಿತಸ್ತಿ (ಗೇಣು) ಪ್ರಮಾಣಗಳುಳ್ಳವನು. (2) ನ್ಯಗ್ರೋಧವೆನ್ನುವ ಪದದಿಂದ (೪೮)ಅಂಗುಲಿಗಳನ್ನು ಇಟ್ಟುಕೊಳ್ಳಬೇಕು. ಎತ್ತರದಿಂದ ಅರ್ಧ ಪ್ರಮಾಣದಿಂದ ಮಂಡಲಾಕಾರವುಳ್ಳವನು. **'ವ್ಯಾಮೋ ಬಾಹ್ವೋಃ ಸಕರಯೋಸ್ತತಯೋಸ್ತಿರ್ಯ್ಗಂತರಂ । ವ್ಯಾಮೋ ವಟಶ್ಚ ನ್ಯಗ್ರೋಧೌ'** ಎನ್ನುವ ಪ್ರಮಾಣದಿಂದ ತಿರ್ಯಕ್ ಕೃತಗಳಾದ ಬಾಹುಗಳಲ್ಲಿ ಒಂದು ಹಸ್ತದ ಮೇಲೆ ಒಂದು ಹಸ್ತವನ್ನು ಅಡ್ಡವಾಗಿ ಇಡುವಿಕೆಯು ತಿರ್ಯಕ್ ಕೃತಿಯೆನ್ನಿಸುತ್ತದೆ. ಹೀಗೆ ತಿರ್ಯಗ್ಭೂತಗಳಾದ ಬಾಹುಗಳು ಯಾವುದು ಮಧ್ಯ ಪ್ರದೇಶವೋ ಅದು ವ್ಯಾಮವೆಂದು ಹೇಳಲ್ಪಡುತ್ತದೆ. ಅದುವೇ ನ್ಯಗ್ರೋಧವು. ಹಸ್ತ(ಮೊಳ)ಗಳಿಂದ ಎಣಿಕೆಮಾಡಿದರೆ ನಾಲ್ಕು ಹಸ್ತ (೪ಮೊಳ) ವಾಗುತ್ತದೆ. ಒಂದೊಂದು ಹಸ್ತಗಳು ಎರಡು ವಿತಸ್ತಿ (೨ ಗೇಣು) ಪ್ರಮಾಣಗಳಾಗುತ್ತವೆ. (3) ಈ ಪರಿಮಾಣವನ್ನೇ ಪಾದದಿಂದ

ಎಣಿಕೆಮಾಡಿದಾಗ ೭ ಪಾದ (ಹೆಜ್ಜೆ)ಗಳು ಹೇಗೆ ಆಗುವವೋ, ಹಾಗೆಯೇ ಪಾದ (ಹೆಜ್ಜೆ)ಗಳೂ ಕೂಡ ತನಗೆ ಯೋಗ್ಯವಾದ ದೈರ್ಘ್ಯದಿಂದ ಕೂಡಿದವುಗಳು ಆಗುವವು. ಮನುಷ್ಯನು ಅತ್ಯಂತ ಹ್ರಸ್ವ(ಗಿಡ್ಡ)ನಾಗಿದ್ದರೂ ಗಿಡ್ಡು ಪಾದಗಳುಳ್ಳವನಾದರೂ, ಗಿಡ್ಡು ಕೈಗಳುಳ್ಳವನಾದರೂ ಪುರುಷನು ಲಕ್ಷಣಶೂನ್ಯನಾಗುತ್ತಾನೆ. (4) ಇವುಗಳು ದ್ವಾತ್ರಿಂಶತ್(೩೨) ಲಕ್ಷಣಗಳು. ೧ **'ಭುಜ ನೇತ್ರ ಹನು ಜಾನು ನಖಸ್ಥಾನೇಷು ಪಂಚ ದೈರ್ಘ್ಯಾಣಿ । ತಥಾ । ತ್ವಕ್ ಕೇಶಾಂಗುಲಿ ದಂತಾಂಗುಲಿ ಪರ್ವಸು ಪಂಚ ಸೌಕ್ಷ್ಮ್ಯಾಣಿ** । ಬಾಹುಗಳು, ಕಣ್ಣುಗಳು, ದವುಡೆ, ಮೊಣಕಾಲು, ನಖಸ್ಥಾನಗಳಲ್ಲಿ ದೈರ್ಘ್ಯಗಳು. ಅಂದರೆ ಈ ಐದು (೫) ಉದ್ದವಾಗಿರಬೇಕು. ಹಾಗೆಯೇ ಚರ್ಮ, ಕೇಶಗಳು, ಬೆರಳು, ಹಲ್ಲು, ಅಂಗುಲಿಪರ್ವ-ಇವುಗಳಲ್ಲಿ ಸೂಕ್ಷ್ಮತ್ವವು. ೨ ತಥಾ । **ಪಾಣಿತಳದ್ವಯೇ ಪಾದತಳದ್ವಯೇ ನೇತ್ರಾಂತೇ ತಾಲುಸ್ಥಾನೇ ಜಿಹ್ವಾಯಾಂ ಅಧರೋಷ್ಠೇ ನಖೇಷು ಚೇತಿ ಸಪ್ತ ಸ್ಥಾನೇಷು ಸಪ್ತ ರಕ್ತತ್ವಾನಿ** । ಎರಡು ಕೈಗಳ ತಳದಲ್ಲಿಯೂ, ಎರಡು ಪಾದಗಳ ತಳದಲ್ಲಿಯೂ, ಕಣ್ಣಿನ ಅಂತ್ಯದಲ್ಲಿಯೂ, ತಾಲುಸ್ಥಾನದಲ್ಲಿಯೂ, ನಾಲಗೆಯಲ್ಲಿಯೂ, ಕೆಳತುಟಿಯಲ್ಲಿಯೂ, ಉಗುರುಗಳಲ್ಲಿಯೂ ಹೀಗೆ ಏಳು(೭) ಸ್ಥಾನಗಳಲ್ಲಿ ರಕ್ತವರ್ಣವಿರಬೇಕು. **ವಕ್ಷಃ ಕುಕ್ಷ್ಯಲಿಕ ಸ್ಕಂಧ ಕರ ವಕ್ತ್ರೇಷು ಷಟ್ಸು ಸ್ಥಾನೇಷು ಔನ್ನತ್ಯಾನಿ ಷಟ್** - ಅಥವಾ **ಕಕ್ಷ ಕುಕ್ಷಿ ವಕ್ಷೋ ಘ್ರಾಣ ಸ್ಕಂಧ ಲಲಾಟೇಷು ಷಟ್ಸು ಔನ್ನತ್ಯಂ** ಕಕ್ಷ, ಹೊಟ್ಟೆ, ಉರಃಪ್ರದೇಶ, ಮೂಗು, ಭುಜ, ಶಿರಸ್ಸು, ಹಣೆ–ಈ ಆರಲ್ಲಿ(೬) ಔನ್ನತ್ಯವಿರಬೇಕು. **ಲಲಾಟ ಕಟಿ ವಕ್ಷಃಸು ತ್ರಿಷು ಸ್ಥಾನೇಷು ತ್ರೀಣಿ ಪೃಥುತ್ವಾನಿ** । ಹಣೆ, ಕಟಪ್ರದೇಶ, ವಕ್ಷಸ್ಥಳ - ಈ ಮೂರು ಸ್ಥಾನಗಳಲ್ಲಿ ಪೃಥುತ್ವ (ವಿಶಾಲತನ)ವಿರಬೇಕು. (5) **ಜಂಘಾಯಾಂ ಗ್ರೀವಾಯಾಂ ಮೇಹನೇಚತ್ರೀಣಿ ಹ್ರಸ್ವಾನಿ । ಸ್ವರ ಸತ್ವ ನಾಭಿಷುತ್ರಿಷು ಸ್ಥಾನೇಷು ಗಂಭೀರತ್ವಾನಿ**—ಮೊಣಕಾಲುಗಳಲ್ಲಿಯೂ, ಕುತ್ತಿಗೆಯಲ್ಲಿಯೂ, ಗುಹ್ಯಸ್ಥಾನದಲ್ಲಿಯೂ ಹ್ರಸ್ವತ್ವವಿರಬೇಕು ಸ್ವರ, ಬಲ, ಹೊಕ್ಕಳು–ಈ ಮೂರು (೩) ಸ್ಥಾನಗಳಲ್ಲಿ ಗಂಭೀರತ್ವವಿರಬೇಕು. (೫) **ಪಂಚದೀರ್ಘಃ ಪಂಚಸೂಕ್ಷ್ಮಃ ಸಪ್ತರಕ್ತಃ ಷಡುನ್ನತಃ । ತ್ರಿಪೃಥುಸ್ತ್ರಿಷು ಗಂಭೀರೋ ದ್ವಾತ್ರಿಂಶಲ್ಲಕ್ಷಣಸಿ ತಿಃ** ॥ ಹಿಂದೆ ಹೇಳಿದಪ್ರಕಾರ ಭುಜ ಮೊದಲಾದವು ಐದು (೫) ದೀರ್ಘವಾಗಿರಬೇಕು. ತ್ವಕ್‌ಮೊದಲಾದ ಐದು (೫) ಸೂಕ್ಷ್ಮವಾಗಿರಬೇಕು. ಹಸ್ತತಳ ಮೊದಲಾದ ಏಳು (೭) ಕೆಂಪಾಗಿರಬೇಕು. ವಕ್ಷಸ್ಥಳ ಮೊದಲಾದ ಆರು (೬) ಎತ್ತತವಾಗಿರಬೇಕು. ಲಲಾಟ ಮೊದಲಾದ ಮೂರು (೩) ವಿಶಾಲವಾಗಿರಬೇಕು. ಸ್ವರ ಮೊದಲಾದ ಮೂರಲ್ಲಿ (೩) ಗಾಂಭೀರ್ಯವಿರಬೇಕು. ಹೀಗೆ (೩೨) ಮೂವತ್ತ ಎರಡು ಲಕ್ಷಣಗಳ ಸ್ಥಿತಿಯು ಅಥವಾ ಸಾಮುದ್ರಿಕ ಶಾಸ್ತ್ರದಲ್ಲಿ ೧ **ಇಹ ಭವತಿ ಸಪ್ತರಕ್ತಃ ಷಡುನ್ನತಃ ಪಂಚಸೂಕ್ಷ್ಮ ದೀರ್ಘೋ ಯಃ । ತ್ರಿವಿಪುಲ ಲಘು ಗಂಭೀರೋ ದ್ವಾತ್ರಿಂಶಲ್ಲಕ್ಷಣಃ ಸ ಪುಮಾನ್** ॥ ಯಾರಿಗೆ ಏಳರಲ್ಲಿ (೭) ರಕ್ತಿಮಾ ಇದೆಯೋ, ಆರರಲ್ಲಿ (೬) ಔನ್ನತ್ಯವಿದೆಯೋ, ಐದರಲ್ಲಿ(೫. ಸೂಕ್ಷ್ಮತ್ವವೂ, ಎರಡರಲ್ಲಿ(೨) ದೈರ್ಘ್ಯವೂ ಇದೆಯೋ, ಮೂರರಲ್ಲಿ (೩) ವಿಪುಲತ್ವವೂ, ಲಘುತ್ವವೂ ಗಾಂಭೀರ್ಯವೂ ಇದೆಯೋ, ಅಂತಹ ಪುರುಷನು ದ್ವಾತ್ರಿಂಶತ್ (೩೨) ಲಕ್ಷಣಗಳುಳ್ಳವನು ೨ **ನಖ ಚರಣ ಪಾಣಿ ರಸನಾ ದಶನಛದ ತಾಲು ಲೋಚನಾಂತೇಷು । ಸ್ಯಾದ್ಯೋಕ್ತಃ ಸಪ್ತಸು ಸಪ್ತಾಂಗಾಂ ಸ ಲಭತೇ ಲಕ್ಷ್ಮೀಂ॥** ಯಾವನಿಗೆ ನಖ, ಪಾದ, ಹಸ್ತ, ಜಿಹ್ವಾ, ಹಲ್ಲುಗಳ ಬುಡ, ತಾಲುಸ್ಥಾನ, ಕಣ್ಣಿನ ಅಂತ್ಯ–ಈ ಏಳರಲ್ಲಿ ರಕ್ತಿಮಾ ಇದೆಯೋ, ಆತನು ಸರ್ವ ಸಂಪತ್ತನ್ನು ಹೊಂದುತ್ತಾನೆ. ೩ **ಷಟ್ಕಂ ಕಕ್ಷಾ ವಕ್ಷಃ ಕೃಕಾಟಿಕಾ ನಾಸಿಕಾ ನಖಾಸ್ಯ ಮಿತಿ । ಯಸ್ಯೇದಮುನ್ನತಂ ಸ್ಯಾದುನ್ನತಯಸ್ತಸ್ಯ ಜಾಯಂತೇ** ॥ ಕಕ್ಷ, ವಕ್ಷಃಪ್ರದೇಶ, ಕುತ್ತಿಗೆಯ ಎಲುಬು, ಮೂಗು, ಉಗುರು, ಲಾಲಟ–ಇವು ಆರು ಯಾರಿಗೆ ಉನ್ನತಗಳಾಗಿವೆಯೋ ಆತನು ಐಶ್ವರ್ಯವಂತನಾಗುತ್ತಾನೆ. ೪ **'ದಂತತ್ವಕ್ಕೇಶಾಂಗುಲಿ ಪರ್ವನಖಂ ಚೇತಿ**

ಪಂಚ ಸೂಕ್ಷ್ಮಾಣಿ। ಧನಲಕ್ಷಣೈರುಪೇತಾ ಭವಂತಿ ತೇ ಸ್ಯಾದ್ಯಶಃ ಪುರುಷಾಃ ॥ ೫ ॥ ನಯನ ಕುಚೌ ರಸನಾ ಹನು ಭುಜಮಿತಿ ಯಸ್ಯ ಪಂಚಕದೀರ್ಘಂ । ದೀರ್ಘಾಯುರ್ವಿತ್ತಕರಃ ಪರಾಕ್ರಮಿಾ ಜಾಯತೇ ನರಃ ॥ ೬ ॥ ಭಾಲಮುರೋವದನಮಿತಿ ತ್ರಿತಯಂ ಭೂಮೀಶ್ವರಸ್ಯ ವಿಪುಲಂ ಸ್ಯಾತ್ । ಗ್ರೀವಾಜಂಘಾಮೇಹನಮಿತಿ ತ್ರಿಕಂ ಲಘು ಮಹೀಶಸ್ಯ ॥೭॥ ಯಸ್ಯಸ್ವರೋಽಥ ನಾಭಿಃ ಸತ್ವಮಿದಂ ಚ ತ್ರಯಂ ಗಭೀರಂ ಸ್ಯಾತ್ । ಸಪ್ತಾಂಬುಧಿಕಾಂಚ್ಯಾ ಹಿ ಭೂಮೇಃ ಸ ಕರಗ್ರಹಂ ಕುರುತೇ ॥ ಹೀಗೆ ಸಾಮುದ್ರಿಕ ಶಾಸ್ತ್ರದಲ್ಲಿ ಹೇಳಿದ ಪ್ರಕಾರ ದ್ವಾತ್ರಿಂಶಲ್ಲಕ್ಷಣಗಳನ್ನು ತಿಳಿಯತಕ್ಕುದು ಹಿಂದಿನಂತೆಯೇ ಇವುಗಳ ಅರ್ಥಗಳನ್ನು ತಿಳಿಯತಕ್ಕುದು. ॥೧೨೩॥೧೨೪॥

ಬ್ರಹ್ಮನೇ ಮುಖ್ಯ ಗುರುವು ಎನ್ನುವುದರಿಂದ ಸೂಚಿತವಾದ ಅರ್ಥವನ್ನು ಹೇಳುತ್ತಾರೆ—

ಮೂ ॥ ಅನ್ಯೇಽಪಿ ಸ್ವಾತ್ಮನೋ ಮುಖ್ಯಾಃ ಕ್ರಮಾದ್ಗುರವ ಈರಿತಾಃ ।
ಕ್ರಮಾಲ್ಲಕ್ಷಣಹೀನಾಶ್ಚ ಲಕ್ಷಣಾಲಕ್ಷಣೈಃ ಸಮಾಃ ॥ ೧೨೫ ॥
ಮಾನುಷಾ ಮಧ್ಯಮಾಃ ಸನ್ಯಗ್ದುರ್ಲಕ್ಷಣಯುತಃ ಕಲಿಃ ।
ಸಮ್ಯಗ್ಲಕ್ಷಣಸಂಪನ್ನೋ ಯದ್ದದ್ಯಾತ್ಸುಪ್ರಸನ್ನಧೀಃ ॥ ೧೨೬ ॥

ಅ ॥ ತನ್ನ ದೆಶೆಯಿಂದ ಶ್ರೇಷ್ಠರಾದ ಇತರರೂ ಕೂಡ ತಾರತಮ್ಯ ಕ್ರಮದಿಂದ ಗುರುಗಳೆಂದು ಹೇಳಿಸಿಕೊಳ್ಳಲ್ಪಡುತ್ತಾರೆ. (ಕ್ರಮದಿಂದ ಗುರುತ್ವವಿಷಯದಲ್ಲಿ ಕಾರಣವನ್ನು ಹೇಳುತ್ತಾರೆ.) ಮನುಷ್ಯೋತ್ತಮರು ಕ್ರಮದಿಂದ ಲಕ್ಷಣಗಳಿಂದ ವಿರಹಿತರಾದವರೂ, (ಮತ್ತು ದುರ್ಲಕ್ಷಣಗಳಿಂದ ಕೂಡಿದವರೂ) ಲಕ್ಷಣವಾದರ ಬಹುಜಾಸ್ತಿಯಿದೆ. ಅಲಕ್ಷಣವಾದರೂ ಅತಿ ಕಡಿಮೆಯೇ.) (ಅವರಿಂದ ಇತರರಾದ ಮಧ್ಯಮ ಮನುಷ್ಯರಿಗೆ ಗುರುತ್ವಯೋಗ್ಯತೆಯೇ ಇಲ್ಲವೆನ್ನುತ್ತಾರೆ.) (ಅಥವಾ ಮನುಷ್ಯೋತ್ತಮರಿಂದ ಇತರರಾದವರಿಗೆ ಮೋಕ್ಷವಾಗದಿರಲಿಕ್ಕೆ ಏನು ಕಾರಣವು? ಎಂದರೆ। ಮಧ್ಯಮ ಮನುಷ್ಯರು ಲಕ್ಷಣಗಳಿಂದಲೂ, ಅಲಕ್ಷಣಗಳಿಂದಲೂ ಸಮಾನಿಕರು. (ಅಂದರೆ ಲಕ್ಷಣ–ದುರ್ಲಕ್ಷಣಗಳಿಂದ ಕೂಡಿದವರು. ಆದರಿಂದ ದ್ವೇಷ ಭಕ್ತಿಗಳು ಸಮಗಳಾಗಿರುವುದರಿಂದ ಅವರಿಗೆ ಮೋಕ್ಷವಿಲ್ಲ.) ಕಲಿಯು ಚೆನ್ನಾಗಿ ದುರ್ಲಕ್ಷಣಗಳಿಂದ ಕೂಡಿದವನು. (ಲಕ್ಷಣಲೇಶವೂ ಇಲ್ಲದೆ ಸರ್ವದುರ್ಲಕ್ಷಣಗಳಿಂದ ಕೂಡಿದವನು. ಶ್ರೀ ಹರಿಯಲ್ಲಿ ಸಮ್ಯಕ್ ದ್ವೇಷಗಳು ಇದ್ದುದರಿಂದ ಕಲಿಗೆ ಅಂಧಂತಮಃಪ್ರಾಪ್ತಿಯಾಗುತ್ತದೆ.)

ವಿಶೇಷಾಂಶ— 'ದ್ವಾತ್ರಿಂಶಲ್ಲಕ್ಷಣೈಃ ಸಮ್ಯಕ್ ಯುಕ್ತಾಃ ವಾಯುತ್ವಯೋಗ್ಯಕಾಃ । ಅಷ್ಟಾವಿಂಶಲ್ಲಕ್ಷಣೈಶ್ಚ ಗಿರೀಶಪದಯೋಗಿನಃ । ಚತುರ್ವಿಂಶತಿಮಾರಭ್ಯ ಷೋಡಶಾದಾಸುರಾಃ ಮತಾಃ । ಅಷ್ಟಕಾದ್ದೃಷಯಃ ಪ್ರೋಕ್ತಾಸ್ತದೂನಾಶ್ಚಕ್ರವರ್ತಿನಃ' ॥ ಮೂವತ್ತ ಎರಡು (೩೨) ಲಕ್ಷಣಗಳಿಂದ ಕೂಡಿದವರು ವಾಯುಪದವಿಗೆ ಯೋಗ್ಯರು. ಇಪ್ಪತ್ತೆಂಟು (೨೮) ಲಕ್ಷಣಗಳಿಂದ ಕೂಡಿದವರು ರುದ್ರಪದವಿಗೆ ಯೋಗ್ಯರು. ಇಪ್ಪತ್ತನಾಲ್ಕು (೨೪) ಲಕ್ಷಣಗಳನ್ನಾರಂಭಿಸಿ ಹದಿನಾರು (೧೬) ಲಕ್ಷಣಪರ್ಯಂತವಿರತಕ್ಕವರು ದೇವಪದವಿಗೆ ಯೋಗ್ಯರು. ಹದಿನಾರು (೧೬) ಲಕ್ಷಣಗಳನ್ನಾರಂಭಿಸಿ ಎಂಟು (೮) ಲಕ್ಷಣ ಪರ್ಯಂತವಿರತಕ್ಕವರು ಋಷಿಗಳೆಂದು ಹೇಳಿಸಿಕೊಳ್ಳಲ್ಪಡುತ್ತಾರೆ. ಅದಕ್ಕಿಂತ ಕಡಿಮೆ ಇರತಕ್ಕವರು ಚಕ್ರವರ್ತಿಗಳು ॥೧೨೫ ॥೧೨೬॥

ಗುರುಗಳ ಲಕ್ಷಣವನ್ನು ಹೇಳಿ ಅದರಿಂದ ಸಾಧ್ಯವಾದ ಪ್ರಯೋಜನವನ್ನು ಹೇಳುತ್ತಾರೆ–

ಮೂ ॥ ಸಮ್ಯಗ್ಲಕ್ಷಣಸಂಪನ್ನೋ ಯದ್ಬದ್ಯಾತ್ಸುಪ್ರಸನ್ನಧೀಃ ॥
ಶಿಷ್ಯಾಯ ಸತ್ಯಂ ಭವತಿ ತತ್ಸರ್ವಂ ನಾತ್ರ ಸಂಶಯಃ ॥
ಅಗನ್ಮ್ಯತ್ವಾದ್ಧರಿಸ್ತಸ್ಮಿನ್ನಾವಿಷ್ಟೋ ಮುಕ್ತದೋ ಭವೇತ್ ॥೧೨೭॥

ಅ ॥ ಸಮ್ಯಕ್ ಲಕ್ಷಣಗಳಿಂದ ಕೂಡಿದ ಗುರುವು ಚೆನ್ನಾಗಿ ಪ್ರಸನ್ನವಾದ ಬುದ್ಧಿಯುಳ್ಳವನಾಗಿ ಶಿಷ್ಯನಿಗೋಸ್ಕರ ಯಾವುದನ್ನು ಉಪದೇಶಕೊಡುವನೋ ಅವೆಲ್ಲವೂ ಸತ್ಯವಾಗುತ್ತದೆ. ಈ ವಿಷಯದಲ್ಲಿ ಸಂದೇಹವಿಲ್ಲ. (ಹಾಗಾದರೆ ಗುರುಗಳು ಶಿಷ್ಯನ ತಲೆಯಲ್ಲಿ ಕೈಯನ್ನು ಇಟ್ಟು ನೀನು ಸಂಸಾರವನ್ನು ದಾಟಿ ಸುಖವುಳ್ಳವನಾಗು, ಮುಕ್ತನಾಗು, ನೀನು ಶ್ರೀಹರಿಗೆ ಪ್ರಿಯನಾಗಿರುತ್ತಿ ಎಂದು ಆಶೀರ್ವಾದಮಾಡಬೇಕೆಂದು ಆಚಾರಕಾಂಡದಲ್ಲಿ ಹೇಳಲ್ಪಡುತ್ತದೆ. ಅದೂ ಸತ್ಯವಾಗುವುದಾದರೆ ಮೋಕ್ಷಪ್ರದತ್ವರೂಪವಾದ ಭಗವಲ್ಲಕ್ಷಣವು ಗುರುಗಳಲ್ಲಿ ಬರುತ್ತದೆ. ಬಾರದೆ ಇದ್ದರೆ ಹಿಂದೆ ಹೇಳಿದ್ದು ಆಯುಕ್ತವಾಗಬೇಕಾಗುವುದು ಎಂದರೆ) ಶ್ರೀ ಹರಿಯು ಹೊಂದಲಿಕ್ಕೆ ಅಶಕ್ಯನಾದುದರಿಂದ ಗುರುಗಳಲ್ಲಿ ಪ್ರವಿಷ್ಟನಾದವನಾಗಿ ಮೋಕ್ಷಪ್ರದನು ಆಗುವನು. (ಅಂದರೆ ಗುರುಗಳಿಂದ ಕೊಡಲ್ಪಟ್ಟ ಮೋಕ್ಷಾದಿಗಳು ಶ್ರೀಹರಿಯಿಂದಲೇ ಕೊಡಲ್ಪಡತಕ್ಕವುಗಳಿಂತ ಭಾವಿಸಬೇಕು.) ॥೧೨೭॥

ಈಗ ಗುರುಗಳ ಪ್ರಸಾದವನ್ನು ಆವಶ್ಯವಾಗಿ ಸಂಪಾದಿಸಬೇಕೆನ್ನುತ್ತಾರೆ—

ಮೂ ॥ ನಾತಿಪ್ರಸನ್ನಹೃದಯೋ ಯದ್ಬದ್ಯಾದ್ಗುರುರಪ್ಯಸೌ ॥
ನ ತತ್ಸತ್ಯಂ ಭವೇತ್ತಸ್ಮಾದರ್ಚನೀಯೋ ಗುರುಃ ಸದಾ ॥ ೧೨೮ ॥

ಅ ॥ ಈ ಗುರುಗಳು ಹಿತವನ್ನುಪದೇಶಮಾಡುವವರಾದಾಗ್ಯೂ ಅತ್ಯಂತ ಸಂತುಷ್ಟವಾಗದೆ ಇದ್ದ ಮನಸ್ಸುಳ್ಳವರಾಗಿ ಯಾವುದನ್ನು ಉಪದೇಶಕೊಡುವರೋ ಅದು ಸತ್ಯವಾಗಲಾರದು. ಗುರುಗಳ ಪ್ರಸಾದವು ಆವಶ್ಯಕವಾದುದರಿಂದ ಯಾವಾಗಲೂ ಗುರುಗಳು ಪೂಜಾರ್ಹರೇ,

ವಿಶೇಷಾಂಶ— (1) ಚತುರ್ಮುಖಬ್ರಹ್ಮನು **'ಯ ಏಷೋಽಂತರಕ್ಷಿಣಿ ಪುರುಷೋ ದೃಶ್ಯತೇ ಏಷ ಆತ್ಮೇತಿ ಹೋವಾಚ'** ಎನ್ನುವ ಒಂದೇ ಉಕ್ತಿಯಿಂದ ಇಂದ್ರ-ವಿರೋಚನರಿಗೆ ಏಕಕಾಲದಲ್ಲಿಯೇ ಉಪದೇಶಮಾಡಿದಾಗ್ಯೂ ವಿರೋಚನನು ಕಣ್ಣಿನ ಗುಡ್ಡಿನಲ್ಲಿ ಕಾಣಲ್ಪಡತಕ್ಕ ಪ್ರತಿಮೆಯೇ ಆತ್ಮನೆಂದು ತಿಳಿದುಕೊಂಡನು. ತಥಾಚ ಬಿಂಬಪ್ರತಿಬಿಂಬಗಳಿಗೆ ಐಕ್ಯವಿದ್ದುದರಿಂದ **' ಅಹಂ ಬ್ರಹ್ಮಾಸ್ಮಿ '** ಎನ್ನುವಲ್ಲಿಯೇ ಪರ್ಯವಸಿತವಾಗುವುದರಿಂದ ಮಿಥ್ಯಾಜ್ಞಾನದಲ್ಲಿಯೇ ವಿರೋಚನನಿಗೆ ದಾರ್ಢ್ಯವು ಉಂಟಾಯಿತು. ಇಂದ್ರನಿಗಾದರೂ **'ಸರ್ಪಿರ್ವೋದಕಂ ವಾ ಸಿಂಚತಿ ವರ್ತ್ಮನೀ ಏವಗಚ್ಛತಿ'** ಎನ್ನುವ ಶ್ರುತ್ಯುಕ್ತನ್ಯಾಯದಿಂದ ಯಾವ ಶ್ರೀಹರಿಯ ಸನ್ನಿಧಾನದಿಂದ ಕಣ್ಣೂ ಕೂಡ ಸಂಗರಹಿತವಾಯಿತೋ ಮುಖ್ಯವಾಗಿ ಸಂಗರಹಿತವಾದ ಚಕ್ಷುರಂತಸ್ಥನಾದಶ್ರೀ ನಾರಾಯಣನೇ ಪರಮಾತ್ಮನು ಎಂದು ತತ್ವಜ್ಞಾನದಲ್ಲಿಯೇ ದಾರ್ಢ್ಯವು ಉಂಟಾಯಿತು. ೧೨೮॥

ಇಂದ್ರನಿಗೆ ತನ್ನಕ್ಕಿಂತ ಅಮರನಾದ ಬೃಹಸ್ಪತಿಯೂ ಕೂಡ ಗುರುವಾಗಿದ್ದನು. ಆಗ ಹೇಗೆ ಪೂಜೆಯನ್ನು ಮಾಡುವುದೆಂದರೆ—

ಮೂ ॥ ಸ್ವಾವರಾಣಾಂ ಗುರುತ್ವಂ ತು ಭವೇತ್ಕಾರಣತಃ ಕ್ವಚಿತ್ ॥
ಮರ್ಯಾದಾರ್ಥಂ ತೇಽಪಿ ಪೂಜ್ಯಾ ನ ತು ಯದ್ವತ್ಪರೋ ಗುರುಃ ॥೧೭೯॥
ಇತ್ಯೇತತ್ಪಂಚರಾತ್ರೋಕ್ತಂ ಪುರಾಣೇಷ್ಯನುಮೋದಿತಂ ॥
ಯದಾ ಮುಕ್ತಿಪ್ರದಾನಾಯ(ನಸ್ಯ)ಸ್ವಯೋಗ್ಯಂ ಪಶ್ಯತಿ ಧ್ರುವಂ ॥೧೩೦॥
ರೂಪಂ ಹರೇಸ್ತದಾ ತಸ್ಯ ಸರ್ವಪಾಪಾನಿ ಭಸ್ಮಸಾತ್ ॥
ಯಾಂತಿ ಪೂರ್ವಾಣ್ಯುತ್ತರಾಣಿ ನ ಶ್ಲೇಷಂ ಯಾಂತಿ ಕಾನಿ ಚಿತ್ ॥೧೩೧॥

ಅ ॥ ತಮಗಿಂತ ಅವರೇರರಾದವರಿಗೂ ಕೂಡ ಗುರುತ್ವವು ಕೆಲವು ಕಡೆ ಕಾರಣವಿಶೇಷದಿಂದ ಆಗುವುದು. ಅಂತಹವರೂ ಕೂಡ ಮರ್ಯಾದೆಗೋಸ್ಕರ ಪೂಜ್ಯರೇ. ಉತ್ತಮರಾದ ಗುರುಗಳು ಹೇಗೆ ಪೂಜ್ಯರೋ ಹಾಗೆ ಪೂಜ್ಯರು ಆಲ್ಲವೇ ಅಲ್ಲ. ಈ ಪ್ರಕಾರ ಪ್ರತಿಪಾದಿಸಿಕೊಳ್ಳಲ್ಪಟ್ಟ ಈ ಅರ್ಥಸಮುದಾಯವು ಪಂಚರಾತ್ರದಲ್ಲಿಯೂ ಉಕ್ತವಾಗಿದೆ. ಪುರಾಣಗಳಲ್ಲಿ ಅನುಮೋದಿಸಿಕೊಳ್ಳಲ್ಪಟ್ಟಿದೆ. (ಶ್ರೀ ಪರಮಾತ್ಮನ ಅಪರೋಕ್ಷಜ್ಞಾನದಿಂದ ಮುಕ್ತಿಯು ಎಂದು ಹೇಳಲ್ಪಟ್ಟಿದೆ. ಆಗ(೧) ರಾಮಕೃಷ್ಣಾದ್ಯವತಾರಗಳನ್ನು ನೋಡಿದ ಅಸುರರಿಗೆ ಏಕೆ ಮುಕ್ತಿಯಾಗುವುದಿಲ್ಲ? (೨) ಮತ್ತು ಮುಕ್ತಿಯೋಗ್ಯರಿಗೆ ಭೋಕ್ತವ್ಯಪಾಪಗಳಿಗೆ ಅನಂತ್ಯವಿದ್ದುದರಿಂದ ಮುಕ್ತಿಯೂ ಹೇಗೆ ಆಗುವುದು? ಎನ್ನುವ ಎರಡು ಚೋದ್ಯಗಳನ್ನು ಪರಿಹರಿಸುತ್ತಾರೆ.) ಯಾವಾಗ ತನಗೆ ಮುಕ್ತಿಯನ್ನು ಕೊಡುವುದಕೋಸ್ಕರ (ತಾನು ಮುಕ್ತಿಯನ್ನು ಹೊಂದುವುದಕ್ಕೋಸ್ಕರ) ತನಗೆ ಯೋಗ್ಯವಾದ (ಬಿಂಬ ಮೂರ್ತಿ ಮೊದಲಾದ) ಶ್ರೀ ಹರಿಯು ರೂಪವನ್ನು ನೋಡುತ್ತಾನೋ ಆಗ ನೋಡತಕ್ಕ ಪುರುಷನ ಮೊದಲು ಸಂಚಿತಗಳಾದ ಸರ್ವ ಪಾಪಗಳೂ (ರಾಜಸವಾದ ಮಿಶ್ರವಾದ ಅನಿಷ್ಟ ಪುಣ್ಯವೂ ಕೂಡ) ನಿಶ್ಚಯವಾಗಿಯೂ ಭಸ್ಮಾಧೀನಗಳಾಗುತ್ತವೆ. ಅಪರೋಕ್ಷಜ್ಞಾನವಾದಮೇಲೆ ಮಾಡಲ್ಪಟ್ಟ ಕೆಲವು ಪಾಪಗಳೂ ಸಂಬಂಧವನ್ನು ಹೊಂದುವುದೇ ಇಲ್ಲ. (ಅಂದರೆ ತನ್ನ ಫಲಭೂತವಾದ ನರಕಾದಿಸಂಬಂಧವನ್ನು ಮಾಡಲಿಕ್ಕೆ ಸಮರ್ಥಗಳಾಗುವುದಿಲ್ಲ.)

ವಿಶೇಷಾಂಶ— (1) ಯಾವುದಾದರೊಂದು ಭಗವದ್ರೂಪವನ್ನು ಕಂಡುದರಿಂದ ಮುಕ್ತಿಯಾಗಲಾರದು, ಮತ್ತೆ ತನ್ನ ಬಿಂಬರೂಪವನ್ನು ನೋಡಿದರಿಂದಲೇ ಮುಕ್ತಿಯು. ಆದಕಾರಣ ಅಸುರರು ರಾಮಕೃಷ್ಣಾದಿರೂಪಗಳನ್ನು ನೋಡಿದರೂ ಮುಕ್ತಿಯಾಗಲಿಲ್ಲ ಹೀಗೆ ಎರಡು ಚೋದ್ಯಗಳ ಮಧ್ಯದಲ್ಲಿ ಒಂದನೇ ಚೋದ್ಯಕ್ಕೆ ಪರಿಹಾರವು ಸೂಚಿತವಾಯಿತು. ೨ನೇ ಚೋದ್ಯಕ್ಕೆ ಬಿಂಬಮೂರ್ತಿಯನ್ನು ನೋಡಿದಮೇಲೆ ಸರ್ವಪಾಪಗಳೂ ನಾಶವಾಗುತ್ತವೆನ್ನುವ ಪರಿಹಾರವನ್ನು ಮೂಲದಲ್ಲಿಯೇ ಸ್ಪಷ್ಟವಾಗಿ ಹೇಳಿರುವರು. (2) ಜ್ಞಾನವು ಹುಟ್ಟಿದ ಮೇಲೆಯೂ ಉತ್ತಮರ ದ್ರೋಹಾದಿಗಳಿಂದ ಹುಟ್ಟಿದ ಪಾಪಕ್ಕೆ ಸಂಬಂಧವಿದೆ. ಆದುದರಿಂದ ಕಾನಿಚಿತ್ ಎಂದು ಹೇಳಿರುವರು. (3) ಇಷ್ಟವು ಕಾಮ್ಯವು-ಅಕಾಮ್ಯವು, ಎಂದು ಎರಡು ವಿಧವು. ಕಾಮ್ಯನಾದ ಅನಾರಬ್ಧವಾದ ಪುಣ್ಯವನ್ನು ಸುಹೃತ್‌ಗಳಾದ ಪುತ್ರಾದಿಗಳು ಹೊಂದುತ್ತಾರೆ. ರಾಜಸವಾದ ಪುಣ್ಯವನ್ನು ಉದಾಸೀನರು ಹೊಂದುತ್ತಾರೆ. ಅಕಾಮ್ಯವಾದ ಅಗ್ನಿಹೋತ್ರಾದಿಗಳು ಅಪರೋಕ್ಷಜ್ಞಾನಕ್ಕೆ ಸಾಧನವಾಗಿರುವುದರಿಂದ ನಾಶವಾಗುವುದಿಲ್ಲ. ಇಷ್ಟ ನಾಶವು ಪುರುಷಾರ್ಥವಲ್ಲ. (4) ಅಪರೋಕ್ಷ ಜ್ಞಾನವು ಹುಟ್ಟಿದಮೇಲೆ ಮಾಡಿದ ಕೆಲವು ಪಾಪಗಳು ನರಕಾದಿಗಳ ಸಂಬಂಧವನ್ನು ಮಾಡಲಿಕ್ಕೆ ಸಮರ್ಥಗಳಾಗುವುದಿಲ್ಲ. ಸ್ವೋತ್ತಮ ದ್ರೋಹ ಮೊದಲಾದ ಕೆಲವು ಸಂಬಂಧವುಳ್ಳವುಗಳಾದಾಗ್ಯೂ ಅಶುಚಿತ್ವ, ಅಸಂಭಾವ್ಯತ್ವ ಅಪಾಂಙ್ತೇಯತ್ವ ನರಕದುಃಖರೂಪ ಫಲಪ್ರದಗಳು ಆಗುವುದಿಲ್ಲ. (5) ಹೀಗೆಯೇ ಅಕಾಮ್ಯ

ಪುಣ್ಯಗಳು ಸುಖ್ಯಾಧಿಕ್ಯಕ್ಕೆ ಕಾರಣಗಳು; ಸುಖದ ಅಭಿವ್ಯಕ್ತಿಯನ್ನು ಹುಟ್ಟಿಸತಕ್ಕವುಗಳು; ಅವುಗಳು ಸಂಬಂಧವನ್ನು ಹೊಂದುತ್ತವೆ. (6) ಕಾಮ್ಯ ಪುಣ್ಯಗಳನ್ನು ಪುತ್ರಾದಿಗಳು ಹೊಂದುತ್ತಾರೆ. ಪ್ರಾರಬ್ಧಪುಣ್ಯಕ್ಕೆ ಭೋಗದಿಂದಲೇ ನಾಶವು. ಕಿಂಚಿತ್ ಭುಕ್ತವಾದ ಕೆಲವು ಪ್ರಾರಬ್ಧ ಪುಣ್ಯಕ್ಕೆ ಅಪರೋಕ್ಷಜ್ಞಾನಸಾಮರ್ಥ್ಯದಿಂದ ಹ್ರಾಸವು (7) ಹೀಗೆಯೇ ಬ್ರಹ್ಮನು ನಿರ್ಗುಣನು ನಿರಾಕಾರನು ಇತ್ಯಾದಿಪ್ರಕಾರ ತಿಳಿಯತಕ್ಕ ದೈತ್ಯರಿಗೆ ಪುನಃ ಉತ್ಥಿತಿಯಿಲ್ಲದಿರುವ ಅಂಧಂತಮಸ್ಸಿನ ಪ್ರಾಪ್ತಿಗಾಗಿ ಪೂರ್ವಪುಣ್ಯಕ್ಕೆ ನಾಶವು ಬರುತ್ತದೆ. ಉತ್ತರಪುಣ್ಯಕ್ಕೆ ಅಶ್ಲೇಷವೂ ಆಗುತ್ತದೆ. (8) ಈ ವಿಷಯದಲ್ಲಿ **'ಅನಭೀಷ್ಟಮನಾರಬ್ಧಂ ಪುಣ್ಯಂ ತಸ್ಯ ವಿನಶ್ಯತಿ । ಕಿಮು ಪಾಪಂ ಪರಂ ಬ್ರಹ್ಮ ಜ್ಞಾನಿನೋ ನಾಸ್ತಿ ಸಂಶಯಃ '** ॥ ಇತ್ಯಾದಿ ಪ್ರಮಾಣಗಳನ್ನು ಭಾಷ್ಯಾದಿಗಳಲ್ಲಿ ಹೇಳಿದ ಪ್ರಕಾರ ತಿಳಿಯತಕ್ಕದ್ದು. ॥೧೨೯॥೧೩೦॥೧೩೧

ಮೂ ॥ ಮೋಕ್ಷಶ್ಚ ನಿಯತಸ್ತಸ್ಮಾತ್ತ್ವಯೋಗ್ಯಹರಿದರ್ಶನೇ ॥
ಭವಿಷ್ಯತ್ಪೂರ್ವವಚನಮಿತ್ಯೇತತ್ಸೂತ್ರಗಂ ತಥಾ ॥೧೩೨॥

ಅ ॥ ಆದುದರಿಂದ ತನಗೆ ಯೋಗ್ಯನಾದ ಶ್ರೀ ಹರಿಯನ್ನು (ತನ್ನ ಬಿಂಬಮೂರ್ತಿಯನ್ನು) ನೋಡಿದರೆ ಮೋಕ್ಷವು ನಿಶ್ಚಿತವೇ ಆಗಿದೆ. ಹೀಗೆ ಭವಿಷತ್ಪೂರ್ವವಚನವು. ಹಾಗೆಯೇ ಈ ಪ್ರಮೇಯವು **'ತದಧಿಗಮ ಉತ್ತರಪೂರ್ವಾಘಯೋರಶ್ಲೇಷವಿನಾಶೌ'** ಎನ್ನುವ ಸೂತ್ರದಲ್ಲಿಯೂ ಪ್ರತಿಪಾದಿತವಾಗಿದೆ ॥೧೩೨॥

ಈ ವಿಷಯದಲ್ಲಿ ಶ್ರುತಿಯನ್ನು ಹೇಳುತ್ತಾರೆ—

ಮೂ ॥ ಶ್ರುತಿಶ್ಚ ತತ್ಪರಾ ತದ್ವತ್ತದ್ಯಥೇತ್ಯವದತ್ಸ್ಫುಟಂ ॥
ಮುಕ್ತಾಸ್ತು ಮಾನುಷಾ ದೇವಾನ್ದೇವಾ ಇಂದ್ರಂ ಸ ಶಂಕರಂ ॥೧೩೩॥
ಸ ಬ್ರಹ್ಮಾಣಂ ಕ್ರಮೇಣೈವ ತೇನ ಯಾಂತ್ಯಖಿಲಾ ಹರಿಂ ॥
ಉತ್ತರೋತ್ತರವಶ್ಯಾಶ್ಚ ಮುಕ್ತಾ ರುದ್ರಪುರಃಸರಾಃ ॥೧೩೪॥

ಅ ॥ ಅದರಲ್ಲಿಯೇ ತಾತ್ಪರ್ಯವುಳ್ಳ * **ತದ್ಯಥಾ ಪುಷ್ಕರಪಲಾಶೇ ಆಪೋ ನ ಶ್ಲಿಷ್ಯಂತೇ ಏವಮೇವಂವಿದಿ ಪಾಪಂ ಕರ್ಮ ನ ಶ್ಲಿಷ್ಯತೇ ತದ್ಯಥೇಷೀಕಾತೂಲಮಗ್ನೌ ಪ್ರೋತಂ ಪ್ರದೂಯತೈವಂ ಹೈವಾಸ್ಯ ಸರ್ವೇ ಪಾಪ್ಮಾನಃ ಪ್ರದ್ರೂಯಂತೇ'** ಎನ್ನುವ ಶ್ರುತಿಯೂ ಕೂಡ ಸೂತ್ರದಂತೆ ಸ್ಪಷ್ಟವಾಗಿ ಈ ಪ್ರಮೇಯವನ್ನು ಪ್ರತಿಪಾದಿಸಿರುತ್ತದೆ. (ಪ್ರಕೃತವಾದ ಮೋಕ್ಷಪ್ರಕಾರವನ್ನು ಹೇಳುತ್ತಾರೆ.) ಮುಕ್ತರಾದ ಮನುಷ್ಯರಾದರೂ ದೇವತೆಗಳನ್ನು ಹೊಂದುತ್ತಾರೆ. ದೇವತೆಗಳು ಇಂದ್ರನನ್ನು ಹೊಂದುತ್ತಾರೆ. ಇಂದ್ರನು ಶಂಕರನನ್ನು ಹೊಂದುತ್ತಾನೆ. ಶಂಕರನು ಬ್ರಹ್ಮನನ್ನು ಹೊಂದುತ್ತಾನೆ. ಮುಕ್ತರಾದವರೆಲ್ಲರೂ ಕ್ರಮವಾಗಿಯೇ ಬ್ರಹ್ಮನಿಂದ ಶ್ರೀ ಹರಿಯನ್ನು ಹೊಂದುತ್ತಾರೆ. ರುದ್ರಪುರಸ್ಸರಾಃ– ಶೇಷನೇ ಮೊದಲಾಗಿವುಳ್ಳ ಮುಕ್ತರು ಶ್ರೇಷ್ಠ ಶ್ರೇಷ್ಠರ ಅಧೀನರು ॥೧೩೪॥

---

* ಹೀಗೆ ಕಮಲಪತ್ರದಲ್ಲಿ ಜಲಗಳು ಸಂಬದ್ಧಗಳಾಗುವುದಿಲ್ಲವೋ ಹಾಗೆಯೇ ಇಂತಹ ಜ್ಞಾನಿಯಲ್ಲಿ ಪಾಪಕರ್ಮವು ಸಂಬದ್ಧವಾಗುವುದಿಲ್ಲ. ಹೇಗೆ ಹುಲ್ಲು, ಹತ್ತಿರಾಶಿಯು ಅಗ್ನಿಯಲ್ಲಿ ಸಂಬದ್ಧವಾದರೆ ಸುಟ್ಟುಹೋಗುತ್ತದೋ ಹಾಗೆಯೇ ಜ್ಞಾನಿಯ ಸಮಸ್ತ ಪಾಪಗಳೂ ನಾಶವಾಗುತ್ತವೆ.

ಮೂ ॥ ನಿರ್ದೋಷಾ ನಿತ್ಯಸುಖಿನಃ ಪುನರಾವೃತ್ತಿವರ್ಜಿತಾಃ ॥
ಸ್ವೇಚ್ಛಯೈವ ರಮಂತೇಽತ್ರ ನಾನಿಷ್ಟಂ ತೇಷು ಕಿಂಚನ ॥೧೩೫॥

ಅ ॥ ದೋಷವಿರಹಿತರಾದ, ನಿತ್ಯದಲ್ಲಿಯೂ ಸುಖವುಳ್ಳ ಮುಕ್ತರೂ ಪುನರಾವೃತ್ತಿ ರಹಿತವಾಗಿ ಮುಕ್ತಿಯಲ್ಲಿ ತನ್ನ ಇಚ್ಛೆಯಿಂದಲೇ ಕ್ರೀಡಿಸುತ್ತಿರುತ್ತಾರೆ, ಆ ಮುಕ್ತರಲ್ಲಿ ದುಃಖವು ಸ್ವಲ್ಪವೂ ಇರುವುದಿಲ್ಲ ॥೧೩೫॥

ದೇವತೆಗಳ ಮುಕ್ತಿಪ್ರಕಾರವನ್ನು ಹೇಳಿ ದೈತ್ಯರ ತಮಃಪ್ರಕಾರವನ್ನು ಹೇಳುತ್ತಾರೆ—

ಮೂ ॥ ಅಸುರಾಃ ಕಲಿಪರ್ಯಂತಾ ಏವಂ ದುಃಖೋತ್ತರೋತ್ತರಾಃ ॥
ಕಲಿರ್ದುಃಖಾಧಿಕಸ್ತೇಷು ತೇಽಪ್ಯೇವಂ ಬ್ರಹ್ಮವದ್ಗಣಾಃ ॥೧೩೬॥

ಅ ॥ ಮನುಷ್ಯಾಧಮರನ್ನು ಆರಂಭಿಸಿ ಕಲಿಯೇ ಅವಸಾನವಾಗಿವುಳ್ಳ ಅಸುರರು ಹೀಗೆಯೇ (ಅಂದರೆ ಹೇಗೆ ದೇವತೆಗಳು ಕ್ರಮದಿಂದ ಸುಖಾಧಿಕ್ಯವುಳ್ಳವರೋ ಹಾಗೆಯೇ) ದುಃಖದಿಂದ ಕೆಲಪರು ಶ್ರೇಷ್ಠರು, ಇತರರು ಅವರಿಂದಲೂ ಅಧಿಕರು (ಅಂದರೆ ಕ್ರಮವಾಗಿ ದುಃಖಾಧಿಕ್ಯವುಳ್ಳವರು) ಆ ದೈತ್ಯರಲ್ಲಿ ಕಲಿಯು ದುಃಖಾಧಿಕ್ಯವುಳ್ಳವನು. (ಈಗ ಇದ್ದ ಕಲಿಗೆ ಅಂಧಂತಮಃ ಪ್ರಾಪ್ತಿಯಾದರೆ ಮುಂದಕ್ಕೆ ಹೇಗೆಂದರೆ—) ಬ್ರಹ್ಮಪದವಿಗೆ ಯೋಗ್ಯರಾದ ಋಜುಗಳ ಗಣಗಳಂತೆಯೇ ಕಲಿಪದಯೋಗ್ಯಗಳಾದ ಗಣಗಳೂ ಇರುತ್ತವೆ. ॥೧೩೬॥

ಮೂ ॥ ತಥಾನ್ಯೇಽಪ್ಯಸುರಾಃ ಸರ್ವೇ ಗಣಾ ಯೋಗ್ಯತಯಾ ಸದಾ ॥
ಬ್ರಹ್ಮೈವ ಸರ್ವಜೀವೇಭ್ಯಃ ಸದಾ ಸರ್ವಗುಣಾಧಿಕಃ ॥೧೩೭॥
ಮುಕ್ತೋಽಪಿ ಸರ್ವಮುಕ್ತಾನಾಂ ಅಧಿಪತ್ಯೇ ಸ್ಥಿತಃ ಸದಾ ॥
ಆಶ್ರಯಸ್ತಸ್ಯ ಭಗವಾನ್ಸದಾ ನಾರಾಯಣಃ ಪ್ರಭುಃ ॥೧೩೮॥

ಅ ॥ (ಹೇಗೆ ರುದ್ರಾದಿಗಣಗಳು ಇರುತ್ತವೋ) ಹಾಗೆಯೇ (ಕಲಿಯಿಂದ) ಇತರರಾದ (ದ್ವಾಪರ ಮೊದಲಾದ) ಎಲ್ಲಾ ಅಸುರರೂ ಯೋಗ್ಯತೆಯಿಂದ ಬಹು ಗಣಗಳು ಯಾವಾಗಲೂ ಇರುತ್ತವೆ. (ಮೊದಲು ಶೇಷಪರ್ಯಂತವಾಗಿಯೇ 'ರುದ್ರಪುರಃಸರಾಃ' ಎನ್ನುವುದರಿಂದ ಹೇಳಿದ ಪ್ರಯುಕ್ತ ಈಗ ಚತುರ್ಮುಖ ಬ್ರಹ್ಮನ ಮಹಿಮೆಯನ್ನು ಹೇಳುತ್ತಾರೆ.) ಚತುರ್ಮುಖ ಬ್ರಹ್ಮನೇ ಎಲ್ಲಾ ಜೀವರ ದೆಶೆಯಿಂದಲೂ ಯಾವಾಗಲೂ ಸರ್ವ ಗುಣಗಳಿಂದಲೂ ಅಧಿಕನು. ಮುಕ್ತನಾದವನೂ ಕೂಡ ಎಲ್ಲಾ ಮುಕ್ತರ ನಿಯಾಮಕತ್ವದಲ್ಲಿಯೇ ಯಾವಾಗಲೂ ಇರುತ್ತಾನೆ. (ಎಲ್ಲಾ ಮುಕ್ತರಿಗೆ ಬ್ರಹ್ಮನೇ ಅಧಿಪತಿಯು ಎಂದು ಹೇಳಿದಾಗ ಈತನಿಗೆ ಮತ್ತೊಬ್ಬ ಅಧಿಪತಿಯು ಇಲ್ಲವೆಂದು ಪ್ರಾಪ್ತವಾಯಿತೆಂದರೆ ಆ ಚತುರ್ಮುಖಬ್ರಹ್ಮನಿಗೆ ಪೂಜ್ಯನಾದ ಸರ್ವಸಮರ್ಥನಾದ ಶ್ರೀ ನಾರಾಯಣನು ಯಾವಾಗಲೂ ಆಶ್ರಯನೇ (ಆಗಿರುತ್ತಾನೆ.) ॥೧೩೭॥೧೩೮॥

ಸದಾಗಮಗಳ ಅರ್ಥವನ್ನು ತೋರಿಸಿ, ಉಪಪಾದಿಸಿ, ಉಪಸಂಹಾರ ಮಾಡುತ್ತಾರೆ—

ಮೂ ॥ ಇತ್ಯೃಗ್ಯಜುಃಸಾಮಾಥರ್ವಪಂಚರಾತ್ರೇತಿಹಾಸತಃ ॥
ಪುರಾಣೇಭ್ಯಸ್ತಥಾನ್ಯೇಭ್ಯಃ ಶಾಸ್ತ್ರೇಭ್ಯೋ ನಿರ್ಣಯಃ ಕೃತಃ ॥೧೩೯॥
ವಿಷ್ಣ್ವಜ್ಞಯೈವ ವಿದುಷಾ ತತ್ಪ್ರಸಾದಬಲೋನ್ನತೇಃ ॥
ಆನಂದತೀರ್ಥಮುನಿನಾ ಪೂರ್ಣಪ್ರಜ್ಞಾಭಿಧಾಯುಜಾ ॥೧೪೦॥

ಅ ॥ ಹೀಗೆ ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ, ಪಂಚರಾತ್ರಾಗಮ, ಇತಿಹಾಸ ಇವುಗಳಿಂದಲೂ, ಪುರಾಣಗಳಿಂದಲೂ ಹಾಗೆಯೇ ಇತರ ಶಾಸ್ತ್ರಗಳಿಂದಲೂ ನಿರ್ಣಯವು ಮಾಡಲ್ಪಟ್ಟಿತು. (ಹಾಗಾದರೆ ಸರ್ವ ಶಾಸ್ತ್ರಗಳ ನಿರ್ಣಯವನ್ನು ಮಾಡಲಿಕ್ಕೆ ನಿಮಿತ್ತವೇನು? ಶ್ರೀ ಮದಾಚಾರ್ಯರಿಗೇನೇ ಸಾಮರ್ಥ್ಯವು ಯಾವುದರಿಂದ ಎಂದರೆ-) ಶ್ರೀ ವಿಷ್ಣುವಿನ ಆಜ್ಞೆಯಿಂದಲೇ ಶ್ರೀ ವಿಷ್ಣುವಿನ ಪ್ರಸಾದವೆನ್ನುವ ಸಾಮರ್ಥ್ಯದ ಅಧಿಕ್ಯದೆಶೆಯಿಂದ ಜ್ಞಾನಿಶ್ರೇಷ್ಠರಾದ, ಪರಿಪೂರ್ಣವಾದ ಪ್ರಜ್ಞೆಯಿದ್ದುದರಿಂದ ಪೂರ್ಣಪ್ರಜ್ಞನೆನ್ನುವ ನಾಮಧೇಯವನ್ನು ಹೊಂದಿರುವ, ಆನಂದವನ್ನುಂಟುಮಾಡುವ ಶಾಸ್ತ್ರವನ್ನು ನಿರ್ಮಿಸಿದರಿಂದ ಆನಂದತೀರ್ಥನೆಂದು ಹೆಸರುಳ್ಳ ಮುನಿಗಳಿಂದ ಸರ್ವಶಾಸ್ತ್ರಾರ್ಥನಿರ್ಣಯವು ಮಾಡಲ್ಪಟ್ಟಿತು॥೧೩೯॥೧೪೦॥

ಹಿಂದೆ ಹೇಳಿದ ಅರ್ಥವನ್ನು ಅನುವಾದ ಮಾಡುತ್ತಾ ಈಜ್ಞಾನದ ಫಲವನ್ನು ಹೇಳುತ್ತಾರೆ.–

ಮೂ ॥ ತಾತ್ಪರ್ಯಂ ಶಾಸ್ತ್ರಾಣಾಂ ಸರ್ವೇಷಾಮುತ್ತಮಂ ಮಯೋಪ್ರೋಕ್ತಂ॥
ಪ್ರಾಪ್ಯಾನುಜ್ಞಾಂ ವಿಷ್ಣೋರೇತಜ್ಜಾಞ್ಞತ್ವೈವ ವಿಷ್ಣುರಾಪ್ಯೋಽಸೌ॥೧೪೧॥

ಅ ॥ (ದೊಡ್ಡ ಬದರಿಗೆ ಹೋದ ಸಮಯದಲ್ಲಿ ಶ್ರೀ ವೇದವ್ಯಾಸರೂಪರಾದ) ಶ್ರೀ ವಿಷ್ಣುವಿನ ಅನುಜ್ಞೆಯನ್ನು ಹೊಂದಿಯೇ ನನ್ನಿಂದ ಎಲ್ಲಾ ಶಾಸ್ತ್ರಗಳ ಅತ್ಯುತ್ತಮವಾದ ತಾತ್ಪರ್ಯವು ಹೇಳಲ್ಪಟ್ಟಿತು. ಈ ತಾತ್ಪರ್ಯವನ್ನು ತಿಳಿದೇ (ಅಧಿಕಾರಿಯಿಂದ) ಈ ಶ್ರೀ ವಿಷ್ಣುವು ಹೊಂದಲರ್ಹನು.

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ(ಕೃತೇ)ವಿರಚಿತೇ
ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯೇ
ಸರ್ವಶಾಸ್ತ್ರಾರ್ಥ(ತಾತ್ಪರ್ಯ)ನಿರ್ಣಯೋ ನಾಮ ಪ್ರಥಮೋಽಧ್ಯಾಯಃ

ಹೀಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ನಿರ್ಮಿತವಾದ
ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಸರ್ವ ಶಾಸ್ತ್ರಾರ್ಥಗಳನ್ನು
ನಿರ್ಣಯಿಸತಕ್ಕ ಒಂದನೇ ಅಧ್ಯಾಯವು ಸಮಾಪ್ತವಾಯಿತು.

॥ ಶ್ರೀ ಕೃಷ್ಣಾರ್ಪಣಮಸ್ತು ॥

॥ ಶ್ರೀಃ ॥

ಎರಡನೇ ಅಧ್ಯಾಯವು

ಮೂ ॥ ಜಯತಿ ಹರಿರಚಿಂತ್ಯಃ ಸರ್ವದೇವೈಕವಂದ್ಯಃ
ಪರಮಗುರುರಭೀಷ್ಟಾವಾಪ್ತಿದಃ ಸಜ್ಜನಾನಾಂ ॥
ನಿಖಿಲಗುಣಗಣಾರ್ಣೋ ನಿತ್ಯನಿರ್ಮುಕ್ತದೋಷಃ
ಸರಸಿಜನಯನೋಽಸೌ ಶ್ರೀಪತಿರ್ನಾನದೋ ನಃ ॥೧॥

ಅ ॥ ಪರಿಪೂರ್ಣಜ್ಞಾನಾನಂದಾತ್ಮಕನಾದುದರಿಂದ ಸಾಕಲ್ಯವಾಗಿ ಧ್ಯಾನಮಾಡಿಸಿಕೊಳ್ಳಲಿಕ್ಕೆ ಅಶಕ್ಯನಾದವನು, ಎಲ್ಲಾ ಅಮುಕ್ತ ದೇವತೆಗಳಿಂದಲೂ ಮುಕ್ತರಾದ ದೇವತೆಗಳಿಂದಲೂ ಮುಖ್ಯವಾಗಿ ನಮಸ್ಕರಿಸಿಕೊಳ್ಳಲ್ಪಡತಕ್ಕವನು ಮತ್ತು ಸ್ತೋತ್ರಮಾಡಿಸಿಕೊಳ್ಳಲ್ಪಡತಕ್ಕವನು, (ಶ್ರೀ ಬ್ರಹ್ಮರುದ್ರ ಮೊದಲಾದ ಎಲ್ಲಾ ದೇವತೆಗಳಿಗೂ) ಮುಖ್ಯವಾಗಿ ಜ್ಞಾನೋಪದೇಶಕನು, ಸಜ್ಜನರಿಗೆ ಅಭೀಷ್ಟ ಪ್ರಾಪ್ತಿಯನ್ನು ಹೊಂದಿಸಿಕೊಡುವವನು, ಎಲ್ಲಾ ಗುಣಗಳ ಸಮುದಾಯಗಳೆಂಬ * ಪುಣ್ಯ ಜಲಗಳುಳ್ಳವನು, ಅಥವಾ ಎಲ್ಲಾ ಗುಣಗಳ ಸಮುದಾಯಗಳಿಂದ ಸಮುದ್ರದಂತಿರುವವನು, ನಿತ್ಯದಲ್ಲಿಯೂ ಬಿಡಲ್ಪಟ್ಟ ದೋಷಗಳುಳ್ಳವನು,(ಅಂದರೆದೋಷಲೇಶಾತ್ಯಂತಾಭಾವವುಳ್ಳವನು,) ಕಮಲದಳದಂತೆ ನಯನಗಳುಳ್ಳವನು, ನಮಗೆ ಮಾನವನ್ನು ಕೊಡುವವನು, (ಅಂದರೆ ಸಚ್ಛಾಸ್ತ್ರವನ್ನುಪದೇಶ ಕೂಡುವವನು,) ಹರಿಃ-ಸಕಲ ದುರ್ಜನರನ್ನೂ ಸಂಹರಿಸುವವನೂ, ಇಂತಹ ಲಕ್ಷ್ಮೀಪತಿಯಾದ ಶ್ರೀ ನಾರಾಯಣನು ಸರ್ವೋತ್ಕೃಷ್ಟನಾಗಿರುತ್ತಾನೆ.

ವಿಶೇಷಾಂಶ— (1) ಒಂದನೇ ಅಧ್ಯಾಯದಲ್ಲಿ ಶ್ರೀ ಹರಿಯ ಗುಣೋತ್ಕರ್ಷವೇ ಎಲ್ಲಾ ಶಾಸ್ತ್ರಗಳಿಗೂ ತಾತ್ಪರ್ಯ ವಿಷಯಿಭೂತವಾದ ಅರ್ಥವು ಎಂದು ನಿರ್ಣಯಮಾಡಿ ಈಗ ವಿಶೇಷಾಕಾರವಾಗಿ **'ಭಾರತವ್ಯಪದೇಶೇನ ಆಮ್ನಾಯಾರ್ಥಃ ಪ್ರದರ್ಶಿತಃ'** ಎನ್ನುವ ವಚನದ್ದಿಂದ ಅಶೇಷ ಭಾರತದ ತಾತ್ಪರ್ಯ ವಿಷಯಿಭೂತವಾದ ಅರ್ಥವು ಅದೇ ಎಂದು ನಿರ್ಣಯಿಸಲಿಕ್ಕೆ ಇಚ್ಛಿಸಿರುವ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರು **'ನಾರಾಯಣಂ ಸುರಗುರುಂ ಜಗದೇಕನಾಥಂ ಭಕ್ತಪ್ರಿಯಂ ಸಕಲಲೋಕನಮಸ್ಕೃತಂ ಚ । ತ್ರೈಗುಣ್ಯವರ್ಜಿತನುಜಂ ವಿಭುಮಾದ್ಯಮೀಶಂ ವಂದೇ ಭನಘ್ನಮನುರಾಸುರಸಿದ್ಧವಂದ್ಯಂ'** ॥ ಎಂದು ಭಾರತದ ಅರ್ಥವನ್ನು ಸಂಗ್ರಹಿಸತಕ್ಕ, ಭಾರತದ ಆದ್ಯ ಶ್ಲೋಕದಲ್ಲಿ ಪ್ರತಿಪಾದಿಸಿದ ಗುಣಗಳುಳ್ಳವನನ್ನಾಗಿ ಭಾರತ ಪ್ರತಿಪಾದ್ಯನಾದ ಶ್ರೀ ನಾರಾಯಣನನ್ನು ತಿನೇ ಅಧ್ಯಾಯದ ಆದಿಯಲ್ಲಿ ಸ್ತೋತ್ರಮಾಡಿರುವರು ॥೧॥

ಈಗ ಪೂರ್ವಾಧ್ಯಾಯಾರ್ಥವನ್ನು ಅನುವಾದಮಾಡುತ್ತಾ ಈ ಅಧ್ಯಾಯದಲ್ಲಿ ಮುಂದೆ ಹೇಳುವ ಅರ್ಥವನ್ನು ಶಿಷ್ಯರ ಮನಸ್ಸಮಾಧಾನಕ್ಕಾಗಿಯೇ ಸಂಕ್ಷೇಪವಾಗಿ ತೋರಿಸುತ್ತಾರೆ—

* ಅರಂ ದೋಷಂ ನಯಂತಿ ನಾಶಯಂತೀತಿ ಅರ್ಣಾಂಸಿ-ಪುಣ್ಯಜಲಗಳು ವರ್ಣವಾಚಕವಾದ ಅರ್ಣ ಪದದಂತೆ ಜಲವಾಚಕವಾದಾಗ್ಯೂ ಅರ್ಣಪದವು ಅಕಾರಾಂತವು.

ಅಧ್ಯಾಯ ೨. ಶ್ಲೋಕ ೬

ಮೂ ॥ ಉಕ್ತಃ ಪೂರ್ವಾ (ರ್ವೇಽ) ಧ್ಯಾಯೇ
ಶಾಸ್ತ್ರಾಣಾಂ ನಿರ್ಣಯಃ ಪರೋ ದಿವ್ಯಃ ॥
ಅಥ (ಶ್ರೀಮತ್) ಭಾರತವಾಕ್ಯೈ—
ರ್ನೈತೈರೇವಾಧ್ಯವಸ್ಯಂತೇ ॥೨॥

ಅ ॥ ಋಗಾದಿ ಶಾಸ್ತ್ರಗಳಿಗೆ ಉತ್ತಮವಾದ ದೇವಪದವಾಚ್ಯನಾದ ಶ್ರೀ ನಾರಾಯಣ ಸಂಬಂಧಿಯಾದ ನಿರ್ಣಯವು (ಅಂದರೆ ಶ್ರೀವಿಷ್ಣುವಿಗೆ ಸರ್ವೋತ್ತಮತ್ವ, ಸರ್ವಗುಣಪರಿ ಪೂರ್ಣತ್ವ ಇತ್ಯಾದಿಗಳಲ್ಲಿಯೇ ಮಹಾತಾತ್ಪರ್ಯವು.) ಎಂದು ಒಂದನೇ ಅಧ್ಯಾಯದಲ್ಲಿಯೇ ಹೇಳಲ್ಪಟ್ಟಿದೆ. ಆ ಮೇಲೆ (ಈ ಅಧ್ಯಾಯದಲ್ಲಿ) ಅಲ್ಲಿರತಕ್ಕ ಕಠಿನ ಶ್ರೀಮದ್ಭಾರತವಾಕ್ಯಗಳು ಕೆಲವು ಭಾರತವಾಕ್ಯಗಳಿಂದಲೇ ಮತ್ತೂ ಭಾರತವಾಕ್ಯಕ್ಕೆ ಉಪಯುಕ್ತಗಳಾದ ಬ್ರಹ್ಮಾಂಡ ಮಾರ್ಕಂಡೇಯಾದಿ ಪ್ರಮಾಣವಚನಗಳಿಂದಲೇ (ಸರ್ವಥಾ ಸ್ವಕಪೋಲಕಲ್ಪಿತವಚನಗಳಿಂದ ಅಲ್ಲ) ನಿರ್ಣಯಿಸಿಕೊಳ್ಳಲ್ಪಡುತ್ತವೆ.

ವಿಶೇಷಾಂಶ—ಭಾರತದ ಉಪಕ್ರಮ, ಉಪಸಂಹಾರ, ಮಧ್ಯಸ್ಥಗಳಾದ ನಿರ್ಣೀತ ವಾಕ್ಯಗಳಿಂದ ಎಲ್ಲಾ ಭಾರತ ವಾಕ್ಯಗಳಿಗೂ ವಿಷ್ಣುಸರ್ವೋತ್ತಮತ್ವ, ಗುಣಪೂರ್ಣತ್ವಾದಿಗಳಲ್ಲಿಯೇ ಮಹಾತಾತ್ಪರ್ಯವೆಂದು ನಿರ್ಣಯವು ಮಾಡಲ್ಪಡುತ್ತದೆ ॥೨॥

ಎಲ್ಲಾ ಗ್ರಂಥಗಳೂ ಸರಿಯಾಗಿಯೇ ಇದ್ದರೆ ಅವುಗಳ ತಾತ್ಪರ್ಯಗಳನ್ನು ವ್ಯುತ್ಪನ್ನರು ತಾವೇ ಉಪಕ್ರಮ ಉಪಸಂಹಾರಾದಿ ತಾತ್ಪರ್ಯನಿರ್ಣಾಯಕ ಲಿಂಗಗಳಿಂದ ತಿಳಿದುಕೊಳ್ಳುವರು. ನಮ್ಮ ನೂತನ ಪ್ರಯತ್ನವು ಏತಕ್ಕೆಂದರೆ — ಕಲಿಯುಗದಲ್ಲಿ ಜನರಿಗೆ ಅಲ್ಪಬುದ್ಧಿ ಇದ್ದುದರಿಂದಲೂ ಔದಾಸೀನ್ಯವಿದ್ದುದರಿಂದಲೂ ಶತಕೋಟಿ ಸಂಖ್ಯೆಯುಳ್ಳ ಮೂಲರಾಮಾಯಣ ಪಂಚರಾತ್ರ ಮೊದಲಾದವುಗಳು ಪ್ರಾಯಶಃ ಉತ್ಪನ್ನಗಳೇ ಆಗಿವೆ. ಅನುತ್ಪನ್ನ ಭಾಗಗಳುಳ್ಳ ಭಾರತಾದಿಗಳೂ ಕೂಡಾ ಅಪಂಡಿತರಾದ ಕುತ್ಸಿತರಾದ ವಿದ್ವಾಂಸರಿಂದು ಅಭಿಮಾನವಿರುವ ಜನರ ಕೌಟಿಲ್ಯದಿಂದ ಅಪಪಾಠಾದಿಗಳಿಂದ ನಷ್ಟಪ್ರಾಯಗಳಾಗಿ ಆಗಿವೆ. ಆದಕಾರಣ ಶ್ರೀ ಹರಿಯ ಕಿಂಕರರಾದ ನಾವೇ ಪ್ರಯತ್ನಿಸಬೇಕೆನ್ನುತ್ತಾರೆ—

ಮೂ ॥ ಕ್ವಚಿದ್ಗ್ರಂಥಾನ್ಪ್ರಕ್ಷಿಪಂತಿ ಕ್ವಚಿದಂತರಿತಾನಪಿ ॥
ಕುರ್ಯುಃ ಕ್ವಚಿಚ್ಚ ವ್ಯತ್ಯಾಸಂ ಪ್ರಮಾದಾತ್ಕ್ವಚಿದನ್ಯಥಾ ॥ ೩ ॥
ಅನುತ್ಪನ್ನಾ ಅಪಿ ಗ್ರಂಥಾ ವ್ಯಾಕುಲಾ ಇತಿ ಸರ್ವಶಃ ॥
ಉತ್ಪನ್ನಾಃ ಪ್ರಾಯಶಃ ಸರ್ವೇಕೋಟ್ಯಂಶೋಽಪಿ ನ ವರ್ತತೇ ॥ ೪ ॥
ಗ್ರಂಥೋಽಪ್ಯೇವಂ ವಿಲುಲಿತಃ ಕಿಂವ್ಯರ್ಥೋ ದೇವದುರ್ಗಮಃ ॥
ಕಲಾವೇವಂ ವ್ಯಾಕುಲಿತೇ ನಿರ್ಣಯಾಯ ಪ್ರಚೋದಿತಃ ॥ ೫ ॥
ಹರಿಣಾ ನಿರ್ಣಯಾನ್ವಕ್ಷ್ಮಿ ವಿಜಾನಂಸ್ತತ್ಪ್ರಸಾದತಃ ॥ ೬ ॥

ಅ ॥ ಗ್ರಂಥಾನ್- ತಮ್ಮ ತಮ್ಮ ಮತಗಳಿಗೆ ಅನುಕೂಲಗಳಾದ ಸ್ವಕಪೋಲಕಲ್ಪಿತ ಆದಗ ಶ್ಲೋಕಸಮೂಹಗಳನ್ನು, ಕ್ವಚಿತ್-ಮೂಲಗ್ರಂಥದ ಕೆಲವು ಕೆಲವು ಭಾಗದಲ್ಲಿ ಪ್ರಕ್ಷಿಪಂತಿ—ಬಿಸಾಡುತ್ತಾರೆ (ಕೂಡಿಸುತ್ತಾರೆ.) ಕ್ವಚಿತ್—ಕೆಲವು ಭಾಗದಲ್ಲಿ, ಅಂತರಿತಾನಪಿ— ತಮಗೆ ಪ್ರತಿಕೂಲಗಳಾದ ವಿಷ್ಣು ಸರ್ವೋತ್ತಮತ್ವಾದಿಗಳನ್ನು ಪ್ರತಿಪಾದಿಸತಕ್ಕ ಗ್ರಂಥ

ಭಾಗಗಳನ್ನು ಅಂತರ್ಧಾನವನ್ನು ಹೊಂದಿದವುಗಳನ್ನಾಗಿಯೂ (ಮಾಡುತ್ತಾರೆ.) (ಅಂದರೆ ನಮ್ಮ ಗ್ರಂಥದಲ್ಲಿ ಇಲ್ಲವೆಂದು ಹೇಳುವುದಕ್ಕಾಗಿ ತೆಗೆದುಹಾಕುತ್ತಾರೆ.) ಕ್ವಚಿಚ್ಚ-ಕೆಲವು ಕಡೆಗಳಲ್ಲಿ, ವ್ಯತ್ಯಾಸಂ–ಹೇಳಲ್ಪಟ್ಟ ಶ್ರೀ ಹರಿಯ ಮಹಾತ್ಮ್ಯಸಂಬಂಧೀಶ್ಲೋಕವನ್ನು ಕಥಾ ವಿಚ್ಛೇದಕ್ಕಾಗಿ, ಬೇರೆ ಕಡೆಗೆ ಬಿಸಾಡುತ್ತಾರೆ, ಈ ಕಥೆಗೆ ಅನನುಕೂಲವಾದ ಶ್ಲೋಕವನ್ನು ಇಲ್ಲಿ ಬರೆದುಹಾಕುತ್ತಾರೆ. ಕ್ವಚಿತ್–ಕೆಲವುಕಡೆ, (ಸಾಧುಗಳೂ ಕೂಡ) ಪ್ರಮಾದಾತ್ - ತಮ್ಮ ಅಜ್ಞಾನದೆಶೆಯಿಂದ, ಅನ್ಯಥಾ-ಗ್ರಂಥಾಭಿಸಂಧಿಗೆ ವ್ಯತ್ಯಾಸವಾಗಿ, (ವ್ಯಾಖ್ಯಾನಮಾಡುವರು.) ಅನುತ್ಸನ್ನಾ ಅಪಿ-ನಷ್ಟಗಳಾಗದೆ ಇದ್ದವುಗಳಾದಾಗ್ಯೂ, ಗ್ರಂಥಾಃ–ಗ್ರಂಥಗಳು, ಇತಿ – ಹಿಂದೆ ಹೇಳಿದಪ್ರಕಾರ, ಸರ್ವಶಃ-ಸಂಪೂರ್ಣವಾಗಿ, ವ್ಯಾಕುಲಾಃ - ವ್ಯತ್ಯಸ್ತಗಳಾದ, ಸರ್ವಶಃ – ಎಲ್ಲಾ ಶತಕೋಟಿ ವಿಸ್ತಾರವಾದ ಮೂಲರಾಮಾಯಣಾದಿಗಳೆಲ್ಲವೂ, ಪ್ರಾಯಶಃ - ಅಪ ಪಾಠಾದಿಗಳಿಂದ ಉತ್ಸನ್ನಗಳಾಗಿವೆ. ಅದರ ಮಧ್ಯದಲ್ಲಿ ಕೋಟಿಗಳಿಂದ ಅಂಶವೂ ಕೂಡಾ (ಅಂದರೆ ಶತ ಸಹಸ್ರಲಕ್ಷಾದಿ ಸಂಖ್ಯಾವುಳ್ಳದ್ದು) ಇರುವುದಿಲ್ಲ. ಹೀಗೆ ಗ್ರಂಥವೂ ಕೂಡ ವ್ಯತ್ಯಸ್ತವಾಗಿದೆ; ನಷ್ಟವಾಗಿದೆ. ದೇವತೆಗಳಿಗೆ ತಿಳಿಯಲಶಕ್ಯವಾದ ಅರ್ಥವು ವ್ಯತ್ಯಸ್ತವಾಗಿದೆ. ಎಂದು ಹೇಳತಕ್ಕದ್ದೇನಿದೆ? (ಯಾವ ಕಾಲದಲ್ಲಿ ವ್ಯಾಕುಲಿತಗಳಾದವು, ಆದ ಕಾರಣ ಯಾರಿಂದ ಪ್ರೇರಿತರಾಗಿ ಯಾರಿಂದ ನಿರ್ಣಯವು ಮಾಡಲ್ಪಟ್ಟಿದೆ ಎಂದರೆ) ಕಲಿಕಾಲದಲ್ಲಿ ಈ ಪ್ರಕಾರ ಪ್ರಕ್ಷೇಪಾದಿಗಳಿಂದ ಗ್ರಂಥವು ವ್ಯಾಕುಲಿತವಾಗುತ್ತಿರಲು ನಿರ್ಣಯಮಾಡುವುದಕ್ಕಾಗಿ ಶ್ರೀ ವೇದವ್ಯಾಸರಿಂದ ಪ್ರೇರಿಸಿಕೊಳ್ಳಲ್ಪಟ್ಟ ನಾನು ಶ್ರೀ ಹರಿಯ ಪ್ರಸಾದದಿಂದ ಸಕಲ ಶಾಸ್ತ್ರಗಳ ತಾತ್ಪರ್ಯ ನಿರ್ಣಯಗಳನ್ನು ತಿಳಿದವನಾಗಿ ಹೇಳುತ್ತೇನೆ.

ವಿಶೇಷಾಂಶ—(1) ೧ ಮೂಲರಾಮಾಯಣವು ಶತಕೋಟಿ (100000000) ವಿಸ್ತೃತವಾದುದು. ೨ ಪಂಚರಾತ್ರಾಗಮವು ಐವತ್ತು ಕೋಟಿ (500000000) ವಿಸ್ತೃತವಾದುದು. ೩ ಭಾರತವು ಅರ್ವತ್ತು ಲಕ್ಷ (6000000) ವಿಸ್ತೃತವಾದುದು. ಅದರಲ್ಲಿ ಮೂವತ್ತು ಲಕ್ಷ (3000000) ದೇವಲೋಕದಲ್ಲಿ. ಹದಿನೈದು ಲಕ್ಷ (1500000) ಪಿತೃಲೋಕದಲ್ಲಿ. ಹದಿನಾಲ್ಕು ಲಕ್ಷ (1400000) ರಕ್ಷೋಯಕ್ಷಲೋಕಗಳಲ್ಲಿ. **ಏಕಂ ಶತಸಹಸ್ರಂ ತು ಮಾನುಷೇಷು ಪ್ರತಿಷ್ಠಿತಂ** ಇತ್ಯಾದಿಪ್ರಕಾರ ಮನುಷ್ಯರಲ್ಲಿ ಒಂದು ಲಕ್ಷ (100000) ಮಾತ್ರ ಇರುತ್ತದೆ. ನಾಲ್ಕು ಲಕ್ಷ (400000) ವಿಸ್ತೃತವಾದುವು ಪುರಾಣಾದಿಗ್ರಂಥಗಳು. ಇವು ಗಳಲ್ಲಿ ಕೋಟಿಗಳ ಅಂಶದಲ್ಲಿ ಒಂದು ಅಂಶವೂ ಇಲ್ಲ. ಅಂದರೆ ಸಹಸ್ರಗ್ರಂಥದಲ್ಲಿ ಶತಾಂಶವೂ ಇಲ್ಲ. ಲಕ್ಷಗ್ರಂಥದಲ್ಲಿ ಸಹಸ್ರಾಂಶವು, ಕೋಟಿ ಗ್ರಂಥಗಳಲ್ಲಿ ಲಕ್ಷಾಂಶವೂ ಇಲ್ಲ ॥೪॥೫॥೬॥

ನಿರ್ಣಯಮಾತ್ರವನ್ನು ಕೇವಲವಾಗಿ ತಿಳಿದದ್ದಲ್ಲ. ಮತ್ತೆ ಉತ್ಸನ್ನಗಳಾದ ಗ್ರಂಥ ಗಳನ್ನೂ, ಕೂಡ ತಿಳಿದಿರುವೆನು.

ಮೂ ॥ ಶಾಸ್ತ್ರಾಂತರಾಣಿ ಸಂಜಾನನ್ವೇದಾಂಶ್ಚಾಸ್ಯ ಪ್ರಸಾದತಃ ॥
ದೇಶೇ ದೇಶೇ ತಥಾ ಗ್ರಂಥಾನ್ದೃಷ್ಟ್ವಾ ಚೈವ ಪೃಥಗ್ವಿಧಾನ್ ॥ ೭ ॥

ಅ ॥ ಈ ಅನುಗ್ರಹದೆಶೆಯಿಂದ ಪಂಚರಾತ್ರ, ಬ್ರಹ್ಮಸೂತ್ರ, ಮೊದಲಾದ ಉತ್ಸನ್ನ ಶಾಸ್ತ್ರಗಳನ್ನೂ, ಸರ್ವವೇದಗಳನ್ನೂ ಕೂಡ ಚೆನ್ನಾಗಿ ತಿಳಿದವನಾಗಿ, ಹಾಗೆಯೇ (ಕೇವಲ ಜ್ಞಾನದೃಷ್ಟಿಯಿಂದಲೇ ಶಾಸ್ತ್ರಗಳನ್ನು ಕಂಡದ್ದಲ್ಲ. ಮತ್ತೆ ಪ್ರತ್ಯಕ್ಷವಾಗಿಯೂ ನಿರ್ಣಾಯಕಶಾಸ್ತ್ರಜ್ಞಾನವಿದೆ ಎನ್ನುತ್ತಾರೆ.) ಪ್ರತ್ಯೇಕ ಪ್ರತ್ಯೇಕ ದೇಶಗಳಲ್ಲಿ ನಾನಾವಿಧಗಳಾದ

ಅರ್ಥಗಳನ್ನು ಪ್ರತಿಪಾದಿಸತಕ್ಕ ಗ್ರಂಥಗಳನ್ನು ಈ ವೇದವ್ಯಾಸರ ಅನುಗ್ರಹದಿಂದ ನೋಡಿಯೇ (ಶ್ರೀಪರಮಾತ್ಮನ ಅನುಗ್ರಹದಿಂದ ನಿರ್ಣಯವನ್ನು ತಿಳಿದವನಾಗಿ ಹೇಳುತ್ತೇನೆ.)॥೭॥

ತಾನು ಮಾಡತಕ್ಕ ನಿರ್ಣಯವು ಉತ್ಪ್ರೇಕ್ಷಾಮೂಲಕವಲ್ಲ. ಮತ್ತೆ ಶ್ರೀ ವೇದವ್ಯಾಸರ ಉಪದೇಶಮೂಲಕವೇ ಎನ್ನುತ್ತಾರೆ—

ಮೂ ॥ **ಯಥಾ ಸ ಭಗವಾನ್ವ್ಯಾಸಃ ಸಾಕ್ಷಾನ್ನಾರಾಯಣಃ ಪ್ರಭುಃ ॥**
ಜಗಾದ ಭಾರತಾದ್ಯೇಷು ತಥಾ ವಕ್ಷ್ಯೇತದೀಕ್ಷಯಾ॥೮॥
ಸಂಕ್ಷೇಪಾತ್ಸರ್ವಶಾಸ್ತ್ರಾರ್ಥಂ ಭಾರತಾರ್ಥಾನುಸಾರತಃ ॥
ನಿರ್ಣಯಃ ಸರ್ವಶಾಸ್ತ್ರಾಣಾಂ ಭಾರತಂ ಪರಿಕೀರ್ತಿತಂ ॥೧೦॥

ಅ ॥ ಸಾಕ್ಷಾತ್ ಶ್ರೀನಾರಾಯಣಾವತಾರರಾದ, ಸರ್ವಸಮರ್ಥರಾದ, ಪೂಜ್ಯರಾದ ಆ ವೇದವ್ಯಾಸರು ಭಾರತ ಮೊದಲಾದ ಗ್ರಂಥಗಳಲ್ಲಿ (ನನಗೆ) ಹೇಗೆ (ಅರ್ಥದಲ್ಲಿ) ಹೇಳುವರೋ ಹಾಗೆಯೇ, ತದೀಕ್ಷಯಾ—ವೇದವ್ಯಾಸರಿಂದ ಕೊಡಲ್ಪಟ್ಟ ಜ್ಞಾನದಿಂದ ಅಥವಾ ವೇದವ್ಯಾಸರ ಪ್ರೇರಣೆಯಿಂದ, ಭಾರತದ ಅರ್ಥದ ಅನುಸರಣೆದ್ದೆಸೆಯಿಂದ (ಅಂದರೆ ಭಾರತಾರ್ಥವನ್ನು ಅನುಸರಿಸಿ(ಸರ್ವ ಶಾಸ್ತ್ರಗಳ ಅರ್ಥವನ್ನು ಸಂಕ್ಷೇಪದಿಂದ ಹೇಳುವೆನು. (ವಿಶೇಷಾಕಾರವಾಗಿ ಭಾರತಾರ್ಥವನ್ನು ಅನುಸರಿಸಿ, ಸರ್ವ ಶಾಸ್ತ್ರದ ಅರ್ಥವನ್ನು ನಿಶ್ಚಯಿಸಲಿಕ್ಕೆ ಕಾರಣವೇನು? ಎಂದರೆ—) ಸರ್ವ ಶಾಸ್ತ್ರಗಳಿಗೂ ನಿರ್ಣಾಯಕವಾದುದು ಭಾರತವೆಂದು (ಪುರಾಣಗಳಲ್ಲಿ) ಹೇಳಲ್ಪಟ್ಟಿದೆ ॥೮॥೯॥

ದೃಷ್ಟಾಂತಪೂರ್ವಕವಾಗಿ ಭಾರತಕ್ಕೆ ಉತ್ತಮತ್ವವನ್ನು ಪ್ರತಿಪಾದಿಸತಕ್ಕ, ಮತ್ತು ವಿಷ್ಣು ಸರ್ವೋತ್ತಮತ್ವಾದಿಗಳನ್ನು ಪ್ರತಿಪಾದಿಸತಕ್ಕ ಪ್ರಮಾಣವನ್ನು ಹೇಳುತ್ತಾರೆ—

ಮೂ ॥ **ಭಾರತಂ ಸರ್ವವೇದಾಶ್ಚ ತುಲಾಮಾರೋಪಿತಾಃ ಪುರಾ**
ದೇವೈರ್ಬ್ರಹ್ಮಾದಿಭಿಃ ಸರ್ವೈರೃಷಿಭಿಶ್ಚ ಸಮನ್ವಿತೈಃ ॥
ವ್ಯಾಸಸ್ಯೈವಾಜ್ಞಯಾ ತತ್ರ ತ್ವತ್ಯರಿಚ್ಯತ ಭಾರತಂ ॥೧೦॥

ಅ ॥ ಪೂರ್ವದಲ್ಲಿ ಚತುರ್ಮುಖಬ್ರಹ್ಮನೇ ಮೊದಲಾದ ಎಲ್ಲಾ ದೇವತೆಗಳಿಂದಲೂ ಅಲ್ಲಿ ಸೇರಿದ ಋಷಿಗಳಿಂದಲೂ ಕೂಡ ಭಾರತವೂ, ಋಗ್ವೇದ ಮೊದಲಾದ ಎಲ್ಲಾ ವೇದಗಳೂ ಮತ್ತು ('ವೇದಯಂತೀತಿ ವೇದಾಃ' ಎನ್ನುವ ವ್ಯುತ್ಪತ್ತಿಯಿಂದ) ಸರ್ವ ಶಾಸ್ತ್ರಗಳೂ ಕೂಡ ವೇದವ್ಯಾಸರ ಆಜ್ಞೆಯಿಂದಲೇ ತ್ರಾಸಿನಲ್ಲಿ ಏರಿಸಲ್ಪಟ್ಟವು. ಭಾರತವೂ, ವೇದಾದಿ ನಿಖಿಲಶಾಸ್ತ್ರಗಳೂ ಇವುಗಳ ಮಧ್ಯದಲ್ಲಿ ಭಾರತವೇ ಅತಿಶಯವಾಗಿ (ಭಾರದಲ್ಲಿ) ಅಧಿಕವಾಯಿತು.

ವಿಶೇಷಾಂಶ — (1) ಭಾರತಾದಿಗಳು ಅಮೂರ್ತಗಳಾಗಿರುವುದರಿಂದ ಅವುಗಳನ್ನೂ ತ್ರಾಸಿನಲ್ಲಿ ಹಾಕುವುದು ಹೇಗೆಂದರೆ—ಸಮಾನ ಪರಿಮಾಣವುಳ್ಳ ಎರಡು ಮಣಿಗಳ ಮಧ್ಯದಲ್ಲಿ ಒಂದರಲ್ಲಿ ಭಾರತಾಭಿಮಾನಿ ದೇವತೆಯನ್ನೂ ಮತ್ತೊಂದರಲ್ಲಿ ವೇದ ಮೊದಲಾದ ನಿಖಿಲ ಶಾಸ್ತ್ರಗಳಿಗೆ ಅಭಿಮಾನಿಯಾದ ದೇವತೆಯನ್ನೂ ಆವಾಹನಮಾಡಿ ಎರಡು ತ್ರಾಸುಗಳಲ್ಲಿ ಎರಡು ಮಣಿಗಳನ್ನು ಬ್ರಹ್ಮಾದಿಗಳೂ ಋಷಿಗಳೂ ಒಟ್ಟು ಕೂಡಿ ಭಾರವನ್ನು ತೂಕಮಾಡುವುದಕ್ಕಾಗಿ ಇಟ್ಟಿರುವರು; ಆಗ ಭಾರತವೇ ಅಧಿಕಭಾರವುಳ್ಳದ್ದಾಯಿತು. (2) ಹಾಗಾದರೆ ಗೀತಾಭಾಷ್ಯ ಗೀತಾತಾತ್ಪರ್ಯಗಳಲ್ಲಿಯೂ ಇಲ್ಲಿಯೂ 'ಅತ್ಯರಿಚ್ಯತಭಾರತಂ' ಎಂದು ಭಾರತಕ್ಕೆ ಉತ್ತಮತ್ವವನ್ನೂ

ಹೇಳಿರುವರು ಅನುವ್ಯಾಖ್ಯಾನದಲ್ಲಿ **'ಅತೋ ನೈತಾದೃಶಂ ಕಂಚಿತ್ಪ್ರಮಾಣತಮಮಿಷ್ಯತೇ'** ಎಂದು ಬ್ರಹ್ಮಸೂತ್ರಕ್ಕೆ ಉತ್ತಮತ್ವವನ್ನು ಹೇಳಿರುವರು. ಆದಕಾರಣ ಎರಡಕ್ಕೂ ಉತ್ತಮತ್ವವು ಹೇಗೆ ಕೂಡುತ್ತದೆಂದರೆ—ಪ್ರಮಾಣಗ್ರಂಥಗಳಲ್ಲಿ (ನಿರ್ಣಾಯಕ ಗ್ರಂಥಗಳಲ್ಲಿ) ಬ್ರಹ್ಮಸೂತ್ರವು ಉತ್ತಮವು. ಪ್ರಮೇಯ ಗ್ರಂಥಗಳಲ್ಲಿ (ನಿರ್ಣೇಯ ಗ್ರಂಥಗಳಲ್ಲಿ) ಭಾರತವು ಉತ್ತಮವು. ಆದಕಾರಣ ವಿರೋಧವಿಲ್ಲ. ॥೧೦॥

ಪ್ರಕಾರಾಂತರದಿಂದಲೂ ಭಾರತಕ್ಕೆ ಉತ್ತಮತ್ವವನ್ನುಪಪಾದಿಸುತ್ತಾರೆ—

ಮೂ ॥ **ಮಹತ್ತ್ವಾದ್ಭಾರವತ್ತ್ವಾಚ್ಚ ಮಹಾಭಾರತಮುಚ್ಯತೇ ॥**
ನಿರುಕ್ತಮಸ್ಯ ಯೋ ವೇದ ಸರ್ವಪಾಪೈಃ ಪ್ರಮುಚ್ಯತೇ ॥೧೧॥

ಅ ॥ ಮಹತ್ತ್ವಾದ ಅರ್ಥವನ್ನು ಪ್ರತಿಪಾದಿಸುವುದರಿಂದಲೂ, ಉತ್ತಮವಾದ ಅರ್ಥವನ್ನು ಪ್ರತಿಪಾದಿಸುವುದರಿಂದ ತ್ರಾಸಿನಲ್ಲಿ ಇಟ್ಟ ಕಾಲದಲ್ಲಿಯೂ ಗುರುತ್ವವಿದ್ದ ಪ್ರಯುಕ್ತವೂ ಮಹಾಭಾರತವೆಂದು ಹೇಳಿಸಿಕೊಳ್ಳಲ್ಪಡುತ್ತದೆ. ಯಾವಾತನು ಮಹಾಭಾರತದ ನಿರ್ವಚನವನ್ನು (ಅಂದರೆ ಈ ಪ್ರಕಾರವಾಗಿ ಚೆನ್ನಾಗಿ ಪ್ರತಿಪಾದಿಸಿದ ಅವಯವಾರ್ಥವನ್ನು) ತಿಳಿದುಕೊಳ್ಳುತ್ತಾನೋ, ಆತನು ಎಲ್ಲಾ ಪಾಪಗಳಿಂದಲೂ ಬಿಡಿಸಿಕೊಳ್ಳಲ್ಪಡುತ್ತಾನೆ. ॥೧೧॥

ಭಾರತವು ಸರ್ವ ಶಾಸ್ತ್ರಗಳಿಗೆ ನಿರ್ಣಾಯಕವೆಂದು ಹೇಳಲ್ಪಟ್ಟಿತು. ಅದರಲ್ಲಿ ನಿರ್ಣಯವು ಹೇಗೆ ಮಾಡಲ್ಪಟ್ಟಿತು? ಎಂದರೆ — ನಿರ್ಣಯಪ್ರಕಾರವನ್ನು ಪ್ರತಿಪಾದಿಸತಕ್ಕ ಬ್ರಹ್ಮಾಂಡ ಪುರಾಣ ವಾಕ್ಯಗಳನ್ನು ಹೇಳುತ್ತಾರೆ—

ಮೂ ॥ **ನಿರ್ಣಯಃ ಸರ್ವಶಾಸ್ತ್ರಾಣಾಂ ಸದೃಷ್ಟಾಂತೋ ಹಿ ಭಾರತೇ ॥**
ಕೃತೋ ವಿಷ್ಣುವಶತ್ವಂ ಹಿ ಬ್ರಹ್ಮಾದೀನಾಂ ಪ್ರಕಾಶಿತಂ ॥೧೨॥
ಯತಃ ಕೃಷ್ಣವಶೇ ಸರ್ವೇ ಭೀಮಾದ್ಯಾಃ ಸಮ್ಯಗೀರಿತಾಃ ॥
ಸರ್ವೇಷಾಂ ಜ್ಞಾನದೋ ವಿಷ್ಣುರ್ಯಶೋದಾತೇತಿ ಚೋದಿತ ॥೧೩॥

ಅ ॥ ಭಾರತದಲ್ಲಿ (**'ನಿರ್ಣಯಃ ಸರ್ವಶಾಸ್ತ್ರಾಣಾಂ'** ಎನ್ನುವ ೧೨ನೇ ಶ್ಲೋಕವನ್ನಾರಂಭಿಸಿ **'ಅತ್ರೋಕ್ತಂ ಸರ್ವಶಾಸ್ತ್ರೇಷು ನ ಹಿ ಸಮ್ಯಗುದಾಹೃತಂ'** ಎನ್ನುವ ೫೧ನೇ ಶ್ಲೋಕಪರ್ಯಂತ) ದೃಷ್ಟಾಂತ ಪ್ರದರ್ಶನಪೂರ್ವಕವಾಗಿ ಸರ್ವಶಾಸ್ತ್ರಗಳ ನಿರ್ಣಯವು ಮಾಡಲ್ಪಟ್ಟಿದೆ. (ಆದುದರಿಂದ ಭಾರತಕ್ಕೆ ಉತ್ತಮತ್ವವು.) (ಸದೃಷ್ಟಾಂತವಾಗಿ ನಿರ್ಣಯವು ಹೇಗೆ ಮಾಡಲ್ಪಟ್ಟಿದೆ ಎಂದರೆ) ಯಾವ ಕಾರಣದ್ದೆಶೆಯಿಂದ ಭೀಮ ಮೊದಲಾದವರೆಲ್ಲರೂ ಚೆನ್ನಾಗಿ ಕೃಷ್ಣನ ಅಧೀನದಲ್ಲಿ ಹೇಳಲ್ಪಟ್ಟಿದ್ದಾರೋ, (ಆದಕಾರಣ) ಬ್ರಹ್ಮಾದಿಗಳಿಗೆ ವಿಷ್ಣ್ವಧೀನತ್ವವು ಹೇಳಲ್ಪಟ್ಟಿದೆ. ಹಿ- ಭೀಮಾದಿಗಳು ಬ್ರಹ್ಮಾದಿಗಳೇ ಎನ್ನುವುದು ಸುಪ್ರಸಿದ್ಧವು. (ತಥಾಚ ಕೃಷ್ಣನು ವಿಷ್ಣುವಾಗಿದ್ದಾನೆ. ಭೀಮನು ಬ್ರಹ್ಮಪದವಿಯನ್ನು ಹೊಂದುವನು.) ಮತ್ತು ವಿಷ್ಣುವು ಬ್ರಹ್ಮ ಮೊದಲಾದ ಎಲ್ಲವರಿಗೆ ಜ್ಞಾನದಾಯಕನು, ಯಶಸ್ಸನ್ನೂ ಕೊಡುವವನೂ ಎಂದೂ (ಭಾರತದಲ್ಲಿ) ಹೇಳಲ್ಪಟ್ಟಿದೆ.

ವಿಶೇಷಾಂಶ-ವಿಷ್ಣುಸರ್ವೋತ್ತಮತ್ವಾದಿನಿರ್ಣಾಯಕಗಳಾದ ಆ ದೃಷ್ಟಾಂತಗಳು ಯಾವುವು ಎಂದರೆ—(೧) ಶ್ರೀ ಕೃಷ್ಣನು ಸರ್ವೋತ್ತಮನು ಎನ್ನುವ ವಿಷಯದಲ್ಲಿ ಸಾಕ್ಷಾತ್ ಸ್ವಸ್ವರೂಪವನ್ನೇ ಧರಿಸಿಕೊಂಡಿರುವ ಬ್ರಹ್ಮ-ರುದ್ರಾದಿ ದೇವತೆಗಳೂ, ಎಲ್ಲಾ ಋಷಿಗಳೂ, ಎಲ್ಲಾ ರಾಜರೂ

ಕೂತುಕೊಂಡು ಇರುವಾಗ ರಾಜಸೂಯ ಯಾಗದ ಸಭೆಯಲ್ಲಿ ಬೇರೆಯವರನ್ನು ಬಿಟ್ಟು ಶ್ರೀ ಕೃಷ್ಣನಿಗೇನೇ ಅಗ್ರಪೂಜೆಯನ್ನು ಮಾಡಿರುವುದರಿಂದ ಅಗ್ರಪೂಜಾಗ್ರಹಣಾಖ್ಯ ದೃಷ್ಟಾಂತವನ್ನು ಸರ್ವೋತ್ತಮತ್ವದಲ್ಲಿ ತೋರಿಸಿರುವರು. (2) ಭೀಮಸೇನನು ದೇವೋತ್ತಮನೆನ್ನುವ ವಿಷಯದಲ್ಲಿ ಬಲಾಧಿಕತ್ವರೂಪ ದೃಷ್ಟಾಂತವನ್ನು ತೋರಿಸಿರುವರು. (೩) ದ್ರೌಪದಿಯು ಲಕ್ಷ್ಮೀವ್ಯತಿರಿಕ್ತ ಸ್ತ್ರೀಯರಿಗಿಂತ ಉತ್ತಮಳಾಗಿದ್ದಾಳೆನ್ನುವಲ್ಲಿ ಲಾವಣ್ಯಾಧಿಕ್ಯರೂಪವಾದ ದೃಷ್ಟಾಂತವನ್ನು ತೋರಿಸಿರುವರು. (೪) ಶ್ರೀ ವಿಷ್ಣುವಿನ ಪಕ್ಷದಲ್ಲಿರುವವರಿಗೆ ಸೌಭಾಗ್ಯವಿದೆ ಎನ್ನುವಲ್ಲಿ ಧರ್ಮರಾಜನ ಸಾಮ್ರಾಜ್ಯವನ್ನೇ ದೃಷ್ಟಾಂತವನ್ನಾಗಿ ತೋರಿಸಿರುವರು. (೫) ವಿಷ್ಣು ವಿರೋಧಿಗಳಿಗೆ ದೌರ್ಭಾಗ್ಯ ವಿದೆ ಎನ್ನುವಲ್ಲಿ ಅನುಜರಿಂದೊಡಗೂಡಿರುವ ದುರ್ಯೋಧನಾದಿಗಳ ಸಂಹಾರರೂಪವಾದ ದೃಷ್ಟಾಂತವನ್ನು ಪ್ರಕಟೀಕರಿಸುತ್ತಾರೆ. ಇದು ಮೊದಲಾದ ದೃಷ್ಟಾಂತಗಳನ್ನು ಮುಂದೆ ಹೇಳುವ ನ್ಯಾಯದಿಂದ ಭಾರತ ಕಥೆಯನ್ನು ಹೇಳತಕ್ಕ ವಿದ್ವಾಂಸರಿಂದ ತನ್ನಷ್ಟಕ್ಕೇನೇ ಉತ್ಪ್ರೇಕ್ಷಿಸಲಿಕ್ಕೆ ಶಕ್ಯಗಳಾಗುತ್ತವೆ. (೬) ಹಾಗೆಯೇ ಪುರಾಣಗಳನ್ನು ಮಾಡಿರುವ ವೇದವ್ಯಾಸರು ತಾನು ಮಾಡಿರುವ ಭಾರತಕ್ಕೆ ಅಭಿಮತಗಳಾದ ರಹಸ್ಯ ಪ್ರಮೇಯಗಳನ್ನು ಪ್ರತ್ಯೇಕ ಪ್ರತ್ಯೇಕ ತಾನೇ ತೋರಿಸಿ ಅಲ್ಲಲ್ಲಿ ಯೋಗ್ಯಗಳಾದ ದೃಷ್ಟಾಂತಗಳನ್ನು ವಿಷ್ಣುವಶತ್ವಂ ಇತ್ಯಾದಿಗಳಿಂದ ತಾನೇ ತೋರಿಸಿರುವರು. (೭) ಬ್ರಹ್ಮಾದಿಗಳಿಗೆ ಶ್ರೀ ವಿಷ್ಣುವಶತ್ವಾಖ್ಯವಾದ ಪರಮ ಪ್ರಮೇಯದಲ್ಲಿ ಶ್ರೀ ಕೃಷ್ಣವಶದಲ್ಲಿ ಇರತಕ್ಕ ಭೀಮಾದಿಗಳೇ ದೃಷ್ಟಾಂತಭೂತರು ॥೧೨॥೧೩॥

ಶ್ರೀ ಹರಿಯು ಬ್ರಹ್ಮಾದಿಗಳಿಗೆಲ್ಲರಿಗೂ ೧ ಜ್ಞಾನವನ್ನು ಕೊಡತಕ್ಕವನು, ೨ ಯಶಸ್ಸನ್ನು ಕೊಡತಕ್ಕವನು, ಎನ್ನುವುದು ಭಾರತದಲ್ಲಿ ರಹಸ್ಯಭೂತಗಳಾದ ಎರಡು ಪ್ರಮೇಯಗಳು. ಅದರಲ್ಲಿ ಜ್ಞಾನದಾನದೆಶೆಯಿಂದಲೂ ತನ್ನ ಭಕ್ತರಿಗೆ ಯಶಸ್ಸನ್ನು ಕೊಡುವ ವಿಷಯದಲ್ಲಿ ಶ್ರೀ ಹರಿಗೆ ಮಹಾತಾತ್ಪರ್ಯವಿದೆ ಎಂದು ಸೂಚಿಸುವುದಕ್ಕಾಗಿ ಎರಡನೇ ಪ್ರಮೇಯದ ದೃಷ್ಟಾಂತವನ್ನು ಪ್ರಥಮತಃ ಹೇಳುತ್ತಾರೆ—

ಮೂ ॥ ಯಸ್ಮಾದ್ವ್ಯಸಾತ್ಮನಾ ತೇಷಾಂ ಭಾರತೇ ಯಶ ಊಚಿವಾನ್ ॥
ಜ್ಞಾನದಶ್ಚ ಶುಕಾದೀನಾಂ ಬ್ರಹ್ಮರುದ್ರಾದಿರೂಪಿಣಾಂ ॥೧೪॥

ಅ ॥ ಯಾವ ಕಾರಣದ್ದೆಶೆಯಿಂದ ಭಾರತದಲ್ಲಿ ಭೀಮಾರ್ಜುನಾದಿಗಳಿಗೆ (ಕೃಷ್ಣರೂಪದಿಂದ ಸಾರಥ್ಯಾದಿಗಳನ್ನು ಮಾಡಿ) ಯಶಸ್ಸನ್ನು ವ್ಯಾಸರೂಪದಿಂದ ಹೇಳಿರುವರೋ (ಮತ್ತು ಸಾಧಿಸಿರುವರೋ,) (ಅದುದರಿಂದ ಯಶಸ್ಸನ್ನು ಕೊಡುವವರು) (ಜ್ಞಾನವನ್ನು ಕೊಡುವವನು ಎನ್ನುವ ಪ್ರಥಮ ಪ್ರಮೇಯದಲ್ಲಿ ದೃಷ್ಟಾಂತವನ್ನು ಹೇಳುತ್ತಾರೆ.) ಬ್ರಹ್ಮ-ರುದ್ರ ಮೊದಲಾದ ಸ್ವರೂಪವುಳ್ಳ ಶುಕಾದಿಗಳಿಗೆ ಜ್ಞಾನವನ್ನೂ ಕೊಡತಕ್ಕವನು.

ವಿಶೇಷಾಂಶ— (1) ಯಶಸ್ಸನ್ನು ಕೊಡುವುದರಿಂದಲೂ ಗ್ರಂಥರೂಪದಿಂದ ಯಶಸ್ಸನ್ನು ಹೊಗಳುವುದು ಸೂರ್ಯ-ಚಂದ್ರರು ಇರುವ ತನಕ ಆ ಭೀಮಾದಿಗಳ ಯಶಸ್ಸಿನ ವಿಸ್ತಾರಕ್ಕೆ ಕಾರಣವಾಗಿರುವುದರಿಂದ, ಪ್ರಬಲವಾಗಿರುವುದರಿಂದ ಯಶಃಪ್ರಶಂಸನವನ್ನು 'ಊಚಿವಾನ್' ಎಂದು ಸ್ವಪದದಿಂದ ಹೇಳಿರುವರು. 'ಸಾಧಯಾಮಾಸ' ಎಂದು ಉಪಲಕ್ಷಣರೂಪದಿಂದ ಹೇಳಿರುವರು. (2) ಶುಕಾದಿಗಳಿಗೆ ಜ್ಞಾನವನ್ನು ಕೊಟ್ಟರೆ ಬ್ರಹ್ಮಾದಿಗಳಿಗೆ ಏನು ಪ್ರಾಪ್ತವಾಯಿತು. ಎಂದರೆ—೧ ಶುಕಾಚಾರ್ಯರು ಸ್ವಯಂ ರುದ್ರರೂಪರು; ಆ ಶುಕಾಚಾರ್ಯರಲ್ಲಿ ವಾಯುದೇವರ ಸನ್ನಿಧಾನವಿದೆ. ೨ ವೈಶಂಪಾಯನಾಖ್ಯಶಿಷ್ಯನಲ್ಲಿ ಬ್ರಹ್ಮನ ಸನ್ನಿಧಾನವಿದೆ.

ಮತ್ತು ಮಧ್ವನಾಮಕರಾದ ಭಾವಿಬ್ರಹ್ಮರಿಗೆ ತನ್ನ ಮುಖದಿಂದಲೇ ಸಾಕ್ಷಾತ್ ಜ್ಞಾನವನ್ನುಪ ದೇಶಿಸಿರುವರು. ಆದುದರಿಂದಲೇ 'ಬ್ರಹ್ಮರುದ್ರಾದಿರೂಪಿಣಾಂ' ಎಂದು ಹೇಳಿರುವರು ॥೧೪॥

ಪ್ರಮೇಯಾಂತರವನ್ನು ಸದೃಷ್ಟಾಂತವಾಗಿ ಹೇಳುತ್ತಾರೆ—

ಮೂ ॥ ಬ್ರಹ್ಮಾಧಿಕಶ್ಚ ದೇವೇಭ್ಯಃ ಶೇಷಾದ್ರುದ್ರಾದಪೀರಿತಃ ॥
ಪ್ರಿಯಶ್ಚ ವಿಷ್ಣೋಃ ಸರ್ವೇಭ್ಯ ಇತಿ ಭೀಮನಿದರ್ಶನಾತ್ ॥೧೫॥

ಅ ॥ ಬ್ರಹ್ಮನು ದೇವತೆಗಳಿಂದಲೂ, ಶೇಷನಿಂದಲೂ, ರುದ್ರನಿಂದಲೂ ಅಧಿಕನೆಂದೂ ಎಲ್ಲರಿಂದಲೂ ಶ್ರೀ ವಿಷ್ಣುವಿಗೆ ಪ್ರಿಯನೆಂದೂ ಭೀಮನ ದೃಷ್ಟಾಂತದೆಶೆಯಿಂದ (ಭಾರತದಲ್ಲಿ) ಹೇಳಲ್ಪಟ್ಟಿದ್ದಾನೆ.

ವಿಶೇಷಾಂಕ— (1) 'ಭೀಮನಿದರ್ಶನಾತ್', ಎಂದು ಹೇಳುವಾಗ ಈ ವಿಷಯದಲ್ಲಿ ಭೀಮನು ದೃಷ್ಟಾಂತನೆಂದು ಸೂಚಿತವಾಯಿತು. ಹೇಗೆಂದರೆ— ಅಶ್ವತ್ಥಾಮನಿಗೆ ಮುಖಭಂಗ ವಾಗಿರುವುದರಿಂದಲೂ, ಶೇಷರೂಪನಾದ ಬಲರಾಮನಿಂದ ಅಸಾಧ್ಯನಾದ ಜರಾಸಂಧನ ಸಂಹಾರ ದಿಂದಲೂ ಭೀಮನ ದೃಷ್ಟಾಂತವನ್ನು ಕೊಟ್ಟಿರುವುದರಿಂದ ಬ್ರಹ್ಮನಿಗೆ ಶೇಷ-ರುದ್ರರಿಂದಲೂ ಉತ್ತಮತ್ವವನ್ನು ತೋರಿಸಿದರು. ದೇವೇಂದ್ರರೂಪನಾದ ಅರ್ಜುನನಿಂದಲೂ ಜ್ಯೇಷ್ಠನಾದ ಪ್ರಯುಕ್ತ ದೇವತೆಗಳಿಂದ ಉತ್ತಮೋತ್ತಮತ್ವವನ್ನು ತೋರಿಸಿದರು. (2) ರಾಮಾವತಾರದಲ್ಲಿ ಹನು ಮಂತನಿಗೆ ಸುಗ್ರೀವನು ಮಿತ್ರಭೂತನಾದಾಗ್ಯೂ ಸುಗ್ರೀವಸ್ವರೂಪನೇ ಆದ ಕರ್ಣನು ಕೃಷ್ಣಾವ ತಾರದಲ್ಲಿ ಹನುಮದ್ರೂಪನಾದ ಭೀಮನಿಗೆ ವಿರೋಧಿಯಾಗಿರುವುದರಿಂದ ಆತನನ್ನು ಸಂಹರಿ ಸಿರುವುದರಿಂದಲೂ, ರಾಮಾವತಾರದಲ್ಲಿ ಹನುಮಂತನಿಗೆ ವಾಲಿಯು ವಿರೋಧಿಭೂತನಾದಾಗ್ಯೂ ಆ ವಾಲಿಸ್ವರೂಪನೇ ಆದ ಅರ್ಜುನನು ಕೃಷ್ಣಾವತಾರದಲ್ಲಿ ಭೀಮನಿಗೆ ಮಿತ್ರಭೂತನಾಗಿರುವುದ ರಿಂದ ಆತನನ್ನು ಪರಿಗ್ರಹಿಸಿರುವುದರಿಂದಲೂ, ಸರ್ವರಿಂದಲಲ ವಾಯುವಿನ ಅವತಾರಭೂತನಾದ ಭೀಮನೇ ಅತಿ ಪ್ರಿಯನೆಂದು ತಿಳಿಯುತ್ತದೆ ॥೧೫॥

ಪ್ರಮೇಯಾಂತರವನ್ನೂ ದೃಷ್ಟಾಂತಾಂತರವನ್ನೂ ತೋರಿಸುತ್ತಾರೆ—

ಮೂ ॥ ಭೂಭಾರಹರಣೇ(ಹಾರಿಣೋ) ವಿಷ್ಣೋಃ
ಪ್ರಧಾನಾಂಗಂ ಹಿ ಮಾರುತಿಃ ॥
ಮಾಗಧಾದಿವಧಾದೇವ ದುರ್ಯೋಧನ ವಧಾದಪಿ ॥ ೧೬ ॥

ಅ ॥ ವಾಯುಪುತ್ರನಾದ ಭೀಮಸೇನನು ಭೂಮಿಗೆ ಭಾರಭೂತರಾದ ದೈತ್ಯರನ್ನು ಸಂಹರಿಸುವ ವಿಷಯದಲ್ಲಿ ಶ್ರೀ ವಿಷ್ಣುವಿಗೆ ಪ್ರಧಾನ ಅಂಗಭೂತನು. (ಯಾರು ಯಾರ ಕಾರ್ಯ ದಲ್ಲಿ ಪ್ರಧಾನ ಅಂಗಭೂತನೋ ಆತನು ಆತನಿಗೆ ಪ್ರಿಯನೆಂದು ಸಿದ್ಧವಾಗಿದೆ.) (ಪ್ರಧಾನಾಂಗ ನಾದುದರಿಂದ ಪ್ರಿಯನಾಗಲಿ, ಬಲಾಧಿಕನು ಯಾವುದರಿಂದ ಎಂದರೆ) (ಬಲಾಧಿಕರಾದ) ಮಗಧದೇಶಾಧಿಪತಿಯಾದ ಜರಾಸಂಧನೇ ಮೊದಲಾದ ಕೀಚಕಾದಿಗಳನ್ನು ಸಂಹರಿಸಿರುವುದ ರಿಂದಲೂ ದೈತ್ಯಶ್ರೇಷ್ಠನಾದ ಕಲಿಸ್ವರೂಪನಾದ ದುರ್ಯೋಧನನನ್ನು ಸಂಹರಿಸಿರುವುದರಿಂದಲೂ (ಭೀಮನಿಗೆ ಬಲಾಧಿಕ್ಯವು ಸಿದ್ಧವಾಯಿತು.) ॥ ೧೬ ॥

'ಬ್ರಹ್ಮಾಧಿಕಶ್ಚ ದೇವೇಭ್ಯಃ' ಎಂದು ಬ್ರಹ್ಮನು ದೇವತೆಗಳಿಂದ ಅಧಿಕನೆನ್ನುವಾಗ ದೇವೇ ತರರಿಂದ ಅಧಿಕನೆಂದು ಸುತರಾಂ ಸಿದ್ಧವಾಗುತ್ತದೆ. ಹೀಗೆ ಬ್ರಹ್ಮನಿಗೆ ಸರ್ವಾಧಿಕ್ಯವು ಹೇಳ ಲ್ಪಟ್ಟಿದೆ, ಅದನ್ನು ಸಯುಕ್ತಿಕವಾಗಿ ಸಮರ್ಥಿಸುತ್ತಾರೆ—

ಮೂ ॥ ಯೋ ಯ ಏವ ಬಲಜ್ಯೇಷ್ಠಃ ಕ್ಷತ್ರಿಯೇಷು ಸ ಉತ್ತಮಃ
ಅಂಗಂ ಚೇದ್ವಿಷ್ಣುಕಾರ್ಯೇಷುತದ್ಭಕ್ತ್ಯೈವಚನಾ (ನಚಾ)ನ್ಯಥಾ॥೧೭॥

ಅ ॥ ಕ್ಷತ್ರಿಯರಲ್ಲಿ ಯಾವನು ಬಲಶ್ರೇಷ್ಠನೊ, ಆತನು ವಿಷ್ಣುಕಾರ್ಯಗಳಲ್ಲಿ ವಿಷ್ಣುಭಕ್ತಿಯಿಂದಲೇ ಅಂಗಭೂತನಾದರೆ ಉತ್ತಮನು- ಅನ್ಯಥಾ–ವಿಷ್ಣುಭಕ್ತಿಯಿಲ್ಲದೆ ಇದ್ದರೆ ನ ಚ –(ದೇವತೆಗಳಿಗೆ ಅಮೃತಮಥನದಲ್ಲಿ ಅಸುರನಂತೆಯೇ ತನ್ನ ಉದರಪೂರಣಕ್ಕಾಗಿಯೇ ಅಂಗಭೂತನಾದರೆ) ಉತ್ತಮನಲ್ಲ. (ಅಂದರೆ ಅಂತಹ ಅಂಗಭೂತನಾಗಿ ಫಲವುಳ್ಳವನೂ ಆಗುವುದಿಲ್ಲ.) ೧೭॥

ಹೀಗಾದರೆ ಅಶ್ವತ್ಥಾಮನಕ್ಕಿಂತ ಅರ್ಜುನನಿಗೆ ಶ್ರೇಷ್ಠತ್ವವು ಪ್ರಾಪ್ತವಾಗಬೇಕಾಯಿತೆಂದರೆ–

ಮೂ ॥ ಬಲಂ ನೈಸರ್ಗಿಕಂ ತಚ್ಚೇದ್ವರಾಸ್ತ್ರಾದೇಸ್ತದನ್ಯಥಾ॥
ಅನ್ಯಾವೇಶನಿಮಿತ್ತಂ ಚೇದ್ಬಲಮನ್ಯಾತ್ಮಕಂ ಹಿ ತತ್॥೧೮॥

ಅ ॥ ಆ ಬಲವು ಸ್ವಾಭಾವಿಕವಾಗಿದ್ದರೆ (ಅಧಿಕ್ಯಕ್ಕೆ ಕಾರಣವಾಗುತ್ತದೆ.) ವರಾಸ್ತ್ರಾದೇಃ- ಶಿವಾದಿಗಳಿಂದ ಕೊಡಲ್ಪಟ್ಟ ವರದಿಂದಲೂ, ಶಿವಾದಿಗಳಿಂದ ಕೊಡಲ್ಪಟ ಅಸ್ತ್ರದಿಂದಲೂ ಶಿವಾದಿಗಳಿಂದ ಕೊಡಲ್ಪಟ್ಟ ಪಿಶಾಚಾದಿ ಸಹಾಯದಿಂದಲಾಗಲೀ, ಆ ಬಲವಾದರೆ, ಆಧಿಕ್ಯದಿಂದ ಬೇರೆ ಪ್ರಕಾರವಾದ ನೀಚತ್ವದಲ್ಲಿ ಕಾರಣವಾಗುತ್ತದೆ. (ನರವೇಶನಿಮಿತ್ತವಾದ ಅರ್ಜುನನ ಬಲದಂತೆ) ಇತರರ ಆವೇಶನಿಮಿತ್ತಕವಾದರೆ, (ಆಧಿಕ್ಯಕ್ಕೆ ಕಾರಣವಾಗುವುದಿಲ್ಲ.) ಆ ಬಲವು ಇತರರದ್ದೇ ಸ್ವಭಾವಭೂತವಾದುದಷ್ಟೇ? (ಆದುದರಿಂದ ಅರ್ಜುನಾದಿಗಳಿಗೆ ಉತ್ತಮರ ವರ ಅಸ್ತ್ರ ಮೊದಲಾದವುಗಳಿಂದ ವರಾಸ್ತ್ರಾದಿಗಳಿಂದ ಕದಾಚಿತ್ ಅಶ್ವತ್ಥಾಮನಿಂದ ಬಲಾಧಿಕ್ಯವು ತೋರಿದರೂ ಆ ಬಲವು ಸ್ವಾಭಾವಿಕವಾಗುವುದರಿಂದ ಅಶ್ವತ್ಥಾಮನಿಂದ ಉತ್ತಮತ್ವಕ್ಕೆ ಸಾಧಕವಾಗಲಾರದು.) ॥ ೧೮ ॥

ಹಾಗಾದರೆ ಜ್ಞಾನಾಧಿಕ್ಯದಿಂದಲಾಗಲೀ, ಭಕ್ತ್ಯಾಧಿಕ್ಯದಿಂದಲಾಗಲೀ, ಶ್ರೀ ವಿಷ್ಣುವಿನ ಪ್ರೇಮಾಧಿಕ್ಯದಿಂದಲಾಗಲೀ, ಆಧಿಕ್ಯವನ್ನು ಹೇಳಬೇಕು. ಕೇವಲ ಬಲಾಧಿಕ್ಯದಿಂದ ಆಧಿಕ್ಯವು ಹೇಗೆ? ಹಾಗಿದ್ದರೆ ಉಪದೇಷ್ಟೃಗಳಾದ ಗುರುಗಳ ಸಕಾಶದಿಂದಲೂ ಮಲ್ಲರಿಗೆ ಆಧಿಕ್ಯವು ಬರಬೇಕಾದೀತು. ಎಂದರೆ—

ಮೂ ॥ ದೇವೇಷು ಬಲಿನಾಮೇವ ಭಕ್ತಿಜ್ಞಾನೇನ ಚಾನ್ಯಥಾ ॥
ಸ ಏವ ಚ ಪ್ರಿಯೋ ವಿಷ್ಣೋರ್ನಾನ್ಯಥಾ ತು ಕಥಂಚನ ॥ ೧೯ ॥

ಅ ॥ (ಮಲ್ಲಾದಿ ಮನುಷ್ಯರಲ್ಲಿಯೂ, ಗಜಾದಿ ಪಶುಗಳಲ್ಲಿಯೂ ಬಲಾಧಿಕ್ಯವಿದ್ದರೂ ಜ್ಞಾನಾಧಿಕ್ಯವು ತೋರದಿರುವುದರಿಂದ ನಿಯಮವು ಹೇಗೆಂದರೆ) ದೇವತೆಗಳಲ್ಲಿ ಬಲವುಳ್ಳವರಿಗೇನೇ ಭಕ್ತಿಜ್ಞಾನಗಳು (ಪ್ರಧಾನಗಳು.) ಬಲವಿಲ್ಲದಿದ್ದರೆ ಭಕ್ತಿಜ್ಞಾನಗಳು ಇಲ್ಲ. (ಅತಿ ಪ್ರಿಯತ್ವದಲ್ಲಿ ಭಕ್ತಿಜ್ಞಾನಗಳೇ ಪ್ರಯೋಜಕಗಳು ಎನ್ನುತ್ತಾರೆ.) ಭಕ್ತಿಜ್ಞಾನವುಳ್ಳವನೇ ವಿಷ್ಣುವಿಗೆ ಪ್ರಿಯನು. ಭಕ್ತಿಯಿಲ್ಲದಿದ್ದರೆ ಯಾವ ಪ್ರಕಾರದಿಂದಲೂ ಪ್ರಿಯನಾಗಲಾರನು.

ವಿಶೇಷಾಂಶ— ಹಾಗಾದರೆ ಬಲವನ್ನೇ ಏಕೆ ಅಂಗೀಕರಿಸಿದ್ದು ಎಂದು ಶಂಕಿಸ ಕೂಡದು. ಪರರ ಮನಸ್ಸಿನಲ್ಲಿರತಕ್ಕ ಜ್ಞಾನಾದಿಗಳನ್ನು ಅನುಮಾನದಿಂದಲೇ ತಿಳಿಯಬೇಕಾದುದರಿಂದ ಪ್ರತ್ಯಕ್ಷದಿಂದ ತಿಳಿಯಲು ಯೋಗ್ಯವಾದ ಬಲವನ್ನೇ ತೆಗೆದುಕೊಂಡದ್ದು ಯೋಗ್ಯವು

ತಥಾಚ 'ಯತ್ರ ಬಲಾಧಿಕ್ಯಂ ತತ್ರ ಜ್ಞಾನಾದಿ ಗುಣಾಧಿಕ್ಯಂ, ದೇವತೆಗಳಲ್ಲಿ ಎಲ್ಲಿ ಬಲಾಧಿಕ್ಯವಿದೆಯೋ ಅಲ್ಲಿ ಜ್ಞಾನಾದಿಗುಣಗಳಿಗೆ ಆಧಿಕ್ಯವಿದೆ ಎಂದು ನಿಯಮವಿದೆ. ॥೧೯॥

ಕ್ಷತ್ರಿಯೇಷು ಇತ್ಯಾದಿಗಳಿಂದ ಸಿದ್ಧವಾದ ವ್ಯಾಪ್ತಿಯನ್ನು ಅನುವಾದ ಮಾಡುತ್ತಾರೆ.

ಮೂ ॥ ತಸ್ಮಾದ್ಯೋಯೋ ಬಲಜ್ಯೇಷ್ಠಃ ಸ ಗುಣಜ್ಯೇಷ್ಠ ಏವ ಚ ॥
ಬಲಂ ಹಿ ಕ್ಷತ್ರಿಯೇ ವ್ಯಕ್ತಂ ಜ್ಞಾಯತೇ ಸ್ಥೂಲದೃಷ್ಟಿಭಿಃ ॥೨೦॥

ಅ ॥ ಆದುದರಿಂದ ಯಾರು ಯಾರು (ಸತ್ ಕ್ಷತ್ರಿಯನಾಗಿ ಸ್ವಾಭಾವಿಕವಾದ) ಬಲದಿಂದ ಶ್ರೇಷ್ಠನೋ, ಆತನು ಜ್ಞಾನಾದಿಗುಣಗಳಿಂದ ಜ್ಯೇಷ್ಠನೇ (ಆಗಿರುತ್ತಾನೆ.) (ಹಾಗಾದರೆ– ಬಲಾಧಿಕ್ಯವು ಭಕ್ತ್ಯಾಧಿಕ್ಯದಲ್ಲಿ ಲಿಂಗವೆಂದು ಹೇಗೆ ಸಿದ್ಧವಾಗುತ್ತದೆ.? ವಿಪರೀತವು ಏಕೆ ಆಗಲಾರದು ಎಂದರೆ,) ಸ್ಥೂಲದರ್ಶಿಗಳಾದ ಪುರುಷರಿಂದ ಕ್ಷತ್ರಿಯರಲ್ಲಿ ಬಲವು ಸ್ಪಷ್ಟವಾಗಿ ತಿಳಿಯಲ್ಪಡುತ್ತದೆ. ಪ್ರಸಿದ್ಧವು ॥೨೦॥

ಮೂ ॥ ಜ್ಞಾನಾದಯೋ ಗುಣಾ ಯೆಸ್ಮಾಜ್ಜ್ಞಾಯಂತೇ ಸೂಕ್ಷ್ಮದೃಷ್ಟಿಭೀಃ ॥
ತಸ್ಮಾದ್ಯತ್ರ ಬಲಂ ತತ್ರ ವಿಜ್ಞಾತವ್ಯಾಗುಣಾಃ ಪರೇ ॥೨೧॥
ದ್ವೇವೇಷ್ವೇವ ನ ಚಾನ್ಯೇಷು ವಾಸುದೇವ ಪ್ರತೀಪತಃ ॥
ಕ್ಷತ್ರಾದನ್ಯೇಷ್ವಪಿ ಬಲಂ ಪ್ರಮಾಣಂ ಯತ್ರ ಕೇಶವಃ ॥೨೨॥
ಪ್ರವೃತ್ತೋದುಷ್ಟನಿಧನೇ ಜ್ಞಾನಕಾರ್ಯೇತಥೈ(ದೇ)ವಚ ॥೨೩॥

ಅ ॥ ಯಾವ ಕಾರಣದಿಂದೆಯಿಂದ ಜ್ಞಾನ ಮೊದಲಾದ ಗುಣಗಳು ಸೂಕ್ಷ್ಮಜ್ಞಾನಗಳಿಂದಲೇ ತಿಳಿಯಲ್ಪಡುತ್ತವೋ, (ಸ್ಥೂಲದರ್ಶಿಗಳಿಂದ ತಿಳಿಯಲ್ಪಡುವುದಿಲ್ಲವೋ) ಆದಕಾರಣ ಎಲ್ಲಿ ಬಲವು ಇದೆಯೋ ಅಲ್ಲಿ ಇತರ ಜ್ಞಾನಾದಿಗಳೂ ತಿಳಿಯಲರ್ಹಗಳು. (ಈ ವ್ಯಾಪ್ತಿಯು) ದೇವತೆಗಳಲ್ಲಿಯೇ, (ಅಂದರೆ ಸಜ್ಜನರಲ್ಲಿಯೇ ಈ ವ್ಯಾಪ್ತಿಯು,) ಇತರರಾದ ದುರ್ಯೋಧನ ಜರಾಸಂಧ ಮೊದಲಾದ ದಾನವರಲ್ಲಿ ಶ್ರೀ ಕೃಷ್ಣನ ವಿರೋಧವಿದ್ದಪ್ರಯುಕ್ತ (ಅಂದರೆ ದುರ್ಯೋಧನಾದಿಗಳು ದ್ವೇಷಿಗಳಾದಪ್ರಯುಕ್ತ ಅವರಲ್ಲಿ ಹಿಂದೆ ಹೇಳಿದ ನಿಯಮವು) ಇಲ್ಲ. (ದೇವತೆಗಳಲ್ಲಿ ಆಗಲೀ, ದೇವತೆಗಳ ಅವತಾರಭೂತರಾದ ಕ್ಷತ್ರಿಯರಲ್ಲಿ ಆಗಲೀ ಬಲಾಧಿಕ್ಯವು ಜ್ಞಾನಾಧಿಕ್ಯದಲ್ಲಿ ನಿಮಿತ್ತವೆಂದು ಹೇಳಲ್ಪಟ್ಟಿದೆ. ಅದಕ್ಕೆ ಕೆಲವುಕಡೆ ಅಪವಾದವನ್ನು ಹೇಳುತ್ತಾರೆ.) (ಯತ್ರ-) ಯಾವಾಗ ಶ್ರೀ ಹರಿಯು ದುಷ್ಟರನ್ನು ಸಂಹರಿಸುವ ವಿಷಯದಲ್ಲಿಯೂ, (ತಥೈವ-) ಶತ್ರುಗಳನ್ನು ಸಂಹರಿಸುವಕಾಲದಲ್ಲಿಯೇ, ದುಷ್ಟರ ಸಂಹಾರಕ್ಕೆ ಉಪಯುಕ್ತವಾದ ಅಸ್ತ್ರ ಶಸ್ತ್ರಾದಿವಿಷಯಕವಾದ ಜ್ಞಾನಕಾರ್ಯದಲ್ಲಿಯೂ ಪ್ರವೃತ್ತನಾಗುತ್ತಾನೋ, (ಆಗ) ದೇವಸ್ವರೂಪರಾದ ಕ್ಷತ್ರಿಯರದೆಶೆಯಿಂದ, ಇತರರಾದ ದೇವರೂಪರಾದ ದ್ರೋಣಾದಿ ಬ್ರಾಹ್ಮಣರಲ್ಲಿಯೂ ಬಲಾಧಿಕ್ಯವು, (ಜ್ಞಾನಾದಿಗುಣಾಧಿಕ್ಯದಲ್ಲಿ) ಪ್ರಮಾಣವು.

ವಿಶೇಷಾಂಶ— (1) 'ದೇವೇಷ್ವೇವ' ಎನ್ನುವುದು ಉಪಲಕ್ಷಣವು. (೧) ಭಾರತದಲ್ಲಿ ದೇವತೆಗಳ ಅವತಾರಭೂತನಾದ ಭೀಮರೂಪನಾದ ಕ್ಷತ್ರಿಯನಲ್ಲಿ ಬಲಾಧಿಕ್ಯವು ಕಂಡದೆ. (೨) ರಾಮಾಯಣದಲ್ಲಿ ದೇವತೆಗಳ ಅವತಾರಭೂತನಾದ ಕಪಿರೂಪನಾದ ಹನುಮಂತನಲ್ಲಿಯೂ ಬಲಾಧಿಕ್ಯವು ಕಂಡದೆ. ಅಂತೂ ದೇವತೆಗಳ ಅವತಾರಭೂತರಾದ ಕ್ಷತ್ರಿಯಾದಿಗಳಲ್ಲಿಯೇ ಎಂದು ಇಟ್ಟುಕೊಳ್ಳತಕ್ಕುದು. (2) ದುರ್ಯೋಧನಾದಿಗಳಲ್ಲಿಯೂ ಬಲಾಧಿಕ್ಯವಿದ್ದುದರಿಂದ

ಜ್ಞಾನಾಧಿಕ್ಯವನ್ನು ಅನುಮೇಯಿಸಿದರೆ ದೋಷವೇನೆಂದು ಹೇಳಕೂಡದು. ದುರ್ಯೋಧನಾದಿಗಳು ಶ್ರೀ ವಿಷ್ಣುವಿಗೆ ವಿರೋಧಿಗಳೆಂದು ಸರ್ವರಿಗೂ ಅನುಭವವಿದ್ದುದರಿಂದ ಬಾಹ್ಯಬಲವನ್ನು ನೋಡಿ ಅಂತರ ಜ್ಞಾನಾದಿಗಳನ್ನು ಅನುಮೇಯಿಸಿದರೆ ಅನುಮಾನದ ವಿಷಯವು ಬಾಧಿತವಾಗುವುದು ಎಂದು ಸೂಚಿಸುವುದಕ್ಕಾಗಿ ವಾಸುದೇವಪ್ರತೀಪತಃ ಎಂದು ಹೇಳಿರುವರು. (3) ಯಾವಾಗ ಭೂಭಾರಹರಣದಲ್ಲಿ ಶಕ್ತಿಯು ಅದಕ್ಕೆ ಉಪಯುಕ್ತವಾದ ಜ್ಞಾನದಾನ ಯೋಗ್ಯತೆಯು ಹೀಗೆ ಎರಡು ಕಾರ್ಯಗಳು ಒಬ್ಬನಲ್ಲಿಯೇ ಆಗಬೇಕೆಂದು ಶ್ರೀ ಹರಿಯು ಮನಸ್ಸನ್ನು ಮಾಡಿರುವನೋ ಆಗ ಅರ್ಜುನಾದಿಗಳಲ್ಲಿ ವಿದ್ಯೋಪದೇಶಾಖ್ಯವಾದ ಜ್ಞಾನ ಕಾರ್ಯಕ್ಕಾಗಿ ಬೃಹಸ್ಪತಿರೂಪ ದೇವತೆಯನ್ನೇ ದ್ರೋಣಾಚಾರ್ಯರ ರೂಪದಿಂದ ಬ್ರಾಹ್ಮಣ ಕುಲದಲ್ಲಿ ಹುಟ್ಟಿಸಿ ಭಾರತಯುದ್ಧದಲ್ಲಿ ಬಹಳ ಸೈನ್ಯವನ್ನು ಸಂಹರಿಸುವುದಕ್ಕಾಗಿ ಮೂಲರೂಪದ ಬಲವನ್ನೂ ಕೂಡ ಅತನಲ್ಲಿ ವ್ಯಕ್ತೀಕರಿಸಿರುವನು ॥೨೧॥೨೨॥೨೩॥

ಹಾಗಾದರೆ ಬ್ರಾಹ್ಮಣರಲ್ಲಿ ಜ್ಞಾನಾಧಿಕ್ಯವುಳ್ಳವನು, ಕ್ಷತ್ರಿಯರಲ್ಲಿ ಬಲಾಧಿಕ್ಯವುಳ್ಳವನ್ನು ಗುಣಾಧಿಕನು ಎನ್ನುವ ವ್ಯವಸ್ಥೆಗೆ ಏನು ಗತಿಯು ಎಂದರೆ—

ಮೂ ॥ ಅನ್ಯತ್ರ ಬ್ರಾಹ್ಮಣಾನಾಂ ತು ಪ್ರಮಾಣಂ ಜ್ಞಾನವೇವ ಹಿ ॥
ಕ್ಷತ್ರಿಯಾಣಾಂ ಬಲಂ ಚೈವ ಸರ್ವೇಷಾಂ ವಿಷ್ಣುಕಾರ್ಯತಾ ॥ ೨೪ ॥

ಅ ॥ (ಜ್ಞಾನಬಲಗಳಿಗೆ ವಿಕೀಕರಣವು ಆವಶ್ಯಕವಾದುದರಿಂದ ಅದರಿಂದ) ಬೇರೆ ಕಡೆಗಳಲ್ಲಿ (ಅಂದರೆ ದುಷ್ಟನಿಗ್ರಹಾದಿ ವ್ಯತಿರಿಕ್ತ ಸ್ಥಳಗಳಲ್ಲಿ) ಬ್ರಾಹ್ಮಣರಿಗಾದರೂ ಜ್ಞಾನವೇ ಶ್ರೇಷ್ಠ, ಜ್ಞಾಪಕವು ಪ್ರಸಿದ್ಧವು. ಎಲ್ಲಾ ಕ್ಷತ್ರಿಯರಿಗೂ ಬಲವೂ * ವಿಷ್ಣುಕಾರ್ಯೋಪಯೋಗಿತ್ವವೂ ಕೂಡ (ಜ್ಞಾನಾದಿಗುಣಾಧಿಕ್ಯದಲ್ಲಿ) ಜ್ಞಾಪಕವು.

ವಿಶೇಷಾಂಶ — ಹೇಗೆ ಹೇಗೆ ಕ್ಷತ್ರಿಯರಲ್ಲಿ ಬಲವು ವಿಷ್ಣುಕಾರ್ಯೋಪಯೋಗಿತ್ವವೂ ಕೂಡ ಅಧಿಕಾಧಿಕವಾಗುತ್ತದೋ ಹಾಗೆಯೇ, ಅವರೆಲ್ಲರೂ ಕ್ಷತ್ರಿಯಜಾತಿಯಲ್ಲಿ ಅಧಿಕಾಧಿಕ ಜ್ಞಾನಾದಿಗುಣಗಳುಳ್ಳವರು ಎಂದು ತಿಳಿಯತಕ್ಕುದು ॥೨೪॥

ಈಗ ಅವತಾರಗಳಲ್ಲಿಯೂ ಕೆಲವುಕಡೆ ನಿರವಧಿಕ ಬಲವೇ ಶ್ರೀಹರಿಯ ಅವತಾರವೆನ್ನುವಲ್ಲಿ ಪ್ರಮಾಣವು. ಕೆಲವುಕಡೆ ನಿರುವಧಿಕ ಜ್ಞಾನವೇ ಶ್ರೀ ಹರಿಯ ಅವತಾರವೆನ್ನುವಲ್ಲಿ ಪ್ರಮಾಣವು ಎನ್ನುತ್ತಾರೆ—

ಮೂ ॥ ಕೃಷ್ಣರಾಮಾದಿರೂಪೇಷು ಬಲಕಾರ್ಯೋ ಜನಾರ್ದನಃ ॥
ದತ್ತವ್ಯಾಸಾದಿ ರೂಪೇಷು ಜ್ಞಾನಕಾರ್ಯಸ್ತಥಾ ಪ್ರಭುಃ ॥೨೫॥

ಅ ॥ ಶ್ರೀ ಜನಾರ್ದನನು ಶ್ರೀ ಕೃಷ್ಣ ಶ್ರೀ ರಾಮ ಮೊದಲಾದ ರೂಪಗಳಲ್ಲಿ, ಬಲ ಕಾರ್ಯವುಳ್ಳವನು (ಅಂದರೆ ಸಾಮರ್ಥ್ಯದ್ದೇ ಕಾರ್ಯವು ಯಾರಿಗೋ ಅವನು, ಅಂದರೆ— ಬಲದ್ದೇ ಕಾರ್ಯರೂಪವಾದ ದೈತ್ಯಹನನ ಭೂಭಾರಹರಣಾದಿ ರೂಪವಾದ ತನ್ನ ಅವತಾರ ಪ್ರಯೋಜನವುಳ್ಳವನು.) ಹಾಗೆಯೇ ಸರ್ವಸಮರ್ಥನಾದ ಶ್ರೀ ಹರಿಯು ದತ್ತ ವ್ಯಾಸ

* ವಿಷ್ಣೋಃ ಕಾರ್ಯಂ ಯೇಭ್ಯಸ್ತೆ ವಿಷ್ಣುಕಾರ್ಯಾಃ। ತೇಷಾಂ ಭಾವಃ ವಿಷ್ಣುಕಾರ್ಯತಾ ಯಾರಿಂದ ವಿಷ್ಣುವಿನ ಕಾರ್ಯವು ಆಗುತ್ತದೋ ಅವರ ಧರ್ಮವು.

ಹಯಗ್ರೀವ ಮೊದಲಾದ ರೂಪಗಳಲ್ಲಿ ಜ್ಞಾನದ್ದೇ ಕಾರ್ಯವುಳ್ಳವನು. (ಅಂದರೆ ವೇದೋಪದೇಶ ವೇದವಿಭಾಗ, ಅದಕ್ಕೆ ಉಪಯುಕ್ತವಾದ ಶಾಸ್ತ್ರ ಕರಣಾದಿ ಜ್ಞಾನಕಾರ್ಯಗಳುಳ್ಳವನು.)

ವಿಶೇಷಾಂಶ — ಕೃಷ್ಣಾದಿರೂಪಗಳಲ್ಲಿಯೂ, ದತ್ತಾದಿರೂಪಗಳಲ್ಲಿಯೂ ಎರಡು ಕಡೆಗಳಲ್ಲಿಯೂ ಬ್ರಹ್ಮಾದಿಗಳಲ್ಲಿ ಅಸಂಭಾವಿತವಾದ ಮಹಾಕಾರ್ಯವನ್ನು (ಅಂದರೆ ಬಲಕಾರ್ಯವನ್ನು ಜ್ಞಾನಕಾರ್ಯವನ್ನು) ಮಾಡಿರುವುದರಿಂದ ಅವತಾರದಲ್ಲಿ ಶ್ರೀಹರಿಯ ಅವತಾರತ್ವವನ್ನೇ ತಿಳಿಯಬೇಕು. ॥೨೫॥

ಈಗ ಪೃಥು, ನಾರದ, ಬಲರಾಮ ಮೊದಲಾದವರೂ ಪುರಾಣಗಳಲ್ಲಿ ಶ್ರೀಹರಿಯ ಅವತಾರಭೂತರೆಂದು ಹೇಳಿರುವುದರಿಂದ ಪೃಥ್ವಾದಿಗಳೂ ಮತ್ಸ್ಯ-ಕೂರ್ಮಾದಿಗಳಂತೆಯೇ ಸ್ವರೂಪಾವತಾರಭೂತರು ಎನ್ನುವ ಭ್ರಮೆಯನ್ನು ಹೋಗಲಾಡಿಸುವುದಕ್ಕಾಗಿ ಅವತಾರಗಳಲ್ಲಿ ಎರಡುಪ್ರಕಾರವಿದೆ ಎನ್ನುತ್ತಾರೆ—

ಮೂ ॥ **ಮತ್ಸ್ಯಕೂರ್ಮವರಾಹಾಶ್ಚ ಸಿಂಹ ವಾಮನ ಭಾರ್ಗವಾಃ ॥**
ರಾಘವಃ ಕೃಷ್ಣಬುದ್ಧೌ ಚ ಕೃಷ್ಣದ್ವೈಪಾಯನಸ್ತಥಾ ॥ ೨೬ ॥
ಕಪಿಲೋ ದತ್ತ ಋ(ವೃ)ಷಭೌ ಶಿಂಶುಮಾರೋ ರುಚೇಃ ಸುತಃ ॥
ನಾರಾಯಣೋ ಹರಿಃ ಕೃಷ್ಣಸ್ತಾಪಸೋ ಮನುರೇವ ಚ ॥ ೨೭ ॥
ಮಹಿದಾಸಸ್ತಥಾ ಹಂಸಃ ಸ್ತ್ರೀರೂಪೋ ಹಯಶೀರ್ಷನಾನ್ ॥
ತಥೈವ ವಡವಾವಕ್ತ್ರಃ ಕಲ್ಕೀ ಧನ್ವಂತರಿಃ ಪ್ರಭುಃ ॥ ೨೮ ॥
ಇತ್ಯಾದ್ಯಾಃ ಕೇವಲೋ ವಿಷ್ಣುರ್ನೈಷಾಂ ಭೇದಃ ಕಥಂಚನ ॥
ನ ವಿಶೇಷೋ ಗುಣೈಃ ಸರ್ವೈರ್ಬಲಜ್ಞಾನಾದಿಭಿಃ ಕ್ವಚಿತ್ ॥ ೨೯ ॥

ಅ ॥ ಮತ್ಸ್ಯ, ಕೂರ್ಮ, ವರಾಹ, ನರಸಿಂಹ, ವಾಮನ, ಭೃಗು ಕುಲೋತ್ಪನ್ನನಾದ ಪರಶುರಾಮ, ರಘುಕುಲೋತ್ಪನ್ನನಾದ ಶ್ರೀ ರಾಮ, ಶ್ರೀ ಕೃಷ್ಣ, ಬುದ್ಧ, ಹಾಗೆಯೇ ಶ್ರೀವೇದವ್ಯಾಸರು, ಇವರೂ, ಕಪಿಲ, ದತ್ತ, ಋಷಭ ಶಿಂಶುಮಾರ, ರುಚಿಯ ಮಗನಾದ ಯಜ್ಞನು, ಶ್ರೀ ನಾರಾಯಣನು, ಶ್ರೀ ಹರಿಯು, ಶ್ರೀ ಕೃಷ್ಣನು, ತಾಪಸನು, ಮನುವು, ಮಹಿದಾಸನು, ಹಾಗೆಯೇ ಹಂಸನು. ಸ್ತ್ರೀಯಾದ ನಾರಾಯಣೀ ರೂಪವುಳ್ಳವನು, ಶ್ರೀ ಹಯಗ್ರೀವ ರೂಪಿಯು ಹಾಗೆಯೇ ವಡವಾವಕ್ತ್ರನು (ಅಂದರೆ ಅಶ್ವದ ಮುಖದಂತೆ ಮುಖವುಳ್ಳವನು.) ಕಲ್ಕಿಯು, ಪ್ರಭುವಾದ ಧನ್ವಂತರಿಯು. ಇದೇ ಮೊದಲಾದ ರೂಪಗಳು ಭೇದರಹಿತನಾದ ಶ್ರೀ ವಿಷ್ಣುವೇ. ಅಂದರೆ ಮತ್ಸ್ಯಾದಿ ರೂಪಗಳಿಗೂ ಶ್ರೀ ನಾರಾಯಣನಿಗೂ ಅಭೇದವೇ. (ಅಭೇದವಿದ್ದಾಗ್ಯೂ ಇಂದ್ರಾರ್ಜುನಾದಿಗಳಂತೆ ವಿಶೇಷವೆನ್ನುತ್ತಾರೆ.) ಈ ಮತ್ಸ್ಯಾದಿಗಳಿಗೆ ಯಾವ ಪ್ರಕಾರದಿಂದಲೂ ಭೇದವಿಲ್ಲ (ಅಂದರೆ ಸವಿಶೇಷ ಭೇದವಾಗಲೀ ಭೇದಾಭೇದವಾಗಲೀ ಇಲ್ಲವೇ ಇಲ್ಲ.) (ತನಗೆ ಅಭೇದವಿದ್ದರೂ ಗುಣಗಳಿಂದ ಭೇದವು ಬರಬಹುದು ಎಂದರೆ—) ಯಾವ ಅವತಾರದಲ್ಲಿಯೂ ಬಲ ಜ್ಞಾನ ಮೊದಲಾದ ಎಲ್ಲಾ ಗುಣಗಳಿಂದ ವಿಶೇಷ (ಭೇದ)ವಿಲ್ಲ. ॥೨೬॥೨೭॥೨೮॥೨೯॥

ಲಕ್ಷ್ಮೀ ಬ್ರಹ್ಮಾದಿಗಳೂ ಶ್ರೀ ಹರಿಯ ಅವತಾರಭೂತರೆಂದು ಹೇಳಿರುವುದರಿಂದ ಅವರನ್ನು ಏಕ ಹೇಳಲಿಲ್ಲವೆಂದರೆ—

ಮೂ ॥ ಶ್ರೀರ್ಬ್ರಹ್ಮರುದ್ರ(ದ್ರೌ)ಶೇಷಾ(ಷ)ಶ್ಚ ವೀಂದ್ರೇಂದ್ರೌ ಕಾಮು ಏವಚ ॥
ಕಾಮುಪುತ್ರೋಽನಿರುದ್ಧಶ್ಚ ಸೂರ್ಯಚಂದ್ರೌ (ಶ್ಚಂದ್ರೋ) ಬೃಹಸ್ಪತಿಃ ॥
॥ ೩೦ ॥

ಧರ್ಮ ಏಷಾಂ ತಥಾ ಭಾರ್ಯಾ ದಕ್ಷಾದ್ಯಾ ಮನವಸ್ತಥಾ ॥
ಮನುಪುತ್ರಾಶ್ಚ ಋಷಯೋ ನಾರದಃ ಪರ್ವತಸ್ತಥಾ ॥ ೩೧ ॥

ಕಶ್ಯಪಃ ಸನಕಾದ್ಯಾಶ್ಚ ವಹ್ನ್ಯಾದ್ಯಾಶ್ಚೈವ ದೇವತಾಃ ॥
ಭರತಃ ಕಾರ್ತವೀರ್ಯಶ್ಚ ವೈನ್ಯಾದ್ಯಾಶ್ಚಕ್ರವರ್ತಿನಃ ॥ ೩೨ ॥

ಗಯಶ್ಚ ಲಕ್ಷ್ಮಣಾದ್ಯಾಶ್ಚತ್ರಯೋ ರೋಹಿಣೀನಂದನಃ ॥
ಪ್ರದ್ಯುಮ್ನೋ ರೌಕ್ಮಿಣೇಯಶ್ಚಾ ತತ್ಪುತ್ರಶ್ಚಾನಿರುದ್ಧಕಃ ॥ ೩೩ ॥

ನರಃ ಫಲ್ಗುನ ಇತ್ಯಾದ್ಯಾ ವಿಶೇಷಾವೇಶಿನೋ ಹರೇಃ ॥
ವಾಲಿಸಾಂಬಾದಯಶ್ಚೈವ ಕಿಂಚಿದಾವೇಶಿನೋ ಹರೇಃ ॥ ೩೪ ॥

ಅ ॥ ಲಕ್ಷ್ಮಿಯು, ಬ್ರಹ್ಮನು, ರುದ್ರನು, ಶೇಷನೂ ಇವರೂ, ಗರುಡನು, ದೇವೇಂದ್ರನು, ಕಾಮನು, ಕಾಮಪುರುಷನಾದ ಅನಿರುದ್ಧನು, (ಅಂದರೆ ಮೂಲರೂಪಿಯಾದ ಕಾಮನಿಂದಲೇ ಹುಟ್ಟಿರುವ ಮೂಲರೂಪಿಯಾದ ಅನಿರುದ್ಧನೂ ಕೂಡಾ,) ಸೂರ್ಯ–ಚಂದ್ರರು, ಬೃಹಸ್ಪತಿಯು, ಯಮಧರ್ಮರಾಜನು, ಹಾಗೆಯೇ ಈ ಬ್ರಹ್ಮಾದಿಗಳ ಹೆಂಡತಿಯರಾದ ಸರಸ್ವತ್ಯಾದಿಗಳು ದಕ್ಷಪ್ರಜಾಪತಿಯೇ ಮೊದಲಾದವರು (ಕರ್ದಮಾದಿಗಳು) ಸ್ವಾಯಂಭುವಾದಿ ಮನುಗಳು, ಪ್ರಿಯವ್ರತ ಮೊದಲಾದ ಮನು ಪುತ್ರರು, ಮರೀಚ್ಯಾದಿ ಋಷಿಗಳು, ನಾರದ ಋಷಿಯು ಹಾಗೆಯೇ ಹಿಮವತ್ಪರ್ವತಾಭಿಮಾನಿಯಾದ ಪರ್ವತಾಖ್ಯದೇವತೆಯು, ಅಥವಾ ನಾರದಋಷಿಗೆ ಸಖಿಯಾದ ಪರ್ವತನಾಮಕ ಋಷಿಯು, ಕಶ್ಯಪಋಷಿಯು, ಸನಕಋಷಿಯೇ ಮೊದಲಾದ ನಾಲ್ವರು (ಅಂದರೆ ಸನಕ, ಸನಂದನ, ಸನತ್ಸುಜಾತ, ಸನತ್ಕುಮಾರ ಎನ್ನುವ ನಾಲ್ವರು) ವಹ್ನಿ ಮೊದಲಾದ ಇತರ ದೇವತೆಗಳು, ದುಷ್ಯಂತ ಪುತ್ರನಾದ ಭರತನು, ಕಾರ್ತವೀರ್ಯಾರ್ಜುನನು, ವೇನನ ಮಗನಾದ ಪೃಥುರಾಜನೇ ಮೊದಲಾದವರು (ಶಶಬಿಂದ್ವಾದಿಗಳು, ಪ್ರಿಯವ್ರತ ವಂಶದಲ್ಲಿ ಹುಟ್ಟಿರುವ ಗಯ ರಾಜನು, ಲಕ್ಷ್ಮಣನೇ ಮೊದಲಾದ ಮೂವರು (ಅಂದರೆ ಲಕ್ಷ್ಮಣ ಭರತ ಶತ್ರುಘ್ನರು), ರೋಹಿಣಿಯ ಪುತ್ರನಾದ ಬಲರಾಮನು, ರುಕ್ಮಿಣಿಯು ಪುತ್ರನಾದ ಪ್ರದ್ಯುಮ್ನನು, ಕೃಷ್ಣನ ಕುಮಾರನಾದ ಪ್ರದ್ಯುಮ್ನನ ಪುತ್ರನಾದ ಅನಿರುದ್ಧನು, ನರಋಷಿಯು, ಅರ್ಜುನನು, ಇವರೇ ಮೊದಲಾದ ಉದ್ಧವಾದಿಗಳು ಶ್ರೀ ಹರಿಯ ವಿಶೇಷ ಆವೇಶವುಳ್ಳವರು. ವಾಲಿ, ಸಾಂಬ ಮೊದಲಾದವರು (ಕರ್ಣಾದಿಗಳು ಕೂಡ) ಶ್ರೀ ಹರಿಯ ಅಲ್ಪವಾಗಿ ಆವೇಶವುಳ್ಳವರು ॥೩೦॥ ॥೩೧॥೩೨॥೩೩॥೩೪॥

ಈಗ ಪ್ರಕೃತವಾದುದನ್ನು ಉಪಸಂಹಾರ ಮಾಡುತ್ತಾ ಪ್ರಮೇಯಾಂತರವನ್ನು ತೋರಿಸುತ್ತಾನೆ.

ಮೂ ॥ ತಸ್ಮಾದ್ಬಲಪ್ರವೃತ್ತಸ್ಯ ರಾವುಕೃಷ್ಣಾತ್ಮನೊ ಹರೇ ॥
ಅಂತರಂಗಂ ಹನೂಮಾಂಶ್ಚ ಭೀಮಸ್ತತ್ಕಾರ್ಯಸಾಧಕೌ ॥೩೫॥

ಅ ॥ ಆದುದರಿಂದ ಬಲಕಾರ್ಯದಲ್ಲಿ ಪ್ರವೃತ್ತನಾದ ರಾಮಕೃಷ್ಣಸ್ವರೂಪಿಯಾದ ಶ್ರೀ ಹರಿಗೆ ಹನುಮಂತನೂ ಭೀಮನೂ ಕೂಡ (ಹೇಗೆ) ಅಂತರಂಗ ಸಾಧನರು. (ಆಗುತ್ತಾರೋ ಹಾಗೆಯೇ) ಆ ಶ್ರೀ ಹರಿಯ ಕಾರ್ಯವನ್ನು ಸಾಧಿಸಿಕೊಡುವವರು.

ವಿಶೇಷಾಂಶ— ಇಲ್ಲಿ ಭೀಮನು ಪ್ರಸ್ತುತನು. ಹನುಮಂತನು ಪ್ರಾಸಂಗಿಕನು ಎಂದು ತಿಳಿಯತಕ್ಕದ್ದು. ॥೩೫॥

ಮೊದಲು 'ಬ್ರಹ್ಮಾದಿಕಶ್ಚ ದೇವೇಭ್ಯಃ' ಎಂದು ಬ್ರಹ್ಮನು ಪ್ರಕ್ರಾಂತನಾಗಿರುತ್ತಾನೆ. ಈಗ ಹನುಮದ್ಭೀಮರಿಂದ ಉಪಸಂಹಾರವನ್ನು ಮಾಡುತ್ತಾರೆ—ಆದಕಾರಣ ಅಸಂಗತಿಯೆಂದು ಶಂಕಿಸಿಕೊಂಡು ಹೇಳುತ್ತಾರೆ—

ಮೂ ॥ ಬ್ರಹ್ಮಾತ್ಮಕೋ ಯತೋ ವಾಯುಃ ಪದಂ ಬ್ರಾಹ್ಮಮುಗಾತ್ಪುರಾ ॥
ವಾಯೋರನ್ಯಸ್ಯ ನ ಬ್ರಾಹ್ಮಂ ಪದಂ ತಸ್ಮಾತ್ಸ ಏವ ಸಃ ॥೩೬॥

ಅ ॥ ಯಾವಕಾರಣದಿಶೆಯಿಂದ ಪೂರ್ವಕಲ್ಪದಲ್ಲಿ ಮುಖ್ಯಪ್ರಾಣನು (ಈ ಕಲ್ಪದಲ್ಲಿ) ಬ್ರಹ್ಮರೂಪಿಯಾದವನಾಗಿ ಬ್ರಹ್ಮಸಂಬಂಧಿಯಾದ ಪದವಿಯನ್ನು ಹೊಂದಿರುವನೋ, ಮುಖ್ಯ ಪ್ರಾಣನಿಂದ ಇತರರಿಗೆ ಬ್ರಹ್ಮಸಂಬಂಧಿಯಾದ ಪದವಿಯು ಇಲ್ಲವೊ, ಆದಕಾರಣ ಮುಖ್ಯಪ್ರಾಣನೇ ಬ್ರಹ್ಮನು. (ಆದುದರಿಂದ ವಾಯುರೂಪರಾದ ಹನುಮದ್ಭೀಮರಿಗೆ ಅಧಿಕ್ಯವನ್ನು ಹೇಳಿ ಉಪಸಂಹಾರವನ್ನು ಮಾಡಿದರೆ ಬ್ರಹ್ಮನಿಗೆ ಅಧಿಕ್ಯವನ್ನು ಹೇಳಿ ಉಪಸಂಹಾರವು ಮಾಡಿದಂತೆಯೇ ಆಯಿತು. ಅಸಂಗತಿಯಿಲ್ಲ) ॥೩೬॥

ಮೊದಲು ಭೀಮನು ಶ್ರೀ ಹರಿಯ ಕಾರ್ಯಗಳಲ್ಲಿ ಸಾಕ್ಷಾತ್ ಅಂಗಭೂತನು ಎಂದು ಹೇಳಿರುವರು. ಈಗ ಭೀಮನ ಹೆಂಡತಿಯಾದ ದ್ರೌಪದಿಯೂ ಕೂಡ ಭೂಭಾರಭೂತರಾದ ದೈತ್ಯಾದಿಗಳನ್ನು ಸಂಹರಿಸುವ ವಿಷಯದಲ್ಲಿ ಸಾಕ್ಷಾತ್ ಅಂಗಭೂತಳು. ಎಂದು ಹೇಳುವುದಕ್ಕಾಗಿ ಸ್ತ್ರೀಯರಿಗೆ ಜ್ಯೇಷ್ಠತ್ವವಿಷಯದಲ್ಲಿ ಕಾರಣವನ್ನು ಹೇಳುತ್ತಾರೆ—

ಮೂ ॥ ಯತ್ರ ರೂಪಂ ತತ್ರ ಗುಣಾ ಭಕ್ತ್ಯಾದ್ಯಾ ಸ್ತ್ರೀಷು ನಿತ್ಯಶಃ ॥
ರೂಪಂ ಹಿ ಸ್ಥೂಲದೃಷ್ಟೀನಾಂ ದೃಶ್ಯಂ ವ್ಯಕ್ತಂ ತತೋ ಹಿ ತತ್॥೩೭॥

ಅ ॥ ಯಾವ ಸ್ತ್ರೀಯಲ್ಲಿ (ಪ್ರಸಕ್ತವಾದ) ರೂಪವಿದೆಯೋ ಅಲ್ಲಿ ನಿತ್ಯದಲ್ಲಿಯೂ ಭಕ್ತಿ ಮೊದಲಾದ ಗುಣಗಳು ಇವೆ. ಸ್ಥೂಲದೃಷ್ಟಿಗಳಿಂದ ರೂಪವು ಸ್ಪುಟವು ಹೇಗೆ ಆದೀತೋ ಹಾಗೆ ಕಾಣಲ್ಪಡುವುದು. (ಅಂದರೆ ತಿಳಿಯಲ್ಪಡುವುದು.) ಆದಕಾರಣದಿಂದ ಆ ರೂಪವೇ (ಗುಣಗಳಲ್ಲಿ ವ್ಯಾಪ್ಯವಾದ ಲಿಂಗವು) ॥ ೩೭ ॥

ಅದನ್ನೇ ಉಪಪಾದಿಸುತ್ತಾರೆ—

ಮೂ ॥ ಪ್ರಾಯೋವೇತ್ತುಂ ನ ಶಕ್ಯಂತೇ ಭಕ್ತ್ಯಾದ್ಯಾಸ್ತ್ರೀಷು ಯತ್ನ(ತ್ತ) ತಃ॥
ಯೋಸಾಂ ರೂಪಂ ಗುಣಾಸ್ತಾಸಾಂ ಭಕ್ತ್ಯಾದ್ಯಾ ಇತಿ ನಿಶ್ಚಯಃ॥೩೮॥

ಅ ॥ ಸ್ತ್ರೀಯರಲ್ಲಿ ಭಕ್ತಿ ಮೊದಲಾದ ಗುಣಗಳು ಪ್ರಯತ್ನದಿಂದ ಸ್ವಾಧ್ಯಾಯಪ್ರವಚನಾದಿಗಳಲ್ಲಿ ಪ್ರವೃತ್ತರಾಗದಿರುವುದರಿಂದ ಪ್ರಾಯಶಃ ತಿಳಿಯಲಿಕ್ಕೆ ಸಮರ್ಥಗಳಾಗುವುದಿಲ್ಲ. ಅಥವಾ

ಯಾವ ಕಾರಣದಿಂದ ತಿಳಿಯಲಿಕ್ಕೆ ಸಮರ್ಥಗಳಾಗುದಿಲ್ಲವೋ ಆಕಾರಣದಿಂದ ಯಾವ ಸ್ತ್ರೀಯರಿಗೆ ಪ್ರಸಕ್ತರೂಪವಿದೆಯೋ ಅವರಿಗೆ ಭಕ್ತಿಮೊದಲಾದ ಗುಣಗಳು ಇವೆ ಎಂದು ನಿಶ್ಚಯವು॥೩೮॥

ಮೂ ॥ ತಚ್ಚ ನೈಸರ್ಗಿಕಂ ರೂಪಂ ದ್ವಾತ್ರಿಂಶಲ್ಲಕ್ಷಣೈರ್ಯುತಂ ॥
ನಾಲಕ್ಷಣಂ ವಪುರ್ಮಾತ್ರಂ ಗುಣಹೇತುಃ ಕಥಂಚನ ॥೩೯॥

ಅ ॥ ಮೂವತ್ತ ಎರಡು (೩೨) ಲಕ್ಷಣಗಳಿಂದ ಕೂಡಿರುವ ಸ್ವಾಭಾವಿಕವಾದ ಆ ರೂಪವೇ ಭಕ್ತ್ಯಾದಿಗುಣಗಳಿಗೆ ಕಾರಣವಾದುದು. ಮೂವತ್ತಎರಡು ಲಕ್ಷಣಗಳಿಲ್ಲದಿರುವ ಕೇವಲ ಶರೀರವು ಯಾವ ಪ್ರಕಾರದಿಂದಲೂ ಭಕ್ತ್ಯಾದಿಗುಣಗಳನ್ನು ತಿಳಿಸಿಕೊಡಲಿಕ್ಕೆ ಕಾರಣವು ಆಗಲಾರದು ॥೩೯॥

ಮೂ ॥ ಆಸುರೀಣಾಂ ವರಾದೇಸ್ತು ವಪುರ್ಮಾತ್ರಂ ಭವಿಷ್ಯತಿ ॥
ನ ಲಕ್ಷಣಾನ್ಯತಸ್ತಾಸಾಂ ನೈವ ಭಕ್ತಿಃ ಕಥಂಚನ ॥೪೦॥

ಅ ॥ ಆಸುರ ಸ್ತ್ರೀಯರಿಗೆ ವರಾದಿಗಳ ಸಕಾಶದ್ದೆಶೆಯಿಂದ (ಅಂದರೆ ರುದ್ರಾದಿಗಳ ವರದಿಂದಲೂ, ಮಾಯೆಯಿಂದಲೂ) ಪ್ರಶಕ್ತವಾದ ಶರೀರಮಾತ್ರವು ಆಗುವುದು. ವರಾದಿಗಳಿಂದ ಲಕ್ಷಣಗಳು ಆಗಲಾರವು. ಲಕ್ಷಣವಿಲ್ಲದಿರುವುದರಿಂದ ಆ ಆಸುರ ಸ್ತ್ರೀಯರಿಗೆ ಯಾವ ಪ್ರಕಾರದಿಂದಲೂ ಭಕ್ತಿಯು ಸರ್ವಥಾ ಬರಲಾರದು ॥೪೦॥

ಮೂ ॥ ತಸ್ಮಾದ್ರೂಪಗುಣೋದಾರಾ ಜಾನಕೀ ರುಕ್ಮಿಣೀ ತಥಾ ॥
ಸತ್ಯಭಾಮೇತ್ಯಾದಿರೂಪಾ ಶ್ರೀಃ ಸರ್ವಪರಮಾ ಮತಾ ॥೪೧॥

ಅ ॥ ಮೂವತ್ತಎರಡು ಲಕ್ಷಣಗಳಿಂದ ಕೂಡಿದ ಸ್ವಾಭಾವಿಕ ರೂಪವಿದ್ದುರಿಂದ, ಸೀತಾದೇವಿಯು, ರುಕ್ಮಿಣಿಯು, ಹಾಗೆಯೇ ಸತ್ಯಭಾಮೆಯು, ಇತ್ಯಾದಿರೂಪಳಾದ ಲಕ್ಷ್ಮೀದೇವಿಯು (ಯಾವ ಕಾರಣದೆಶೆಯಿಂದ) ರೂಪಸೌಂದರ್ಯಾದಿ ಗುಣಗಳೂ ಇವುಗಳಿಂದ ಉತ್ಕೃಷ್ಟಳಾಗಿರುತ್ತಾಳೋ (ಆದಕಾರಣ) ಸರ್ವರಿಂದಲೂ ಉತ್ತಮಳೆಂದು ಸಮ್ಮತಳು ॥೪೧॥

ಮೂ ॥ ತತಃ ಪಶ್ಚಾದ್ದ್ರೌಪದೀ ಚ ಸರ್ವಾಭ್ಯೋರೂಪತೋ ವರಾ ॥
ಭೂಭಾರಕ್ಷಪಣೇ ಸಾಕ್ಷಾದಂಗಂ ಭೀಮವದೀಶಿತು ॥೪೨॥

ಅ ॥ ಆಮೇಲೆ ದ್ರೌಪದೀದೇವಿಯು ಸರ್ವರದೆಶೆಯಿಂದಲೂ ಪ್ರಶಸ್ತರೂಪವಿದ್ದದರಿಂದ ಶ್ರೇಷ್ಠಳು.ಆದ್ರೌಪದಿಯು ಸರ್ವಸ್ವಾಮಿಯಾದಶ್ರೀಹರಿಗೆ ಭೂಮಿಗೆ ಭಾರಭೂತರಾದ ದೈತ್ಯರನ್ನು ಸಂಹರಿಸುವ ವಿಷಯದಲ್ಲಿ ಭೀಮಸೇನನಂತೆ ಮುಖ್ಯವಾಗಿ ಅಂಗಭೂತಳು ಆಗುತ್ತಾಳೆ ॥೪೨॥

ಮೂ ॥ ಹಂತಾ ಚ ವೈರಹೇತುಶ್ಚ ಭೀಮಃ ಪಾಪಜನಸ್ಯ ತು ॥
ದ್ರೌಪದೀ ವೈರಹೇತುಃ ಸಾ ತಸ್ಮಾದ್ಭೀಮಾದನಂತರಾ ॥೪೩॥

ಅ ॥ ಭೀಮಸೇನನು ಪಾಪಿಷ್ಠರಾದ ಜನರನ್ನು ಸಂಹರಿಸತಕ್ಕವನು, ಮತ್ತು ವೈರಕ್ಕೂ ಕಾರಣನಾಗಿರುತ್ತಾನೆ, ದ್ರೌಪದಿಯು ವೈರಕ್ಕೆ ಕಾರಣಳಾಗಿರುತ್ತಾಳೆ. ಆದಕಾರಣ ಆ ದ್ರೌಪದಿಯು ಭೀಮನದೆಶೆಯಿಂದ ಮೇಲಿನವಳು, (ಅಂದರೆ ನಿಕೃಷ್ಟಳು.)

ವಿಶೇಷಾಂಶ— (1) ಬಾಲ್ಯಾವಸ್ಥೆಯಲ್ಲಿಯೇ ಲೀಲೆಯಿಂದ ಧೃತರಾಷ್ಟ್ರ ಪುತ್ರರಮೇಲೆ ವೃಕ್ಷಾಗ್ರಗಳನ್ನು ಬೀಳಿಸುತ್ತಾ ತಾಡನ ಮೊದಲಾದವುಗಳನ್ನು ಮಾಡುತ್ತಾ ಇದ್ದುದರಿಂದ ಭೀಮನು ವೈರಕ್ಕೆ ಕಾರಣನು ಆಗಿರುತ್ತಾನೆ. (2) ದ್ರೌಪದಿಯಾದರೂ ದುರ್ಯೋಧನಾದಿಗಳನ್ನು ಉಪೇಕ್ಷಾಮಾಡಿ ಪಾಂಡವರನ್ನು ಪರಿಗ್ರಹಿಸಿರುವುದರಿಂದಲೂ, ದುರ್ಯೋಧನಾದಿಗಳ ಹೆಂಡಂದಿಯರಿಗಿಂತ ಕೋಟಿಗುಣಗಳಿಂದ ಅಧಿಕವಾದ ಲಾವಣ್ಯವಿದ್ದುದರಿಂದಲೂ ಸಂಹರಿಸಿಕೊಳ್ಳಲ್ಪಡಲಿಕ್ಕೆ ಯೋಗ್ಯರಾದ ದುರ್ಯೋಧನಾದಿಗಳ ಮನಸ್ಸಿನಲ್ಲಿ ವೈರಕ್ಕೆ ಕಾರಣಳಾಗಿರುತಾಳೆ; ಮತ್ತು ಸಭೆಯಲ್ಲಿ ಭೀಮನ ಮುಂಭಾಗದಲ್ಲಿ ದುಶ್ಶಾಸನ ದುರ್ಯೋಧನಾದಿಗಳು ದ್ರೌಪದಿಯ ಕೇಶ ಗ್ರಹಣಾದಿಗಳನ್ನೂ ಮಾಡಿದರಿಂದ ಆ ದುಶ್ಶಾಸನಾದಿಗಳನ್ನು ಸಂಹರಿಸಬೇಕೆಂದು ಭೀಮನ ಮನಸ್ಸಿನಲ್ಲಿ ಹುಟ್ಟಿರುವ ವೈರಕ್ಕೆ ಕಾರಣಳಾಗಿರುತ್ತಾಳೆ. ಆದಕಾರಣ ಭೂಭಾರಭೂತರಾದ ದುರ್ಯೋಧನಾದಿಗಳನ್ನು ಸಂಹಾರಮಾಡುವ ವಿಷಯದಲ್ಲಿ ದ್ರೌಪದಿಯೇ ಪ್ರಧಾನಾಂಗಳು. ॥೪೩॥

ವಾಯುದೇವರ ಅನಂತರದಲ್ಲಿ ಶೇಷನು ಶ್ರೀ ಹರಿಯ ಕಾರ್ಯಕ್ಕೆ ಅಂಗಭೂತನು. ಆ ಮೇಲೆ ಇಂದ್ರನು, ಆ ಮೇಲೆ ಇತರ ದೇವತೆಗಳು. ಹೀಗೆ ಯಾವುದು ಶಾಸ್ತ್ರರಹಸ್ಯವೋ ಅದನ್ನು ಭಾರತದಲ್ಲಿ ಬಲರಾಮಾದಿಗಳ ದೃಷ್ಟಾಂತದಿಂದ ತೋರಿಸಿರುತ್ತಾರೆ—

ಮೂ ॥ ಬಲದೇವಸ್ತತಃ ಪಶ್ಚಾತ್ತತಃ ಪಶ್ಚಾಚ್ಚ ಫಲ್ಗುನಃ ॥
ನರಾವೇಶಾದನ್ಯಥಾ ತು ದ್ರೌಣಿಃ ಪಶ್ಚಾತ್ತತೋಽಪರೇ ॥ ೪೪ ॥

ರಾಮವಜ್ಜಾಂಬವತ್ಯಾದ್ಯಾಃ ಷಟ್ತತೋ ರೇವತೀ ತಥಾ ॥
ಲಕ್ಷ್ಮಣೋ ಹನುಮತ್ಪಶ್ಚಾತ್ತತೋ ಭರತವಾಲಿನೌ ॥
ಶತ್ರುಘ್ನಶ್ಚ ತತಃ ಪಶ್ಚಾತ್ಸುಗ್ರೀವಾದ್ಯಾಸ್ತತೋಽವರಾಃ ॥ ೪೫ ॥

ಆ ॥ ಭೀಮ ದ್ರೌಪದಿಗಳ ಮೇಲೆ ಬಲರಾಮನು (ಶ್ರೀ ಹರಿಯ ಕಾರ್ಯಕ್ಕೆ ಅಂಗ ಭೂತನು.) ಬಲರಾಮನ ಮೇಲೆ ನರರೂಪಿಯಾದ ಶ್ರೀ ಹರಿಯ ವಿಶೇಷಾವೇಶನಿಮಿತ್ತದಿಂದ ಅರ್ಜುನನು (ಶ್ರೀ ಹರಿಯ ಕಾರ್ಯಕ್ಕೆ ಅಂಗಭೂತನು), ಅನ್ಯಥಾ—ನರರೂಪಿಯಾದ ಶ್ರೀ ಹರಿಯನ್ನು ಅಪೇಕ್ಷಿಸದೆ ಸ್ವರೂಪವನ್ನೇ ವಿಚಾರಮಾಡಿದರೆ ಬಲರಾಮನ ಮೇಲೆ ದ್ರೋಣಾಚಾರ್ಯರ ಪುತ್ರನಾದ ಅಶ್ವತ್ಥಾಮನು (ಶ್ರೀಹರಿಯ ಕಾರ್ಯಕ್ಕೆ ಭೂತನು), ಆ ದ್ರೋಣಾಚಾರ್ಯರ ಪುತ್ರನಾದ ಅಶ್ವತ್ಥಾಮನ ಮೇಲೆ ಅರ್ಜುನನು, ಅಶ್ವತ್ಥಾಮ ಅರ್ಜುನರ ಮೇಲೆ ಇತರರಾದ ಪ್ರದ್ಯುಮ್ನ ಅನಿರುದ್ಧ ಮೊದಲಾದವರು. (ಶ್ರೀಹರಿಯ ಕಾರ್ಯಕ್ಕೆ ಅಂಗಭೂತರು). (ಪುರುಷರಲ್ಲಿ ಹೇಳಿ ಸ್ತ್ರೀಯರಲ್ಲಿಯೂ ಹೇಳುತ್ತಾರೆ.) ಬಲರಾಮನಂತೆಯೇ ಜಾಂಬವತೀ ಮೊದಲಾದ ಆರು (೬) ಮಹಿಷ್ಮರು (ಅಂಗಭೂತರು); (ಅದರಲ್ಲಿಯೂ ಜಾಂಬವತಿಯು ಬಲರಾಮನಂತೆಯೇ ಅಂಗಭೂತಳು. ಬಾಕಿ ಐವರು ಸ್ವಲ್ಪ ನ್ಯೂನರು).ಶ್ರೀ ಹರಿಯ ಆರು (೬) ಮಹಿಷ್ಮರ ಮೇಲೆ ಬಲರಾಮನ ಹೆಂಡತಿಯಾದ ರೇವತಿಯು (ಅಂಗಭೂತಳು). (ಶ್ರೀಕೃಷ್ಣಾವತಾರದಲ್ಲಿ ಅವತರಿಸಿದ ಭೀಮ, ದ್ರೌಪದಿ, ಬಲರಾಮ, ಅಶ್ವತ್ಥಾಮ, ಅರ್ಜುನಾದಿಗಳು ಕ್ರಮದಿಂದ ಶ್ರೀ ಹರಿಯ ಕಾರ್ಯಕ್ಕೆ ಅಂಗಭೂತರೆಂದು ಉಪಪಾದಿಸಿ ಈಗ ಶ್ರೀ ರಾಮಾಯಣಕಥಾತಾತ್ಪರ್ಯವನ್ನೂ ಶೋಧಿಸಿದರೂ ವಾಯು ಶೇಷಾದಿಗಳಿಗೆ ಇದೇ ಪ್ರಕಾರ ಶ್ರೀ ಹರಿಯ ಸೇವೆಯ ಅಂಗತ್ವದಲ್ಲಿ ತಾರತಮ್ಯವನ್ನು ಹನುಮದಾದಿ ರೂಪಗಳಲ್ಲಿ ತೋರಿಸುತ್ತಾರೆ.) ಶ್ರೀ ಹನುಮಂತನ ಮೇಲೆ ಲಕ್ಷ್ಮಣನು, ಲಕ್ಷ್ಮಣನ ಮೇಲೆ ಭರತ—ವಾಲಿಗಳು, ಭರತ-ವಾಲಿಗಳ ಮೇಲೆ ಶತ್ರುಘ್ನನು. ಶತ್ರುಘ್ನನದೆಶೆಯಿಂದ ಸುಗ್ರೀವನೇ ಮೊದಲಾದವರು ಅವರರು.

ವಿಶೇಷಾಂಶ— (1) ಬಲರಾಮನು ಶೇಷನು, ಅಶ್ವತ್ಥಾಮನು ರುದ್ರನು, ಆದಕಾರಣ ಶೇಷ-ರುದ್ರರಿಗೆ ಸಾಮ್ಯವಿದ್ದರೂ ಬಲರಾಮನಲ್ಲಿ ಶುಕ್ಲಕೇಶರೂಪಿಯಾದ ಶ್ರೀ ಹರಿಯ ಸನ್ನಿಧಾನವಿಶೇಷವಿದ್ದುದರಿಂದ ಅಶ್ವತ್ಥಾಮನಕ್ಕಿಂತ ಬಲರಾಮನು ಉತ್ತಮನು. (2) 'ಹನುಮತ್ವ ಶ್ಚಾತ್ ಲಕ್ಷ್ಮಣಃ' ಎಂದು ಹೇಳಿರುವುದರಿಂದ ಹನುಮಂತನು ಮುಖ್ಯವಾಗಿ ಶ್ರೀ ಹರಿಯ ಕಾರ್ಯಕ್ಕೆ ಅಂಗಭೂತನೆಂದು ಅಭಿಪ್ರೇತವಾಯಿತು. ಗಂಧಮಾದನ ಪರ್ವತವನ್ನು ತಂದದ್ದು. ಸಮುದ್ರವನ್ನು ದಾಟಿದ್ದು, ಇದು ಮೊದಲಾದ ಇತರಾಸಾಧ್ಯಕರ್ಮಗಳಿಂದ ಹನುಮಂತನು ಮುಖ್ಯವಾಗಿ ಶ್ರೀ ಹರಿಯ ಸೇವೆಗೆ ಅಂಗಭೂತನೆನ್ನುವುದು ಸುಪ್ರಸಿದ್ಧವು ಎಂದು ಸೂಚಿತವಾಯಿತು. **'ಗೋಷ್ಪದೀಕೃತವಾರೀಶಂ ಮಶರೀಕೃತರಾಕ್ಷಸಂ। ರಾಮಾಯಣ ಮಹಾಮಾಲಾ ರತ್ನಂ ವಂದೇऽನಿಲಾತ್ಮಜ'** ॥ ಸಮುದ್ರವನ್ನು ಗೋವಿನ ಪಾದತುಲ್ಯವನ್ನಾಗಿ ಮಾಡಿದವನು, ರಾಕ್ಷಸರನ್ನು ನೊಣದಂತೆ ಮಾಡಿರುವವನು, ರಾಮಾಯಣನೆನ್ನುವ ಮಹತ್ತಾದ ಮಾಲಿಕೆಗೆ ರತ್ನಭೂತನು ಇಂತಹ ಹನುಮಂತನನ್ನು ನಮಸ್ಕರಿಸುತ್ತೇನೆಂದು ವಾಲ್ಮೀಕಿಯ ವಚನವು. (3) ಭರತನು ಕಾಮರೂಪನಾಗಿರುವನು, ವಾಲಿಯು ಇಂದ್ರಸ್ವರೂಪನು, ಆದಕಾರಣ ಇವರಿಗೆ ಸಾಮ್ಯವಿದ್ದುದರಿಂದ ಸಮವಾಗಿಯೇ ಶ್ರೀ ಹರಿಯ ಸೇವೆಗೆ ಅಂಗಭೂತರು ಎನ್ನುವ ಅಭಿಪ್ರಾಯದಿಂದ 'ಭರತವಾಲಿನೌ' ಎಂದು ಹೇಳಿರುವರು. ಆವರಿಬ್ಬರಲ್ಲಿ ವಾಲಿಯು, ಶೀಘ್ರದಲ್ಲಿ ಮೃತನಾಗಿರುವುದರಿಂದ ಹರಿ ಸೇವೆಗೆ ವಿಚ್ಛೇದವು ಬಂದುದರಿಂದಲೂ ಭರತನ ಸ್ವರ್ಗಾರೋಹಣಪರ್ಯಂತವಾಗಿ ಮಧ್ಯೇ ವಿಚ್ಛೇದವಿಲ್ಲದೆ ಸೇವಿಸುತ್ತಾ ಇದ್ದ ಪ್ರಯುಕ್ತವೂ ಭರತನನ್ನು ಮುಂದಾಗಿ ಹೇಳಿರುವರು ॥೪೪॥೪೫॥

ಹಾಗಾದರೆ ವಾಲಿಯು ಬಹುಸೇವೆಯನ್ನು ಮಾಡಲಿಲ್ಲ. ಭರತನು ಬಹುಸೇವೆಯನ್ನು ಮಾಡಿರುವನು. ಆದಕಾರಣ ವಾಲಿಗೆ ಭರತನ ಸಾಮ್ಯದಿಂದ ಹರಿಯ ಸೇವಾಂಗತ್ವವು ಹೇಳಿದ್ದು ಹೇಗೆ ಕೂಡುತ್ತದೆಂದರೆ—

ಮೂ ॥ ರಾಮಕಾರ್ಯಂ ತು ಯೈಃ ಸಮ್ಯಕ್ಸ್ವಯೋಗ್ಯಂ ನ ಕೃತಂಪುರಾ ॥
ತೈಃ ಪೂರಿತಂ ತು ಕೃಷ್ಣಾಯ ಬೀಭತ್ಸಾದ್ಯೈಃ ಸಮಂತತಃ ॥೪೯॥

ಅ ॥ ಮೊದಲು ತಮಗೆ ಯೋಗ್ಯವಾದ ಶ್ರೀ ರಾಮನ ಕಾರ್ಯವು ಚೆನ್ನಾಗಿ ಯಾರಿಂದ ಮಾಡಲ್ಪಡಲಿಲ್ಲವೋ ಆ ಅರ್ಜುನನೇ ಮೊದಲಾದ ದ್ರೋಣಾದಿಗಳಿಂದ ಸರ್ವರೂಪದಿಂದಲೂ ಶ್ರೀ ಕೃಷ್ಣನಿಗೋಸ್ಕರ ಪೂರ್ಣೀಕೃತವಾಯಿತು.

ವಿಶೇಷಾಂಶ— (1) ಲಕ್ಷ (೧೦೦೦೦೦) ರೂಪಾಯಿಗಳನ್ನು ಸಂಪಾದಿಸಿದವನಿಗೂ ಮುಂದಕ್ಕೆ ಸಂಪಾದಿಸುವವನಿಗೂ ಹೇಗೆ ಸಾಮ್ಯವೋ, ಹಾಗೆಯೇ ಭರತನಿಗೂ ವಾಲಿಗೂ ಸಾಮ್ಯವೇ. (2) ತಾರರೂಪದಿಂದಲೂ ವಾಲಿರೂಪದಿಂದಲೂ ರಾಮಾಯಣದಲ್ಲಿ ತಮಗೆ ಯೋಗ್ಯವಾದ ಸೇವೆಯನ್ನು ಮಾಡುವುದರಿಂದ ಅರ್ಜುನರೂಪದಿಂದಲೂ ದ್ರೋಣರೂಪದಿಂದಲೂ ಮಹತ್ತಾದ ಸೇವೆಯು ಮಾಡಲ್ಪಟ್ಟಿತು ॥ ೪೬ ॥

ಮೂ॥ ಅಧಿಕಂ ಯೈಃ ಕೃತಂ ತತ್ರ ತೈರೂನಂ ಕೃತಮತ್ರ (ತತ್) ತು॥
ಕರ್ಣಾದ್ಯೈರಧಿಕಂ ಯೈಸ್ತು ಪ್ರಾದುರ್ಭಾನದ್ವಯೇ ಕೃತಂ ॥ ೪೭ ॥
ವಿವಿದಾದ್ಯೈರ್ಹಿತೈಃ ಪಶ್ಚಾದ್ವಿಪ್ರತೀಪಂ ಕೃತಂ ಹರೇಃ ॥
ಪ್ರಾದುರ್ಭಾನದ್ವಯೇ ಹ್ಯಸ್ಮಿನ್ಸರ್ವೇಷಾಂ ನಿರ್ಣಯೇ ಕೃತಃ ॥ ೪೮ ॥

ಆ ॥ ಯಾವ ಲಕ್ಷ್ಮಣ ಅಂಗದಾದಿಗಳಿಂದ ಆ ರಾಮಾವತಾರದಲ್ಲಿ ಅಧಿಕವಾದ ಸೇವೆಯು ಮಾಡಲ್ಪಟ್ಟಿತೋ, ಅವರಿಂದ ಕೃಷ್ಣಾವತಾರದಲ್ಲಿ ಆದರೂ ಬಲರಾಮಾದಿರೂಪದಿಂದಲೂ ಅಭಿಮನ್ಯುರೂಪದಿಂದಲೂ ಊನವಾದ ಸೇವೆಯು ಮಾಡಲ್ಪಟ್ಟಿತು. ಯಾವ ಕರ್ಣನೇ ಮೊದಲಾದ ನಕುಲಸಹದೇವಾದಿಗಳಿಂದ ಅವತಾರಗಳೆರಡರಲ್ಲಿಯೂ ಅಧಿಕವಾದ ಸೇವೆಯು ಮಾಡಲ್ಪಟ್ಟಿದೋ, ಆ ವಿವಿದನೇ ಮೊದಲಾದ ಕರ್ಣಾದಿಗಳಿಂದ ಮೇಲೆ ಶ್ರೀ ಹರಿಗೆ ವಿರೋಧವು ಮಾಡಲ್ಪಟ್ಟಿತು. ಹೀಗೆ ಈ ದಾವ ರಾಮಕೃಷ್ಣಾಖ್ಯ ಎರಡು ಅವತಾರಗಳಲ್ಲಿ ಎಲ್ಲಾ ಬ್ರಹ್ಮಾದಿಗಳ ಮಧ್ಯದಲ್ಲಿ ಉತ್ತಮತ್ವ-ನೀಚತ್ವ ನಿರ್ಣಯವು ಮಾಡಲ್ಪಟ್ಟಿತು.

ವಿಶೇಷಾಂಶ—(1) ಬಲರಾಮನು ಕೃಷ್ಣನಿಗೆ ಅಣ್ಣನಾಗಿ ಹುಟ್ಟಿರುವುದರಿಂದ ನಮಸ್ಕಾರಾದಿಗಳನ್ನು ಮಾಡದಿರುವುದರಿಂದ ಊನವಾದ ಸೇವೆಯನ್ನು ಮಾಡಿರುವನು. ಅಭಿಮನ್ಯುವು ಶೀಘ್ರದಲ್ಲಿ ಮರಣವನ್ನು ಹೊಂದುವುದರಿಂದ ಊನವಾದ ಸೇವೆಯನ್ನು ಮಾಡಿರುವನು. (2) ರಾಮಾಯಣದಲ್ಲಿ ಸುಗ್ರೀವನ ರೂಪದಿಂದಲೂ, ಭಾರತದಲ್ಲಿ ಕರ್ಣನು ವಿದ್ಯಾಭ್ಯಾಸಕಾಲದಲ್ಲಿ ಪರಶುರಾಮನ ಸೇವೆಯನ್ನು ಮಾಡಿರುವುದರಿಂದಲೂ ಭೂಮಿಗೆ ಭಾರಭೂತವಾದ ರಾಕ್ಷಸಾದಿಗಳ ನಾಶಕ್ಕೆ ಅಂಗಭೂತನಾದುದರಿಂದ ಎರಡು ರೂಪಗಳಲ್ಲಿಯೂ ಅಧಿಕವಾದ ಸೇವೆಯನ್ನು ಮಾಡಿರುವನು. (3) ಅಶ್ವಿನೀದೇವತೆಗಳು ರಾಮಾವತಾರಕಾಲದಲ್ಲಿ ರಾಮಾಯಣದಲ್ಲಿ ಮೈಂದ ವಿವಿದರೂಪದಿಂದಲೂ, ಭಾರತದಲ್ಲಿ ಶ್ರೀ ಕೃಷ್ಣಾವತಾರಕಾಲದಲ್ಲಿ ನಕುಲಸಹದೇವ ರೂಪದಿಂದಲೂ ಅಧಿಕವಾದ ಸೇವೆಯನ್ನು ಮಾಡಿರುವರು. (4) 'ವಿವಿದಾದ್ಯೈಃ' ಎನ್ನುವಲ್ಲಿ ಆದ್ಯಪದದಿಂದ ಕರ್ಣಾದಿಗಳನ್ನು ಇಟ್ಟುಕೊಳ್ಳಬೇಕು. ಅದರಲ್ಲಿ ವಿವಿದನು ನರಕಾಸುರನ ಸಹಾಯದಲ್ಲಿ ಇದ್ದು ಸ್ಥೂಲವಾದ ಅಂಜಲಿಯಿಂದ ಉಪ್ಪುನೀರನ್ನು ಚೆಲ್ಲಿ ಕೃಷ್ಣಗ್ರಾಮಗಳು ನಾಶ ಮಾಡಲ್ಪಟ್ಟವು. ಕರ್ಣನು ದುರ್ಯೋಧನನ ಪಕ್ಷಪಾತದ್ವೇಶಯಿಂದ ಶ್ರೀ ಕೃಷ್ಣನ ವಚನವನ್ನು ಉಲ್ಲಂಘಿಸಿರುವನು. ದ್ರೌಪದಿಯನ್ನು ತಿರಸ್ಕರಿಸಿರುವನು. ಪಾಂಡವರಲ್ಲಿ ದ್ವೇಷಾದಿಗಳನ್ನು ಮಾಡಿರುವನು. ಹೀಗೆ ಅನೇಕ ದೋಷಗಳನ್ನು ಮಾಡಿರುವನು, ಆದುದರಿಂದ ಇಬ್ಬರ ಅಧಿಕವಾಗಿ ಮಾಡಿದ ಪುಣ್ಯವನ್ನು ನಾಶಪಡಿಸಿಕೊಂಡಿರುವರು. (5) **'ಏಧನಮಾನದ್ವಿಡುಭಯೆಸ್ಯ ರಾಜಾ'** ಎನ್ನುವ ಶ್ರುತಿಯು ಜೀವನ ಯೋಗ್ಯತೆಯಿಂದ ಪುಣ್ಯವು ಜಾಸ್ತಿಯಾದರೆ ಶ್ರೀ ಹರಿಯು ಅದನ್ನು ಹ್ರಾಸಪಡಿಸುವನು ಎಂದು ಪ್ರತಿಪಾದಿಸುತ್ತದೆ. (6) ಶ್ರೀ ಭಗವದವತಾರಗಳಲ್ಲಿ ರಾಮ ಕೃಷ್ಣಾವತಾರಗಳೇ ಭೂಭಾರವನ್ನು ನಾಶಪಡಿಸಬೇಕೆನ್ನುವ ನೆವನದಿಂದಹರಿ ಸರ್ವೋತ್ತಮತ್ವ ದೇವತಾ ತಾರತಮ್ಯ ಮೊದಲಾದ ಸಕಲ ಶಾಸ್ತ್ರಾರ್ಥಗಳನ್ನು ನಿರ್ಣಯಮಾಡುವುದಕ್ಕಾಗಿಯೇ ಪ್ರವೃತ್ತಗಳಾಗಿವೆ. ಅಲ್ಲಿಯೂ ರಾಮಾವತಾರವನ್ನು ಮಾಡಿದ ಮೇಲೆ ಕೃಷ್ಣಾವತಾರವನು ಮಾಡಿರುವುದರಿಂದ ರಾಮಾವತಾರಕ್ಕಿಂತಲೂ ಹೆಚ್ಚಾಗಿ ಕೃಷ್ಣಾವತಾರವು ಸಕಲ ಶಾಸ್ತ್ರಾರ್ಥಗಳನ್ನು ನಿರ್ಣಯಿಸುವುದಕ್ಕಾಗಿ ಪ್ರವೃತ್ತವಾಗಿದೆ. ಏವಂಚ ಕೃಷ್ಣಾವತಾರದಲ್ಲಿ ತಾನು ಮಾಡಿದ ಸಕಲ ಚರಿತ್ರೆಗಳನ್ನು ವರ್ಣಿಸುವುದಕ್ಕಾಗಿ ತಾನೇವೇ ವೇದವ್ಯಾಸನಾಮಕವಾದ ರೂಪಾಂತರವನ್ನು ತೆಗೆದುಕೊಂಡು ಮಾಡಿರುವುದರಿಂದ ಭಾರತವೇ ಸಕಲ ಶಾಸ್ತ್ರಗಳಲ್ಲಿ ಅತ್ಯುತ್ತಮವು. ॥೪೭॥೪೮॥

ಹಾಗಾದರೆ ರಾಮಾವತಾರದಲ್ಲಿ ಯಾರು ಅಧಿಕ ಸೇವೆಯನ್ನು ಮಾಡಿರುವರೋ ಅವರು ಕೃಷ್ಣಾವತಾರದಲ್ಲಿ ನ್ಯೂನಸೇವೆಯನ್ನೇ ಮಾಡಿರುವರು. ಹಾಗೆಯೇ ವರಾಹಾದ್ಯವತಾರಗಳಲ್ಲಿ ಸೇವಾದಿಗಳಿಂದಲೂ ಸ್ವರೂಪನಿರ್ಣಯವು ಬರುವುದು ಎಂದರೆ—

ಚರಮ ವರ್ಣ ಕ್ಷಂಸ್ – ಸಮಾಪ್ತಿ

ಮೂ ॥ ನೈತಯೋರಕೃತಂ ಕಿಂಚಿಚ್ಛುಭಂ ವಾ ಯದಿ ವಾಽಶುಭಂ ॥
ಅನ್ಯತ್ರ ಪೂರ್ಯತೇ ಕ್ವಾಪಿ ತಸ್ಮಾದತ್ರೈವ ನಿರ್ಣಯಃ ॥ ೪೯ ॥

ಅ ॥ ಈ ರಾಮಕೃಷ್ಣಾವತಾರಗಳಲ್ಲಿ ನಿರ್ಣೀತವಾಗದಿರುವ ಯಾವುದಾದರೂ ಶುಭವನ್ನಾಗಲೀ ಆಶುಭವನ್ನಾಗಲೀ (ಮಾಡದೆ ಇದ್ದರೂ) ವರಾಹ ಮೊದಲಾದ ಬೇರೆ ಅವತಾರಗಳಲ್ಲಿ ಎಲ್ಲಿಯೂ ನಿರ್ಣೀತವಾಗುವುದಿಲ್ಲ. ಆದುದರಿಂದ ಈ ಎರಡು ಅವತಾರಗಳಲ್ಲಿಯೇ ನಿರ್ಣಯವಾಗುತ್ತದೆ. ॥೪೯॥

ಅದರಲ್ಲಿಯೂ ವಿಶೇಷವನ್ನು ಹೇಳುತ್ತಾರೆ—

ಮೂ ॥ ಪಶ್ಚಾತ್ತನತ್ವಾತ್ಕೃಷ್ಣಸ್ಯ ವೈಶೇಷ್ಯಾತ್ತತ್ರ ನಿರ್ಣಯಃ ॥
ಪ್ರಾದುರ್ಭಾವಮಿಮಂ ತಸ್ಮಾದ್ಗೃಹೀತ್ವಾ ಭಾರತಂ ಕೃತಂ ॥
ಉಕ್ತಾ ರಾಮಕಥಾ ಹ್ಯಸ್ಮಿನ್ಮಾರ್ಕಂಡೇಯಸಮಾಖ್ಯಯಾ ॥ ೫೦ ॥

ಅ ॥ ಶ್ರೀ ಕೃಷ್ಣನಿಗೆ ಚರಮತ್ವವಿದ್ದುದರಿಂದ ಶ್ರೀ ಕೃಷಾವತಾರದಲ್ಲಿ ವಿಶೇಷವಾಗಿ ನಿರ್ಣಯವಾಗುತ್ತದೆ, (ಹಾಗಾದರೆ ಎರಡು ಅವತಾರಗಳಲ್ಲಿ ಸರ್ವನಿರ್ಣಯವು ಆಗುವುದಾದರೆ ಭಾರತಕ್ಕೆ ಸರ್ವನಿರ್ಣಾಯಕತ್ವವು ಹೇಗೆಂದರೆ—) ಈ ಪ್ರಕೃತವಾದ ಎರಡು ಅವತಾರಗಳನ್ನು ತನ್ನ ಗ್ರಂಥವಿಷಯವನ್ನಾಗಿ ಮಾಡಿ ಈ ಎರಡು ಅವತಾರಗಳನ್ನು ಪ್ರತಿಪಾದಿಸುವುದರಿಂದ ಸರ್ವಾರ್ಥಗಳನ್ನು ನಿರ್ಣಯಿಸುವಪ್ರಯುಕ್ತ ಭಾರತವು (ವ್ಯಾಸರೂಪನಾದ ತನ್ನಿಂದಲೇ) ಮಾಡಲ್ಪಟ್ಟಿತು. (ಹಾಗಾದರೆ ರಾಮಕಥೆಯನ್ನು ಹೇಳದಿರುವುದರಿಂದ ತಾನು ಮಾಡಿದ ಭಾರತವು ಸಕಲ ಶಾಸ್ತ್ರಾರ್ಥಗಳನ್ನೂ ಹೇಗೆ ನಿರ್ಣಯಿಸುವುದು ಎಂದರೆ) ಈ ಭಾರತದಲ್ಲಿ ಮಾರ್ಕಂಡೇಯ ಋಷಿಯ ಸಮಾಖ್ಯೆಯಿಂದ ಶ್ರೀ ರಾಮನ ಕಥೆಯೂ ಹೇಳಲ್ಪಟ್ಟದಷ್ಟೆ! ॥೫೦॥

ಭಾರತಕ್ಕೆ ಸರ್ವಶಾಸ್ತ್ರಾರ್ಥತ್ವವನ್ನುಪಸಂಹಾರಮಾಡುತ್ತಾರೆ—

ಮೂ ॥ ತಸ್ಮಾದ್ಯದ್ಭಾರತೇ ನೋಕ್ತಂ ತದ್ದಿ ನೈವಾಸ್ತಿಕುತ್ರಚಿತ್ ॥
ಅತ್ರೋಕ್ತಂ ಸರ್ವಶಾಸ್ತ್ರೇಷು ನ ಹಿ ಸಮ್ಯಗುದಾಹೃತಂ ॥ ೫೧ ॥
ಇತ್ಯಾದಿ ಕಥಿತಂ ಸರ್ವಂ ಬ್ರಹ್ಮಾಂಡೇ ಹರಿಣಾ ಸ್ವಯಂ ॥
ಮಾರ್ಕಂಡೇಯೇಽಪಿ ಕಥಿತಂ ಭಾರತಸ್ಯ ಪ್ರಶಂಸನಂ ॥ ೫೨ ॥

ಅ ॥ ಆದಕಾರಣ ಯಾವುದು ಭಾರತದಲ್ಲಿ ಪ್ರತಿಪಾದಿಸಿಕೊಳ್ಳಲ್ಪಡಲಿಲ್ಲವೋ, ಆ ಪ್ರಮೇಯವು ಯಾವ ಪುರಾಣದಲ್ಲಿಯೂ ಇಲ್ಲವೇ ಇಲ್ಲ. ಈ ಭಾರತದಲ್ಲಿ ಪ್ರತಿಪಾದಿಸಿಕೊಳ್ಳಲ್ಪಟ್ಟದ್ದು ಬೇರೆ ಎಲ್ಲಾ ಶಾಸ್ತ್ರಗಳಲ್ಲಿಯೂ ಸ್ಪಷ್ಟವಾಗಿ ವಿಸ್ತಾರವಾಗಿ ಹೇಳಿಸಿಕೊಳ್ಳಲ್ಪಡಲೇ ಇಲ್ಲ ಇದೇ ಮೊದಲಾದ ಪ್ರಮೇಯವೆಲ್ಲವೂ (ಅಂದರೆ ಭಾರತಕ್ಕೆ ಉತ್ತಮತ್ವಾದಿಗಳೆಲ್ಲವೂ) ಸಾಕ್ಷಾತ್ ಶ್ರೀ ನಾರಾಯಣಾವತಾರರಾದ ವೇದವ್ಯಾಸರಿಂದಲೇ ಬ್ರಹ್ಮಾಂಡಪುರಾಣದಲ್ಲಿ ಹೇಳಲ್ಪಟ್ಟಿದೆ. ಮಾರ್ಕಂಡೇಯಪುರಾಣದಲ್ಲಿಯೂ ಭಾರತದ ಪ್ರಶಂಸೆಯು ಮಾಡಲ್ಪಟ್ಟಿದೆ. (ಆದಕಾರಣ ಭಾರತವು ಸರ್ವನಿರ್ಣಯರೂಪವಾಗಿರುವುದರಿಂದ ಉತ್ತಮವು.) ॥೫೧॥೫೨॥

ಮಾರ್ಕಂಡೇಯ ಪುರಾಣದಲ್ಲಿಯೂ ಭಾರತಕ್ಕೆ ಉತ್ತಮತ್ವವನ್ನು ಹೇಳಿದ್ದನ್ನುದಾಹರಿಸುತ್ತಾರೆ—

ಮೂ ॥ **ದೇವತಾನಾಂ ಯಥಾ ವ್ಯಾಸೋ ದ್ವಿಪದಾಂ ಬ್ರಾಹ್ಮಣೋ ವರಃ ॥**
ಆಯುಧಾನಾಂ ಯಥಾ ವಜ್ರಮೋಷಧೀನಾಂ ಯಥಾ ಯವಾಃ ॥೫೩॥
ತಥೈವ ಸರ್ವಶಾಸ್ತ್ರಾಣಾಂ ಮಹಾಭಾರತಮುತ್ತಮಂ ॥೫೪॥

ಅ ॥ ಹೇಗೆ ವೇದವ್ಯಾಸರು ದೇವತೆಗಳ ಮಧ್ಯದಲ್ಲಿ ಶ್ರೇಷ್ಠರೋ, ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರರ ಮಧ್ಯದಲ್ಲಿ ಬ್ರಾಹ್ಮಣನು ಶ್ರೇಷ್ಠನೋ, ಹೇಗೆ ಔಷಧಿ (ಧಾನ್ಯ)ಗಳ ಮಧ್ಯದಲ್ಲಿ ಜೋಂಗು ಇದ್ದ ಬತ್ತವು ಶ್ರೇಷ್ಠವೋ ಹಾಗೆಯೇ ಋಗಾದಿ ಸರ್ವಶಾಸ್ತ್ರಗಳ ಮಧ್ಯದಲ್ಲಿ ಮಹಾ ಭಾರತವು ಉತ್ತಮವು ॥೫೩॥೫೪॥

ಪುರಾಣಾಂತರದಿಂದಲೂ ಉತ್ತಮತ್ವವನ್ನುಪಪಾದಿಸುತ್ತಾರೆ—

ಮೂ ॥ **ವಾಯುಪ್ರೋಕ್ತೇಽಪಿ ತತ್ರೋಕ್ತಂ ಭಾರತಸ್ಯ ಪ್ರಶಂಸನಂ ॥**
ಕೃಷ್ಣದ್ವೈಪಾಯನಂ ವ್ಯಾಸಂ ವಿದ್ಧಿ ನಾರಾಯಣಂ ಪ್ರಭುಂ ॥೫೫॥
ಕೋ ಹ್ಯನ್ಯಃ ಪುಂಡರೀಕಾಕ್ಷಾನ್ಮಹಾಭಾರತಕೃದ್ಭವೇತ್ ॥
ಏವಂ ಹಿ ಸರ್ವಶಾಸ್ತ್ರೇಷು ಪೃಥಕ್ಪೃಥಗುದೀರಿತಂ ॥ ೫೬ ॥

ಅ ॥ ವಾಯುಪ್ರೋಕ್ತದಲ್ಲಿಯೂ ಕೂಡ ಪ್ರಸಿದ್ಧವಾದ ಭಾರತದ ಪ್ರಶಂಸೆಯು ಹೇಳ ಲ್ಪಟ್ಟಿದೆ. ಕೃಷ್ಣದ್ವೈಪಾಯನನಾಮಕರಾದ ವೇದವ್ಯಾಸರನ್ನು ಪ್ರಭುವಾದ ಶ್ರೀಮನ್ನಾರಾಯಣ ನನ್ನಾಗಿ ತಿಳಿ. ಪುಂಡರೀಕಾಕ್ಷನದೆಶೆಯಿಂದ ಬೇರೆ ಯಾವನು ಮಹಾಭಾರತವನ್ನು ಮಾಡಿ ದವನು ಆಗುವನು? (ಯಾರೂ ಆಗಲಾರನು). (ಈ ಮೂರು ಪುರಾಣಗಳಲ್ಲಿಮಾತ್ರ ಭಾರತಕ್ಕೆ ಉತ್ತಮತ್ವವನ್ನು ಹೇಳಿದೆಯೆನ್ನುತ್ತಾರೆ) ಹೀಗೆಯೇ ಸರ್ವಶಾಸ್ತ್ರಗಳಲ್ಲಿಯೂ ಪ್ರತ್ಯೇಕ ಪ್ರತ್ಯೇಕ (ಭಾರತಕ್ಕೆ ಉತ್ತಮತ್ವವು) ಪ್ರತಿಪಾದಿಸಿಕೊಳ್ಳಲ್ಪಟ್ಟಿದೆ.

ವಿಶೇಷಾಂಶ — (1) 'ಕೃಷ್ಣದ್ವೈಪಾಯನಂ' ಎನ್ನುವ ಶ್ಲೋಕವು ವಾಯುಪ್ರೋಕ್ತ ಎನ್ನುವ ಪುರಾಣದಲ್ಲಿ ಮಾತ್ರವಿರುವುದಿಲ್ಲ. ಮತ್ತೆ ಭಾರತದಲ್ಲಿಯೂ ಇದೆ. (2) ಹಾಗಾದರೆ ಇಷ್ಟು ಗ್ರಂಥಗಳನ್ನು ಮಾತ್ರಮಾಡಿದರಿಂದ ವ್ಯಾಸರು ಸಾಕ್ಷಾನ್ನಾರಾಯಣಾವತಾರಭೂತರು ಎನ್ನುವುದು ಹೇಗೆ ಸಿದ್ಧಿಸುವುದು? ಎಂದು ಶಂಕಿಸಕೂಡದು. ೧ ಕುರುಪಾಂಡವರ ವಂಶವು ಹುಟ್ಟುವುದಕ್ಕಿಂತ ಮೊದಲೇ ಎರಡು ವಂಶಗಳ ಉತ್ಪತ್ತಿಪ್ರಕಾರವನ್ನೂ, ೨ ಪಾಂಡವರು ಮಾಡಿದ ರಾಜಸೂಯ, ಅಶ್ವಮೇಧಾದಿ ಯಾಗಗಳ ಮಹಿಮೆಯನ್ನೂ, ೩ ಯಾಗಕ್ಕಾಗಿ ಪಾಂಡವರು ಮಾಡಿದ ದಿಗ್ವಿಜಯಪ್ರಕಾರವನ್ನೂ, ೪ ಅರಗಿನ ಮನೆಯಿಂದ ಹೊರಟು ಹೋಗುವಿಕೆಯ ಕೌಶಲವನ್ನೂ, ೫ ಬಕಾಸುರ ಹಿಡಿಂಬಾಸುರರ ಸಂಹಾರವನ್ನೂ, ೬ ದ್ರೌಪದೀ ವಿವಾಹ ನಿರ್ವಾಹಕ ಶಕ್ತಿಯನ್ನೂ,, ೭ ದುಷ್ಟವಾದ ದ್ಯೂತದ ಉದ್ಯೋಗವನ್ನೂ, ೮ ವನವಾಸ, ಅಜ್ಞಾತವಾಸ, ಗೋಗ್ರಹಣ ಮೊದಲಾದ ಅನೇಕ ಕಥೆಗಳನ್ನೂ ೯ ೧೮ ಅಕ್ಷೌಹಿಣೀ ಸೇನೆಯಲ್ಲಿ ಪರಸ್ಪರವಾಗಿ ಹೇಳಲ್ಪಡತಕ್ಕ ಉಕ್ತಿಪ್ರತ್ಯುಕ್ತಿಯನ್ನೂ. ೧೦ ಶರಪ್ರತಿ ಶರಸಂಖ್ಯಾ ಖಂಡನಾದಿ ಚಾತುರ್ಯವನ್ನೂ, ೧೧ ವ್ಯೂಹ ಪ್ರತಿವ್ಯೂಹಗಳನ್ನು ಮಾಡತಕ್ಕ ಪ್ರಕಾರವನ್ನೂ, ೧೨ ಅಸ್ತ್ರ ಪ್ರತ್ಯಸ್ತ್ರಗಳ ಪ್ರಯೋಗಗಳ ಕ್ರಮವನ್ನೂ, ೧೩ ಭೀಮಾರ್ಜುನ ಭೀಷ್ಮ, ದ್ರೋಣ ಮೊದಲಾದವರು ಪ್ರತಿನಿತ್ಯವೂ ಸಂಹರಿಸಿದ ಆನೆ, ಕುದುರೆ ಮೊದಲಾದ ಅನೇಕ ಸೇನೆಗಳ ಸಂಖ್ಯಾದಿಗಳನ್ನೂ ಕೂಡ ಕರತಳದಲ್ಲಿರತಕ್ಕ ಶುದ್ಧೋದಕದಂತೆ ನೋಡಿ ಕೊಂಡೇ ಮಹಾಭಾರತಾಖ್ಯ ತನ್ನ ಗ್ರಂಥದಲ್ಲಿ ಪ್ರತಿಪಾದಿಸಿರುವ ವೇದವ್ಯಾಸರಿಗೆ ನಿರವಧಿಕ

ಜಗತ್ತನ್ನು ನಿರ್ಮಿಸಿದ ಶ್ರೀನಾರಾಯಣನಂತೆ ನಿರವಧಿಕವಾದ ಸಾರ್ವಜ್ಞ್ಯವು ಸಿದ್ಧಿಸುವುದರಿಂದ ಸಾಕ್ಷಾತ್ ನಾರಾಯಣಾವತಾರವನ್ನೂ ಪ್ರೇಕ್ಷಾವಂತರಿಗೆ ಉತ್ಪ್ರೇಕ್ಷಿಸಲಿಕ್ಕೆ ಶಕ್ಯವಾಗುವುದು. ಇಲ್ಲವಾದರೆ ಮತ್ಸ-ಕೂರ್ಮಾದಿಗಳೂ ಶ್ರೀ ನಾರಾಯಣನ ಅವತಾರಭೂತರೆಂದು ಹೇಗೆ ಸಿದ್ಧಿಸುವುದು? ಆದಕಾರಣ **'ಕೋ ಹ್ಯನ್ಯಃ ಪುಂಡರೀಕಾಕ್ಷಾನ್ಮಹಾಭಾರತಕೃದ್ಭವೇತ್'** ಎಂದು ಹೇಳಿದ್ದು ಪ್ರಶಸ್ತವು ॥೫೫॥೫೬॥

ಸರ್ವ ಶಾಸ್ತ್ರಗಳಲ್ಲಿ ಮಾತ್ರ ಭಾರತಕ್ಕೆ ಉತ್ತಮತ್ವವನ್ನು ಹೇಳಿದ್ದಲ್ಲ. ಮತ್ತೆ ನಾನು ಮಾಡಿದ ನಿರ್ಣಯವೂ ಕೂಡ ಇದೆ ಎನ್ನುತ್ತಾರೆ.

ಮೂ ॥ ಉಕ್ತೋ೭ರ್ಥಃ ಸರ್ವ ಏವಾಯಂ ಮಾಹಾತ್ಮ್ಯೇ ಕ್ರಮವೂರ್ವಕಃ ॥
ಭಾರತೇ೭ಪಿ ತಥಾ ಪ್ರೋಕ್ತೋ ನಿರ್ಣಯೋ೭ಯಂ ಕ್ರಮೇಣ ತು ॥
ತಥಾ ಪ್ರದರ್ಶಯಿಷ್ಯಾಮಸ್ತದ್ವಾಕ್ಯೈರೇವ ಸರ್ವಶಃ ॥ ೫೭ ॥

ಅ ॥ (ಶ್ರೀಹರಿಯ) ಮಹಿಮೆಯೂ ತಾರತಮ್ಯಕ್ರಮವೂ ಇವುಗಳೇ ಮೊದಲಾಗಿವುಳ್ಳ ಈ ಎಲ್ಲಾ ಅರ್ಥವೂ (ಸರ್ವಶಾಸ್ತ್ರಗಳಲ್ಲಿಯೂ) ಹೇಳಿಸಿಕೊಳ್ಳಲ್ಪಟ್ಟಿದೆ. (ಈ ಅರ್ಥವು ಬೇರೆ ಎಲ್ಲಾ ಶಾಸ್ತ್ರಗಳಲ್ಲಿ ಮಾತ್ರ ಹೇಳಿಸಿಕೊಳ್ಳಲ್ಪಟ್ಟದ್ದಲ್ಲ; ಮತ್ತೆ ಭಾರತದಲ್ಲಿಯೂ ಹೇಳಿಸಿಕೊಳ್ಳಲ್ಪಟ್ಟಿದೆ ಎನ್ನುತಾರೆ). ಭಾರತದಲ್ಲಿಯೂ ಈಎಲ್ಲಾ ಅರ್ಥವೂ ಹೇಳಲ್ಪಟ್ಟಿದೆ. (ಆ ಅರ್ಥವು ಹೇಗೆ ತಿಳಿಯುತ್ತದೆನ್ನುವ ಆಶಂಕೆಯನ್ನು ಪರಿಹರಿಸುತ್ತಾ ಸಂದಿಗ್ಧಗಳಾದ ಭಾರತ ವಾಕ್ಯಗಳನ್ನು ಭಾರತವಾಕ್ಯಗಳಿಂದಲೇ ನಿರ್ಣಯಿಸುತ್ತೇನೆನ್ನುವ ಪ್ರತಿಜ್ಞೆಯನ್ನು ಪುನಃ ಸ್ಮೃತಿ ಪಥಕ್ಕೆ ತರುತ್ತಾರೆ.) ಯಾವ ಮಹಿಮೆಯು, ತಾರತಮ್ಯಕ್ರಮವು–ಇವುಗಳೇ ಮೊದಲಾಗಿವುಳ್ಳ ಯಾವ ಎಲ್ಲಾ ಅರ್ಥವು ಹೇಳಲ್ಪಟ್ಟಿದೋ, ಆ ನಿರ್ಣಯವು ಭಾರತದಲ್ಲಿಯೂ ಕೂಡ ಯಾವ ಪ್ರಕಾರದಿಂದ ಹೇಳಲ್ಪಟ್ಟಿದೋ ಹಾಗೆಯೇ ಎಲ್ಲಾ ಪ್ರಕಾರಗಳನ್ನೂ ಭಾರತವಾಕ್ಯಗಳಿಂದಲೇ ತೋರಿಸುತ್ತೇವೆ. ॥೫೭॥

ಈಗ ಭಾರತದ ಆದ್ಯ ಶ್ಲೋಕದಲ್ಲಿಯೇ ಸರ್ವೋತ್ತಮತ್ವಮೊದಲಾದ ಎಲ್ಲಾ ಮಹಿಮೆಗಳನ್ನೂ ನಿರೂಪಿಸಿರುವುದರಿಂದ ಉಪಕ್ರಮವನ್ನು ಅನುಸರಿಸಿ ಎಲ್ಲಾ ಗ್ರಂಥಗಳನ್ನೂ ಕೂಡಿಸಬೇಕಾದುದರಿಂದ ಲಕ್ಷ ಭಾರತವಾಕ್ಯಗಳೂ ಶ್ರೀ ಹರಿಯ ಮಹಿಮೆಯನ್ನು ಪ್ರತಿಪಾದಿಸತಕ್ಕವುಗಳು ಎನ್ನುವ ಅಭಿಪ್ರಾಯದಿಂದ ಸರ್ವರೂ ಗ್ರಂಥಾದಿಯಲ್ಲಿ ಮಂಗಲವನ್ನು ಮಾಡಬೇಕು ಎಂದು ಲೋಕಶಿಕ್ಷೆಗಾಗಿ ಭಾರತದ ಆದಿಯಲ್ಲಿ ಮಾಡಿದ ಮಂಗಲ ಪದ್ಯವನ್ನು ಹೇಳುತ್ತಾರೆ.

ಮೂ ॥ ನಾರಾಯಣಂ ಸುರಗುರುಂ ಜಗದೇಕನಾಥಂ
ಭಕ್ತಪ್ರಿಯಂ ಸಕಲಲೋಕನಮಸ್ಕೃತಂ ಚ ॥
ತ್ರೈಗುಣ್ಯವರ್ಜಿತಮಜಂ ವಿಭುಮಾದ್ಯಮೀಶಂ
ವಂದೇ ಭವಘ್ನಮಮರಾಸುರಸಿದ್ಧವಂದ್ಯಂ ॥ ೫೮ ॥

ಅ ॥ ದೇವತೆಗಳಿಗೆ ಗುರುವಾದವನು (ಅಂದರೆ ಜ್ಞಾನೋಪದೇಶಕನು), ಜಗತ್ತಿಗೆ ಮುಖ್ಯಸ್ವಾಮಿಯು, ಭಕ್ತರಿಗೆ ಪ್ರಿಯನಾದನು, ಎಲ್ಲಾ ಜನರಿಂದಲೂ ನಮಸ್ಕರಿಸಿಕೊಳ್ಳಲ್ಪಟ್ಟವನು, ಸತ್ವ-ರಜಸ್ತಮೋಗುಣವಿರಹಿತನು, ಉತ್ಪತ್ತಿ ಶೂನ್ಯನು, ಸರ್ವಸಮರ್ಥನು,(ಸರ್ವರಿಗೂ)ಆದಿಭೂತನು, ಸರ್ವಸ್ವಾಮಿಯು, ಸಂಸಾರವನ್ನು ಪರಿಹರಿಸುವವನು, ದೇವತೆಗಳೂ,

ಅಸುರಕುಲೋತ್ಪನ್ನರಾದ ಪ್ರಹ್ಲಾದಾದಿಗಳೂ, ಸಿದ್ಧರೂ— ಇವರುಗಳಿಂದ ನಮಸ್ಕರಿಸಿಕೊಳ್ಳಲ್ಪಡತಕ್ಕವನೂ ಮತ್ತು ಸ್ತೋತ್ರಮಾಡಿಸಿಕೊಳ್ಳಲ್ಪಡತಕ್ಕವನೂ ಅಥವಾ ಸಾಮಾನ್ಯ ದೇವತೆಗಳೂ, ತತ್ವಾಭಿಮಾನಿಗಳಾದ ದೇವತೆಗಳೂ, ಮುಕ್ತರೂ ಇವರುಗಳಿಂದಲೂ ವಂದ್ಯನು. ಅಥವಾ ತತ್ವಾಭಿಮಾನಿಗಳಾದ, ಮುಕ್ತರಾದ ದೇವಾದಿಗಳಿಂದಲೂ ವಂದ್ಯನು. ಇಂತಹ ಶ್ರೀನಾರಾಯಣನನ್ನು ನಮಸ್ಕರಿಸುತ್ತೇನೆ ॥ ೫೮ ।

ಆ ಶ್ಲೋಕವನ್ನು ವ್ಯಾಖ್ಯಾನ ಮಾಡುತ್ತಾರೆ—

ಮೂ ॥ **ಜ್ಞಾನಪ್ರದಃ ಸ ಭಗವಾನ್ಕಮಲಾವಿರಿಂಚಿ (ಚ)**
ಶರ್ವಾದಿಪೂರ್ವಜಗತೋ ನಿಖಿಲಾದ್ವರಿಷ್ಠಃ
ಭಕ್ತ್ಯೈವ ತುಷ್ಯತಿ ಹರಿಪ್ರಣವತ್ವನೇವ
ಸರ್ವಸ್ಯ ಧರ್ಮ ಇತಿ ಪೂರ್ವವಿಭಾಗಸ್ಥಃ ॥ ೫೯ ॥

ಅ ॥ (ಸುರುಗುರುಂ-ಎನ್ನುವುದರ ಅರ್ಥವು) ಲಕ್ಷ್ಮೀದೇವಿಯು, ಬ್ರಹ್ಮನು, ರುದ್ರನು ಇವರೇ ಮೊದಲಾದ ಜಗತ್ತಿಗೆ ಜ್ಞಾನೋಪದೇಶಕನು, (ಜಗದೇಕನಾಥಂ-ಎನ್ನುವುದರ ಅರ್ಥವು) ನಿಖಿಲ ಜಗತ್ತಿನಿಂದಲೂ ಅತಿಶಯವಾಗಿ ಶ್ರೇಷ್ಠನು, ದುಷ್ಟಸಂಹಾರಕನು ಇಂತಹ ಪೂಜ್ಯನಾದ ಶ್ರೀ ಪರಮಾತ್ಮನು. (ಭಕ್ತಪ್ರಿಯಂ-) ಭಕ್ತಿಯಿಂದಲೇ ತುಷ್ಟನಾಗುತ್ತಾನೆ. (ಅಂತೂ 'ಸರ್ವಂ ವಾಕ್ಯಂ ಸಾಧಾರಣಂ' ಎನ್ನುವ ನ್ಯಾಯದಿಂದ ಅಭಕ್ತರಾದ ಅಸುರರಲ್ಲಿ ಪ್ರೀತಿಯಿಲ್ಲದಿರುವುದರಿಂದಲೂ ಶ್ರೀ ನಾರಾಯಣನು ಭಕ್ತರಿಗೇನೇ ಪ್ರಿಯನು ಎಂದು ಸಿಗುತ್ತದೆ. ಹೇತುಗರ್ಭ ವಿಶೇಷಣಬಲದಿಂದ ಭಕ್ತಿಯಿಂದಲೇ ಸಂತುಷ್ಟನಾಗುತ್ತಾನೆಂದು ಸಿದ್ಧಿಸುತ್ತದೆ). (ಭಗವತ್ಪ್ರಿಯರಾದ ಬ್ರಹ್ಮಾದಿಗಳ ಹೃದಯದಲ್ಲಿರತಕ್ಕ ಭಕ್ತಿಯನ್ನು ಹೇಗೆ ತಿಳಿಯಬೇಕೆನ್ನುವ ಶಂಕೆಯನ್ನು ಪರಿಹರಿಸುವುದಕ್ಕಾಗಿ ಶ್ರೀಹರಿಯು ಪರಿಹಾರರೂಪದಿಂದ ಸರ್ವದಾ ಶಿರಸ್ಸಿನಲ್ಲಿ ಕರಸಂಪುಟವನ್ನು ಧರಿಸು (ಮಾಡು)ತ್ತಿರುವ ಬ್ರಹ್ಮಾದಿಗಳ ನಮಸ್ಕಾರದಿಂದಲೇ ಅನುಮೇಯಿಸಬೇಕೆನ್ನುವ ಅಭಿಪ್ರಾಯದಿಂದ ಪ್ರಯುಕ್ತವಾದ 'ಸಕಲಲೋಕನಮಸ್ಕೃತಂ' ಚ ಎನ್ನುವ ಪದದ ತಾತ್ಪರ್ಯವನ್ನು ಹೇಳುತ್ತಾರೆ). ಎಲ್ಲರಿಗೂ ಶ್ರೀಹರಿಯಲ್ಲಿ ಬಗ್ಗಿಕೊಂಡು ಇರುವುದೇ ಮುಖ್ಯವಾದ ಧರ್ಮವು. ಹೀಗೆ ಪೂರ್ವಾರ್ಧದಲ್ಲಿರತಕ್ಕ ತಾತ್ವರ್ಯಾರ್ಥವು ಹೇಳಲ್ಪಟ್ಟಿತು.

ವಿಶೇಷಾಂಶ— (1) 'ಧರ್ಮಃ' ಎಂದು ಹೇಳಿರುವುದರಿಂದ ಹೇಗೆ ಸಂಧ್ಯಾವಂದನವನ್ನು ಮಾಡದಿದ್ದರೆ ಪ್ರತ್ಯವಾಯವು ಇದೆಯೋ, ಹಾಗೆಯೇ ಶ್ರೀಹರಿಗೆ ನಮಸ್ಕಾರವನ್ನು ಮಾಡದಿದ್ದರೂ ಪ್ರತ್ಯವಾಯವಿದೆ ಎಂದು ಸೂಚಿತವಾಯಿತು. (2) 'ಸಕಲಲೋಕನಮಸ್ಕೃತಂ' ಎಂದು ಹೇಳಿದೆ, 'ಸಕಲಲೋಕನಮಸ್ಕೃತಂ' ಎಂದು ಹೇಳಿ, ನಮಸ್ಕಾರವನ್ನು ಮಾಡಬೇಕೆಂದೂ ಸೂಚಿಸಿರುವುದರಿಂದ ನಮಸ್ಕಾರವೂ ಧರ್ಮವೆಂದು ಲಬ್ಧವಾಯಿತು. (3) ಶ್ರುತಿಯಿಂದ ಮಾಡಬೇಕೆಂದು ವಿಹಿತವಾದ ಕರ್ಮವೇ ಧರ್ಮವು. ಆದುದರಿಂದಲೇ **'ಭೂಯಿಷ್ಠಾಂತೇ ನಮ ಉಕ್ತಿಂ ವಿಧೇಮ'** ಎನ್ನುವ ಶ್ರುತಿಯು. ಅದರಲ್ಲಿಯೂ ಶ್ರೀಹರಿಯ ನಮಸ್ಕಾರವೇ ಮುಖ್ಯ ಧರ್ಮವು ಎನ್ನುವ ಅಭಿಪ್ರಾಯದಿಂದ 'ಹರಿಪ್ರಣವತ್ವಮೇವ' ಎಂದು ಹೇಳಿರುವರು. (4) ನಮಸ್ಕಾರಕ್ಕೆ ಯಾಗಾದಿಗಳಂತೆ ಅಧಿಕಾರಿ ವಿಶೇಷವನ್ನು ಹೇಳದೆ ಇರುವುದರಿಂದ ಸ್ತ್ರೀ ಶೂದ್ರ–ಚಂಡಾಲಾದಿಗಳಿಗೂ ನಮಸ್ಕಾರವು ಯೋಗ್ಯವಾಗಿರುವುದರಿಂದ ನಮಸ್ಕಾರವು ಸರ್ವರಿಗೂ ಧರ್ಮವೇ ॥೫೯॥

ಕ್ರೋಧಾದಿಗಳಿಂದ ಯುಕ್ತನಾದವನ ನಮಸ್ಕಾರವು ಅಶಕ್ಯವು. ಎಂದರೆ ವಂದ್ಯತ್ವಕ್ಕೆ ಉಪಯುಕ್ತವಾದ ಕ್ರೋಧಾದ್ಯಭಾವವನ್ನು ಹೇಳುತ್ತಾರೆ—

ಮೂ ॥ ನಿರ್ದೋಷಕಃ ಸ್ಮೃತಿವಿಹೀನ ಉದಾರಪೂರ್ಣ
ಸಂವಿದ್ಗುಣಃ ಪ್ರಥಮಕೃತ್ಸಕಲಾತ್ಮಶಕ್ತಿಃ ॥
ಮೋಕ್ಷೈಕಹೇತುರಸುರೂಪಸುರೈಶ್ಚ ಮುಕ್ತೈರ್ವಂದ್ಯಃ
ಸ ಏಕ ಇತಿ ಚೋಕ್ತಮಥೋತ್ತರಾರ್ಧೇ ॥ ೬೦ ॥

ಅ ॥ ದೋಷಲೇಶಾತ್ಯಂತಾಭಾವವುಳ್ಳವನು, ಸಂಸಾರವಿರಹಿತನು., ಉತ್ಕೃಷ್ಟಗಳಾದ ಪರಿಪೂರ್ಣಗಳಾದ ಜ್ಞಾನ–ಆನಂದ ಮೊದಲಾದ ಗುಣಗಳುಳ್ಳವನು, ಪ್ರಥಮದಲ್ಲಿಯೇ ಜಗತ್ತನ್ನು ಸೃಷ್ಟಿಸುವನು. ಸಮಸ್ತವಾದ, ಸ್ವಭಾವಭೂತವಾದ ಶಕ್ತಿಯುಳ್ಳವನು, ಮೋಕ್ಷಕ್ಕೆ ಮುಖ್ಯ ಕಾರಣನು, ತತ್ತ್ವಾಭಿಮಾನಿ ದೇವತೆಗಳಾದ ಮುಕ್ತರಿಂದಲೂ ವಂದ್ಯನು. ಇಂತಹ ಸೃಷ್ಟಿ–ಸ್ಥಿತಿ ಮೊದಲಾದುವುಗಳನ್ನು ಮಾಡತಕ್ಕ ಶ್ರೀ ನಾರಾಯಣನು ಸ್ವಗತಭೇದರಹಿತನು· ಇತಿ ಚ–ಹೀಗೆ, ಉತ್ತರಾರ್ಧೇ–ಉತ್ತರಾರ್ಧದಲ್ಲಿ, ಉಕ್ತಂ–ಹೇಳಿಸಿಕೊಳ್ಳಲ್ಪಟ್ಟಿದೆ. ಅಥ–ಆದ ಪ್ರಯುಕ್ತ ವಿಷ್ಣುವಿಗೆ ಸರ್ವೋತ್ತಮತ್ವವನ್ನು ಹೇಳಿದ್ದು ಅತಿಮಂಗಲವು.

ವಿಶೇಷಾಂಶ— (1) 'ತ್ರೈಗುಣ್ಯವರ್ಜಿತಂ' ಎನ್ನುವುದರ ಅರ್ಥವು ನಿರ್ದೋಷಕಃ ಎನ್ನುವುದು. ಅಜ್ಞಾನ, ರಾಗ, ದ್ವೇಷ, ನಿದ್ರಾ, ಆಲಸ್ಯ, ದುಃಖ, ಬಂಧಮೊದಲಾದ ದೋಷಗಳಿಗೆ ಸತ್ವ, ರಜಸಮೋಗುಣಗಳೇ ಮೂಲವಾಗಿರುವುದರಿಂದ ಆ ಸತ್ವಾದಿ ಗುಣಗಳೇ ಇಲ್ಲದಿರಲು ನಿರ್ದೋಷತ್ವವೇ ಸಿದ್ಧಿಸುವುದು. ಜನನವೆಂದರೆ ಮತ್ತೂ ಮತ್ತು ಹುಟ್ಟುವಿಕೆ, ಅಂದರೆ ಪುನರ್ಭವಾಖ್ಯಸಂಸಾರವು. ಅದು ಇಲ್ಲದಿರುವವನು ಎನ್ನುವ ವ್ಯುತ್ಪತ್ತಿಯಿಂದ, ಅಜಂ=ಎನ್ನುವ ಪದದಿಂದ ಸಂಸಾರದಿಂದ ವಿರಹಿತತ್ವವೇ ಸಿದ್ಧಿಸುತ್ತದೆ. (2) 'ಭೂಪ್ರಾಪ್ತೌ' ಎನ್ನುವ ಧಾತುವಿನ ದೆಶೆಯಿಂದ ಪ್ರಾಪ್ಯರ್ಥವುಳ್ಳವುಗಳಿಗೆ ಜ್ಞಾನಾರ್ಥಕತ್ವವಿದ್ದುದರಿಂದ ಭವನವೆಂದರೆ ಜ್ಞಾನವು; ಭೂಃ ಭೂಮಿತ್ವವು ಸರ್ವಾಧಾರತ್ವವು, ಪ್ರಕಾಶತ್ವವು, ಸರ್ವತ್ರ ಭವನವು, ವ್ಯಾಪ್ತಿಯು; ಭವನವು ತಿರೋಭವನವು ಅಂದರೆ ಅದೃಶ್ಯತ್ವವು. ಭವನವು ಆವಿರ್ಭಾವವು, ಪ್ರಸನ್ನತ್ವವು. ಇದು ಮೊದಲಾದ ವ್ಯುತ್ಪತ್ತಿಯಿಂದ, ಭೂಪದದಿಂದ ಜ್ಞಾನಾದಿ ಸದ್ಗುಣಗಳು ಹೇಳಲ್ಪಡುತ್ತವೆ. ವಿ–ಉತ್ಕೃಷ್ಟಗಳಾದ ಸರ್ವೋತ್ತಮಗಳಾದ ವಿ-ಪೂರ್ಣಗಳಾದ ಸಂವಿದಾದಿಗುಣಗಳು ಯಾರಿಗೋ ಅವನು ವಿಭುಃ ಎನ್ನುವ ವ್ಯುತ್ಪತ್ತಿಯಿಂದ ವಿಭುಪದದಿಂದ ಉದಾರಸಂವಿದ್ಗುಣತ್ವವೇ ಉಕ್ತವಾಯಿತು. (3) ಆದಿಯಲ್ಲಿ ತನ್ನ ಹೊಟ್ಟೆಯಿಂದ ಜಗತ್ತನ್ನು ಯಾಪಯತಿ-ಹೊರಪಡಿಸುತ್ತಾನೆನ್ನುವ ವ್ಯುತ್ಪತ್ತಿಯಿಂದ 'ಆದ್ಯಃ' ಎನ್ನುವ ಪದದಿಂದ ಪ್ರಥಮದಲ್ಲಿಯೇ ಸೃಷ್ಟಿಸುವವನು ಎನ್ನುವುದು ಸಿಗುತ್ತದೆ. (4) 'ಈಶ ಶಕ್ತೌ' ಎನ್ನುವ ಧಾತುವಿನ ದೆಶೆಯಿಂದ ಸಂಕೋಚದಲ್ಲಿ ಕಾರಣವಿಲ್ಲದಿರುವುದರಿಂದಲೂ, ವ್ಯತ್ಕ್ರಾದಿಗಳಿಂದ ಶಕ್ತಿಯನ್ನು ಕೊಡತಕ್ಕದ್ದು ಬೇರೆ ಇಲ್ಲದಿರುವುದರಿಂದಲೂ ಈಶ ಶಬ್ದದಿಂದ ಸಕಲಾತ್ಮಶಕ್ತಿತ್ವವು ಸಿದ್ಧವಾಗುತ್ತದೆ. (5) ಸಂಸಾರವನ್ನು ಪರಿಹರಿಸುವವನು ಸಂಸಾರಕರ್ಮದಲ್ಲಿ ಕೊಲ್ಲುವವನೇ ಮುಖ್ಯನು; ಬೇರೆ ಎಲ್ಲವೂ ಸಹಕಾರಿ ಕಾರಣವು. ಆದಕಾರಣ ಮೋಕ್ಷಕ್ಕೆ ಮುಖ್ಯಕಾರಣನು ಎನ್ನುವುದು 'ಭವಘ್ನಂ' ಎನ್ನುವುದರ ಅರ್ಥವು. (6) 'ಅಸೂನ್ ರಮಯಂತಿ ಹರ್ಷಯಂತೀತಿ ಅಸುರಾಃ'=ತತ್ತ್ವಾಭಿಮಾನಿದೇವತೆಗಳು. 'ಅಸೂನ್ ರೂಪಯಂತೀತಿ ಅಸೂರೂಪಾಃ', ಎಂದು ಫಲಿತಾರ್ಥವನ್ನು ಹೇಳಿದ್ದು 'ಸಿದ್ಧಾಶ್ಚ ತೇ ಅಸುರಾಶ್ಚ,

ಅಸುರಸಿದ್ಧಾಃ ಅಸುರಸಿದ್ಧಾಶ್ಚ ತೇ ಅಮರಾಶ್ಚ– ಅಮರಾಸುರಸಿದ್ಧಾಃ – ಅಗ್ನ್ಯಾಹಿ ತಾದಿಗಳಂತೆ ಉತ್ತರಪದಕ್ಕೆ ಪೂರ್ವನಿಪಾತವು. ಅವರಿಂದ ವಂದ್ಯನು, ಇವರ ಅರ್ಥವನ್ನು 'ಅಸುರೋಪಸುರೈಶ್ಚ ಮುಕ್ತೈರ್ವಂದ್ಯಃ' ಎನ್ನುವುದರಿಂದ ಹೇಳಿದರು. (7) 'ಸಕಲಲೋಕ ನಮಸ್ಕೃತಂ' ಎನ್ನುವುದರಿಂದ ಅಮುಕ್ತರಾದ ದೇವತೆಗಳಿಂದ ವಂದ್ಯತ್ವವು ಹೇಳಿಸಿಕೊಳ್ಳ ಲ್ಪಡುತ್ತದೆ. ಇಲ್ಲಿ ಸಿದ್ಧಪದಮಹಿಮೆಯಿಂದ ಮುಕ್ತರಾದ ದೇವಾದಿಗಳಿಂದ ವಂದ್ಯತ್ವವು ಹೇಳ ಲ್ಪಡುತ್ತದೆ. ಆದ ಪ್ರಯುಕ್ತ ಪೌನರುಕ್ತ್ಯವಿಲ್ಲ. (8) 'ಅನಾನುಭೂತೀರವಧೂನ್ವಾನಃ' ಎನ್ನುವ ಶ್ರುತಿಯಿಂದ ಅಸುರರಿಗೆ ಮುಕ್ತಿಯು ಇಲ್ಲದಿರುವುದರಿಂದ 'ಅಸೂನ್ ರಮಯಂತಿ' ಎನ್ನುವ ವ್ಯುತ್ಪತ್ತಿಯಿಂದ ಅಸುರರು ಎಂದರೆ ತತ್ತ್ವಾಭಿಮಾನಿದೇವತೆಗಳು. ತತ್ತ್ವಾಭಿಮಾನಿ ದೇವತೆಗಳು ಅನ್ನಪಾನಾದಿಗಳಿಂದ ಸೌಖ್ಯವನ್ನು ಕೊಟ್ಟರೆ ಪ್ರಾಣಗಳಿಗೆ ಹರ್ಷವಾಗುತ್ತದೆ. ಇಲ್ಲವಾದರೆ ದೈನ್ಯ್ಯ, ಮಾಂದ್ಯ, ಖಾಸಾದಿ ರೂಪಗಳಿಂದ ಅವುಗಳಿಗೂ ಚೆನ್ನಾಗಿ ಸಂಚಾರವು ಆಗುವುದಿಲ್ಲ. ಆದಕಾರಣ ಅಸುರ ಪದದಿಂದ ತತ್ತ್ವಾಭಿಮಾನಿದೇವತೆಗಳೆಲ್ಲರೂ ಹೇಳಿಸಿ ಕೊಳ್ಳ ಲ್ಪಡುತ್ತಾರೆ. (9) 'ಕ್ವಚಿದಂತರಿತಾನಪಿ' ಎನ್ನುವ ವಚನದೆಶೆಯಿಂದ ಈ ಆದ್ಯಪದ್ಯವನ್ನು ಸಹಿಸದೆ ಇರುವವರು ಕೆಲವರು ಆದಿಯಲ್ಲಿ ಬರಿಯುವುದಿಲ್ಲ. ಕೇರಳದೇಶದಲ್ಲಿರತಕ್ಕ ಪುರಾತನ ಪುಸ್ತಕಗಳಲ್ಲಿ ಈಗಲೂ ಕಾಣುತ್ತದೆ. ಇಲ್ಲವಾದರೆ ಸರ್ವಲೋಕಾಚಾರ್ಯರಾದ ವ್ಯಾಸರು ಲಕ್ಷಪರಿಮಿತ ಗ್ರಂಥವನ್ನು ಮಾಡುವವರು ಗ್ರಂಥಾದಿಯಲ್ಲಿ ಲೋಕಶಿಕ್ಷೆಗಾಗಿ ಮಂಗಲಪದ್ಯ ವನ್ನು ಏಕೆ ಹಾಗೆ ಮಾಡಲಿಲ್ಲಲಾರರು? ಏಕೆಂದರೆ– ಅಲ್ಪವಾದ ಭಾಗವತ ಗ್ರಂಥದಲ್ಲಿಯೂ, ಹರಿವಂಶಾದಿಗಳಲ್ಲಿಯೂ **'ಸತ್ಯಂ ಪರಂ ಧೀಮಹಿ, 'ಸೋನಾದಿರ್ವಾಸುದೇವಃ ಶಮು ಯತು ದುರಿತಂ ಜನ್ಮ ಜನ್ಮಾರ್ಜಿತಂ ನಃ'** ಎಂದು ಲೋಕಶಿಕ್ಷೆಗಾಗಿ ಮಂಗಲವನ್ನು ಮಾಡಿರುವರು. ಆದ ಪ್ರಯುಕ್ತ ಈ ಮಹಾಗ್ರಂಥದಲ್ಲಿ ಸಕಲ ಶಿಷ್ಟರಿಗೂ ಗುರುಗಳಾದ ವ್ಯಾಸರು ಮಂಗಲವನ್ನು ನಿಶ್ಚಯವಾಗಿಯೂ ಮಾಡಿರುವರು ಎಂದು ತಿಳಿಯಬೇಕು ॥೬೦॥

~~ಹೀಗೆ ಉತ್ತರಾರ್ಧ–ಪೂರ್ವಾರ್ಧಗಳಲ್ಲಿ ಮುಕ್ತ–ಅಮುಕ್ತರನ್ನು ಗ್ರಹಣಮಾಡಲಿಕ್ಕೆ ಕಾರಣ~~

ವೇನೆಂದು ಶಂಕಿಸಿದರೆ—

ಮೂ ॥ ನಮ್ಯತ್ವನುಕ್ತನುಭಯಶ್ರಯತಸ್ತತೋಽಸ್ಯ
ಮುಕ್ತೈರಮುಕ್ತಕ(ಕ್ತಿಗ)ಗಣೈಶ್ಚ ವಿನಮ್ಯತೋಕ್ತಾ ॥
ಇತ್ಥಂ ಹಿ ಸರ್ವಗುಣಪೂರ್ತಿರನುಷ್ಯ ವಿಷ್ಣೋಃ
ಪ್ರಸ್ತಾವಿತಾ ಪ್ರಥಮತಃ ಪ್ರತಿಜಾನತೈವ ॥ ೬೧ ॥

ಅ ॥ (ಪೂರ್ವಾರ್ಧದಲ್ಲಿಯೂ ಉತ್ತರಾರ್ಧದಲ್ಲಿಯೂ) ಎರಡರಲ್ಲಿಯೂ ಯಾವ ಕಾರಣ ದೆಶೆಯಿಂದ ನಮ್ಯತ್ವವು ಹೇಳಲ್ಪಟ್ಟಿದ್ದೋ, (ತತಃ=) ಆದಕಾರಣ ಎರಡು ಕಡೆಗಳಲ್ಲಿಯೂ ಶ್ರೀ ಹರಿಗೆ ನಮ್ಯತ್ವವನ್ನು ಹೇಳಿರುವುದರಿಂದ, ಈ ಹರಿಗೆ ಮುಕ್ತರಿಂದಲೂ ಅಮುಕ್ತರ ಸಮುದಾಯಗಳಿಂದಲೂ ವಿಶೇಷಾಕಾರವಾಗಿ ನಮ್ಯತ್ವವು ಹೇಳಲ್ಪಟ್ಟಿದೆ, ಪ್ರತಿಜ್ಞೆಯನ್ನು ಮಾಡತಕ್ಕ ವ್ಯಾಸರಿಂದ ಪ್ರಥಮ ವಾಕ್ಯದಲ್ಲಿಯೇ ಹಿಂದೆ ಹೇಳಿದ ಪ್ರಕಾರದಿಂದ ಈ ವಿಷ್ಣುವಿಗೆ ಸರ್ವ ಗುಣಗಳಿಂದ ಪರಿಪೂರ್ಣತ್ವವು ಉಪಕ್ರಾಂತವಾಗಿದೆ.

ವಿಶೇಷಾಂಶ—ಹಾಗದರೆ ಮಂಗಲಾಚರಣ ವಾಕ್ಯವು ಅರ್ಥನಿಶ್ಚಾಯಕವಾಗಲಾರದು. ಅದು ಇಷ್ಟದೇವತಾ ಸ್ತುತಿಪ್ರತಿಪಾದಿತವು. ಪ್ರತಿಪಾದ್ಯವಾದ ಅರ್ಥಕ್ಕೆ ನಿಶ್ಚಾಯಕವಾಗಲಾತದು.

ಎಂದರೆ— ಭಾರತವು ಶಾಸ್ತ್ರವಾಗಿದೆ. ಶಾಸ್ತ್ರವು ಪ್ರತಿಜ್ಞಾತವಾದ ಅರ್ಥವನ್ನು ಪ್ರತಿಪಾದಿಸೆತಕ್ಕುದು. ಭಾರತದಲ್ಲಿ ಬೇರೆ ಪ್ರತಿಜ್ಞಾವಾಕ್ಯವಿಲ್ಲ. ಆದಕಾರಣ ಇದುವೇ ಮಂಗಲ ಪ್ರತಿಪಾದಕವೂ ಪ್ರತಿಜ್ಞಾವಾಕ್ಯವೂ ಆಗಿದೆ. ಆದಕಾರಣ ಹೇಳಿದ್ದು ಯುಕ್ತವು ॥೬೧॥

ಮುಕ್ತರಿಂದಲೂ ಅಮುಕ್ತರಿಂದಲೂ ವಂದ್ಯನಾಗಿರುತ್ತಾನೆನ್ನುವಲ್ಲಿ ಸ್ಪಷ್ಟವಾಗಿ ಭಾರತ ವಚನವನ್ನು ಹೇಳುತ್ತಾರೆ—

ಮೂ ॥ **ಕೃಷ್ಣೋ ಯಜ್ಞೈರಿಜ್ಯತೇ ಸೋಮಪೂರ್ತೈಃ**
ಕೃಷ್ಣೋ ವೀರೈರಿಜ್ಯತೇ ವಿಕ್ರಮದ್ಭಿಃ ॥
ಕೃಷ್ಣೋ ವನ್ಯೈರಿಜ್ಯತೇ ಸಂಮೃಶಾನೈಃ
ಕೃಷ್ಣೋ ಮುಕ್ತೈರಿಜ್ಯತೇ ವೀತಮೋಹೈಃ ॥ ೬೨ ॥

ಅ ॥ ಶ್ರೀ ನಾರಾಯಣನು ಸೋಮಪಾನದಿಂದ ಪವಿತ್ರೀಕೃತರಾದ ಅಥವಾ ಸೋಮ ಪಾನದಿಂದ ಶುದ್ಧಿಯನ್ನು ಇಚ್ಛಿಸುವ ಯಾಗ ಮಾಡುವವರಿಂದ ಯಜ್ಞಗಳಿಂದ, ಪೂಜಿಸಿಕೊಳ್ಳಲ್ಪಡುತ್ತಾನೆ. ಪರಾಕ್ರಮವನ್ನು ಮಾಡುವ, ವೀರರಾದ ರಾಜರಿಂದ, ಶ್ರೀ ನಾರಾಯಣನು ಪೂಜಿಸಿಕೊಳಲ್ಪಡುತ್ತಾನೆ. (ಅಂದರೆ **'ಧರ್ಮ್ಯಾದ್ಧಿ ಯದ್ಧಾಚ್ಛ್ರೇಯೋಽನ್ಯತ್ ಕ್ಷತ್ರಿಯಸ್ಯ ನ ವಿದ್ಯತೇ'**। ಎನ್ನುವ ವಚನದ್ದೆಶೆಯಿಂದ ಯುದ್ಧಾಖ್ಯವಾದ ಸ್ವಧರ್ಮದಿಂದ ಪೂಜಿಸಿಕೊಳ್ಳಲ್ಪಡುತ್ತಾನೆ.) (ವಾದಿರಾಜೀಯ- * ಸಂಶಮಾನೈಃ-) ಚೆನ್ನಾಗಿ ವೇದಶಾಸ್ತ್ರವನ್ನು ವಿಚಾರ ಮಾಡುವ, ಅಥವಾ ಸಂಮೃಶಾನೈಃ-ಚೆನ್ನಾಗಿ ವಿಷ್ಣುವಿಚಾರಶೀಲರಾದ, ವನದಲ್ಲಿರತಕ್ಕ ಯತಿಗಳಿಂದ ಮತ್ತು ಜ್ಞಾನಪ್ರಸ್ಥರಿಂದಲೂ, ಶ್ರೀ ನಾರಾಯಣನು, ಜ್ಞಾನ-ಯಜ್ಞದಿಂದ ಪೂಜಿಸಿಕೊಳ್ಳಲ್ಪಡುತ್ತಾನೆ. ಹೋಗಲ್ಪಟ್ಟ ಹರಿಜ್ಞಾನಪ್ರತಿಬಂಧಕವಾದ ಅಜ್ಞಾನವುಳ್ಳ, ಅಥವಾ ಪ್ರತಿಬಂಧಕವು ನಿವೃತ್ತವಾದರೆ ಸ್ವಾಭಾವಿಕವಾಗಿಯೇ ಜ್ಞಾನವು ಆವಿರ್ಭೂತವಾಗಿರುವುದರಿಂದ ಜ್ಞಾನವುಳ್ಳವರು, ಈತನು **ಮುಕ್ತರಿಂದ ಪೂಜಿಸಿಕೊಳ್ಳಲ್ಪಡುತ್ತಾನೆ.**

ವಿಶೇಷಾಂಶ (1) 'ಋಚಾಂ ತ್ವಃ ಪೋಷಮಾಸ್ತೇ' ಇತ್ಯಾದಿ ಶ್ರುತಿಗಳದ್ದೆಶೆಯಿಂದ ಋಕ್ಪೋಷಣ, ಸಾಮಗಾನ, ಭಾಗವತ ಮೊದಲಾದ ಪೌರುಷೇಯ ಗ್ರಂಥಗಳ ಅಭ್ಯಾಸ, ಧ್ಯಾನ ಮೊದಲಾದವುಗಳಿಂದ ಪೂಜಿಸಿಕೊಳ್ಳಲ್ಪಡುತ್ತಾನೆ. (2) ಮುಕ್ತಾಮುಕ್ತ ಪೂಜ್ಯತ್ವವನ್ನು ಉಪಸಂಹಾರದಲ್ಲಿ ಹೇಳಿರುವುದರಿಂದ ಉಪಕ್ರಮದಲ್ಲಿಯೂ ಮುಕ್ತಾಮುಕ್ತ ಪೂಜ್ಯತ್ವವನ್ನೇ ಇಟ್ಟುಕೊಳ್ಳಬೇಕು ॥೬೨॥

ಭವಘ್ನಂ ಎನ್ನುವುದರಿಂದ ಶ್ರೀ ಹರಿಯು ವಿವಿಧವಾದ ಮೋಕ್ಷವನ್ನು ಕೊಡತಕ್ಕವನು ಎಂದು ವ್ಯಾಖ್ಯಾನಮಾಡಿರುವರು. ಅದನ್ನು ಭಾರತವಾಕ್ಯದಿಂದ ದೃಢೀಕರಿಸುತ್ತಾರೆ—

ಮೂ ॥ **ಸೃಷ್ಟ್ವಾ ಬ್ರಹ್ಮಾದಯೋ ದೇವಾ ನಿಹತಾ ಯೇನ ದಾನವಾಃ ॥**
ತಸ್ಮೈ ದೇವಾದಿದೇವಾಯ ನಮಸ್ತೇ ಶಾರ್ಙ್ಗಧಾರಿಣೇ ॥ ೬೩ ॥

ಅ ॥ ಯಾರಿಂದ ಬ್ರಹ್ಮಾದಿದೇವತೆಗಳು ಸೃಷ್ಟಿಸಲ್ಪಟ್ಟಿರುವರೋ, ಯಾರಿಂದ ದಾನವರು (ರಾಕ್ಷಸಾದಿಗಳೆಲ್ಲರೂ) ಸಂಹೃತರಾಗುತ್ತಾರೋ, ಅಂತಹ ದೇವತೆಗಳಿಗೆ ಸ್ವಾಮಿಯಾದ ಶಾರ್ಙ್ಗ ಧಾರಿಯಾದ ನಿನಗೋಸ್ಕರ ನಮಸ್ಕಾರವು ॥೬೩॥

* ಸಂಶಮಾನೈಃ ಎಂದು ವಾದಿರಾಜೀಯ ಪಾಠವು.

ಸೃಷ್ಟ ನಿಹತ ಶಬ್ದಗಳನ್ನು ಅಪೂರ್ವಾರ್ಥವಾಗಿ ವ್ಯಾಖ್ಯಾನಮಾಡುತ್ತಾ ಪ್ರಸಿದ್ಧವಾದ ಅರ್ಥವನ್ನು ಗ್ರಹಿಸಿದರೆ ಬಾಧಕವನ್ನೂ ಹೇಳುತ್ತಾರೆ—

ಮೂ ॥ ಸೃಷ್ಟ್ಯೃತ್ವಂ ದೇವಾನಾಂ ಮುಕ್ತಿಸ್ರಷ್ಟೃತ್ವಮುಚ್ಯತೇ ನಾನ್ಯತ್ ॥
ಉತ್ಪತ್ತಿರ್ದೈತ್ಯಾನಾಮಪಿ ಯಸ್ಮಾತ್ಸನ್ಮತಾ ವಿಶೇಷೋಽಯಂ ॥೬೪॥

ಅ ॥ ದೇವತೆಗಳಿಗೆ ಸ್ರಷ್ಟೃತ್ವವೆಂದರೆ ಮುಕ್ತಿಯ ಸ್ರಷ್ಟೃತ್ವವು. (ಅಂದರೆ ಮುಕ್ತಿ ಪ್ರದತ್ವವು) ಹೇಳಲ್ಪಡುತ್ತದೆ. (ಏವಂಚ ಸೃಷ್ಟರಾದವರು ಬಂಧ ಧ್ವಂಸಾಖ್ಯವಾದ ಮುಕ್ತಿಸೃಷ್ಟಿಯನ್ನು ಮಾಡುವವರು ಎಂದು ಮೂಲಾರ್ಥವು) ಅನ್ಯತ್–ದೇಹಯೋಗರೂಪವಾದ ಸ್ರಷ್ಟೃತ್ವವು ಹೇಳಲ್ಪಡುವುದಿಲ್ಲ. ಮೂಲಕಾರಣದ್ದೆಶೆಯಿಂದ ದೇಹೋತ್ಪತ್ತಿಯು ದೈತ್ಯರಿಗೂ ಸಮ್ಮತವಾಗಿದೆಯೋ (ಆದಕಾರಣ) ಈ ಹಿಂದೆ ಹೇಳಿದ ಮುಕ್ತಿಸ್ರಷ್ಟೃತ್ವರೂಪ ವಿಶೇಷವೇ (ಗ್ರಾಹ್ಯವಾಗಿದೆ.)

ವಿಶೇಷಾಂಶ— ಇದರಿಂದ ಯಥಾಸ್ಥಿತವಾದ ಅರ್ಥವನ್ನು ಇಟ್ಟುಕೊಂಡರೆ ಬ್ರಹ್ಮಾದಿ ದೇವತೆಗಳು ಸೃಷ್ಟರಾದರು ಎಂದು ವಿಶಿಷ್ಟ ಉಕ್ತಿಯು ಕೂಡುವುದಿಲ್ಲ ಎಂದು ಬಾಧಕವು ಸೂಚಿತವಾಯಿತು॥೬೪॥

ಮೂ ॥ ಅಥ ಚ ದೈತ್ಯಹತಿಸ್ತಮಸಿ ಸ್ಥಿರಾ
ನಿಯತಸಂಸ್ಥಿತಿರೇವ ನ ಚಾನ್ಯಥಾ ॥
ತನುವಿಭಾಗಕೃತಿಃ ಸಕಲೇಷ್ವಿಯಂ
ನ ಹಿ ವಿಶೇಷಕೃತಾ ಸುರದೈತ್ಯಗಾ ॥೬೫॥

ಅ ॥ ಯಾವ ಕಾರಣದ್ದೆಶೆಯಿಂದ ತನುವಿಭಾಗಕೃತಿರೂಪವಾದ ದೇಹವಿಯೋಗವನ್ನು ಮಾಡತಕ್ಕ ಹನನವು ಸಮಸ್ತರಾದ ದೇವ ಮನುಷ್ಯ ದೈತ್ಯರಲ್ಲಿ ಸಮವಾಗಿದೆಯೋ, ಸುರರಲ್ಲಿಯೂ ದೈತ್ಯರಲ್ಲಿಯೂ ಇರತಕ್ಕ ಹನನವು ಪ್ರೀತಿ-ದ್ವೇಷರೂಪ ವಿಶೇಷನಿಮಿತ್ತವಾದದು ಅಲ್ಲವೋ, ಆ ಕಾರಣದೆಶೆಯಿಂದಲೇ ದೈತ್ಯರ ಹನನವು ತಮಸ್ಸಿನಲ್ಲಿ ಸ್ಥಿರ (ನಿತ್ಯ) ವಾದ ನಿಯಮದಿಂದ ಅವಸ್ಥಿತಿಯೇ. ಬೇರೆ ಪ್ರಕಾರ (ದೇಹವಿಯೋಗವು) ಅಲ್ಲ ॥೬೫॥

ಕೇವಲ ನಮ್ಮ ವ್ಯಾಖ್ಯಾನವು ಯುಕ್ತಿಸಿದ್ಧವಲ್ಲ. ಮತ್ತೆ ಶ್ರೀ ಹರಿಯು ದೇವತೆಗಳಿಗೆ ಇಷ್ಟವನ್ನು ಸಾಧಿಸಿಕೊಡತಕ್ಕವನು, ಅಸುರರಿಗೆ ಅನಿಷ್ಟವನ್ನು ಸಾಧಿಸಿಕೊತಕ್ಕವನು, ಈ ಪ್ರಮೇಯವು ಭಾರತ ಕಥೆಯನ್ನು ಪರ್ಯಾಲೋಚಿಸಿದರೂ ಸ್ಪಷ್ಟವಾಗಿ ಸಿದ್ಧವಾಗಿದೆ ಎನ್ನುತ್ತಾರೆ—

ಮೂ ॥ ತಮಿಮಮೇವ ಸುರಾಸುರಸಂಚಯೇ
ಹರಿಕೃತಂ ಪ್ರವಿಶೇಷಮುದೀಕ್ಷಿತುಂ ॥
ಪ್ರತಿ ವಿಭಜ್ಯ ಚ ಭೀಮಸುಯೋಧನೌ
ಸ್ವಪರಪಕ್ಷಭಿದಾ ಕಥಿತಾ ಕಥಾ ॥೬೬॥

ಅ ॥ ಸುರ-ಅಸುರ ಸಮುದಾಯದಲ್ಲಿ ಶ್ರೀ ಹರಿಯಿಂದ ಮಾಡಲ್ಪಟ್ಟ ಆ ಈ ಪೂರ್ವೋಕ್ಷವಾದ ವಿಶೇಷವನ್ನು ತೋರಿಸುವುದಕ್ಕಾಗಿ ಭೀಮದುರ್ಯೋಧನರನ್ನು ಪ್ರತ್ಯೇಕಪ್ರತ್ಯೇಕ

ಇರೋಣದರಿಂದ ವಿಭಾಗಮಾಡಿಕೊಂಡು ಸ್ವಪಕ್ಷ-ಪರಪಕ್ಷಗಳಿಗೆ ಜಯ, ಪರಾಜಯಾಖ್ಯವಾದ ಫಲಭೇದವುಳ್ಳ ಕಥೆಯು ಹೇಳಲ್ಪಟ್ಟಿತು.

ವಿಶೇಷಾಂಶ — ದುರ್ಯೋಧನನ ಸಂಕಟವೂ ಭೀಮನ ಹರ್ಷವೂ ಕಾಣುತ್ತಿರಲು ವ್ಯಾಸರಿಗೂ ಅಭಿರುಚಿಯು ಹುಟ್ಟುತ್ತದೆ ಎಂದು ಸೂಚಿಸುವುದಕ್ಕಾಗಿ ಉದೀಕ್ಷಿತುಂ ಎಂದು ಅಣಿಜಂತಪ್ರಯೋಗವು ॥೬೬॥

ಈಗ ಗ್ರಂಥದ ಆದಿಯಲ್ಲಿ ಅವಾಂತರ ವಕ್ತೃಗಳಾದ ವೈಶಂಪಾಯನರು ಮಾಡಿದ ನಮಸ್ಕಾರ ವಸ್ತುನಿರ್ದೇಶಾತ್ಮಕವಾದ ಮಂಗಲವನ್ನು ಪ್ರತಿಪಾದಿಸತಕ್ಕ 'ನಮೋ· ಭಗವತೇ' ಎಂದಾರಂಭಿಸಿ, 'ಸರ್ವಾರ್ಥಾನ್ ಸಾಧಯಾಮ್ಯಹಂ' ಎಂಬುವ ಪರ್ಯಂತ ವಾಕ್ಯಗಳನ್ನು ಹೇಳುತ್ತಾರೆ—

ಮೂ ॥ **ನಮೋ ಭಗವತೇ ತಸ್ಮೈ ವ್ಯಾಸಾಯಾಮಿತತೇಜಸೇ ॥**
ಯಸ್ಯ ಪ್ರಸಾದಾದ್ವಕ್ಷ್ಯಾಮಿ ನಾರಾಯಣಕಥಾಮಿಮಾಂ ॥೬೭॥

ಅ ॥ ಯಾವ ಶ್ರೀ ಹರಿಯ ಅನುಗ್ರಹದಿಂದ ಈ ಶ್ರೀ ನಾರಾಯಣನ ಕಥೆಯನ್ನು ಹೇಳುವೆನೋ, ಅಂತಹ ಉತ್ಕೃಷ್ಟ ಗುಣಗಳುಳ್ಳ, ಅಪರಿಚಿತ ಶಕ್ತಿಗಳುಳ್ಳ ಶ್ರೀವೇದವ್ಯಾಸರಿಗೆ ನಮಸ್ಕಾರವು ॥೬೭॥

ಶ್ರೀ ವಿಷ್ಣುವೇ ಸರ್ವ ಭಾರತಪ್ರತಿಪಾದ್ಯನು ಎನ್ನುವಲ್ಲಿ ಭಾರತವಾಕ್ಯವನ್ನೇ ಉದಾಹರಿಸುತ್ತಾರೆ—

ಮೂ ॥ **ವಾಸುದೇವಸ್ತು ಭಗವಾನ್ ಕೀರ್ತ್ಯತೇಽತ್ರ ಸನಾತನಃ ॥**
ಪ್ರತಿಬಿಂಬಮಿವಾದರ್ಶೇ ಯಂ ಪಶ್ಯಂತ್ಯಾತ್ಮನಿ ಸ್ಥಿತಂ ॥೬೮॥

ಅ ॥ (ಋಷಿಗಳು) ಜೀವನದಲ್ಲಿರತಕ್ಕ ಯಾವ ಶ್ರೀ ಹರಿಯನ್ನು ಆದರ್ಶದಲ್ಲಿ (ಕನ್ನಡಿಯಲ್ಲಿ) ಪ್ರತಿಬಿಂಬವನ್ನೆಂಬುತೆ ನೋಡುತ್ತಾರೋ, ಅಂತಹ ಸನಾತನನಾದ ಪೂಜ್ಯನಾದ ಶ್ರೀ ಕೃಷ್ಣನೇ ಈ ಭಾರತದಲ್ಲಿ ಪ್ರತಿಪಾದಿಸಿಕೊಳ್ಳಲ್ಪಡುತ್ತಾನೆ ॥೬೮॥

ಶ್ರೀ ವಿಷ್ಣುಸರ್ವೋತ್ತಮತ್ವ ವಿಷಯದಲ್ಲಿ ಆದ್ಯಂತಗಳಲ್ಲಿ ಇರತಕ್ಕ ಪದ್ಯವನ್ನು ಹೇಳುತ್ತಾರೆ—

ಮೂ ॥ **ನಾಸ್ತಿ ನಾರಾಯಣಸಮಂ ನ ಭೂತಂ ನ ಭವಿಷ್ಯತಿ ॥**
ಏತೇನ ಸತ್ಯವಾಕ್ಯೇನ ಸರ್ವಾರ್ಥಾನ್ಸಾಧಯಾಮ್ಯಹಂ ॥೬೯॥

ಅ ॥ ಶ್ರೀ ನಾರಾಯಣನಿಗೆ ಸಮಾನವಾದ ವಸ್ತುವು (ಈಗ) ಇರುವುದಿಲ್ಲ. ಮೊದಲೂ ಇರಲಿಲ್ಲ. ಮುಂದೆಯೂ ಇರಲಾರದು. ಈ ಯಥಾವಸ್ಥಿತವಾದ ಅರ್ಥವನ್ನು ಪ್ರತಿಪಾದಿಸತಕ್ಕ ವಾಕ್ಯದಿಂದ ವಿಷ್ಣುಸರ್ವೋತ್ತಮತ್ವ ಮೊದಲಾದ ಎಲ್ಲಾ ಅರ್ಥಗಳನ್ನು ಸಾಧಿಸುವೆನು ॥೬೯॥

ಈಗ ಗ್ರಂಥೋಪಕ್ರಮದಲ್ಲಿ ಮಂಗಲಪದ್ಯಗಳಿಂದ ಪ್ರಸ್ತಾವಿಸಿದ ಪ್ರಮೇಯಕ್ಕೆ ಅನುಕೂಲವಾದ ಪ್ರಮೇಯವನ್ನು ಉತ್ತರ ಗ್ರಂಥದಲ್ಲಿ ವಿಸ್ತಾರವಾಗಿ ತೋರಿಸಬೇಕು. ಅದಕ್ಕೆ ವಿರುದ್ಧವಾದುದನ್ನು ತೋರಿಸಬಾರದು. ಆದಕಾರಣ ಲಕ್ಷಭಾರತ ಶ್ಲೋಕಗಳಿಗೂ ಶ್ರೀ ಹರಿಯ ಸರ್ವೋತ್ತಮತ್ವದಲ್ಲಿಯೇ ತಾತ್ಪರ್ಯವು ಎನ್ನುವ ತಾತ್ಪರ್ಯದಿಂದ ಹೇಳುತ್ತಾರೆ—

ಮೂ ॥ ಆದ್ಯಂತಯೋರಿತ್ಯನದತ್ಸ ಯಸ್ಮಾ-
ದ್ವ್ಯಾಸಾತ್ಮಕೋ ವಿಷ್ಣುರುದಾರಶಕ್ತಿ ಃ ॥
ತಸ್ಮಾತ್ಸಮಸ್ತಾ ಹರಿಸದ್ಗುಣಾನಾಂ
ನಿರ್ಣೀತ ಭಾರತಗಾ ಕಥೈಷಾ ॥೭೦॥

ಅ ॥ (ಮಂಗಲಪದ್ಯಗಳ) ಆದಿಯಲ್ಲಿಯೂ ಅಂತ್ಯದಲ್ಲಿಯೂ ಉತ್ಕೃಷ್ಟವಾದ ಶಕ್ತಿಯುಳ್ಳ ಆ ವ್ಯಾಸರೂಪಿಯಾದ ಶ್ರೀ ವಿಷ್ಣುವು ಯಾವ ಕಾರಣದಿಶೆಯಿಂದ ಈ ಪ್ರಕಾರವಾಗಿ (ನಾಸ್ತಿ ನಾರಾಯಣಸಮಂ ಎನ್ನುವ ಶ್ಲೋಕವನ್ನು) ಹೇಳಿರುವರೋ, ಆದಕಾರಣ ಸಮಸ್ತವಾದ, ಭಾರತದಲ್ಲಿರತಕ್ಕ (ನಿತ್ಯತ್ವ-ಅಪರಿಚ್ಛಿನ್ನತ್ವಾದಿ ಪ್ರಬಂಧರೂಪವಾದ ಕಥೆಯು ಶ್ರೀ ಹರಿಯ ನಿರ್ದುಷ್ಟಗಳಾದ ಗುಣಗಳನ್ನೇ ಪ್ರತಿಪಾದಿಸತಕ್ಕುದು ಎಂದು (ವ್ಯಾಸರಿಂದ) ನಿರ್ಣಯವು ಮಾಡಲ್ಪಟ್ಟಿದೆ.

ವಿಶೇಷಾಂಶ— (1) ಆದಿಯಲ್ಲಿ 'ನಾಸ್ತಿ ನಾರಾಯಣಸಮಂ' ಎನ್ನುವ ಪರ್ಯಂತ ಪದ್ಯಗಳಿಂದ ಹರಿ ಸರ್ವೋತ್ತಮತ್ವವನ್ನುಪಕ್ರಮಿಸಿ ಮಧ್ಯಮಧ್ಯದಲ್ಲಿಯೂ '**ಮಯಿ ಸರ್ವಮಿದಂ ಪ್ರೋತಂ ಸೂತ್ರೇ ಮಣಿಗಣಾ ಇವ । ಮತ್ತಃ ಪರತರಂ ನಾನ್ಯತ್ಕಿಂಚಿದಸ್ತಿ ಧನಂಜಯ ॥ ಯಸ್ಮಾತ್ ಕ್ಷರಮತೀತೋಹಮಕ್ಷರಾದಪಿ ಚೋತ್ತಮಃ । ಅತೋಽಸ್ಮಿ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ ॥ಸ ಸುರಾಸುರಗಂಧರ್ವಂ ಸ ಯಕ್ಷೋರಗರಾಕ್ಷಸಂ । ಜಗದ್ವಶೇ ವರ್ತತೇದಂ ಕೃಷ್ಣಸ್ಯ ಸ ಚರಾಚರಂ ॥ ವಿಶ್ವಂ ವಿಷ್ಣುರ್ವಷಟ್ಕಾರಃ ಭೂತಭವ್ಯಭವತ್ಪ್ರಭುಃ ಭೂತಕೃತ್ ॥ ಪೂತಾತ್ಮಾ ಪರಮಾತ್ಮಾ ಚ ಮುಕ್ತಾನಾಂ ಪರಮಾ ಗತಿಃ । ಏಷ ನಿಷ್ಕಂಟಕಃ ಪಂಥಾಃ ಯತ್ರ ಸಂಪೂಜ್ಯತೇ ಹರಿಃ । ಕುಪಥಂ ತಂ ವಿಜಾನೀಯಾತ್ ಗೋವಿಂದರಹಿತಾಗಮಂ । ಅನಾಶ್ರಿತ್ಯೋಚ್ಛ್ರಯೋ ನಾಸ್ತಿ ಮುಖ್ಯಮಾಶ್ರಯ ಮಾಶ್ರಯೇ॥ ರುದ್ರಂ ಸಮಾಶ್ರಿತಾ ದೇವಾ ರುದ್ರೋ ಬ್ರಹ್ಮಾಣಮಾಶ್ರಿತಃ । ಬ್ರಹ್ಮಾ ಮಾಮಾಶ್ರಿತೋ ನಿತ್ಯಂ ನಾಹಂ ಕಚಿದುಪಾಶ್ರಿತಃ ॥** ಇತ್ಯಾದಿಗಳಿಂದ ಹರಿಸರ್ವೋತಮತ್ವವನ್ನೇ ವಿಸ್ತರಿಸಿರುವರು. **ಸತ್ಯಂ ಸತ್ಯಂ ಪುನಸ್ಸತ್ಯಮುದ್ಧೃತ್ಯ ಭುಜಮುಚ್ಯತೇ । ನೇದ ಶಾಸ್ತ್ರಾತ್ಪರಂ ನಾಸ್ತಿ ನ ದೈವಂ ಕೇಶವಾತ್ಪರಂ** ಎಂದು ಅಂತ್ಯದಲ್ಲಿಯೂ ಆಶ್ವರ್ಯಪರ್ವದಲ್ಲಿಯೂ ಹರಿಸರ್ವೋತ್ತಮತ್ವವನ್ನೇ ಸದೃಷ್ಟಾಂತವಾಗಿ ಶಪಥಪೂರ್ವಕವಾಗಿ ಬಾಹುಗಳನ್ನು ಎತ್ತಿಕೊಂಡು ಹರಿಸರ್ವೋತ್ತಮತ್ವವನ್ನೇ ಉಪಪಾದಿಸಿರುವರು. ಆದಿ-ಮಧ್ಯ-ಅವಸಾನ ಪದಗಳನ್ನು ಅನುಸರಿಸಿಯೇ ಎಲ್ಲಾ ಗ್ರಂಥಗಳನ್ನು ಕೂಡಿಸತಕ್ಕುದದರಿಂದ ಸಪಾದ ಲಕ್ಷ ಭಾರತ ವಾಕ್ಯಗಳಿಗೂ ಶ್ರೀ ಹರಿಯ ಸರ್ವೋತ್ತಮತ್ವದಲ್ಲಿಯೇ ತಾತ್ಪರ್ಯವು. ಉಪಕ್ರಮ, ಉಪಸಂಹಾರ, ಅಭ್ಯಾಸ, ಅಪೂರ್ವತಾ, ಫಲ ಅರ್ಥವಾದ, ಉಪಪತ್ತಿಗಳು ಮಹಾತಾತ್ಪರ್ಯನಿರ್ಣಾಯಕಗಳೆಂದು ಸಕಲ ವಿದ್ವಜ್ಜನರಿಗೂ ಸಮ್ಮತವಾಗಿದೆ ॥೭೦॥

ಈಗ ಭಾರತದ ಮಧ್ಯದಲ್ಲಿರತಕ್ಕ ಬಹು ವಾಕ್ಯಗಳಿಂದ ಅವತಾರಮೊದಲಾದವುಗಳಲ್ಲಿ ಕೆಲ ಕೆಲವು ಕಡೆ ತೋರಿಸಿದ ಭೇದ ವೇಧ ಮೋಹಾದಿದೋಷಗಳಿಗೆ ಅಸುರಜನರನ್ನು ಮೋಹಿಸುವುದಕ್ಕಾಗಿ ಎಂದು ಪ್ರತಿಪಾದಿಸತಕ್ಕ ವಾಕ್ಯಗಳಿಂದಲೂ ಶ್ರೀ ಹರಿಗೆ ಸರ್ವೋತ್ತಮತ್ವಾದಿ ಮಹಿಮೆಯನ್ನು ಜನನ-ಮರಣ ಮೊದಲಾದ ಸಕಲ ದೋಷಗಳಿಗೆ ಅತಿದೂರನೂ ಆಗಿರುತ್ತಾನೆ ಎಂದು ದೃಢೀಕರಿಸುವುದಕ್ಕಾಗಿ ಮೇಲಿನ ಗ್ರಂಥ ಸಂದರ್ಭವು.

ಮೂ ॥ ಸತ್ಯಂ ಸತ್ಯಂ ಪುನಃ ಸತ್ಯಮುದ್ಧೃತ್ಯ ಭುಜಮುಚ್ಯತೇ ॥
ವೇದಶಾಸ್ತ್ರಾತ್ಪರಂ ನಾಸ್ತಿ ನ ದೈವಂ ಕೇಶವಾತ್ಪರಂ ॥೭೧॥

ಅ ॥ ಭುಜವನ್ನು ಎತ್ತಿ ಸತ್ಯವು ಸತ್ಯವು ಪುನಃ ಸತ್ಯವೆಂದು ಹೇಳಲ್ಪಡುತ್ತದೆ. (ಪ್ರತಿಪಾದಕಗಳಲ್ಲಿ) ಋಗಾದಿ ವೇದಗಳೂ ಮಿಮಾಂಸಾಶಾಸ್ತ್ರವೂ ಇವುಗಳ ದೆಶೆಯಿಂದ ಉತ್ಕೃಷ್ಟವಾದುದು ಇಲ್ಲ. (ಪ್ರತಿಪಾದ್ಯರಲ್ಲಿ) ಕೇಶವನ ದೆಶೆಯಿಂದ ಉತ್ಕೃಷ್ಟವಾದುದು ದೈವವು (ಪ್ರತಿಪಾದ್ಯವಾದುದು) ಇಲ್ಲ. ॥೭೧॥

ಮೂ ॥ ಆಲ್ಲೋಡ್ಯ ಸರ್ವಶಾಸ್ತ್ರಾಣಿ ವಿಚಾರ್ಯ ಚ ಪುನಃ ಪುನಃ ॥
ಇದಮೇಕಂ ಸುನಿಷ್ಪನ್ನಂ ಧ್ಯೇಯೋ ನಾರಾಯಣಃ ಸದಾ ॥೭೨॥

ಅ ॥ ಸಾಮಾನ್ಯವಾಗಿ ನೋಡಿ ಅಥವಾ ಮಥನಮಾಡಿ ಮತ್ತೂ ಮತ್ತು ಸರ್ವಶಾಸ್ತ್ರಗಳನ್ನೂ ಉಪಕ್ರಮ ಉಪಸಂಹಾರಾದಿ ಲಿಂಗಗಳಿಂದ ವಿಚಾರಮಾಡಿಯೇ (ನನ್ನಿಂದ) ಯಾವಾಗಲೂ ಶ್ರೀ ನಾರಾಯಣನು ಧ್ಯೇಯನು, ಹೀಗೆ ಇದೊಂದು ಮುಖ್ಯವಾದುದು ಚೆನ್ನಾಗಿ ನಿಶ್ಚಿತವಾಗಿದೆ.॥೭೨॥

ವಿಷ್ಣುಸ್ಮರಣ ಅಸ್ಮರಣಗಳಿಂದಲೂ ಎಲ್ಲಾ ವಿಧಿನಿಷೇಧಗಳೂ ಸಿದ್ಧವಾಗುತ್ತಿರಲು ವಿಷ್ಣುವೇ ಸರ್ವೋತ್ತಮನು ಎನ್ನುವ ಅರ್ಥವನ್ನು ಪ್ರತಿಪಾದಿಸತಕ್ಕ ವಚನವನ್ನು ಹೇಳುತ್ತಾರೆ—

ಮೂ ॥ ಸ್ಮರ್ತವ್ಯಃ ಸತತಂ ವಿಷ್ಣುರ್ವಿಸ್ಮರ್ತವ್ಯೋ ನ ಜಾತುಚಿತ್ ॥
ಸರ್ವೇ ವಿಧಿನಿಷೇದಾಃ ಸ್ಯುರೇತಯೋರೇವ ಕಿಂಕರಾಃ ॥೭೩॥

ಅ ॥ ಎಲ್ಲಾ ವಿಧಿ ನಿಷೇಧಗಳೂ (ಅಂದರೆ 'ಜ್ಯೋತಿಷ್ಟೋಮೇನ ಸ್ವರ್ಗಕಾಮೋ ಯಜೇತ' ಇತ್ಯಾದಿ ವಿಧಿಗಳೂ, ಸ್ನಾನ–ಸಂಧ್ಯಾವಂದನಾದಿ ವಿಧಿಗಳೂ 'ಬ್ರಾಹ್ಮಣೊ ನ ಹಂತವ್ಯಃ' ಇತ್ಯಾದಿ ನಿಷೇಧಗಳೂ ಎಲ್ಲವೂ), ಇವುಗಳಿಗೇನೇ (ಅಂದರೆ) ಶ್ರೀವಿಷ್ಣುವು ಯಾವಾಗಲೂ ಸ್ಮರಣಾರ್ಹನು, ಯಾವಾಗಲೂ ವಿಸ್ಮರಿಸಿಕೊಳ್ಳಲ್ಪಡಲಿಕ್ಕೆ ಅರ್ಹನಲ್ಲ. ಈ ಪ್ರಕಾರವಾದ ವಿಧಿನಿಷೇಧಗಳ ದಾಸೀಭೂತಗಳೇ.

ವಿಶೇಷಾಂಶ (1) ಶ್ರೀ ವಿಷ್ಣುವನ್ನೇ ಸರ್ವದಾ ಸ್ಮರಿಸುತ್ತಾ ಇರಬೇಕು. ಮರೆಯಬಾರದು ಎನ್ನುವ ಈ ವಿಧಿನಿಷೇಧಗಳೇ ಸಾಕ್ಷಾತ್ ಮುಕ್ತಿಗೆ ಅಂಗಗಳಾಗಿವೆ. ಬೇರೆ ವಿಧಿಗಳು ಈ ವಿಧಿಯಲ್ಲಿ ವಿಹಿತಗಳಾದ ಸ್ಮರಣಗಳಿಗೆ ಯೋಗ್ಯವಾದ, ಚಿತ್ತಾಖ್ಯವಾದ ಮನೆಯನ್ನು ಶೋಧಿಸತಕ್ಕವುಗಳಾದುದರಿಂದ ಕಿಂಕರಗಳಾಗಿವೆ. ನಿಷೇಧಗಳಾದರೂ ಈ ನಿಷೇಧಕ್ಕೆ ಪ್ರತಿಯೋಗಿಭೂತಗಳಾದ ವಿಸ್ಮರಣಗಳಿಗೆ ಸಹಕಾರಿಭೂತಗಳಾದ ದೋಷಗಳನ್ನು ನಿವಾರಣಮಾಡುವುದರಿಂದ ಸಾಕ್ಷಾತ್ತಾಗಿ ರಾಮನಿಗೆ ವಿರೋಧಿಭೂತನಾದ ರಾವಣನಿಗೆ ಸಹಾಯಭೂತರಾದ ದೈತ್ಯರ ಸಮೂಹಗಳನ್ನು ನಾಶಪಡಿಸತಕ್ಕ ಕಪಿಗಳ ಸಮೂಹದಂತೆ ಪರಂಪರೆಯಾಗಿ ಹೀಗೆ ನಿಷೇಧಗಳಿಗೆ ಕಿಂಕರಗಳಾಗಿವೆ. ॥೭೩॥

ಸಂಪೂರ್ಣವಾಗಿ ಇತರರಿಂದ ಅಜ್ಞೇಯನು ಎನ್ನುವಲ್ಲಿ ಭಾರತವಾಕ್ಯಗಳೆರಡನ್ನು ಉದಾಹರಿಸುತ್ತಾರೆ—

ಮೂ ॥ ಕೋ ಹಿ ತಂ ವೇದಿತುಂ ಶಕ್ತೋ ಯೋ ನ ಸ್ಯಾತ್ತದ್ವಿಧೋ ಪರಃ ॥
ತದ್ವಿಧಶ್ಚಾಪರೋ ನಾಸ್ತಿ ತಸ್ಮಾತ್ತಂ ವೇದ ನ ಸ್ವಯಂ ॥೭೪॥

ಕೋ ಹಿ ತಂ ವೇದಿತುಂ ಶಕ್ತೋ ನಾರಾಯಣಮನಾನುಯಂ ॥
ಋತೇ ಸತ್ಯವತೀಸೂನೋಃ ಕೃಷ್ಣಾದ್ವಾ ದೇವಕೀಸುತಾತ್॥೭೫॥

ಅ ॥ ಯಾವ ಇತರರಾದ ಬ್ರಹ್ಮಾದಿಗಳು ನಾರಾಯಣನಿಗೆ ಸಮಾನಿಕರು ಆಗಲಾರರೋ, ಅಂತಹ ಬ್ರಹ್ಮಾದಿಗಳು ಆ ಶ್ರೀ ಹರಿಯನ್ನು ತಿಳಿಯಲಿಕ್ಕೆ ಯಾರು ಶಕ್ತರು ಆದಾರು (ಅಂದರೆ ಯಾರೂ ಶಕ್ತರು ಆಗಲಾರರು. ಅಂತೂ ಬ್ರಹ್ಮಾದಿಗಳು ವಿಷ್ಣುವಿನ ಸಕಾಶದ್ದೆಶೆಯಿಂದ ಅತಿ ನೀಚರಾದಪ್ರಯುಕ್ತ ಶ್ರೀ ವಿಷ್ಣುವನ್ನು ತಿಳಿಯಲಿಕ್ಕೆ ಅವರಿಗೆ ಸಾಮರ್ಥ್ಯವಿರುವುದಿಲ್ಲ.) (ಹಾಗಾದರೆ ಬ್ರಹ್ಮಾದಿಗಳಿಂದಲೂ ಉತ್ತಮನು ಯಾವನಾದರೂ ಶ್ರೀ ವಿಷ್ಣುವಿಗೆ ಸದೃಶನು ತಿಳಿಯಲಿಕ್ಕೆ ಶಕ್ತನು ಇರಬಹುದು ಎಂದರೆ—) (ಬ್ರಹ್ಮಾದಿಗಳಿಂದಲೂ))ಇತರರಾದವರು ಶ್ರೀ ನಾರಾಯಣನಿಗೆ ಸಮಾನಿಕರು ಇಲ್ಲವೇ ಇಲ್ಲ. (ಅಂದರೆ ಯಾರು ಔದ್ಧತ್ಯದಿಂದ ಆಶಂಕಿತರಾಗುತ್ತಾರೋ ಅಂತಹವರೂ ಇಲ್ಲ.) ತಸ್ಮಾತ್ – ಬೇರೆ ಯಾರೂ ತಿಳಿಯತಕ್ಕವರು ಇಲ್ಲದಿರುವುದರಿಂದಲೂ ಸರ್ವಥಾ ಅವೇದ್ಯವಾದುದು ವಸ್ತುವೇ ಆಗದೇನೇ ಹೋಗಬೇಕಾಗುವುದರಿಂದಲೂ, ಆ ನಾರಾಯಣನನ್ನು, ಆ ನಾರಾಯಣನು ತಾನೇ, ವೇತ್ತಿ- ತಿಳಿಯುತ್ತಾನೆ.

ಸತ್ಯವತೀ ದೇವಿಯ ಪುತ್ರನಾದ ಶ್ರೀವ್ಯಾಸ ಕೃಷ್ಣನ ದೆಶೆಯಿಂದಾಗಲೀ, ದೇವಕೀದೇವಿಯ ಪುತ್ರನಾದ ಶ್ರೀ ಕೃಷ್ಣನ ದೆಶೆಯಿಂದಾಗಲೀ ಪೊರತು ನಿರ್ದೋಷನಾದ ಆ ಶ್ರೀ ನಾರಾಯಣನನ್ನು ತಿಳಿಯಲಿಕ್ಕೆ ಯಾರು ಸಮರ್ಥನು ಆದಾನು? ॥೭೪॥೭೫॥)

ಸ್ವಾತಂತ್ರ್ಯಾದಿರೂಪವಾದ ಅರ್ಥದಲ್ಲಿ ಭಾರತವಾಕ್ಯವನ್ನು ಹೇಳುತ್ತಾರೆ—

ಮೂ ॥ ಅಪ್ರಮೇಯೋಽನಿಯೋಜ್ಯಶ್ಚ ಸ್ವಯಂ ಕಾಮಗಮೋ ವಶೀ ॥
ಮೋದತ್ಯೇಷ ಸದಾ ಭೂತೈರ್ಬಾಲಃ ಕ್ರೀಡನಕೈರಿವ ॥೭೬ ॥

ಅ ॥ ಸಾಕಲ್ಯವಾಗಿ ಅಜ್ಞೇಯನು, ಇತರರಿಂದ ಪ್ರೇರಿಸಿಕೊಳ್ಳಲ್ಪಡದಿರುವವನು, ತಾನೇ ಇಚ್ಛೆಯಿಂದ ಹೋಗುವನು, (ಅಂದರೆ ಸ್ವತಂತ್ರನು,) ಅಥವಾ ಸ್ವಯಂ=ಸ್ವತಂತ್ರನು, ಕಾಮಗಮಃ= ಸ್ವೇಚ್ಛಾಗಾಮಿಯು, ವಶೀ=ಇಂದ್ರಿಯನಿಗ್ರಹವುಳ್ಳವನು, ಅಥವಾ ಸರ್ವವನ್ನು ಅಧೀನದಲ್ಲಿಟ್ಟುಕೊಂಡವನು, ಇಂತಹ ಈ ಶ್ರೀ ಹರಿಯು, ಕ್ರೀಡಾಸಾಧನಗಳಾದ ಚೆಂಡು ಮೊದಲಾದುವುಗಳಿಂದ ಬಾಲಕನಂತೆ (ಅಂದರೆ ಬಾಲಕರು ಚೆಂಡು ಮೊದಲಾದವುಗಳಿಂದ ಆಡಿಕೊಂಡು ಹೇಗೆ ಹೃಷ್ಟರಾಗಿರುತ್ತಾರೋ ಹಾಗೆಯೇ) ಭೂತನಿಮಿತ್ತಗಳಿಂದ (ಅಂದರೆ ಜಗತ್ಸೃಷ್ಟಿ ವಿನಾಶಾದಿಗಳನ್ನು ಮಾಡುತ್ತಾ) ಯಾವಾಗಲೂ ಹೃಷ್ಟನಾಗಿರುತ್ತಾನೆ. (ಕೆಲವು ವೇಳೆ ಮಾತ್ರವಲ್ಲ)॥೭೬॥

ಶ್ರೀಹರಿಯು ಸಾಕಲ್ಯವಾಗಿ ಅಜ್ಞೇಯನು ಎನ್ನುವ ವಿಷಯದಲ್ಲಿಯೂ ಸರ್ವೋತ್ತಮನೆನ್ನುವ ವಿಷಯದಲ್ಲಿಯೂ, ಪ್ರಮಾಣವನ್ನು ಹೇಳುತ್ತಾರೆ—

ಮೂ ॥ ನ ಪ್ರಮಾತುಂ ಮಹಾಬಾಹುಃ ಶಕ್ಯೋಽಯಂ ಮಧುಸೂದನಃ ॥
ಪರಮಾತ್ಪರಮೇತಸ್ಮಾದ್ವಿಶ್ವರೂಪಾನ್ನ ವಿದ್ಯತೇ ॥೭೭॥

ಅ ॥ ಶ್ರೇಷ್ಠಗಳಾದ ದೀರ್ಘಗಳಾದ ಭುಜಗಳುಳ್ಳ ಈ ಮಧುಸೂದನನು ತಿಳಿಯಲಿಕ್ಕೆ ಶಕ್ಯನಲ್ಲ. ಈದಾವ ಸರ್ವೋತ್ತಮವಾದ ವಿಶ್ವರೂಪದೆಶೆಯಿಂದ ಉತ್ಕೃಷ್ಟವಾದುದು ಇಲ್ಲ. ॥೭೭॥

ಜನನ ಮೊದಲಾದ ದೋಷಗಳು ಕಂಡದರಿಂದ ನಿರ್ದೋಷತ್ವವು ಹೇಗೆಂದರೆ—

ಮೂ ॥ ವಸುದೇವಸುತೋ ನಾಯಂ ನಾಯಂ ಗರ್ಭೇಽವಸತ್ಪ್ರಭುಃ ॥
ನಾಯಂ ದಶರಥಾಜ್ಜಾತೋ ನ ಚಾಪಿ ಜನುದಗ್ನಿತಃ ॥೭೪॥

ಅ ॥ ಈ ಶ್ರೀ ಕೃಷ್ಣನು ವಸುದೇವನ ಮಗನಲ್ಲ. ಪ್ರಭುವಾದ ಈ ಶ್ರೀ ಹರಿಯು ಗರ್ಭದಲ್ಲಿ ಆವಾಸಮಾಡಲಿಲ್ಲ. ಈ ಶ್ರೀ ಹರಿಯು ದಶರಥನದೆಶೆಯಿಂದ ಹುಟ್ಟಿದವನಲ್ಲ. ಜಮದಗ್ನಿಯಿಂದ ಹುಟ್ಟಿದವನೂ ಅಲ್ಲ. ॥ ೭೪ ॥

ಜನನ ಮರಣ ವೇದಾದಿಗಳು ಇಲ್ಲವೆನ್ನುವಲ್ಲಿ ಪ್ರಮಾಣವಾಕ್ಯವನ್ನು ಹೇಳುತ್ತಾರೆ—

ಮೂ ॥ ಜಾಯತೇ ನೈವ ಕುತ್ರಾಪಿ ಮ್ರಿಯತೇ ಕುತ ಏವ ತು ॥
ನ ವಧ್ಯೋ ಮುಹ್ಯತೇ ನಾಯಂ ಬಧ್ಯತೇ ನೈವ ಕೇನಚಿತ್ ॥ ೭೯ ॥
ಕುತೋ ದುಃಖಂ ಸ್ವತಂತ್ರಸ್ಯ ನಿತ್ಯಾನಂದೈಕ ರೂಪಿಣಃ ॥ ೮೦ ॥

ಅ ॥ ಶ್ರೀ ಹರಿಯು ಎಲ್ಲಿಯೂ ದೇವಕ್ಯಾದಿಗಳಲ್ಲಿ ಹುಟ್ಟುವುದೇ ಇಲ್ಲವು. ಆದಕಾರಣ ಯಾವುದರಿಂದ ಮರಣವನ್ನು ಹೊಂದುತ್ತಾನೆ? (ಅಂದರೆ ಶರಮೊದಲಾದ ಕಾರಣಗಳಿಂದ ಮರಣವನ್ನು ಹೊಂದುವುದೇ ಇಲ್ಲ.) (ಶರಾದಿಗಳಿಂದ) ವಧ್ಯನೂ ಅಲ್ಲ. ಶ್ರೀ ಹರಿಯು ಮೋಹವನ್ನೂ ಹೊಂದುವುದೇ ಇಲ್ಲ. ಯಾವ ಪುರುಷನಿಂದಲೂ ಸಂಹೃತನಾಗುವುದೇ ಇಲ್ಲ. ನಿತ್ಯದಲ್ಲಿಯೂ ಕೇವಲ ಆನಂದವೇ ರೂಪವಾಗಿವುಳ್ಳ, ಸ್ವತಂತ್ರನಾದ ಶ್ರೀ ಹರಿಗೆ ದುಃಖವು ಯಾವುದರಿಂದ ಬಂದೀತು? (ಯಾವುದರಿಂದಲೂ ಬರಲಾರದು) ॥೭೯॥೮೦॥

ಮೂ ॥ ಈಶನ್ನಪಿ ಹಿ ದೇವೇಶ ಸರ್ವಸ್ಯ ಜಗತೋ ಹರಿಃ ॥
~~ಕರ್ಮಾಣಿ ಕುರುತೇ ನಿತ್ಯಂ ಕೀನಾಶ ಇವ ದುರ್ಬಲಃ ॥ ೮೧ ॥~~

ಅ ॥ ದೇವತೆಗಳಿಗೆ ಸ್ವಾಮಿಯಾದ ಶ್ರೀ ಹರಿಯು ಎಲ್ಲಾ ಜಗತ್ತಿಗೂ ಈಶ್ವರನಾದಾಗ್ಯೂ ದುರ್ಬಲನಾದ ಕೃಷೀವಲನಂತೆ, ಅಥವಾ ಕ್ಷುದ್ರಪುರುಷನಂತೆ ನಿತ್ಯದಲ್ಲಿಯೂ ಕರ್ಮಗಳನ್ನು (ಅಂದರೆ ಅರ್ಜುನನ ದೌತ್ಯ, ಬಲಿಯಾಚನ, ಅವರ ವಂದನ, ಸಂಧ್ಯಾವಂದನ ಮೊದಲಾದವುಗಳನ್ನು) ಮಾಡುತ್ತಾನೆ. ॥೮೧॥

ಮೂ ॥ ನಾತ್ಮಾನಂ ವೇದ ಮುಗ್ಧೋಽಯಂ ದುಃಖೀ ಸೀತಾಂ ಚ ಮಾರ್ಗತೇ ॥
ಬದ್ಧಃ ಶಕ್ರಜಿತೇತ್ಯಾದಿ ಲೀಲೈಷಾಽಸುರಮೋಹಿನೀ ॥ ೮೨ ॥

ಅ ॥ ಮೋಹಯುಕ್ತನು ಶ್ರೀ ಪರಮಾತ್ಮನನ್ನು ತಿಳಿಯುವುದಿಲ್ಲ. ಈತನು ದುಃಖವುಳ್ಳವನಾಗಿ ಸೀತಾದೇವಿಯನ್ನು ಹುಡುಕುತ್ತಾನೆ. ಇಂದ್ರಜಿತುವಿನಿಂದ ಕಟ್ಟಲ್ಪಟ್ಟನು, ಈದಾವ ಇದೇ ಮೊದಲಾಗಿವುಳ್ಳ ಕ್ರೀಡೆಯು ಅಸುರರನ್ನು ಮೋಹಿಸತಕ್ಕುದು. ॥೮೨॥

ಮೂ ॥ ಮುಹ್ಯತೇ ಶಸ್ತ್ರಪಾತೇನ ಭಿನ್ನತ್ವಗ್ರುಧಿರಸ್ರವಃ ॥
ಅಜಾನನ್ ಪೃಚ್ಛತಿ ಸ್ಮಾನ್ಯಾಂಸ್ತನುಂ ತ್ಯಕ್ತ್ವಾ ದಿವಂ ಗತಃ ॥ ೮೩ ॥
ಇತ್ಯಾದ್ಯಸುರಮೋಹಾಯ ದರ್ಶಯಾಮಾಸ ನಾಟ್ಯವತ್ ॥
ಅವಿದ್ಯಮಾನಮೇವೇಶಃ ಕುಹಕಂ ತದ್ವಿದುಃ ಸುರಾಃ ॥ ೮೪ ॥

ಅ ॥ ಶಸ್ತ್ರಪ್ರಹಾರದಿಂದ ಭಿನ್ನವಾದ ಚರ್ಮವುಳ್ಳವನಾಗಿ, ರಕ್ತದ ಪ್ರಸ್ರವಣವುಳ್ಳವನಾಗಿ ಮೋಹವನ್ನು ಹೊಂದುತ್ತಾನೆ. ತಾನು ತಿಳಿಯದೆ ಇದ್ದವನಾಗಿ ಇತರರನ್ನು ಕೇಳುತ್ತಾನೆ. ಶರೀರವನ್ನು ಬಿಟ್ಟು ಸ್ವರ್ಗವನ್ನು ಹೊಂದಿದನು, ಇದೇ ಮೊದಲಾಗಿವುಳ್ಳದ್ದನ್ನು ಇಲ್ಲದಿರುವುದನ್ನೇ ಕುಣಿಯತಕ್ಕ ಪುರುಷದಂತೆ ಸರ್ವಸಮರ್ಥನಾದ ಶ್ರೀ ಹರಿಯು ಅಸುರರನ್ನು ಮೋಹಿಸುವುದ ಕ್ಕಾಗಿ ತೋರಿಸುತ್ತಾನೆ. ದೇವತೆಗಳು ಆ ಹಿಂದೆ ಹೇಳಿದ್ದನ್ನು ಕಪಟವೆಂದು ತಿಳಿಯುತ್ತಾರೆ. ॥೮೩॥೮೪॥

ಮೂ ॥ ಪ್ರಾದುರ್ಭಾವಾ ಹರೇಃ ಸರ್ವೇ ನೈವ ಪ್ರಾಕೃತ(ಪ್ರಕೃತಿ)ದೇಹಿನಃ ॥
ನಿರ್ದೋಷ(ಷಾ)ಗುಣಸಂಪೂರ್ಣಾ ದರ್ಶಯಂತ್ಯನ್ಯಥೈವ ತು ॥೮೪॥
ದುಷ್ಟಾನಾಂ ಮೋಹನಾರ್ಥಾಯ ಸತಾಮಪಿ ಚ (ತು)ಕುತ್ರಚಿತ್ ॥
ಯಥಾಯೋಗ್ಯಫಲಪ್ರಾಪ್ತ್ಯೈ ಲೀಲೈಷಾ ಪರಮಾತ್ಮನಃ ॥೮೬॥

ಅ ॥ ಶ್ರೀ ಹರಿಯ ಎಲ್ಲಾ ಅವತಾರಗಳೂ ಪ್ರಕೃತಿಯಿಂದ ಹುಟ್ಟಿದ ಶರೀರವುಳ್ಳವು ಗಳು ಅಲ್ಲವೇ ಅಲ್ಲ. ನಿರ್ದೋಷಗಳಾದ ಗುಣಗಳಿಂದ ಪರಿಪೂರ್ಣಗಳೂ ಆಗಿವೆ. ಆದರೆ ಬೇರೆ ಪ್ರಕಾರವಾಗಿಯೇ (ಅಂದರೆ ಪ್ರಾಕೃತಶರೀರವುಳ್ಳಗಳೂ. ದೋಷವುಳ್ಳವುಗಳೂ ಅಲ್ಪಗುಣ ಗಳುಳ್ಳವುಗಳೂ ಎಂದು ತೋರಿಸುತ್ತಾನೆ. ದುಷ್ಟರನ್ನು ಮೋಹಿಸುವುದಕ್ಕಾಗಿಯೂ ಸಜ್ಜನರಿಗೂ ಕೆಲವುಕಡೆ ಮೋಹಪಡಿಸುವುದಕ್ಕಾಗಿಯೂ ಯಥಾಯೋಗ್ಯವಾಗಿ ಫಲದ ಪ್ರಾಪ್ತಿಗೋಸ್ಕರ ಇದು ಶ್ರೀ ಹರಿಯ ಲೀಲೆಯು.

ವಿಶೇಷಾಂಶ—ತಮಸ್ಸನ್ನು ಹೊಂದಿಸಿಕೊಡುವುದಕ್ಕಾಗಿ ದುಷ್ಟರನ್ನು ಮೋಹಿಸುವುದು, ಸಜ್ಜನರನ್ನು ಮೋಹಿಸುವುದು. ಏತಕ್ಕೆಂದರೆ— ತಮ್ಮ ತಮ್ಮ ಯೋಗ್ಯತೆಯಿಂದ ಅಧಿಕವಾಗಿ ಮಾಡಿದ ಸುಕೃತಫಲವನ್ನು ಕ್ಷಯಪಡಿಸಿ ಯೋಗ್ಯತಾನುಸಾರವಾಗಿ ಫಲವನ್ನು ಹೊಂದಿಸಿಕೊಡುವು ದಕ್ಕಾಗಿ ಶ್ರೀ ಪರಮಾತ್ಮನ ಲೀಲೆಯು. ॥೮೫॥೮೬॥

ಮೂ ॥ ಜ್ಞಾನಂ ತೇಽಹಂ ಸವಿಜ್ಞಾನಮಿದಂ ವಕ್ಷ್ಯಾನ್ಯುಶೇಷತಃ ॥
ಯಜ್ಜ್ಞಾತ್ವಾ ನೇಹ ಭೂಯೋ ನ್ಯಜ್ಜ್ಞಾತವ್ಯಮವಶಿಷ್ಯತೇ ॥೮೭॥

ಅ ॥ ಸವಿಜ್ಞಾನಂ - ವಿಶೇಷಾಕಾರವಾಗಿ ತನ್ನ ಮಹಿಮೆಯ ಜ್ಞಾನಪ್ರಕಾರದಿಂದ ಸಹಿತವಾದ, ಈದಾವ, ಜ್ಞಾನಂ-ಸಾಮಾನ್ಯವಾಗಿ ತನ್ನ ಮಹಿಮೆಯ ಜ್ಞಾನಪ್ರಕಾರವನ್ನು ನಿನಗೋಸ್ಕರ ನಾನು ಸಂಪೂರ್ಣವಾಗಿ ಹೇಳುವೆನು. ಯಾವುದನ್ನು ತಿಳಿದು ಇಲ್ಲಿ ಮತ್ತು ಬೇರೆ ಯಾವುದೂ ತಿಳಿಯಲರ್ಹವಾದುದು ಅವಶಿಷ್ಟವಾಗುವುದಿಲ್ಲ. ॥೮೭॥

ಪ್ರತಿಜ್ಞಾತವಾದ ವಿಜ್ಞಾನವನ್ನು ಹೇಳುತ್ತಾರೆ—

ಮೂ ॥ ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಲಯಸ್ತಥಾ ॥
ಮತ್ತಃ ಪರತರಂ ನಾನ್ಯತ್ಕಿಂಚಿದಸ್ತಿ ಧನಂಜಯ ॥೮೮॥

ಅ ॥ ನಾನು ನಿಖಿಲ ಜಗತ್ತಿಗೂ ಉತ್ಪಾದಕನು. ಹಾಗೆಯೇ ನಾಶಕನು. ಎಲೋ ಅರ್ಜುನನೇ ನನ್ನ ದೆಶೆಯಿಂದ ಉತ್ಕೃಷ್ಟವಾದುದು ಇತರವಾದುದು ಯಾವುದೂ ಇಲ್ಲ (ನಾನೇ ಉತ್ತಮನು. ಇದು ಸರ್ವೋತ್ತಮತ್ವದಲ್ಲಿ ಪ್ರಮಾಣವು.)॥೮೮॥

ಇಂತಹ ನೀನು ಜಗತ್ತಿನ ಸೃಷ್ಟಿ–ಸ್ಥಿತಿ-ಸಂಹಾರಗಳನ್ನು ಮಾಡತಕ್ಕವನಾದರೆ ಹಾಗಾದರೆ ಕೆಲವರು ನಿನ್ನನ್ನು ಹೇಗೆ ತಿರಸ್ಕರಿಸುತ್ತಾರೆ? ಅವರಿಗೆ ಗತಿಯು ಯಾವುದು? ಎಂದರೆ—

ಮೂ ॥ ಅವಜಾನಂತಿ ಮಾಂ ಮೂಢಾ ಮಾನುಷೀಂ ತನುಮಾಶ್ರಿತಂ ॥
ಪರಂ ಭಾವಮಜಾನಂತೊ ಮಮ ಭೂತಮಹೇಶ್ವರಂ ॥೯೯॥
ಮೋಘಾಶಾ ಮೋಘಕರ್ಮಾಣೋ ಮೋಘಜ್ಞಾನಾ ವಿಚೇತಸಃ ॥
ರಾಕ್ಷಸೀಮಾಸುರೀಂ ಚೈವ ಪ್ರಕೃತಿಂ ಮೋಹಿನೀಂ ಶ್ರಿತಾಃ ॥೯೦॥

ಅ ॥ ಮೂಢರು ಮನುಷ್ಯಸಂಬಧಿಯಾದ (ಅಂದರೆ ಮನುಷ್ಯರಂತೆ ತೋರತಕ್ಕ) ಶರೀರವನ್ನು ಆಶ್ರಯಿಸತಕ್ಕ ನನ್ನನ್ನು ಅಧಮನನ್ನಾಗಿ ತಿಳಿಯುತ್ತಾರೆ. ಭೂತಮಹೇಶ್ವರು– ಅನಾದ್ಯನಂತನು, ಕಾಲಾಸಂತ್ಯವುಳ್ಳವನು, ಪರಿಪೂರ್ಣರೂಪನು, ಶ್ರೇಷ್ಠರಾದ ಬ್ರಹ್ಮಾದಿಗಳಿಗೂ ನಿಯಾಮಕನು, ಇಂತಹ ನನ್ನ ಉತ್ತಮವಾದ ಸರ್ವದಾ ಇರತಕ್ಕ ಸ್ವರೂಪವನ್ನು ತಿಳಿಯದೆ ಇದ್ದವರು, ಭಗವದ್ದ್ವೇಷಿಗಳು ಆಲೋಚಿಸಿದ್ದನ್ನು ಯಾವುದನ್ನೂ ಹೊಂದುವುದಿಲ್ಲ. ಹೀಗೆ ವ್ಯರ್ಥವಾದ ಆಶೆಯುಳ್ಳವರು. (ಯುದ್ಧಾದಿಕರ್ಮಗಳು ಸಫಲಗಳಾದಾಗ್ಯೂ ಅವರು ಮಾಡತಕ್ಕ ಯಜ್ಞಾದಿ ಕರ್ಮಗಳು ವ್ಯರ್ಥಗಳೇ. ಹೀಗೆ) ವ್ಯರ್ಥವಾದ ಕರ್ಮವುಳ್ಳವರು. (ಬ್ರಹ್ಮರುದ್ರ ಮೊದಲಾದವರ ಭಕ್ತ್ಯಾದ್ಯುಪಾಯದಿಂದ ಆಮುಷ್ಮಿಕವಾದ ಯಾವ ಪುರುಷಾರ್ಥವನ್ನು ಹೊಂದುವುದಿಲ್ಲ ಹೀಗೆ) ವ್ಯರ್ಥವಾದ ಜ್ಞಾನವುಳ್ಳವರು, ತತ್ವಜ್ಞಾನಕ್ಕೆ ವಿರುದ್ಧವಾದ ಮಿಥ್ಯಾಜ್ಞಾನವುಳ್ಳವರು ಇಂತಹವರು ಮೋಹವನ್ನು ಹುಟ್ಟಿಸುವ ರಾಕ್ಷಸಸಂಬಂಧಿಯಾದ ಸ್ವಭಾವವನ್ನೂ, ಅಸುರ ಸಂಬಂಧಿಯಾದ ಸ್ವಭಾವವನ್ನೂ ಕೂಡ ಆಶ್ರಯಿಸಿರುವರು.

ವಿಶೇಷಾಂಶ— (1) ~~ಸಾಮಾನ್ಯವಾಗಿ ಜ್ಞಾತವ್ಯವಾದ ಸ್ವಸ್ವರೂಪವು ಜ್ಞಾನವೆನ್ನಿಸಿ~~ ಕೊಳ್ಳುತ್ತದೆ ವಿಶೇಷವಾಗಿ ಜ್ಞಾತವ್ಯವಾದ ಸ್ವಸ್ವರೂಪವು ವಿಜ್ಞಾನವೆನ್ನಿಸಿಕೊಳ್ಳುತ್ತದೆ. ಹೇಗೆಂದರೆ— **'ಮತ್ತಃ ಪರತರಂ ನಾನ್ಯತ್ಕಿಂಚಿದಸ್ತಿ ಧನಂಜಯ'** ಎಂದು ಯಾವುದು ಸರ್ವೇಶ್ವರನಾಗಿ ಅರ್ಜುನನನ್ನು ಕುರಿತು ಸಾಮಾನ್ಯವಾಗಿ ಉಪದೇಶಿಸಿಕೊಳ್ಳಲ್ಪಡತಕ್ಕುದು ತನ್ನ ಸ್ವರೂಪವೋ ಅದೂ, ಮತ್ತು ಜ್ಞಾನಸಾಮಾನ್ಯವಾಗಿ ಸ್ವಮಹಿಮೆಯ ಜ್ಞಾನವೂ ಜ್ಞಾನವೆನ್ನಿಸಿಕೊಳ್ಳುತ್ತದೆ. (2) **'ಅಹಂ ಕೃತ್ಸ್ನಸ್ಯ ಜಗತಃ ಪ್ರಭವಃ ಪ್ರಲಯಸ್ತಥಾ'** ಎಂದು ಯಾವುದು ಸರ್ವೇಶ್ವರತ್ವವನ್ನುಪಪಾದಿಸತಕ್ಕ ಸಕಲ ಜಗತ್ಸೃಷ್ಟ್ಯತ್ವ ಸಂಹರ್ತೃತ್ವ ಮೊದಲಾದ ಗುಣಗಳು ಇವೆ ಎಂದು ಉಪದೇಶಿಸಿಕೊಳ್ಳಲ್ಪಡುತಕ್ಕುದು ಸ್ವಸ್ವರೂಪವೋ ಅದು **'ವಿಜ್ಞಾನವು'** ಹಿಂದೆ ಹೇಳಿದಪ್ರಕಾರ ವಿಶೇಷಾಕಾರವಾಗಿ ತನ್ನ ಗುಣಗಳ ಜ್ಞಾನವಾಗಲೀ ವಿಜ್ಞಾನವು. (3) ತನಗೆ ಯಾರು ಅವಮಾನಮಾಡುತ್ತಾರೋ ಅಂತಹವರ ಆಶೆಯನ್ನು ಹಾಳುಮಾಡಿ ತನ್ನ ಸ್ವರೂಪವನ್ನು ನಿರೂಪಣಮಾಡಿದರಿಂದಲೂ ತನ್ನನ್ನು ಸೇವಿಸುವವರಿಗೆ ಮಹಾಮಾಹಾತ್ಮ್ಯ ಸತ್ಯಸಂಕಲ್ಪತ್ವ ಮೊದಲಾದ ಮಹಿಮೆಯನ್ನು ಕೊಡತಕ್ಕ ತನ್ನ ಸ್ವರೂಪವನ್ನು ನಿರೂಪಣ ಮಾಡಿದರಿಂದಲೂ 'ಅವಜಾನಂತಿ ಮಾಂ' ಇತ್ಯಾದಿಗಳೂ ವಿಜ್ಞಾನವು. (4) ಶ್ರೀ ಹರಿಯ ಅವಜ್ಞಾನವೆಂದರೆ— **'ಬ್ರಹ್ಮರುದ್ರರಮಾದೀನಾಂ ಸಾಮ್ಯದೃಷ್ಟಿರನನ್ಯತಾ । ಪ್ರಾದುರ್ಭಾವಗತಸ್ಯಾಪಿ ದೋಷದೃಷ್ಟಿರಪೂರ್ಣತಾ । ಧರ್ಮದೇಹಾವತಾರಾದೇರ್ಭೇದದೃಷ್ಟಿಶ್ಚ ಸಂಕರಃ । ಅವತಾರೇಷ್ವಿತಿ ಜ್ಞೇಯಮವಜ್ಞಾನಂ ಜನಾರ್ದನೇ'** ॥ ಇತ್ಯಾದಿ ಭವಿಷ್ಯತ್ತ್ವರ್ವದ ವಚನದೆಶೆಯಿಂದ ಅನೇಕ ವಿಧವಾದ ಅವಜ್ಞಾನವನ್ನು ತಿಳಿಯತಕ್ಕದು ॥ ೮೯ ॥ ೯೦ ॥

ಶ್ರೀ ಹರಿಗೆ ದೋಷಗಳು ಇದ್ದಪ್ರಯುಕ್ತವೇ ತಿರಸ್ಕಾರಮಾಡುತ್ತಾರೆಂದು ಏಕೆ ಆಗಲಾರದು ಎಂದರೆ—

ಮೂ ॥ ಮಹಾತ್ಮಾನಸ್ತು ಮಾಂ ಪಾರ್ಥ ದೈವೀಂ ಪ್ರಕೃತಿಮಾಶ್ರಿತಾಃ ॥
ಭಜಂತ್ಯನನ್ಯಮನಸೋ ಜ್ಞಾತ್ವಾ ಭೂತಾದಿಮವ್ಯಯಂ ॥೯೧॥

ಅ ॥ ದೇವತಾಸಂಬಂಧಿಯಾದ ಸ್ವಭಾವವನ್ನು ಆಶ್ರಯಿಸಿರತಕ್ಕವರು ಶ್ರೀ ಹರಿಯಿಂದ ಇತರರಲ್ಲಿ ಸ್ವಾತಂತ್ರ್ಯವಿದೆ ಎನ್ನುವ ಮನಸ್ಸುಇಲ್ಲದಿರುವವರು ಇಂತಹ ಮಹಾನುಭಾವರಾದರೂ ಭೂತಗಳಿಗೆ ಕಾರಣೀಭೂತನಾದ ನಾಶರಹಿತನಾದ ನನ್ನನ್ನು ತಿಳಿದು ಸೇವಿಸುತ್ತಾರೆ.॥೯೧॥

ಶ್ರೀ ಹರಿಗೆ ಸರ್ವೋತ್ತಮತ್ವದಲ್ಲಿಯೇ ಪ್ರಮಾಣವನ್ನು ಹೇಳುತ್ತಾರೆ—

ಮೂ ॥ ಪಿತಾಸಿ ಲೋಕಸ್ಯ ಚರಾಚರಸ್ಯ
ತ್ವಮಸ್ಯ ಪೂಜ್ಯಶ್ಚ ಗುರುರ್ಗರೀಯಾನ್ ॥
ನ ತ್ವತ್ಸಮೋಽಸ್ತ್ಯಭ್ಯಧಿಕಃ ಕುತೋಽನ್ಯೋ
ಲೋಕತ್ರಯೇಽಪ್ಯಪ್ರತಿಮಪ್ರಭಾವ ॥೯೨॥

ಅ ॥ ಚೇತನಾಚೇತನಾತ್ಮಕವಾದ ಈ ಜಗತ್ತಿಗೆ ನೀನು ತಂದೆಯಾಗಿರುತ್ತಿ. ಪೂಜ್ಯನೂ ಆಗಿರುತ್ತಿ. ಹಿತೋಪದೇಶಕನು ಆಗಿರುತ್ತಿ. ಶ್ರೇಷ್ಠನಾಗಿರುತ್ತಿ. ಅಸದೃಶವಾದ ಸಾಮರ್ಥ್ಯವುಳ್ಳ ಶ್ರೀ ಹರಿಯೇ, ಮೂರು ಲೋಕಗಳಲ್ಲಿಯೂ ಕೂಡ ನಿನಗೆ ಸಮಾನಿಕನು ಮತ್ತೊಬ್ಬನಿಲ್ಲ. ಅಭ್ಯಧಿಕನು ಯಾವುದರಿಂದ ಆದಾನು? (ಅಧಿಕನು ಇಲ್ಲವೇ ಇಲ್ಲ). ॥೯೨॥

ಪ್ರಕೃತಿಯಿಂದ ಉತ್ತಮತ್ವವಿದೆ ಎನ್ನುವಲ್ಲಿ ಪ್ರಮಾಣವನ್ನು ಹೇಳುತ್ತಾರೆ—

ಮೂ ॥ ಪರಂ ಭೂಯಃ ಪ್ರವಕ್ಷ್ಯಾಮಿ ಜ್ಞಾನಾನಾಂ ಜ್ಞಾನಮುತ್ತಮಂ ॥
ಯಜ್ಜ್ಞಾತ್ವಾಮುನಯಃ ಸರ್ವೇ ಪರಾಂ ಸಿದ್ಧಿಮಿತೋ ಗತಾಃ ॥ ೯೩ ॥

ಅ ॥ ಜ್ಞೇಯಗಳ ಮಧ್ಯದಲ್ಲಿ ಅತಿಶಯವಾಗಿ ಉತ್ತಮವಾದ ಜ್ಞೇಯವನ್ನು ಮತ್ತೂ ಹೇಳುವೆನು. ಎಲ್ಲಾ ಋಷಿಗಳೂ ಯಾವ ಬ್ರಹ್ಮನನ್ನು ತಿಳಿದು ಈ ಸಂಸಾರದೆಶೆಯಿಂದ ಅಥವಾ ಜ್ಞಾನದೆಶೆಯಿಂದ ಉತ್ಕೃಷ್ಟವಾದ ಸಿದ್ಧಿಯನ್ನು ಹೊಂದಿರುವರೋ. ॥೯೩॥

ಪ್ರತಿಜ್ಞಾತವಾದ ಜ್ಞೇಯವನ್ನು ಹೇಳುತ್ತಾರೆ—

ಮೂ ॥ ಮಮ ಯೋನಿರ್ಮಹದ್ಬ್ರಹ್ಮ ತಸ್ಮಿನ್ ಗರ್ಭಂ ದಧಾಮ್ಯಹಂ ॥
ಸಂಭವಃ ಸರ್ವಭೂತಾನಾಂ ತತೋ ಭವತಿ ಭಾರತ ॥ ೯೪ ॥

ಅ ॥ ಮಹದ್ಬ್ರಹ್ಮಪದವಾಚ್ಯಳಾದ ಮಹಾಲಕ್ಷ್ಮಿಯು ನನಗೆ ('ಯುಜ್ಯತೇ ಅನಯಾ ಪುಮಾನ್' ಎನ್ನುವ ವ್ಯುತ್ಪತ್ತಿಯಿಂದ) ಹೆಂಡತಿಯು. ಅವಳಲ್ಲಿ ನಾನು ಗರ್ಭವನ್ನು ಧರಿಸುತ್ತೇನೆ. ಎಲೋ ಭರತಕುಲೋತ್ಪನ್ನನಾದ ಅರ್ಜುನನೇ! ಆ ಪ್ರಕೃತಿಯ ದೆಶೆಯಿಂದ ಎಲ್ಲಾ ಭೂತಗಳಿಗೆ ಉತ್ಪತ್ತಿಯು ಆಗುತ್ತದೆ. (ಇದರಿಂದ ರಮಾಬ್ರಹ್ಮಾದಿ ಸರ್ವ ಚೇತನರಿಂದಲೂ ಶ್ರೀ ಹರಿಯು ಉತ್ಕೃಷ್ಟನೆಂದುಕ್ತವಾಯಿತು). ॥೯೪॥

ಮೂ ॥ ದ್ವಾವಿಮೌ ಪುರುಷೌ ಲೋಕೇ ಕ್ಷರಶ್ಚಾಕ್ಷರ ಏವ ಚ ॥
ಕ್ಷರಃ ಸರ್ವಾಣಿ ಭೂತಾನಿ ಕೂಟಸ್ಥೋಽಕ್ಷರ ಉಚ್ಯತ್ಯೇ ॥ ೯೫ ॥
ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ ॥
ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ ॥ ೯೬ ॥

ಅ ॥ ವಿಚಾರಮಾಡಿದರೆ ನಿಯಮ್ಯವರ್ಗದಲ್ಲಿ ಪ್ರಸಿದ್ಧರಾದ ಚೇತನರು ಕ್ಷರ–ಅಕ್ಷರ ರೆಂದು ಇಬ್ಬರೇ. ಬ್ರಹ್ಮನೇ ಮೊದಲಾದ ಎಲ್ಲಾ ಜೀವರು ಕ್ಷರರೆನ್ನಿಸುತ್ತಾರೆ. ನಿರ್ವಿಕಾರಳಾದ ಮಹಾಲಕ್ಷ್ಮಿಯು ಅಕ್ಷರಳೆಂದು ಹೇಳಲ್ಪಡುತ್ತಾಳೆ. (ಕ್ಷರ–ಅಕ್ಷರದಿಂದ) ಇತರನಾದ ಪುರುಷನೇ ಉತ್ತಮನು. (ಇವರ ಮಧ್ಯದಲ್ಲಿಯೇ ಒಬ್ಬನು ಪುರುಷೋತ್ತಮನೆಂದು ಹೇಳಲ್ಪಡುವುದಿಲ್ಲ.) (ಮತ್ತೊಬ್ಬನೇ ಪುರುಷೋತ್ತಮನೆನ್ನುವಲ್ಲಿ ಶ್ರುತ್ಯಾದಿ ಸಮ್ಮತಿಯನ್ನು ಹೇಳುತ್ತಾರೆ.) (**'ಪರಮಾತ್ಮಾ ವ್ಯವಸ್ಥಿತಃ । ಆತ್ಮಾ ನಾರಾಯಣಃ ಪರಃ'** ಇತ್ಯಾದಿ ಶ್ರುತಿಗಳಲ್ಲಿ ಈ ಪುರುಷೋತ್ತಮನು) ಪರಮಾತ್ಮನೆಂದು ಹೇಳಿಸಿಕೊಳ್ಳಲ್ಪಡುತ್ತಾನೆ. (ಯುಕ್ತಿಯನ್ನೂ ಹೇಳುತ್ತಾರೆ.) ನಾಶರಹಿತನಾದ ಸರ್ವಸ್ವಾಮಿಯಾವ ಯಾವ ಶ್ರೀ ಹರಿಯು ಮೂರು ಲೋಕಗಳನ್ನು ಪ್ರವೇಶಮಾಡಿ ಧಾರಣವನ್ನೂ ಪೋಷಣವನ್ನೂ ಕೂಡ ಮಾಡುತ್ತಾನೋ.

ವಿಶೇಷಾಂಶ– (1) ಯಾರು ಯಾರ ಧಾರಣ ಪೋಷಣಗಳನ್ನು ಮಾಡುವವನೋ ಅವನು ಅವನಿಂದ ಉತ್ತಮನೆಂದು ಪ್ರಸಿದ್ಧವು. (2) **'ಬ್ರಹ್ಮಾದಿಜೀವಾಃ ಸರ್ವೇಽಪಿ ಶರೀರ ಕ್ಷರಣಾತ್ಕ್ಷರಾಃ ಲಕ್ಷ್ಮೀರಕ್ಷರದೇಹತ್ವಾದಕ್ಷರಾ ತತ್ಪರೋ ಹರಿಃ'** ॥ ಶರೀರಕ್ಕೆ ನಾಶವಿದ್ದುದರಿಂದ ಬ್ರಹ್ಮಾದಿ ಜೀವರು ಕ್ಷರರೆನ್ನಿಸುತ್ತಾರೆ. ನಾಶವಿಲ್ಲದಿರುವ ಶರೀರವಿದ್ದ ಪ್ರಯುಕ್ತ ಲಕ್ಷ್ಮಿಯು ಅಕ್ಷರಳೆನ್ನಿಸುತ್ತಾಳೆ. ಶ್ರೀ ಹರಿಯು ಕ್ಷರ–ಅಕ್ಷರರಿಂದ ಉತ್ತಮನು. ॥ ೯೫ ॥ ೯೬ ॥

ಮೂ ॥ ಯಸ್ಮಾತ್ಕ್ಷರಮತೀತೋಽಹಮಕ್ಷರಾದಪಿ ಚೋತ್ತಮಃ ॥
ಅತೋಽಸ್ಮಿ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ ॥ ೯೭ ॥

ಅ ॥ ಯಾವ ಕಾರಣದೆಶೆಯಿಂದ ನಾನು ಕ್ಷರರನ್ನು ಅತಿಕ್ರಮಿಸಿರುವೆನೋ, ಅಕ್ಷರರಿಂದಲೂ ಉತ್ತಮನಾಗಿರುತ್ತೇನೊ, ಆದಕಾರಣ ಪೌರುಷೇಯ ಗ್ರಂಥಗಳಲ್ಲಿಯೂ, ಅಪೌರುಷೇಯವಾದ ವೇದದಲ್ಲಿಯೂ ಪುರುಷೋತ್ತಮನೆಂದು ಪ್ರಸಿದ್ಧನಾಗಿರುವೆನು. ॥ ೯೭ ॥

ತಾನು ಹೇಳಿದ ಪುರುಷೋತ್ತಮತ್ವದಲ್ಲ ತನಗೆ ಮಹಾತ್ಪ್ರಯೋಜನವಿದೆ ಎಂದು ತೋರಿಸುವುದಕ್ಕಾಗಿ ಶ್ರೀ ಹರಿಗೆ ಪುರುಷೋತ್ತಮತ್ವವನ್ನು ತಿಳಿಯುವವರಿಗೆ ಫಲವನ್ನು ಹೇಳುತ್ತಾರೆ—

ಮೂ ॥ ಯೋ ಮಾಮೇವಮಸಂಮೂಢೋ ಜಾನಾತಿ ಪುರುಷೋತ್ತಮಂ ॥
ಸ ಸರ್ವವಿದ್ಭಜತಿ ಮಾಂ ಸರ್ವಭಾವೇನ ಭಾರತ ॥ ೯೮ ॥

ಅ ॥ ಯಾರು ಚೆನ್ನಾಗಿ ಮೋಹರಹಿತನಾಗಿ (ಅಂದರೆ ಶ್ರೀ ಹರಿಯು ಪುರುಷೋತ್ತಮನೆನ್ನುವುದು ಪಾರಮಾರ್ಥಿಕವಲ್ಲ ಎನ್ನುವ ಸಮ್ಮೋಹವರ್ಜಿತನಾಗಿ) ಹೀಗೆ ಕ್ಷರ-ಅಕ್ಷರವನ್ನು ಅತಿಕ್ರಮಿಸಿರುವುದರಿಂದ ಪುರುಷೋತ್ತಮನನ್ನಾಗಿ ತಿಳಿಯುತ್ತಾನೋ, ಆತನು ಸರ್ವವನ್ನು ತಿಳಿದವನು. (ಅಂದರೆ ಸರ್ವಜ್ಞನೆಂದು ಹೇಳಿಸಿಕೊಳ್ಳಲ್ಪಡುತ್ತಾನೆ.) ಎಲೋ ಭರತಕುಲೋತ್ಪನ್ನನೇ(ಹೀಗೆ ತಿಳಿದವನು) ಸರ್ವ ಪ್ರಕಾರದಿಂದಲೂ ನನ್ನನ್ನೇ ಸೇವಿಸುತ್ತಾನೆ ॥೯೮॥

ಇದನ್ನು ಅಯೋಗ್ಯರಿಗೆ ಯಾರಿಗೂ ಹೇಳಕೂಡದು ಎನ್ನುತ್ತಾರೆ—

ಮೂ ॥ ಇತಿ ಗುಹ್ಯತಮಂ ಶಾಸ್ತ್ರಮಿದಮುಕ್ತಂ ಮಯಾನಘ ।।
ಏತದ್ಬುದ್ಧ್ವಾ ಬುದ್ಧಿಮಾನ್ ಸ್ಯಾತ್ ಕೃತಕೃತ್ಯಶ್ಚ ಭಾರತ ।೯೯।।

ಅ ।। ಎಲೋ ನಿರ್ದೋಷನೇ! ಹೀಗೆ ಈ ಶಾಸ್ತ್ರವು ಅತಿ ಗೋಪ್ಯವಾದು ನನ್ನಿಂದ ಹೇಳಲ್ಪಟ್ಟಿತು ಎಲೋ ಭರತಕುಲೋತ್ಪನ್ನನೇ ಈ ಹಿಂದೆ ಹೇಳಿದ್ದನ್ನು ತಿಳಿದು (ಅಂದರೆ ಪರೋಕ್ಷವಾಗಿ ತಿಳಿದು) ಅಪರೋಕ್ಷ ಜ್ಞಾನವುಳ್ಳವನು ಆಗುವನು. ಮುಕ್ತನೂ ಆಗುವನು.

ವಿಶೇಷಾಂಶ—(1) 'ಗುಹ್ಯತಮಂ ಶಾಸ್ತ್ರಂ' ಎಂದು ಹೇಳಿರುವುದರಿಂದ ಶ್ರೀ ಹರಿಗೆ ಪುರುಷೋತ್ತಮತ್ವವೇ ಸರ್ವಶಾಸ್ತ್ರಪ್ರಮೇಯವು ಎಂದು ಅಭಿಪ್ರೇತವಾಯಿತು. (2) ಇಲ್ಲಿ 'ಸರ್ವವಿತ್' ಎಂದೂ 'ಇದಂ ಶಾಸ್ತ್ರಂ' ಎಂದೂ ಹೇಳಿರುವುದರಿಂದ ಎಲ್ಲಾ ಪೌರುಷೇಯಾಗಮ ಗಳಿಗೂ ಶ್ರೀ ವಿಷ್ಣುವಿನ ಸರ್ವೋತ್ತಮತ್ವದಲ್ಲಿಯೇ ಮಹಾತಾತ್ಪರ್ಯವೆಂದು ಸ್ಪಷ್ಟವಾಗಿ ತೋರುತ್ತದೆಂದುಕ್ತವಾಯಿತು ।। ೯೯ ।।

ದ್ವೇಷವು ನರಕಕ್ಕೆ ಕಾರಣವು ಎನ್ನುವಲ್ಲಿ ಪ್ರಮಾಣವನ್ನು ಹೇಳುತ್ತಾರೆ—

ಮೂ ॥ ದ್ವೌ ಭೂತಸರ್ಗೌ ಲೋಕೇಽಸ್ಮಿನ್ ದೈವ ಆಸುರ ಏವ ಚ ।।
ದೈವೋ ವಿಸ್ತರಶಃ ಪ್ರೋಕ್ತ ಆಸುರಂ ಪಾರ್ಥ ಮೇ ಶೃಣು ॥೧೦೦॥

ಅ ।। ಈ ಲೋಕದಲ್ಲಿ ದೈವ ಆಸುರ ಎಂದು ಪ್ರಾಣಿಗಳ ಸ್ವಭಾವಗಳು ಎರಡೇ ವಿಧ ಗಳು. (ಅವುಗಳಲ್ಲಿ) ದೇವತಾಸಂಬಂಧಿಯಾದ ಸ್ವಭಾವವು ವಿಸ್ತಾರವಾಗಿ ಹೇಳಲ್ಪಟ್ಟಿತು. ಎಲೋ ~~ಅರ್ಜುನನೇ ಆಸುರಸಂಬಂಧಿಯಾದ ಸ್ವಭಾವವನ್ನು ನನ್ನ ಸಕಾಶದಿಶೆಯಿಂದ ಕೇಳು.~~

ವಿಶೇಷಾಂಶ—(1) ಪ್ರಾಣಿಗಳ ಸ್ವಭಾವಗಳು ಅತಿ ಬಹಳವಿದ್ದಪ್ರಯುಕ್ತ **'ದ್ವೌಭೂತ ಸರ್ಗೌ'** ಎನ್ನುವ ವಚನವು ಹೇಗೆ ಕೂಡುತ್ತದೆಂದರೆ — **'ಸರ್ಗಾಣಾಂ ಸುಬಹತ್ವೇಽಪಿ ಶುಭಾಶುಭಫಲಾಧಿಕೌ । ದೇವಾಸುರಾಖ್ಯೌದ್ವಾವೇವ ಗಂಧರ್ವಾದ್ಯಾಸ್ತದಂತರಾಃ । ಮುಕ್ತಿಗಾ ಏವ ವಿಜ್ಞೇಯಾಃ ದೇವಾ ಏವ ವಿಮುಕ್ತಿಗಾಃ'** ।। ಸರ್ಗಗಳಿಗೆ ಅತಿ ಬಾಹುಲ್ಯ ವಿದ್ದರೂ ಶುಭಾಶುಭಫಲಗಳಿಗೆ ಅಧಿಕ್ಯವನ್ನು ವಿವಕ್ಷೆಮಾಡಿಕೊಂಡು ದೇವ ಅಸುರರಿಬ್ಬರೇ ಎಂದು ಹೇಳಿದ್ದು. ಗಂಧರ್ವ ಮನುಷ್ಯಾದಿಗಳು ಶುಭ-ಅಶುಭಫಲಗಳ ಮಧ್ಯದಲ್ಲಿರುವ ವರು. ಮುಕ್ತಿಯನ್ನು ಹೊಂದುವವರು ಎಂದೇ ತಿಳಿಯಬೇಕು. ದೇವತೆಗಳೇ ವಿಶಿಷ್ಟಮೋಕ್ಷ ವನ್ನು ಹೊಂದುವವರು ಎಂದು ತಿಳಿಯಬೇಕು. ಹೀಗೆಯೇ ಅಸುರರೇ ಅತಿ ಕಠಿಣವಾದ ತಮ ಸ್ಸನ್ನು ಹೊಂದುವವರು ಎಂದೂ ತಿಳಿಯಬೇಕು. ॥೧೦೦॥

'ದ್ವೌಭೂತಸರ್ಗೌ' ಎನ್ನುವಲ್ಲಿಯೂ ದೇವ ಅಸುರ ವಿಭಾಗದಿಂದ ಸೃಷ್ಟಿಗಳೆರಡನ್ನು ಹೇಳಿ ಅಸುರ ಸರ್ಗಸ್ವಭಾವವನ್ನು 'ಪಾರ್ಥ ಮೇ ಶೃಣು' ಎಂದು ಪ್ರತಿಜ್ಞಾಮಾಡಿ ಅಸುರರ ಮತವನ್ನು ಹೇಳುತ್ತಾರೆ—

ಮೂ ॥ ಅಸತ್ಯಮಪ್ರತಿಷ್ಠಂತೇ ಜಗದಾಹುರನೀಶ್ವರಂ ॥
ಅಪರಸ್ಪರಸಂಭೂತಂ ಕಿಮನ್ಯತ್ಕಾಮಹೈತುಕಂ ॥ ೧೦೧ ॥

ಅ ॥ ಆ ಅಸುರರು ಜಗತ್ತನ್ನು ಮಿಥ್ಯಾಭೂತವಾದುದನ್ನಾಗಿಯೂ (ಅಸತ್ಯವಾಗಿರುವುದರಿಂದಲೇ ಬಹುಕಾಲದಲ್ಲಿ ಅವಸ್ಥಿತಿ ರಹಿತವಾದುದನ್ನಾಗಿಯೇ (ಅಂದರೆ ಬ್ರಹ್ಮಜ್ಞಾನ ಬಾಧಿತವಾದುದನ್ನಾಗಿಯೇ) (ಆದುದರಿಂದಲೇ) ಸ್ವಾಮಿರಹಿತವಾದುದನ್ನಾಗಿಯೂ ಹೇಳುತ್ತಾರೆ. ಜಗತ್ತು (ಮೃತ್ಪಿಂಡದೆಶೆಯಿಂದ ಘಟವು, ತಂತುಗಳ ದೆಶೆಯಿಂದ ಪಟವು-ಇದು ಮೊದಲಾದ ಆಕಾರಗಳಿಂದ) ಪರಸ್ಪರವಾಗಿ ಹುಟ್ಟದಿರುವುದು. ಹಾಗಾದರೆ ಜಗತ್ತು ಎಂತಹುದು ಎಂದರೆ— ಸದಸದ್ವಿಲಕ್ಷಣವು. ಅಜ್ಞಾನಕಲ್ಪಿತವು.

ವಿಶೇಷಾಂಶ— (1) ಜಗತ್ತು ೧ ಸತ್ಯವಾಗದಿದ್ದರೆ ಅಸತ್ತೋ ಎಂದರೆ— ೨ ಪರಸ್ಪರ ಸಂಭೂತವಾಗದಿದ್ದರೆ ನಿತ್ಯವೋ ಅಥವಾ ಸ್ವತ ಏವ ಹುಟ್ಟಿದ್ದೋ ಎಂದರೆ— ೧ ನೇದ್ದಕ್ಕೆ ಸದಸದ್ವಿಲಕ್ಷಣವು ಎಂದು ಉತ್ತರವು. ೨ನೇದ್ದಕ್ಕೆ 'ಕಾಮಯತಿ ದುರ್ವಿಷಯಾನ್' ಎನ್ನುವ ವ್ಯುತ್ಪತ್ತಿಯಿಂದ ಕಾಮಃ=ಅಜ್ಞಾನವೂ ಅಜ್ಞಾನವೇ ಹೇತುವಾಗಿರುವುಳ್ಳದ್ದು. ಅಂತೂ ಅಜ್ಞಾನ ಕಲ್ಪಿತವೇ ॥ ೧೦೧ ॥

ಮೂ ॥ ಏತಾಂ ದೃಷ್ಟಿಮವಷ್ಟಭ್ಯ ನಷ್ಟಾತ್ಮಾನೋಽಲ್ಪಬುದ್ಧಯಃ ॥
ಪ್ರಭವಂತ್ಯುಗ್ರಕರ್ಮಾಣಃ ಕ್ಷಯಾಯ ಜಗತೋಽಹಿತಾಃ ॥ ೧೦೨ ॥

ಅ ॥ ಈ ಜ್ಞಾನವನ್ನು ಆಶ್ರಯಿಸಿ ನಷ್ಟವಾದ ಜ್ಞಾನವುಳ್ಳವರು ಅಲ್ಪವಿಷಯದಲ್ಲಿ ಬುದ್ಧಿಯುಳ್ಳವರು, ಕ್ರೂರವಾದ ಭಸ್ಮಧಾರಣ ಮೊದಲಾದ ಅವೈದಿಕ ಕರ್ಮವುಳ್ಳವರು. ಜಗತ್ತಿಗೆ ಮೋಹವನ್ನು ಹುಟ್ಟಿಸುವವರು, ಇಂತಹವರು (ಕಲಿಯುಗಾದಿಗಳಲ್ಲಿ) ಜಗತ್ತಿನ ನಾಶಕ್ಕಾಗಿ ಸಮರ್ಥರಾಗುತ್ತಾರೆ.

ವಿಶೇಷಾಂಶ— 'ದೈವೀ ಸಂಪದ್ವಿಮೋಕ್ಷಾಯ ನಿಬಂಧಾಯಾಸುರೀ ಮತಾ । ದೈವೋ ವಿಸ್ತರಶಃ ಪ್ರೋಕ್ತ ಆಸುರಂ ಪಾರ್ಥ ಮೇ ಶೃಣು' ಎಂದಾರಂಭಿಸಿ **'ಅಸತ್ಯಮಪ್ರತಿಷ್ಠಂ ತೇ' 'ಈಶ್ವರೋಽಹಮಹಂ ಭೋಗೀ'** ಇತ್ಯಾದಿಗಳಿಂದ ಜಗನ್ಮಿಥ್ಯಾತ್ವವೂ ಬ್ರಹ್ಮೈಕ್ಯವೂ ಅಸುರರಿಗೆ ಯೋಗ್ಯವಾದ ದುರ್ಮತವೆಂದು ಹೇಳಿರುವುದರಿಂದ ಪ್ರೇಕ್ಷಾವಂತರು ಆ ಅಸುರರ ಮತವನ್ನು ಅನುಸರಿಸಕೂಡದು ಎಂದುಕ್ತವಾಯಿತು ॥ ೧೦೨ ॥

ಪುನಃ ಆಸುರಭಾವವನ್ನು ಹೇಳುತ್ತಾರೆ—

ಮೂ ॥ ಈಶ್ವರೋಽಹಮಹಂ ಭೋಗೀ ಸಿದ್ಧೋಽಹಂ ಬಲವಾನ್ಸುಖೀ ॥
ಆಢ್ಯೋಽಭಿಜನವಾನಸ್ಮಿ ಕೋಽನ್ಯೋಽಸ್ತಿ ಸದೃಶೋ ಮಯಾ ॥೧೦೩॥

ಅ ॥ ನಾನೇ ಈಶ್ವರನು. (ನನ್ನಿಂದ ಮತ್ತೊಬ್ಬನು ಈಶ್ವರನುಪಾರಮಾರ್ಥಿಕವಾಗಿ ಇಲ್ಲ.) ನಾನೇ ಭೋಗಿಯು, ನಾನೇ ಸಿದ್ಧನು, ನಾನೇ ಬಲಿಷ್ಠನು, ನಾನೇ ಸುಖಿವುಳ್ಳವನು, ನಾನೇ ಸಂಪನ್ನನಾಗಿರುತ್ತೇನೆ, ನಾನೇ ಪ್ರಶಸ್ತವಾದ ವಂಶವುಳ್ಳವನು ಆಗಿರುತ್ತೇನೆ, ನನ್ನಿಂದ ಸದೃಶನು ಇತರನು ಯಾರು ಇದ್ದಾನೆ? (ಯಾರೂ ಇಲ್ಲವು) ॥ ೧೦೩ ॥

ದ್ವೇಷಿಗಳ ಸ್ವಭಾವವನ್ನು ಅನುವಾದಮಾಡುತ್ತಾ ದ್ವೇಷಿಗಳ ಗತಿಯನ್ನು ಹೇಳುತ್ತಾರೆ—

ಮೂ ॥ ಮಾಮಾತ್ಮಪರದೇಹೇಷು ಪ್ರದ್ವಿಷಂತೋಽಭ್ಯಸೂಯಕಾಃ ॥
ತಾನಹಂ ದ್ವಿಷತಃ ಕ್ರೂರಾನ್ಸಂಸಾರೇಷು ನರಾಧಮಾನ್ ॥ ೧೦೪ ॥

ಕ್ಷಿಪಾಮ್ಯಜಸ್ರಮಶುಭಾನಾಸುರೀಷ್ವೇವ ಯೋನಿಷು ॥
ಆಸುರೀಂ ಯೋನಿಮಾಪನ್ನಾ ಮೂಢಾ ಜನ್ಮನಿ ಜನ್ಮನಿ ॥
ಮಾಮಪ್ರಾಪ್ಯೈವ ಕೌಂತೇಯತತೋ ಯಾಂತ್ಯಧಮಾಂ ಗತಿಂ ॥ ೧೦೫ ॥

ಅ ॥ ತನ್ನ ಶರೀರಗಳಲ್ಲಿಯೂ ಪರ ಶರೀರಗಳಲ್ಲಿಯೂ ಇರತಕ್ಕ ನನ್ನನ್ನು ದ್ವೇಷ ಮಾಡುವವರು ಮತ್ತು ವಿಶೇಷವಾಗಿ ಅಸೂಯೆಮಾಡತಕ್ಕವರು ಯಾರೋ, ಅಂತಹ ದ್ವೇಷ ಮಾಡತಕ್ಕ ಕ್ರೂರರಾದ ನಿರಂತರದಲ್ಲಿಯೂ ಅಶುಭರಾದ ಮನುಷ್ಯಾಧಮರನ್ನು ಸಂಸಾರಗಳಲ್ಲಿ ಆಸುರಸಂಬಂಧಿಗಳಾದ ಯೋನಿಗಳಲ್ಲಿಯೇ ಬಿಸಾಡುತ್ತೇನೆ. ಎಲೋ ಅರ್ಜುನನೇ, ಆಸುರ ಸಂಬಂಧಿಯಾದ ಯೋನಿಯನ್ನು ಹೊಂದಿರುವ ಮೂಢರಾದವರು ಜನ್ಮಜನ್ಮದಲ್ಲಿಯೂ ನನ್ನನ್ನು ಹೊಂದದೇನೇ ಅದಕ್ಕಿಂತಲೂ ಅಧಮವಾದ ಗತಿಯನ್ನು (ಅಂದರೆ ನಿತ್ಯನರಕವನ್ನು) ಹೊಂದು ತ್ತಾರೆ—

ವಿಶೇಷಾಂಶ— (1) ಆತ್ಮದೇಹಗಳಲ್ಲಿ ದ್ವೇಷವೆಂದರೆ— **'ಅಹಂ ಬ್ರಹ್ಮಾಸ್ಮಿ'**— ನಾನು ಪರಬ್ರಹ್ಮನಾಗಿರುತ್ತೇನೆನ್ನುವ ದುರಾಗ್ರಹವು. (2) ಪರದೇಹಗಳಲ್ಲಿ ದ್ವೇಷವೆಂದರೆ **'ತ್ವಂ ಬ್ರಹ್ಮಾಸಿ'**— ನೀನು ಬ್ರಹ್ಮನಾಗಿರುತ್ತಿ ಎನ್ನುವ ಉಪದೇಶವು. ಇವುಗಳು ಭಗವದ್ದ್ವೇಷಿ ಗಳಿಗೆ ಮುಕ್ತಿಯಾಗುತದೆನ್ನುವ ಭ್ರಾಂತಿಯನ್ನು ಹೋಗಲಾಡಿಸುವುದಕ್ಕಾಗಿ ಸಂಗ್ರಹಿಸಿರುವರು. (3) ೧ **ಅಜಸ್ರಮಶುಭಾನ್, ೨ ಆಸುರೀಷ್ವೇವ ಯೋನಿಷು, ೩ ಮೂಢಾ ಜನ್ಮನಿ ಜನ್ಮನಿ, ೪ ಮಾಮಪ್ರಾಪ್ಯೈವ ಕೌಂತೇಯ**, ಈ ನಾಲ್ಕು (೪) ವಿಶೇಷಣಗಳಿಂದ ಸರ್ವಥಾ ಊರ್ಧ್ವಲೋಕಪ್ರಾಪ್ಯಭಾವವೂ **'ತತೋ ಯಾಂತ್ಯಧಮಾಂ ಗತಿ'** ಎಂದು ಅಧೋಲೋಕ ಪ್ರಾಪ್ತಿಯೂ ನಿರ್ಣೀತವಾಗಿದೆ ॥ ೧೦೪ ॥ ೧೦೫ ॥

~~ಶ್ರೀ ಹರಿಯ ರೂಪಗಳಲ್ಲಿ ಭೇದವಿಲ್ಲವೆನ್ನುವ ವಿಷಯದಲ್ಲಿಯೂ, ಜಡಜೀವರಿಗೆ ಭೇದವಿದೆ~~ ಎನ್ನುವ ವಿಷಯದಲ್ಲಿಯೂ ಪ್ರಮಾಣವನ್ನು ಹೇಳುತ್ತಾರೆ—

ಮೂ ॥ ಸರ್ವಭೂತೇಷು ಯೇನೈಕಂ ಭಾವಮವ್ಯಯಮೀಕ್ಷತೇ ॥
ಅವಿಭಕ್ತಂ ವಿಭಕ್ತೇಷು ತಜ್ಜ್ಞಾನಂ ವಿದ್ಧಿ ಸಾತ್ವಿಕಂ ॥ ೧೦೬ ॥

ಅ ॥ ವಿಭಕ್ತಗಳಾದ ಸರ್ವಭೂತಗಳಲ್ಲಿ ಅವಿಭಕ್ತವಾದ, ಮುಖ್ಯವಾದ, ನಾಶರಹಿತ ವಾದ ಸರ್ವದಾ ಇರತಕ್ಕ ಬ್ರಹ್ಮಾಖ್ಯ ಪದಾರ್ಥವನ್ನು ಯಾವ ಸತ್ವಗುಣನಿಬಂಧನವಾದ ಜ್ಞಾನ ದಿಂದ ವಿಷಯೀಕರಿಸುತ್ತಾನೋ, ಆ ಜ್ಞಾನವನ್ನು ಸಾತ್ವಿಕವನ್ನಾಗಿ ತಿಳಿ. ಅಥವಾ ಶ್ರೀ ವಿಷ್ಣುವಿ ನಿಂದಲೂ, ಪರಸ್ಪರವಾಗಿಯೂ, ಜಡಗಳಿಂದಲೂ ಭಿನ್ನರಾದ ಪ್ರಾಣಿಗಳಲ್ಲಿ ವ್ಯಾಪ್ತವಾದ ಪ್ರಾದುರ್ಭಾವರೂಪಗಳಲ್ಲಿಯೂ, ಅಂತರ್ಯಾಮಿ ರೂಪಗಳಲ್ಲಿಯೂ ಭೇದವಿಲ್ಲದಿರುವ, ಎಲ್ಲಾ ಜೀವರಲ್ಲಿಯೂ, ಜಡಗಳಲ್ಲಿಯೂ ಇರತಕ್ಕ ಸರ್ವೋತ್ತಮನಾದ ಶ್ರೀಹರಿಯನ್ನು ನೋಡು ತ್ತಾನೋ, ಅಂತಹ ಜ್ಞಾನವನ್ನು ಸಾತ್ವಿಕವನ್ನಾಗಿ ತಿಳಿ.

ವಿಶೇಷಾಂಶ — ಇದರಿಂದ ಸರ್ವ ಜೀವರಿಗೆ ಪರಸ್ಪರ ಭೇದವು ಸರ್ವಾಂತರ್ಯಾಮಿ ಯಾದ ಶ್ರೀ ನಾರಾಯಣನಿಗೆ ತನ್ನ ರೂಪಗಳಲ್ಲಿ ಪರಸ್ಪರವಾಗಿ ಭೇದವಿಲ್ಲವೆಂದೂ ಸಿದ್ಧವಾ ಯಿತು ॥೧೦೬॥

ಶ್ರೀ ಹರಿಯೇ ಸರ್ವೋತ್ತಮನಾಗಿರುವುದರಿಂದ ಎಲ್ಲಾ ಕರ್ಮಗಳನ್ನೂ ಶ್ರೀ ಹರಿಯ ಪ್ರೀತಿಗಾಗಿಯೇ ಮಾಡಬೇಕು, ಎನ್ನುವಲ್ಲಿ ಗೀತಾವಾಕ್ಯವನ್ನು ಉದಾಹರಿಸುತ್ತಾರೆ—

ಮೂ ॥ ಸರ್ವಗುಹ್ಯತಮಂ ಭೂಯಃ ಶೃಣು ಮೇ ಪರಮಂ ವಚಃ ॥
ಇಷ್ಟೋಽಸಿ ಮೇ ದೃಢಮಿತಿ ತತೋ ವಕ್ಷ್ಯಾಮಿ ತೇ ಹಿತಂ ೧೦೭ ॥

ಅ ॥ ನನ್ನ ಸಕಾಶದೆಶೆಯಿಂದ ಎಲ್ಲಾ ಅತಿಗೋಪ್ಯವಾದ, ಉತ್ಕೃಷ್ಟವಾದ ವಚನವನ್ನು ಮತ್ತೂ ಮತ್ತು ಕೇಳು. ದೃಢ ಹೇಗಾದೀತೋ ಹಾಗೆ ನನಗೆ ಪ್ರಿಯನು ಆಗಿರುತ್ತಿ. ಆ ಕಾರಣದೆಶೆಯಿಂದ ನಿನಗೆ ಹಿತವಾದುದನ್ನೇ ಹೇಳುವೆನು ॥ ೧೦೭ ॥

ಮೂ ॥ ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ॥
ಮಾಮೇವೈಷ್ಯಸಿ ಸತ್ಯಂ ತೇ ಪ್ರತಿಜಾನೇ ಪ್ರಿಯೋಽಸಿ ಮೇ ॥೧೦೮ ॥

ಅ ॥ ನನ್ನಲ್ಲಿಯೇ ಮನಸ್ಸುಳ್ಳವನಾಗು, ನನ್ನ ಭಕ್ತನಾಗು, ನನ್ನನ್ನುದ್ದೇಶಿಸಿಕೊಂಡು ಯಾಗಮಾಡುವವನಾಗು, ನನ್ನನ್ನೇ ನಮಸ್ಕರಿಸು, ನನ್ನನ್ನೇ ಹೊಂದುವಿ. ನನಗೆ (ಯಾವ ಕಾರಣದಿಂದ) ಪ್ರಿಯನು ಆಗಿರುತ್ತೀಯೋ, (ಆದ ಕಾರಣ) ನಿನ್ನ ವಿಷಯದಲ್ಲಿ ಸತ್ಯವನ್ನೇ ಪ್ರತಿಜ್ಞೆಮಾಡುವೆನು ॥ ೧೦೮ ॥

'ಜನಮೇಜಯಃ । ಸಾಂಖ್ಯಂ ಯೋಗಃ ಪಾಶುಪತಂ ವೇದಾರಣ್ಯಕ ಮೇವ ಚ। ಜ್ಞಾನಾನ್ಯೇತಾನಿ ಭಿನ್ನಾನಿ ಉತಾಹೋ ನೇತಿ ಚೋಚ್ಯತಾಂ' ॥ 'ವೈಶಂಪಾಯನಃ । ಸಾಂಖ್ಯಂ ಯೋಗಃ ಪಾಶುಪತಂ ವೇದಾರಣ್ಯಕಮೇವ ಚ । ಜ್ಞಾನಾನ್ಯೇತಾನಿ ಭಿನ್ನಾನಿ ನಾತ್ರ ಕಾರ್ಯೋ ವಿಚಾರಣಾ' ॥ ಸಾಂಖ್ಯ ಶಾಸ್ತ್ರ, ಯೋಗಶಾಸ್ತ್ರ, ಪಾಶುಪತಾಗಮ, ವೇದಗಳೂ, ಉಪನಿಷತ್ತುಗಳೂ, ಪಂಚರಾತ್ರಾಗಮವೂ ಈ ದಾವ ಜ್ಞಾನಸಾಧನಗಳಾಗಿರುವುದರಿಂದ ಜ್ಞಾನಪದವಾಚ್ಯಗಳಾದ ಶಾಸ್ತ್ರಗಳು ಪರಸ್ಪರ ವಿರುದ್ಧಾರ್ಥಪ್ರತಿಪಾದಕಗಳೋ? ಅಥವಾ ಅಲ್ಲವೋ? ಹೇಳಲ್ಪಡಲಿ. ಎಂದು ಜನಮೇಜಯನು ಪ್ರಶ್ನಿಸಿದಾಗ, ವೈಶಂಪಾಯನರು ಸಾಂಖ್ಯ ಮೊದಲಾದ ಶಾಸ್ತ್ರಗಳು ಪರಸ್ಪರ ವಿರುದ್ಧಾರ್ಥಪ್ರತಿಪಾದಕಗಳು ಎಂವಂಗೀಕರಿಸಿ, ವೇದಾರಣ್ಯಕದಲ್ಲಿ ಅಂತರ್ಗತವಾದ ಪಂಚರಾತ್ರಕ್ಕೇನೇ ಉತ್ತಮತ್ವವನ್ನು ಹೇಳುತ್ತಾರೆ—

ಮೂ ॥ ಪಂಚರಾತ್ರಸ್ಯ ಕೃತ್ಸ್ನಸ್ಯ ವಕ್ತಾ ನಾರಾಯಣಃ ಸ್ವಯಂ ॥
ಸರ್ವೇಷ್ವೇತೇಷು ರಾಜೇಂದ್ರ ಜ್ಞಾನೇಷ್ವೇತದ್ವಿಶಿಷ್ಯತೇ ॥ ೧೦೯ ॥

ಅ ।। ಸಾಕ್ಷಾನ್ನಾರಾಯಣನೇ ನಿಖಿಲ ಪಂಚರಾತ್ರಾಗಮನವನ್ನು ಹೇಳಿದನು. ಎಲ್ಲೋ ಜನಮೇಜಯನೇ! ಈ ದಾವ ಜ್ಞಾನಸಾಧನಗಳಾಗಿರುವುದರಿಂದ ಜ್ಞಾನಪದವಾಚ್ಯಗಳಾದ ಸಾಂಖ್ಯ, ಯೋಗ, ಪಾಶುಪತ, ವೇದಾರಣ್ಯಕಾಖ್ಯ ಶಾಸ್ತ್ರ, ಪಂಚರಾತ್ರ ಇವುಗಳಲ್ಲಿ ಈ ಪಂಚರಾತ್ರಾಖ್ಯ ಶಾಸ್ತ್ರವು ಸರ್ವೋತ್ಕೃಷ್ಟವಾಗಿರುತ್ತದೆ.

ವಿಶೇಷಾಂಶ (1) —ವೇದ, ಪಂಚರಾತ್ರಗಳು ಒಂದೇ ವಿಧಗಳಾಗಿರುವುದರಿಂದ ಸಾಂಖ್ಯ, ಯೋಗ, ಪಾಶುಪತ ಎನ್ನುವ ಮೂರು ಗ್ರಂಥಗಳಿಂದಲೂ ಪಂಚರಾತ್ರವು ಉತ್ತಮ ವೆಂದುಕ್ತವಾಯಿತು. ವೇದಾರಣ್ಯಕಪದದಿಂದ ಪಂಚರಾತ್ರವನ್ನೂ ಇಟ್ಟುಕೊಳ್ಳಬೇಕು ॥೧೦೯॥

ಹಾಗದರೆ ಸಾಂಖ್ಯಾದಿ ಶಾಸ್ತ್ರಗಳು ಸರ್ವಥಾ ಅಪ್ರಮಾಣಗಳೋ ಏನು? ಎಂದರೆ—

ಮೂ ॥ ಜ್ಞಾನೇಷ್ವೇತೇಷು ರಾಜೇಂದ್ರ ಸಾಂಖ್ಯಪಾಶುಪತಾದಿಷು ॥
ಯಥಾಯೋಗಂ ಯಥಾನ್ಯಾಯಂ ನಿಷ್ಠಾ ನಾರಾಯಣಃ ಪರಃ॥೧೧೦॥

ಅ ॥ ಎಲೋ, ಜನಮೇಜಯನೇ! ಸಾಂಖ್ಯ, ಪಾಶುಪತ ಮೊದಲಾದ (ಯೋಗಶಾಸ್ತ್ರ, ತರ್ಕ, ಪೂರ್ವಮೀಮಾಂಸಾ, ಶಾಕ್ತ, ಸೌರ, ಗಾಣಪತ್ಯ ಮೊದಲಾದ) ಜ್ಞಾನಸಾಧನಗಳಾದ ಈ ಶಾಸ್ತ್ರಗಳಲ್ಲಿ ಪಂಚರಾತ್ರದಲ್ಲಿ ಹೇಳಿದ ಉಪಾಯವನ್ನು ಅತಿಕ್ರಮಿಸದೆ, ಪಂಚರಾತ್ರದಲ್ಲಿ ಹೇಳಿದ ನ್ಯಾಯವನ್ನು ಅತಿಕ್ರಮಿಸದೆ, (ಕೆಲ ಕೆಲವು ಕಡೆ) ಶ್ರೀ ನಾರಾಯಣನು ಸರ್ವೋತ್ತಮನು (ಎಂದು ಪ್ರತಿಪಾದಿಸಿಯದೆ ಆ ಅಂಶದಲ್ಲಿ) ನಿಷ್ಠಾ=ಉತ್ಕರ್ಷವು (ಪ್ರಾಮಾಣ್ಯವು) ಇದೆ.

ವಿಶೇಷಾಂಶ— (1) ಆ ಶಾಸ್ತ್ರಗಳಲ್ಲಿ ಹೆಚ್ಚು ಕಡೆ ಪ್ರಕೃತಿಜ್ಞಾನದಿಂದಲಾಗಲೀ, ಪ್ರಾಣಾಯಾಮಾದಿಗಳಿಂದ ಶ್ವಾಸವಿರೋಧವನ್ನು ಮಾಡಿ ಅದರಿಂದಲಾಗಲೀ, ಪಶುಪತಿ ಜ್ಞಾನದಿಂದಾಗಲೀ ಮುಕ್ತಿಯಾಗುತ್ತದೆಂದು ಪ್ರತಿಪಾದಿಸಿಯದೆ. ಆದರೆ ಕೆಲವುಕಡೆ ಪಂಚರಾತ್ರನ್ಯಾಯವನ್ನು ಅನುಸರಿಸಿ ಕೆಲವು ಕೆಲವು ಭಾಗದಲ್ಲಿ ಭಕ್ತಿಯಿಂದ ಮುಕ್ತಿಯೆಂದು ಪ್ರತಿಪಾದಿಸಿದೆ. ಶ್ರೀ ಹರಿ ಭಕ್ತಿಗೂ, ತಮ್ಮ ಗ್ರಂಥದಲ್ಲಿ ರುಚಿಯನ್ನು ಹುಟ್ಟಿಸುವುದಕ್ಕಾಗಿ ಕೆಲವು ಕೆಲವು ಭಾಗದಲ್ಲಿ ಭಗವಂತನ ಮಹಿಮೆಯು ಪ್ರತಿಪಾದಿತವಾಗಿದೆ. ಆಗ ಆ ವಂಶಕ್ಕೆ ಪ್ರಾಮಾಣ್ಯವನ್ನು ಅಂಗೀಕರಿಸುತ್ತೇವೆ ॥ ೧೧೦ ॥

ಈಗ ಪಂಚರಾತ್ರವನ್ನು ತಿಳಿದವರಿಗೆ ಮುಕ್ತಿಯಾಗುತ್ತದೆಂದು ಹೇಳಿರುವುದರಿಂದ ಪಂಚರಾತ್ರಕ್ಕೆ ಉತ್ತಮತ್ವವನ್ನು ಹೇಳುತ್ತಾರೆ—

ಮೂ ॥ ಪಂಚರಾತ್ರವಿದೋ ಮುಖ್ಯಾ ಯಥಾಕ್ರಮುಪರಾ ನೃಪ ॥
ಏಕಾಂತಭಾವೋಪಗತಾ ವಾಸುದೇವಂ ವಿಶಂತಿ ತೇ ॥ ೧೧೧ ॥

ಅ ॥ ಎಲೋ, ರಾಜನೇ! ದೇವತಾ ತಾರತಮ್ಯದಲ್ಲಿಯೇ ತಾತ್ಪರ್ಯವುಳ್ಳ ಒಬ್ಬನೇ ಸರ್ವೋತ್ತಮನು ಎನ್ನುವ ಭಕ್ತಿಯನ್ನು ಹೊಂದಿರುವ ಅಥವಾ ಅವ್ಯಭಿಚರಿತ ಭಕ್ತಿಯಿಂದ ಯುಕ್ತರಾದ, ಶ್ರೇಷ್ಠರಾದ ಆ ಪಂಚರಾತ್ರವನ್ನು ತಿಳಿದವರು ವಾಸುದೇವನನ್ನು ಪ್ರವೇಶಮಾಡುತ್ತಾರೆ. (ಅಂದರೆ ಮುಕ್ತಿಯನ್ನು ಹೊಂದುತ್ತಾರೆ.) ॥ ೧೧೧ ॥

ಭಾರತದ ವಾಕ್ಯಗಳನ್ನು ಪರ್ಯಾಲೋಚಿಸಿದರೂ ಎಲ್ಲಾ ಭಾರತಕ್ಕೂ ಶ್ರೀ ವಿಷ್ಣುವಿನ ಸರ್ವೋತ್ತಮತ್ವದಲ್ಲಿಯೇ ತಾತ್ಪರ್ಯವು ನಿಶ್ಚಿತವಾಗುತ್ತದೆನ್ನುವ ಅಭಿಪ್ರಾಯದಿಂದ ವಾಕ್ಯಾಂತರಗಳನ್ನು ಉದಾಹರಿಸುತ್ತಾರೆ—

ಜನಮೇಜಯ ಉವಾಚ—

ಮೂ ॥ ಬಹವಃ ಪುರುಷಾ ಬ್ರಹ್ಮನ್ನುತಾಹೋ ಏಕ ಏವ ತು ॥
ಕೋಹ್ಯತ್ರ ಪುರುಷಶ್ರೇಷ್ಠಸ್ತಂ ಭವಾನ್ವಕ್ತುಮರ್ಹತಿ ॥ ೧೧೨ ॥

ವೈಶಂಪಾಯನ ಉವಾಚ—

ನೈತದಿಚ್ಛಂತಿ ಪುರುಷಮೇಕಂ ಕುರುಕುಲೋದ್ವಹ ॥
ಬಹೂನಾಂ ಪುರುಷಾಣಾಂ ಹಿ ಯಥೈಕಾ ಯೋನಿರುಚ್ಯತೇ ॥
ತಥಾ ತಂ ಪುರುಷಂ ವಿಶ್ವಮಾಖ್ಯಾಸ್ಯಾಮಿ ಗುಣಾಧಿಕಂ ॥ ೧೧೩ ॥

ಅ ॥ ಜನಮೇಜಯನು (ವೈಶಂಪಾಯನನ್ನು ಕುರಿತು) ಪ್ರಶ್ನೆಮಾಡಿದನು. ಎಲೋ ವೈಶಂಪಾಯನನೇ! ೧ ಜೀವರು ಬಹುಮಂದಿಯೇ (ಭಿನ್ನರೋ?) ಅಥವಾ ೨ ಒಬ್ಬನೇ ಜೀವನೋ? (ಇಲ್ಲಿ ಒಬ್ಬನೇ ಆತ್ಮನು ಎನ್ನುವ ಮತವು ಅಪ್ರಾಮಾಣಿಕವೂ, ಅನುಭವವಿರುದ್ಧವೂ ಆಗಿದೆ ಎನ್ನುವ ಅಭಿಪ್ರಾಯದಿಂದ ೨ನೇ ಪಕ್ಷವನ್ನು ತಾನೇ ಪರಿಹರಿಸಿಕೊಂಡು, ಪ್ರಮಾಣ ಸಿದ್ಧವಾಗಿರುವುದರಿಂದ ೧ನೇ ಪಕ್ಷವನ್ನು ಅಂಗೀಕರಿಸಿಕೊಂಡು, ಅದರಲ್ಲಿಯೂ ಜನಮೇಜಯನು ಪ್ರಶ್ನೆ ಮಾಡುತ್ತಾನೆ). ಅನೇಕ ಪುರುಷರನ್ನು ಅಂಗೀಕರಿಸಿದರೂ ಪುರುಷಶ್ರೇಷ್ಠನು ಯಾರು? ಆ ಪುರುಷನನ್ನು, (ಅತಿಶ್ರೇಷ್ಠನಾದವನನ್ನು ಪ್ರತ್ಯೇಕವಾಗಿ ವಿವೇಕಮಾಡಿ) ಹೇಳಲಿಕ್ಕೆ ನೀವು ಯೋಗ್ಯರಾಗಿರುತ್ತೀರಿ. (ಹೀಗೆ ಪ್ರಶ್ನೆ ಮಾಡಿದ ಜನಮೇಜಯರಾಜನನ್ನು ಕುರಿತು) ವೈಶಂಪಾಯನರು (ಪರಿಹಾರವನ್ನು) ಹೇಳುತ್ತಾರೆ, ಕುರುಗಳ ಕುಲಕ್ಕೆ ನಿಯಾಮಕನಾದ ರಾಜನೇ! ಒಬ್ಬನೇ ಪುರುಷನನ್ನು ಇಚ್ಛಿಸುತ್ತಾರೆ ಎನ್ನುವುದು (ಯಾವುದೋ) ಇದು (ಯುಕ್ತವು) ಅಲ್ಲ. ಅಥವಾ ಒಬ್ಬ ಪುರುಷನನ್ನು ಇಚ್ಛಿಸುತ್ತಾರೆ ಎನ್ನುವುದಿಲ್ಲ. (ಅಂದರೆ ಒಬ್ಬನೇ ಆತ್ಮನು ಎನ್ನುವ ಮತವನ್ನು ಪ್ರಾಮಾಣಿಕರು ಅಂಗೀಕರಿಸುವುದಿಲ್ಲ. ಮತ್ತೇನೆಂದರೆ— ಅನೇಕ ಪುರುಷರು ಇರುತ್ತಾರೆ. ಆ) ಬಹು ಪುರುಷರಿಗೆ ಹೇಗೆ ಒಬ್ಬನೇ ಪುರುಷನು ಕಾರಣನೆಂದು ಹೇಳಲ್ಪಡುತ್ತಾನೋ, ಹಾಗೆಯೇ ಸರ್ವಗುಣಗಳಿಂದ ಅಧಿಕನಾದ, ಪುರುಷನು ಕಾರಣನಾಗುತ್ತಾನೋ, ಹಾಗೆಯೇ ಆ ಸರ್ವಗುಣಗಳಿಂದ ಅಧಿಕನಾದ ಪೂರ್ಣನಾದ ಪುರುಷನನ್ನು ವಿಷ್ಣುವನ್ನಾಗಿ ಹೇಳುತ್ತೇನೆ ॥ ೧೧೨ ॥ ೧೧೩ ॥

ಮತ್ತು ಚತುರ್ಮುಖಬ್ರಹ್ಮನು ಶಿವನಿಗೆ ಯಾವ ಅರ್ಥವನ್ನು ಹೇಳಿರುವನೋ, ಆ ಅರ್ಥಸಮಾಪ್ತಿಯಿಂದಲೂ ಭಾರತಕ್ಕೆ ವಿಷ್ಣೂತ್ತಮತ್ವದಲ್ಲಿಯೇ ತಾತ್ಪರ್ಯವೆನ್ನುವುದು ನಿಶ್ಚಿತವಾಗುತ್ತದೆನ್ನುತ್ತಾರೆ—

ಮೂ ॥ ಆಹ ಬ್ರಹ್ಮೈತಮೇವಾರ್ಥಂ ಮಹಾದೇವಾಯ ಪೃಚ್ಛತೇ ॥
ತಸ್ಯೈಕಸ್ಯ ಮಮತ್ವಂ ಹಿ ಸಚೈಕಃ ಪುರುಷೋ ವಿರಾಟ್ ॥ ೧೧೪ ॥

ಅ ॥ (ಈ ಅರ್ಥವನ್ನೇ) ಪ್ರಶ್ನೆ ಮಾಡತಕ್ಕ ರುದ್ರನಿಗೆ ಈಶ್ವರ ಚತುರ್ಮುಖಬ್ರಹ್ಮನು ಈ ಅರ್ಥವನ್ನೇ ಹೇಳಿರುವನು. ಆ ವಿಷ್ಣುವಿಗೆ ಒಬ್ಬನಿಗೇನೇ ಮಮತ್ವವು. (ಅಂದರೆ ನಾನೊಬ್ಬನೇ ಸ್ವತಂತ್ರನು, ಬೇರೆ ಎಲ್ಲಾ ಜಗತ್ತು ನನ್ನ ಅಧೀನವಾದುದು ಎನ್ನುವ ಮಮತೆಯು ಬೇರೆಯವರು ಅಸ್ವತಂತ್ರರಾದ ಪ್ರಯುಕ್ತ ಅವರಿಗೆ ಇಲ್ಲ). ಅವನೊಬ್ಬನೇ ಪೂರ್ಣ ಗುಣಗಳುಳ್ಳವನು, ವಿಶೇಷವಾಗಿ ಪ್ರಕಾಶಿಸುವವನು, (ಅಂದರೆ ಸರ್ವೋತ್ತಮನು). ಅಥವಾ ಸಮಸ್ತ ಜಗತ್ತು ನನ್ನಅಧೀನದಲ್ಲಿರುತ್ತದೆ ಎನ್ನುವ ಆಕಾರದಿಂದ ವಶಿತ್ವವು ಆ ವಿಷ್ಣು ಒಬ್ಬನಿಗೇನೇ (ಬೇರೆಯವರಿಗೆ ಇಲ್ಲ. ಸರ್ವಜಗದ್ವಶಿತ್ವರೂಪವಾದ ಐಶ್ವರ್ಯವು ಬೇರೆಯವರಿಗೆ ಇಲ್ಲ) ॥ ೧೧೪ ॥

ಮೂ ॥ ಆಹ ಬ್ರಹ್ಮಾ ಚಾದ್ಯ ಈಶಃ ಪ್ರಜಾನಂ
ತಸ್ಮಾಜ್ಜಾತಸ್ತ್ವಂ ಚ ಮತ್ತಃ ಪ್ರಸೂತಃ ॥
ಮತ್ತೋ ಜಗತ್ಸ್ಥಾವರಜಂಗಮಂ ಚ
ಸರ್ವೇ ವೇದಾಃ ಸರಹಸ್ಯಾಶ್ಚ ಪುತ್ರ ॥ ೧೧೫ ॥

ಅ ॥ ಪ್ರಜೆಗಳಿಗೆ ನಿಯಾಮಕನಾದ (ಸರ್ವರಿಗೂ) ಅಧಿಭೂತವಾದ ಬ್ರಹ್ಮಶಬ್ದವಾಚ್ಯನಾದ ನಾನು ಆ ಶ್ರೀ ಹರಿಯಿಂದ ಹುಟ್ಟಿದವನು. ಎಲೋ ಮಗನಾದ ರುದ್ರನೇ, ನೀನು

ನನ್ನದೆಶೆಯಿಂದ ಹುಟ್ಟಿದವನು. ಮತ್ತು ನನ್ನದೆಶೆಯಿಂದ ಸ್ಥಾವರ ಜಂಗಮಾತ್ಮಕವಾದ ಜಗತ್ತು ಹುಟ್ಟಿರುತ್ತದೆ. ಉಪನಿಷತ್ತುಗಳಿಂದ ಸಹಿತಗಳಾದ ಎಲ್ಲಾ ವೇದಗಳೂ ಹುಟ್ಟಿದವು ॥೧೧೫॥

ಹಾಗೆಯೇ ಇದೇ ಅರ್ಥವನ್ನು ಪ್ರತಿಪಾದಿಸತಕ್ಕ ಭೀಮನ ವಚನವು ಶ್ರೀ ವಿಷ್ಣುವಿನ ಸರ್ವೋತ್ತಮತ್ವದಲ್ಲಿ ಪ್ರಮಾಣವಿದೆ ಎನ್ನುತ್ತಾರೆ—

ಮೂ ॥ ತಥೈವ ಭೀಮವಚನಂ ಧರ್ಮಜಂ ಪ್ರತ್ಯುದೀರಿತಂ ॥
ಬ್ರಹ್ಮೇಶಾನಾದಿಭಿರ್ದೇ(ಸ್ಸ)ವೈಸ್ಸಮೇತೈರ್ಯದ್ಗುಣಾಂಶಕಃ ॥
ನಾವಸಾಯೆಯಿತುಂ ಶಕ್ಯೋ ವ್ಯಾಚಕ್ಷಾಣೈಶ್ಚ ಸರ್ವದಾ ॥ ೧೧೬ ॥
ಸ ಏವ ಭಗವಾನ್ ಕೃಷ್ಣೋ ನೈವ ಕೇವಲಮಾನುಷಃ ॥
ಯಸ್ಯ ಪ್ರಸಾದಜೋ ಬ್ರಹ್ಮಾ ರುದ್ರಶ್ಚ ಕ್ರೋಧಸಂಭವಃ ॥ ೧೧೭ ॥

ಅ ॥ ಹಾಗೆಯೇ ಧರ್ಮರಾಜನನ್ನು ಕುರಿತು ಹೇಳಲ್ಪಟ್ಟ ಭೀಮನ ವಚನವು ಇದೆ. ಸರ್ವದಾ ವಾಖ್ಯಾನವನ್ನೇ ಮಾಡಿಕೊಂಡಿರುವ ಯುಕ್ತರಾದ ಬ್ರಹ್ಮ ರುದ್ರಮೊದಲಾದ ದೇವತೆಗಳಿಂದ ಯಾವ ಶ್ರೀ ಹರಿಯ ಗುಣಗಳ ಏಕದೇಶವು ಇಷ್ಟೇ ಎಂದು ನಿಶ್ಚಯಿಸಲಿಕ್ಕೆ ಶಕ್ಯವಾಗುವುದಿಲ್ಲವೋ ಆ ಭಗವಂತನೇ ಕೃಷ್ಣನು. ಕೃಷ್ಣನು ಶುದ್ಧಮನುಷ್ಯನೂ ಅಲ್ಲ, ಮನುಷ್ಯ ಸದೃಶನೂ ಅಲ್ಲ. ಬ್ರಹ್ಮನು ಯಾವ ಶ್ರೀ ಹರಿಯ ಪ್ರಸಾದದಿಂದಲೇ ಹುಟ್ಟಿದವನೋ? ಶ್ರೀ ರುದ್ರನು ಕ್ರೋಧದಿಂದ ಹುಟ್ಟಿದವನೋ? ॥೧೧೬॥೧೧೭॥

ಬ್ರಹ್ಮಾದಿಸರ್ವಮುಕ್ತರಿಗೂ ಆಶ್ರಯವಾಗಿರುತ್ತಾನೆನ್ನುವಲ್ಲಿ ಪ್ರಮಾಣವನ್ನು ಹೇಳುತ್ತಾರೆ-

ಮೂ ॥ ವಚನಂ ಚೈವ ಕೃಷ್ಣಸ್ಯ ಜ್ಯೇಷ್ಠಂ ಕುಂತೀಸುತಂ ಪ್ರತಿ ೧೧೮ ॥
ರುದ್ರಂ ಸಮಾಶ್ರಿತಾ ದೇವಾಃ ರುದ್ರೋ ಬ್ರಹ್ಮಾಣಮಾಶ್ರಿತಃ ॥
ಬ್ರಹ್ಮಾ ಮಾಮಾಶ್ರಿತೋ ನಿತ್ಯಂ ನಾಹಂ ಕಂಚಿದುಪಾಶ್ರಿತಃ ॥ ೧೧೯ ॥

ಅ ॥ ಹಾಗೆಯೇ ಜ್ಯೇಷ್ಠನಾದ, ಕುಂತೀಪುತ್ರನಾದ ಧರ್ಮರಾಜನನ್ನು ಕುರಿತು ಶ್ರೀ ಕೃಷ್ಣನ ವಚನವೂ ಕೂಡ ಇದೆ. ದೇವತೆಗಳು ರುದ್ರನನ್ನು ಆಶ್ರಯಿಸಿರುವರು. ರುದ್ರನು ಬ್ರಹ್ಮನನ್ನು ಆಶ್ರಯಿಸಿರುವನು. ಬ್ರಹ್ಮನು ನಿತ್ಯದಲ್ಲಿಯೂ ನನ್ನನ್ನು ಆಶ್ರಯಿಸಿರುವನು. ನಾನು ಯಾರನ್ನೂ ಆಶ್ರಯಿಸಿಕೊಂಡಿಲ್ಲ. ॥೧೧೮॥೧೧೯॥

ಹಾಗಾದರೆ ಸಂಸಾರದಲ್ಲಿ ಭೇದವು ಇದ್ದುದರಿಂದ ಶ್ರೀ ಹರಿಯು ಬ್ರಹ್ಮಾದಿಗಳಿಗೆ ಆಧಾರನಾದಾಗ್ಯೂ ಮುಕ್ತಿಯಲ್ಲಿ ಭೇದವು ಇಲ್ಲದಿರುವುದರಿಂದ ಮುಕ್ತರಿಗೆ ಆಧಾರನು ಆಗಲಾರನು; ಎಂದಾಶಂಕಿಸಿದರೆ ಮುಕ್ತಿಯಲ್ಲಿಯೂ ಬ್ರಹ್ಮಾದಿ ಮುಕ್ತರ ಸಮೂಹಗಳಿಗೆ ಶ್ರೀ ಹರಿಯೇ ಆಧಾರನು ಎನ್ನುವುದನ್ನು ದೃಷ್ಟಾಂತಕೊಟ್ಟು ತೋರಿಸುತ್ತಾರೆ—

ಮೂ ॥ ಯಥಾಶ್ರಿತಾನಿ ಜ್ಯೋತೀಂಷಿ ಜ್ಯೋತಿಃಶ್ರೇಷ್ಠಂ ದಿವಾಕರಂ ॥
ಏವಂ ಮುಕ್ತಗಣಾಃ ಸರ್ವೇ ವಾಸುದೇವಮುಪಾಶ್ರಿತಾಃ ॥೧೨೦॥

ಅ ॥ ಹೇಗೆ ಜ್ಯೋತಿಸ್ಸುಗಳು ಜ್ಯೋತಿಃಶ್ರೇಷ್ಠನಾದ ಸೂರ್ಯನನ್ನು ಆಶ್ರಯಿಸಿಕೊಂಡು ಇರುತ್ತವೋ, ಇದೇಪ್ರಕಾರ ಎಲ್ಲಾಮುಕ್ತರ ಸಮೂಹಗಳೂ ಶ್ರೀ ಕೃಷ್ಣನನ್ನು ಆಶ್ರಯಿಸಿರುತ್ತಾರೆ ॥೧೨೦॥

ಭಾರತವು ಸರ್ವನಿರ್ಣಾಯಕವಾಗಿದೆ ಎನ್ನುವಲ್ಲಿ ಭವಿಷ್ಯತ್ಪರ್ವ ವಚನವನ್ನುದಾಹರಿಸಿದರೂ ಪುನಃ ಆದರದಿಂದ ಸ್ಥಾನಾಂತರದಲ್ಲಿರತಕ್ಕ ವ್ಯಾಸವಾಕ್ಯವನ್ನು ಅನುವಾದಮಾಡುತ್ತಾರೆ—

ಮೂ ॥ ಭವಿಷ್ಯತ್ಪರ್ವಗಂ ಚಾಪಿ ವಚೋ ವ್ಯಾಸಸ್ಯ ಸಾದರಂ ॥
ವಾಸುದೇವಸ್ಯ ಮಹಿಮಾ ಭಾರತೇ ನಿರ್ಣಯೋದಿತಃ ॥೧೨೧॥

ಅ ॥ ಭವಿಷ್ಯತ್ಪರ್ವದಲ್ಲಿರತಕ್ಕದ್ದೂ ಕೂಡ ವೇದವ್ಯಾಸರ ವಚನವು ತಾತ್ಪರ್ಯಸಹಿತವು ಹೇಗೆ ಆದೀತೋ ಹಾಗೆ ಇದೆ. ಭಾರತದಲ್ಲಿ ಶ್ರೀ ವಾಸುದೇವನ ಮಹಿಮೆಯು (ಅಂದರೆ ಮಹತ್ವವು, ಸರ್ವೋತ್ಕೃಷ್ಟತ್ವವು.) (ನನ್ನಿಂದ) ನಿರ್ಣಯದಿಂದ ಹೇಳಲ್ಪಟ್ಟಿದೆ ೧೨೧॥

ಹಾಗಾದರೆ ಅನ್ಯವಿಷಯಗಳಾದ ಕಥೆಗಳನ್ನು ಏಕೆ ಹೇಳುವುದೆಂದರೆ—

ಮೂ ॥ ತದರ್ಥಾಸ್ತು ಕಥಾಃ ಸರ್ವಾ ನಾನ್ಯಾರ್ಥಂ ವೈಷ್ಣವಂ ಯಶಃ ॥
ತತ್ಪ್ರತೀಪಂ ತು ಯದ್ದೃಶ್ಯೇನ್ನ ತನ್ಮಮ ಮನೀಷಿತಂ ॥ ೧೨೨॥

ಅ ॥ ಎಲ್ಲಾ ಪಾಂಡವಾದಿ ಕಥೆಗಳಾದರೂ ವಿಷ್ಣೂತ್ಕರ್ಷಕ್ಕೇ ಪ್ರಯೋಜನವಾಗಿವುಳ್ಳವುಗಳು. ವಿಷ್ಣುಸಂಬಂಧಿಯಾದ ಯಶಸ್ಸು (ಅಂದರೆ ಶ್ರೀ ವಿಷ್ಣುವಿನ ಮಹಿಮೆಯನ್ನು ಹೇಳುವುದು.) (ವಿಷ್ಣುವಿನಿಂದ) ಇತರರಾದ ಬ್ರಹ್ಮಾದಿಗಳ ಉತ್ಕರ್ಷಕ್ಕಾಗಿ ಆಗುವುದಿಲ್ಲ. ವಿಷ್ಣೂತ್ಕರ್ಷಕ್ಕೆ ವಿರುದ್ಧವಾದುದು ಯಾವುದು ವಚನವು ಕೆಲವುಕಡೆ ಕಾಣುವುದೋ ಅದು ನನಗೆ ಸಮ್ಮತವಲ್ಲ ॥

~~ವಿಶೇಷಾಂಶ — (1) ರಾಜಸೂಯ ಯಾಗ, ವನವಾಸ ಯುದ್ಧಾದಿವರ್ಣನೆ ಮೊದಲಾದ~~ ಕಥೆಗಳು ಶ್ರೀ ಕೃಷ್ಣನ ಮಹಿಮೆಯನ್ನು ನಿರ್ಣಯಿಸಲಿಕ್ಕೆ ಉಪಯುಕ್ತಗಳಾದವುಗಳು ಹೇಗೆಂದರೆ ಶ್ರೀ ಕೃಷ್ಣನಲ್ಲಿ ಭಕ್ತಿಯಿಂದ ಪೂರ್ಣರಾದ ಪ್ರಯುಕ್ತ ಪಾಂಡವರು ರಾಜಸೂಯ ಯಾಗವನ್ನು ಮಾಡಿರುವರು. ವನವಾಸದಲ್ಲಿಯೂ, ಯುದ್ಧದಲ್ಲಿಯೂ ಎಲ್ಲಾ ಶತ್ರುಗಳನ್ನು ಪರಾಜಯಿಸಿರುವರು, ಧರ್ಮದಿಂದಲೇ ರಾಜ್ಯವನ್ನು ಪರಿಪಾಲಿಸಿರುವರು, ಇದುಮೊದಲಾದ ಕಥೆಗಳನ್ನು ಹೇಳುವಾಗ ಶ್ರೀ ವಿಷ್ಣುವಿನ ಮಹಿಮೆಯೇ ನಿರ್ಣೀತವಾಗುತ್ತದೆ. (2) ಶ್ರೀ ವಿಷ್ಣು ಮಹಿಮೆಗೆ ವಿರುದ್ಧವಾದ ವಚನವು ಕೆಲವು ಕಡೆ ಕಂಡರೆ ಅದನ್ನು ನಾನು ಮನಃಪೂರ್ವಕವಾಗಿ ಹೇಳಿದ್ದಲ್ಲ. ಮತ್ತೆ ಪರಶಾಸ್ತ್ರಕಾರರು ಹೀಗೆ ಹೇಳುತ್ತಾರೆಂದು ದರ್ಶನ ಭಾಷೆಯಿಂದ ಪರಮತಾನುವಾದವನ್ನೇ ಮಾಡಿರುವರು. ಅದಾದರೂ ಸರ್ವಥಾ ನನಗೆ ಸಮ್ಮತವಲ್ಲವೆಂದು ವ್ಯಾಸರು ತನ್ನ ಅಭಿಪ್ರಾಯವನ್ನು ತಾನೇ ಸ್ಪಷ್ಟೀಕರಿಸಿದರು ॥ ೧೨೨॥

ನಿನಗೆ ಸಮ್ಮತವಾಗದಿದ್ದರೆ ಹೇಗೆ ಹೇಳಿದ್ದು ಎಂದರೆ— ಮೂರು ಭಾಷೆಗಳಿಂದ ಭಾರತವನ್ನು ಹೇಳಿರುವುದರಿಂದ ಆ ಅರ್ಥವು ಆಗುವುದಿಲ್ಲವೆನ್ನುತ್ತಾರೆ.

ಮೂ ॥ ಭಾಷಾಸ್ತು ತ್ರಿವಿಧಾಸ್ತತ್ರ ಮಯಾ ವೈ ಸಂಪ್ರದರ್ಶಿತಾಃ ॥
ಉಕ್ತೋ ಯೋ ಮಹಿಮಾ ವಿಷ್ಣೋಃ ಸ ತೂಕ್ತೋ ಹಿ ಸಮಾಧಿನಾ ॥
॥ ೧೨೩ ॥

ಅ ॥ ನನ್ನಿಂದ (ಅಂದರೆ ವ್ಯಾಸರೂಪಿಯಾದ ಶ್ರೀ ಹರಿಯಿಂದ) ಭಾರತದಲ್ಲಿ ಆದರೂ (ಸಮಾಧಿಭಾಷಾ, ಗುಹ್ಯಭಾಷಾ, ದರ್ಶನ ಭಾಷಾಭೇದದಿಂದ) ಮೂರು ವಿಧಗಳಾದ ಭಾಷೆಗಳಾದರೂ ತೋರಿಸಲ್ಪಟ್ಟಿವೆ. (ಅದರಲ್ಲಿ ಸಮಾಧಿ ಭಾಷೆಯನ್ನು ತೋರಿಸುತ್ತಾರೆ.) ಶ್ರೀ ವಿಷ್ಣುವಿನ ಮಹಿಮೆಯು ಯಾವುದು ಸ್ಪಷ್ಟವಾಗಿ ಹೇಳಲ್ಪಟ್ಟಿದೋ, ಅದಾದರೂ ಸಮಾಧಿ ಭಾಷೆಯಿಂದ ಹೇಳಲ್ಪಟ್ಟಿದೆ.

ವಿಶೇಷಾಂಶ — 'ಗ ನಾಸ್ತಿನಾರಾಯಣ ಸಮಂ, ೨ ರುದ್ರಂಸಮಾಶ್ರಿತಾದೇವಾಃ, ೩ ಸತ್ಯಂ ಸತ್ಯಂ ಪುನಃ ಸತ್ಯಂ' ಇದು ಮೊದಲಾದುವನ್ನು ವೇದವ್ಯಾಸರು ಸಮಾಹಿತವಾದ ಮನಸ್ಸಿನಿಂದ ಏಕಾಗ್ರಚಿತ್ತರಾಗಿ ಹೇಳಿರುವರು. ತಥಾಚ ಶ್ರೀ ವಿಷ್ಣುವಿನ ಮಹಿಮೆಯನ್ನು ಪ್ರತಿಪಾದಿಸತಕ್ಕ ಭಾಷೆಯು ಸಮಾಧಿಭಾಷೆಯು ಎಂದುಕ್ತವಾಯಿತು ॥೧೨೩॥

ದರ್ಶನಭಾಷೆಯಿಂದ ಯಾವುದು ಹೇಳಲ್ಪಟ್ಟಿದೆ ಎಂದರೆ—

ಮೂ ॥ ಶೈವದರ್ಶನಮಾಲಂಬ್ಯ ಕ್ವಚಿಚ್ಛೈವೀ ಕಥೋದಿತಾ ॥
ಸಮಾಧಿಭಾಷಯೋಕ್ತಂ ಯತ್ತತ್ಸರ್ವಂ ಗ್ರಾಹ್ಯಮೇವ ಹಿ ॥೧೨೪॥

ಅ ॥ ಶಿವನಿಗೆ ಸರ್ವೋತ್ತಮತ್ವವನ್ನು ಪ್ರತಿಪಾದಿಸತಕ್ಕ ಶಾಸ್ತ್ರವನ್ನು ಆಶ್ರಯಿಸಿಕೊಂಡು ಕೆಲವು ಕಡೆ ಶಿವಸಂಬಂಧಿಯಾದ (ಅಂದರೆ, ಶಿವನಿಗೆ ಉತ್ಕರ್ಷವನ್ನು ಪ್ರತಿಪಾದಿಸತಕ್ಕ) ಕಥೆಯು (ದರ್ಶನಭಾಷಾ ಎಂದು) ಹೇಳಿಸಿಕೊಳ್ಳಲ್ಪಡುತ್ತದೆ. (ದರ್ಶನಾದಿ ಭಾಷೆಯಿಂದ ಹೇಳಲ್ಪಟ್ಟಿದು ಗ್ರಾಹ್ಯವೂ, ಅಗ್ರಾಹ್ಯವೂ ಆಗದಿರುವುದರಿಂದ ಅದಕ್ಕೆ ಗತಿಯನ್ನು ಹೇಳುತ್ತಾರೆ) ಸಮಾಧಿ ಭಾಷೆಯಿಂದ ಯಾವುದು ಹೇಳಲ್ಪಟ್ಟದೋ ಅದೆಲ್ಲಾ ಗ್ರಾಹ್ಯವೇ ಆಗಿರುತ್ತದೆ ॥೧೨೪॥

ಸಮಾಧಿಭಾಷೆಯಿಂದ ಹೇಳಿದ್ದನ್ನು ಎಲ್ಲವನ್ನೂ ಸ್ವೀಕರಿಸಬೇಕೆಂದು ಹೇಳಿದರಿಂದ ದರ್ಶನ ಭಾಷೆಯಿಂದ ಹೇಳಿದ್ದನ್ನು ಕೆಲವನ್ನು ಮಾತ್ರ ಸ್ವೀಕರಿಸಬೇಕು. ಎಂದು ಪ್ರತೀತವಾಗುತ್ತದೆ. ಅದನ್ನು ಸ್ಪಷ್ಟೀಕರಿಸುತ್ತಾರೆ—

ಮೂ ॥ ಅವಿರುದ್ಧಂ ಸಮಾಧೇಸ್ತು ದರ್ಶನೋಕ್ತಂ ಚ ಗೃಹ್ಯತೇ ॥
ಆದ್ಯಂತಯೋರ್ವಿರುದ್ಧಂ ಯದ್ದರ್ಶನಂ ತದುದಾಹೃತಂ ॥೧೨೫॥
ದರ್ಶನಾಂತರಸಿದ್ಧಂ ಚ ಗುಹ್ಯಭಾಷಾನ್ಯಥಾ ಭವೇತ್ ॥
ತಸ್ಮಾದ್ವಿಷ್ಣೋರ್ಮಹಿಮಾ ಭಾರತೋಕ್ತೋಯಥಾರ್ಥತಃ ॥೧೨೬॥

ಅ ॥ ಸಮಾಧಿಭಾಷೆಯಿಂದ ಹೇಳಲ್ಪಟ್ಟದ್ದಕ್ಕೆ ವಿರುದ್ಧವಾಗದಿರುವುದು ದರ್ಶನಭಾಷೆಯಿಂದ ಹೇಳಲ್ಪಟ್ಟದ್ದೂ ಸ್ವೀಕರಿಸಲ್ಪಡುತ್ತದೆ. (ದರ್ಶನಭಾಷಾ ಲಕ್ಷಣವನ್ನು ಹೇಳುತ್ತಾರೆ.) ಆದಿಯಲ್ಲಿ ಹೇಳಲ್ಪಟ್ಟ ಶ್ರೀಕೃಷ್ಣನ ಮಹಿಮಾಖ್ಯವಾದ ಪ್ರಮೇಯಕ್ಕೂ, ಅಂತ್ಯದಲ್ಲಿ ಹೇಳಲ್ಪಡುವ ಶ್ರೀಕೃಷ್ಣೋತ್ಕರ್ಷಾಖ್ಯ ಪ್ರಮೇಯಕ್ಕೂ ವೈಷ್ಣವದರ್ಶನವಿರುದ್ಧವಾದ ಪಾಶುಪತ ಮೊದಲಾದ ದರ್ಶನಾಂತರಗಳಿಂದ ಸಿದ್ಧವಾದ ಯಾವುದು ಕೃಷ್ಣ ಶಿರ್ವಾಕಚತ್ವ ಮೊದಲಾದ ಪ್ರಮೇಯವು (ಮಧ್ಯದಲ್ಲಿ ಆಜ್ಞಜನರನ್ನು ಮೋಹಿಸುವುದಕ್ಕಾಗಿ ಹೇಳಲ್ಪಡುತ್ತದೋ,) ಆ ದರ್ಶನವು (ದರ್ಶನ ಭಾಷೆಯಿಂದ) ಹೇಳಲ್ಪಟ್ಟಿತು. (ತಥಾಚ ಪೂರ್ವೋತ್ತರಾರ್ಧ ವಿರುದ್ಧಾರ್ಥವನ್ನು ಪ್ರತಿಪಾದಿಸತಕ್ಕ ಭಾಷೆಯು ದರ್ಶನಭಾಷೆಯೆಂದು ಸೂಚಿತವಾಯಿತು.) (ಗುಹ್ಯಭಾಷಾ ಲಕ್ಷಣವನ್ನು

ಹೇಳುತ್ತಾರೆ.) ಅನ್ಯಥಾ–ದರ್ಶನಭಾಷೆಯಿಂದ ಬೇರೆಪ್ರಕಾರ, ಸ್ಪಷ್ಟಾರ್ಥಕ ಸಮಾಧಿಭಾಷೆಯಿಂದಲೂ ಬೇರೆಪ್ರಕಾರವಾಗಿ, ಯತ್–ಯಾವುದು, ಭವೇತ್–ಆಗುವುದೋ, (ಅಂದರೆ ಕೆಲವು ಕಡೆ ಹೇಳಲ್ಪಟ್ಟದ್ದು ಆಗುವುದೋ,) ಅದು ಗುಹ್ಯಭಾಷೆಯು. ಆದಕಾರಣ ಶ್ರೀ ವಿಷ್ಣುವಿನ ಮಹಿಮೆಯು ಭಾರತದಲ್ಲಿ ಹೇಳಲ್ಪಟ್ಟದೆ ಎಂದು ಯಾವುದೋ ಯಥಾರ್ಥವೇ (ಸತ್ಯವೇ).

ವಿಶೇಷಾಂಶ—(1) ಪೂರ್ವೋತ್ತರಾರ್ಧ, ವಿರುದ್ಧಾರ್ಥವನ್ನು ಪ್ರತಿಪಾದಿಸತಕ್ಕ ಭಾಷೆಯು ದರ್ಶನಭಾಷೆಯು (2) **ಅಟ್ಟಿಶೂಲಾ ಜನಪದಾಃ ಶಿವಶೂಲಾಶ್ಚತು ಷ್ಪಥಾಃ । ಪ್ರಮದಾಃ ಕೇಶಶೂಲಿನ್ಯೋ ಭವಿಷ್ಯಂತಿ ಕಲೌ ಯುಗೇ ॥ ಉಚ್ಛಿಷ್ಟಂ ಶಿವನಿರ್ಮಾಲ್ಯ ವಾಂತಂ ಚ ಮೃತಕರ್ಪಟಂ । ಕಾಕವಿಷ್ಠಾ ಸಮಾಯುಕ್ತಂ ಪಂಚಪೂತಾನಿ ಭಾರತ ॥** ಇತ್ಯಾದಿಗಳಂತೆ ಗೂಢಾರ್ಥಕವಾದ ಪದದಿಂದ ಹೇಳಲ್ಪಡತಕ್ಕದ್ದು ಗುಹ್ಯಭಾಷೆಯು. ತಥಾಚ ಅನ್ಯಥಾ ಪ್ರತೀಯಮಾನವಾದ ಅರ್ಥವನ್ನು ಪ್ರತಿಪಾದಿಸತಕ್ಕ ಭಾಷೆಯು ಗುಹ್ಯಭಾಷೆಯು ॥ ॥ ೧೨೫ ॥ ೧೨೬ ॥

ವಾಯ್ವಾದಿಗಳು ಶ್ರೀ ವಿಷ್ಣುವಿನ ಅಂಗಭೂತರು ಎನ್ನುವ ಅರ್ಥದಲ್ಲಿ ಭವಿಷ್ಯತ್ಪುರಾಣ ವಚನವನ್ನು ಹೇಳುತ್ತಾರೆ—

ಮೂ ॥ **ತಸ್ಯಾಂಗಂ ಪ್ರಥಮೋ ವಾಯುಃ ಪ್ರಾದುರ್ಭಾವತ್ರಯೋನ್ವಿತಃ ॥**
ಪ್ರಥಮೋ ಹನುಮನ್ನಾಮ ದ್ವಿತೀಯೋ ಭೀಮ ಏವ ಚ ॥
ಪೂರ್ಣಪ್ರಜ್ಞಸ್ತೃತೀಯಸ್ತು ಭಗವತ್ಕಾರ್ಯಸಾಧಕಃ ॥ ೧೨೭ ॥
ತ್ರೇತಾದ್ಯೇಷು ಯುಗೇಷ್ವೇವ(ಷ) ಸಂಭೂತಃ ಕೇಶವಾಜ್ಞಯಾ ॥
ಏಕೈಕಶಸ್ತ್ರಿಷು ಪೃಥಕ್ ದ್ವಿತೀಯಾಂಗಂ ಸರಸ್ವತೀ ॥ ೧೨೮ ॥

ಆ ॥ ಆ ಶ್ರೀಹರಿಗೆ ಅವತಾರಗಳು ಮೂರರಿಂದ ಕೂಡಿರುವ ವಾಯುದೇವರು ಒಂದನೇ ಅಂಗಭೂತರು. (ಮೂರು ಅವತಾರಗಳನ್ನು ಹೇಳುತ್ತಾರೆ.) ಪ್ರಥಮಾವತಾರವು ಹನುಮಂತನೆಂದು ಪ್ರಸಿದ್ಧವಾದುದು. ಎರಡನೇ ಅವತಾರವು ಭೀಮನೆಂದು ಪ್ರಸಿದ್ಧವಾದುದು. ಮೂರನೇ ಅವತಾರವು ಪೂರ್ಣಪ್ರಜ್ಞನೆಂದು ಪ್ರಸಿದ್ಧವಾದುದು. ಶ್ರೀ ಭಗವಂತನ ಕಾರ್ಯವನ್ನು ಸಾಧಿಸಿಕೊಡತಕ್ಕ ವಾಯುದೇವರು. ಮೂರು ರೂಪಗಳಲ್ಲಿ ಒಂದೊಂದು ರೂಪವನ್ನು ಕುರಿತು ಪ್ರತ್ಯೇಕಪ್ರತ್ಯೇಕವಾಗಿ ಶ್ರೀ ಕೇಶವನ ಆಜ್ಞೆಯಿಂದಲೇ ತ್ರೇತವೊದಲಾದ ಯುಗಗಳಲ್ಲಿ (ಅಂದರೆ ತ್ರೇತಾಯುಗ, ದ್ವಾಪರಯುಗ, ಕಲಿಯುಗಗಳಲ್ಲಿ) ಅವತರಿಸಿರುವರು. ಸರಸ್ವತಿಯು ಎರಡನೇ ಅಂಗಭೂತಳು.

ವಿಶೇಷಾಂಶ— (1) ಭಗವಂತನು ಬಲಕಾರ್ಯದಲ್ಲಿಯೂ, ಜ್ಞಾನಕಾರ್ಯದಲ್ಲಿಯೂ, ಪ್ರವೃತ್ತನಾಗುತ್ತಿರಲು ಅವಾಪ ಕಾರ್ಯಗಳಲ್ಲಿ ಪ್ರಧಾನನಾದುದರಿಂದ ಸರ್ವಾಧಿಕಾರಿಗಳಲ್ಲಿಯೂ ಉತ್ತಮರಾದವರು ವಾಯುದೇವರೇ. ಇಲ್ಲಿ ವಾಯುಪದದಿಂದ ಚತುಮುಖ ಬ್ರಹ್ಮನನ್ನೂ ಇಟ್ಟುಕೊಳ್ಳತಕ್ಕದ್ದು. (2) ಸರಸ್ವತೀ ಪದದಿಂದ ಭಾರತಿಯನ್ನೂ ಇಟ್ಟುಕೊಳ್ಳತಕ್ಕದ್ದು ॥ ॥ ೧೨೭ ॥ ೧೨೮ ॥

ಭಾರತದಲ್ಲಿ ಕೆಲವು ಕೆಲವು ಕಡೆ ದ್ರೌಪದಿಯೇ ಶ್ರೀಃ ಎಂದು ಹೇಳಿಸಿಕೊಳ್ಳಲ್ಪಡುತ್ತಾಳೆ. ಅದರ ಅರ್ಥವನ್ನು ಹೇಳುತ್ತಾರೆ—

ಮೂ ॥ ಶಂರೂಪೇ ತು ರತೇರ್ವಾಯೌ ಶ್ರೀರಿತ್ಯೇವ ಚ ಕೀರ್ತ್ಯತೇ
ಸೈವ ಚ ದ್ರೌಪದೀನಾಮ ಕಾಲೀ ಚಂದ್ರೇತಿ ಚೋಚ್ಯತೇ ॥೧೨೯॥

ಅ ॥ ಸುಖಿಸ್ವರೂಪನಾದ ವಾಯುವಿನಲ್ಲಿ ರಮಿಸಿಕೊಂಡು ಇರುವುದರಿಂದ ಆ ಸರಸ್ವತಿಯೇ (ಆ ಭಾರತಿಯೇ)* ಶ್ರೀಃ ಎಂದೂ ಹೇಳಿಸಿಕೊಳ್ಳಲ್ಪಡುತ್ತಾಳೆ. ಆ ಸರಸ್ವತೀಯೇ ದ್ರೌಪದಿಯೆಂದೂ, ಕಾಲಿಯೆಂದೂ, ಚಂದ್ರಾಯೆಂದೂ ಹೇಳಿಸಿಕೊಳ್ಳಲ್ಪಡುತ್ತಾಳೆ ॥ ೧೨೯ ॥

ಮೂರನೇ ಅಂಗವನ್ನು ಹೇಳುತ್ತಾರೆ—

ಮೂ ॥ ತೃತೀಯೋಂಗಂ ಹರೇಃ ಶೇಷಃ ಪ್ರಾದುರ್ಭಾವಸಮನ್ವಿತಃ ॥
ಪ್ರಾದುರ್ಭಾವಾ ನರಶ್ಚೈವ ಲಕ್ಷ್ಮಣೋ ಬಲ ಏವ ಚ ॥ ೧೩೦ ॥
ರುದ್ರಾತ್ಮಕತ್ವಾಚ್ಛೇಷಸ್ಯ ಶುಕೋ ದ್ರೌಣಿಶ್ಚ ತತ್ತನು(ನೂ)ಃ ॥
ಇಂದ್ರೋ(ದ್ರೇ) ನರಾಂಶಸಂಪತ್ಯಾ ಪಾರ್ಥೋಽಪೀಷತ್ತದಾತ್ಮಕಃ ॥
॥ ೧೩೧ ॥

ಅ ॥ ಪ್ರಾದುರ್ಭಾವರೂಪಗಳಿಂದ ಕೂಡಿರುವ ಶೇಷನು ಶ್ರೀ ಹರಿಗೆ ಮೂರನೇ ಅಂಗ ಭೂತನು. ನರನು-ಲಕ್ಷ್ಮಣನು-ಬಲರಾಮನು-ಇವರೆಲ್ಲರೂ (ಶೇಷನ) ಅವತಾರಗಳೇ. (ಇತರಾವತಾರಗಳನ್ನೂ ಹೇಳುತ್ತಾರೆ.) ಶೇಷನಿಗೆ ಅತೀತ ರುದ್ರಸ್ವರೂಪತ್ವವಿದ್ದುದರಿಂದ ಶುಕ್ರಾಚಾರ್ಯರೂ, ದ್ರೋಣಾಚಾರ್ಯರ ಪುತ್ರನಾದ ಅಶ್ವತ್ಥಾಮನೂ ಕೂಡ ಶೇಷನ ಅವತಾರಗಳೇ (ಬೇರೆ ವಿಶೇಷವನ್ನೂ ಹೇಳುತ್ತಾರೆ.) ಇಂದ್ರನಿಂದ ಅಭಿನ್ನವಾದ (ಅಂದರೆ ಇಂದ್ರನ ಅವತಾರ ಭೂತನಾದಾಗ್ಯೂ) ಅರ್ಜುನನು ಅಥವಾ ಇಂದ್ರನಲ್ಲಿ ನರರೂಪಿಯಾದ ಶ್ರೀ ಹರಿಯ ಅಂಶದ ಪ್ರಾಪ್ತಿಯಿಂದ ಪೃಥಾಪುತ್ರನಾದ ಅರ್ಜುನನೂ ಕೂಡ ಸ್ವಲ್ಪ ಆ ಶೇಷನ ಸ್ವರೂಪನು. ಅದಕಾರಣ ಅರ್ಜುನನೂ ಕೂಡ ಮೂರನೇ ಅಂಗಭೂತನು) ॥ ೧೩೦ ॥ ೧೩೧ ॥

ಮೂ ॥ ಪ್ರದ್ಯುಮ್ನಾದ್ಯಾಸ್ತತೋ ವಿಷ್ಣೋರಂಗಭೂತಾಃ ಕ್ರಮೇಣ ತು ॥
ಚರಿತಂ ವೈಷ್ಣವಾನಾಂ ತು ವಿ(ತದ್ವಿ)ಷ್ಣೂದ್ರೇಕಾಯ ಕಥ್ಯತೇ ॥೧೩೨॥

ಅ ॥ ಆಮೇಲೆ ಪ್ರದ್ಯುಮ್ನ–ಅನಿರುದ್ಧ ಮೊದಲಾದವರು ಕ್ರಮವಾಗಿ ವಿಷ್ಣುವಿನ ಅಂಗ ಭೂತರು. (ಹಾಗಾದರೆ ಭಾರತದಲ್ಲಿ ಶ್ರೀ ಕೃಷ್ಣನ ಕಥೆಯನ್ನು ಮಾತ್ರ ಹೇಳಬೇಕಿತ್ತು. ಪಾಂಡವರ ಕಥೆಯನ್ನು ಹೇಳಲಿಕ್ಕೆ ಕಾರಣವೇನು, ಎಂದರೆ—) ವೈಷ್ಣವರ ಚರಿತ್ರೆಯಾದರೂ ಶ್ರೀ ವಿಷ್ಣುವಿನ ಉತ್ಕರ್ಷಕ್ಕೋಸ್ಕರವೇ ಹೇಳಲ್ಪಡುತ್ತದೆ. (ಅಂದರೆ ಶ್ರೀ ವಿಷ್ಣು ಸಂಬಂಧಿಗಳಾದ ದೇವತೆಗಳ ಗುಣ ಕರ್ಮಾದಿಗಳ ವರ್ಣನವೂ ಕೂಡ ಭಗವಂತನ ಮಹಿಮೆಯನ್ನು ಹೇಳಲಿಕ್ಕೇನೇ ಉಪಯುಕ್ತವಾಗುತ್ತದೆ)॥೧೩೨॥

ಹೀಗೆ **'ತಸ್ಯಾಂಗಂ ಪೃಥವೋವಾಯುಃ'** ಇತ್ಯಾದಿಗಳಿಂದ ಅಂಗಭೂತರಾದ ದೇವತೆಗಳ ಸ್ವರೂಪವನ್ನು ನಿರೂಪಿಸಿ ಪುನಃ ಭಗವಂತನ ಅವತಾರಗಳಲ್ಲಿ ನಿರ್ದೋಷತ್ವವು ಯಾವುದು ಪ್ರತಿಜ್ಞಾತವಾಗಿದೆಯೇ ಅದನ್ನೇ ಭಾಗವತದಲ್ಲಿ ಹೇಳಿದ ವಚನದಿಂದಲೂ ದೃಢೀಕರಿಸುತ್ತಾರೆ–

* ಶಕಾರದಿಂದ 'ಶಂ' ರೂಪನಾದ (ಅಂದರೆ ಸುಖಿಸ್ವರೂಪನಾದ) ವಾಯುವು ಹೇಳಿಸಿಕೊಳ್ಳಲ್ಪಡುತ್ತಾನೆ. ಶೇಷದಿಂದ 'ಶೇ ರಮತೇ=ವಾಯುವಿನಲ್ಲಿ ಕ್ರೀಡಿಸುತ್ತಾಳೆ' ಎನ್ನುವ ಅರ್ಥವು ಸಿದ್ಧವಾಗುತ್ತದೆ. ಈ ವ್ಯುತ್ಪತ್ತಿಯಿಂದ ಶ್ರೀಃ ಎನ್ನುವ ಶಬ್ದವು ನಿಷ್ಪನ್ನವಾಗುತ್ತದೆ.

ಮೂ ॥ ತಥಾ ಭಾಗವತೇಽಪ್ಯುಕ್ತಂ ಹನೂಮದ್ವಚನಂ ಪರಂ ॥
ಮತ್ಸ್ಯಾವತಾರಸ್ತ್ವಹ ಮತ್ಸ್ಯ ಶಿಕ್ಷಣಂ
ರಕ್ಷೋ ವಧಾಯೈವ ನ ಕೇವಲಂ ವಿಭೋಃ ॥
ಕುತೋಽನ್ಯ ಥಾ ಸ್ಯೂರಮತಃ ಸ್ವ ಆತ್ಮನ್
ಸೀತಾಕೃತಾನಿ ವ್ಯಸನಾನೀಶ್ವರಸ್ಯ ॥ ೧೩೩ ॥

ಅ ॥ ಹಾಗೆಯೇ ಭಾಗವತದಲ್ಲಿಯೂ ಹೇಳಲ್ಪಟ್ಟ ಉತ್ಕೃಷ್ಟವಾದ ಹನುಮಂತನ ವಚನ ವಿದೆ. (ಕಿಂಪುರುಷ ಖಂಡದಲ್ಲಿರತಕ್ಕ ಋಷ್ಯಾದಿಗಳನ್ನು ಕುರಿತು ಹನುಮಂತನಿಂದ ಉಪದಿಷ್ಟ ವಾದ ಅದೇ ವಚನವನ್ನು ಹೇಳುತ್ತಾರೆ.) (ಶ್ರೀ ವಿಷ್ಣು ಸರ್ವೋತ್ತಮತ್ವವನ್ನು ತಿಳಿಸುವ ವಿಷಯ ದಲ್ಲಿಯೂ, ವಾಯ್ವಾದಿಗಳಿಗೆ ಕ್ರಮದಿಂದ ವಿಷ್ಣುವಿನ ಅಂಗತ್ವವನ್ನು ತಿಳಿಸುವ ವಿಷಯದಲ್ಲಿಯೂ ಸರ್ವ ಸಮರ್ಥನಾದ ಶ್ರೀ ಹರಿಯ ಸಾಕ್ಷಾತ್ ಅವತಾರಭೂತನಾದ ಶ್ರೀ ರಾಮನು ಸರ್ವದಾ ಸೀತೆಯಿಂದ ಅವಿಯುಕ್ತನಾಗಿ ಸೀತಾದೇವಿಯನ್ನು ರಕ್ಷಿಸುತ್ತಲೇ ಇದ್ದಾನೆ. ಆದಕಾರಣ) ಶ್ರೀ ನಾರಾಯಣನಿಗೆ ಈ ಲೋಕವಲ್ಲಿ ಮನುಷ್ಯರಲ್ಲಿ ಅವತರಣವು ಕೇವಲ ರಾಕ್ಷಸರಾದ ರಾವಣಾದಿಗಳ ಸಂಹಾರಕ್ಕೋಸ್ಕರವೇ ಆದದ್ದಲ್ಲ. (ಮತ್ತೆ) ಮನುಷ್ಯರ ಶಿಕ್ಷಾರೂಪವಾದ ಪ್ರಯೋಜನವನ್ನು ಉದ್ದೇಶಿಸಿಯೂ ಅವತಾರವು. (ಅಂದರೆ ವನಿತಾದಿ ವಿಷಯಗಳಲ್ಲಿ ಆಸಕ್ತನಾದವನಿಗೆ ಆ ವಿಷಯಗಳ ವಿಯೋಗದಿಂದ ಮಹತ್ತಾದ ದುಃಖವು ಹುಟ್ಟುವುದು. ಆದಕಾರಣ ಭಾರ್ಯಾದಿ ವಿಷಯಗಳಲ್ಲಿ ಅತ್ಯಾಸಕ್ತಿಯನ್ನು ಮಾಡಕೂಡದು ಎಂದು ಮನುಷ್ಯರಿಗೆ ಶಿಕ್ಷಿಸುವುದಕ್ಕಾಗಿಯೂ ಅವತಾರವನ್ನು ಮಾಡಿರುವನು.) (ಇದರಿಂದ ಶ್ರೀ ರಾಮನಿಗೆ ಸೀತಾದೇವಿಯ ವಿಯೋಗದಿಂದ ಸಂತಾಪಾದಿಗಳು ಹುಟ್ಟಿದವು ಎಂದು ಅಜ್ಞರಿಗೆ ತೋರಿಸಿದಂತೆ ಆಯಿತು. ವಸ್ತುತಃ ಶ್ರೀರಾಮನಿಗೆ ಸಂತಾಪಾದಿಗಳು ಇಲ್ಲವೇ ಇಲ್ಲವೆನ್ನುತ್ತಾರೆ.) (ಮನುಷ್ಯರನ್ನು ಶಿಕ್ಷಿಸುವುದಕ್ಕಾಗಿ ಅವತಾರವನ್ನು ಮಾಡದಿರುವವನಾದರೆ) ಸ್ವತಂತ್ರವಾದ ಸ್ವಸ್ವರೂಪದಲ್ಲಿಯೇ ರಮಿಸಿಕೊಂಡಿರುವ ಸರ್ವೇಶ್ವರನಾದ ಈ ಶ್ರೀ ರಾಮನಿಗೆ ಸೀತಾದೇವಿಯ ನಿಮಿತ್ತಗಳಾದ (ಅಂದರೆ-ಸೀತಾದೇವಿಯ ವಿಯೋಗದಿಂದುಂಟಾದ ಸಂತಾಪಾದಿರೂಪಗಳಾದ ವ್ಯಸನಗಳು) ಯಾವುದರಿಂದ ಆದಾವು? (ಅಂದರೆ, ಸರ್ವಥಾ ಆಗಲಾರವು. ಸಾಮಾನ್ಯ ಮನುಷ್ಯರನ್ನು ಶಿಕ್ಷಿಸುವುದಕ್ಕಾಗಿಯೂ ಅಯೋಗ್ಯರನ್ನು ಮೋಹಿಸುವುದಕ್ಕಾಗಿಯೂ ವ್ಯಸನಗಳನ್ನು ತೋರಿಸಿರುವರು.) ॥೧೩೩॥

ಅದನ್ನೇ ಸ್ಪಷ್ಟೀಕರಿಸುತ್ತಾರೆ—

ವಮೂ ॥ ನ ವೈ ಸ ಆತ್ಮಾತ್ಮವತಾಮಧೀಶ್ವರೋ
ಭುಂಕ್ತೇ ಹಿ ದುಃಖಂ ಭಗವಾನ್ವಾಸುದೇವಃ ॥
ನ ಸ್ತ್ರೀಕೃತಂ ಕಶ್ಮಲಮಶ್ನುವೀತ
ನ ಲಕ್ಷ್ಮಣಂ ಚಾಪಿ ಜಹಾತಿ ಕರ್ಹಿಚಿತ್ ॥ ೧೩೪ ॥

ಅ ॥ (ಆತ್ಮವತಾಂ- ಮನಸ್ಸನ್ನು ವಶೀಕರಿಸಿರುವ ಯೋಗೀಶ್ವರರಿಗೆ ನಿಯಾಮಕನಾದ, ಷಡ್ಗುಣೈಶ್ವರ್ಯ ಪರಿಪೂರ್ಣನಾದ, ಎಲ್ಲಾ ಜಗತ್ತುಗಳಲ್ಲಿ ಆವಾಸಮಾಡಿಕೊಂಡಿರುವುದರಿಂದಲೂ, ಕ್ರೀಡಾದಿಗುಣವಿಶಿಷ್ಟನಾದುದರಿಂದಲೂ, ವಾಸುದೇವನಾಮಕನಾದ, ಪರಮಾತ್ಮನಾದ, ಆ ಶ್ರೀ ರಾಮನು ಸರ್ವಥಾ ದುಃಖವನ್ನು ಅನುಭವಿಸುವುದೇ ಇಲ್ಲ. **'ನಿರನಿಷ್ಠೋ ನಿರವದ್ಯಃ'** ಇತ್ಯಾದಿಶ್ರುತಿಸಿದ್ಧವು. ಸ್ತ್ರೀನಿಮಿತ್ತವಾದ ಕಶ್ಮಲವನ್ನು ಅಥವಾ ಸೀತಾಪ್ರತಿಕೃತಿಯ

ವಿಯೋಗದಿಂದುಂಟಾದ ಕಶ್ಮಲವನ್ನು ಅನುಭವಿಸುವುದೇ ಇಲ್ಲ. (ಕೋಪಾದಿ ದೋಷಗಳು ಇಲ್ಲದಿರುವುದರಿಂದಲೇ) ಲಕ್ಷ್ಮಣನನ್ನು ಯಾವಾಗಲೂ ಬಿಡುವುದೇ ಇಲ್ಲ.

ವಿಶೇಷಾಂಶ (1) ದೂರ್ವಾಸ ಋಷಿಗಳನ್ನು ದ್ವಾರದಲ್ಲಿ ಮನೆಯೊಳಗೆ ಪ್ರವೇಶ ಮಾಡಿಸಿದರಿಂದುಂಟಾದ ಕೋಪದಿಂದ ಲಕ್ಷ್ಮಣನನ್ನು ರಾಮನು ಬಿಟ್ಟನು ಎಂದು ರಾಮಾಯಣದಲ್ಲಿ ಕಥೆಯು ಇದೆ. ಅದೂಕೂಡ ದುಷ್ಟರನ್ನು ಮೋಹಿಸುವುದಕ್ಕಾಗಿಯೇ ಪ್ರವೃತ್ತವಾದುದು ಎಂದು ಸೂಚಿತವಾಯಿತು. (2) ಆನಂದ ಪರಿಪೂರ್ಣನಿಗೆ ದುಃಖವು ಹೇಗೆ ಬಂದೀತು? ಸರ್ವಥಾ ದುಃಖವು ಬರಲಾರದು. ಸರ್ವ ಜಗತ್ತನ್ನು ವ್ಯಾಪಿಸಿಕೊಂಡಿರುವ ಶ್ರೀ ರಾಮನಿಗೆ ವಿಯೋಗವೂ ಹೇಗೆ ಬಂದೀತು? ಸರ್ವಥಾ ವಿಯೋಗವು ಇಲ್ಲ ಎಂದು ಸೂಚಿಸುವುದಕ್ಕಾಗಿ ಎರಡು ವಿಶೇಷಣಗಳು. (3) ಶ್ರೀ ಕೃಷ್ಣಾವತಾರದಲ್ಲಿ ಬಹು ಸಹಸ್ರ ಸ್ತ್ರೀಯರಿಂದ ಕೂಡಿಕೊಂಡು ಕ್ರೀಡಿಸಿಕೊಂಡು ಇದ್ದರೂ ಶ್ರೀ ಕೃಷ್ಣನಿಗೆ ಸ್ತ್ರೀ ನಿಮಿತ್ತವಾದ ಕಶ್ಮಲವಿಲ್ಲವೆಂದು ಸೂಚಿಸುವುದಕ್ಕಾಗಿ 'ವಾಸುದೇವಃ' ಎಂದು ಗ್ರಹಣಮಾಡಿರುವರು ॥ ೧೪೪ ॥

ಈ ಕಾರಣದಿಂದಲೂ ಶ್ರೀ ರಾಮನಿಗೆ ದುಃಖಸಂಭಾವನೆಯೇ ಇಲ್ಲವೆಂದು ಶ್ರೀ ಹನುಮಂತನು ನಿರೂಪಿಸುತ್ತಾನೆ—

ಮೂ ॥ ಯತ್ಪಾದಪಂಕಜಪರಾಗ ನಿಷೇವಕಾಣಾಂ
ದುಃಖಾನಿ ಸರ್ವಾಣಿ ಲಯಂ ಪ್ರಯೊಂತಿ ॥
ಸ ಬ್ರಹ್ಮ ವಂದ್ಯಚರಣೋ ಜನಮೋಹನಾಯ
ಸ್ತ್ರೀಸಂಗಿನಾಮಿತಿ ರತಿಂ ಪ್ರಥಯಂಶ್ಚಕಾರ ॥ ೧೪೫ ॥

ಅ ॥ ಯಾವ ಶ್ರೀ ಹರಿಯ ಕಮಲದಂತೆ ಇರುವ ಚರಣಗಳ ಧೂಳಿಗಳನ್ನು ಸೇವಿಸಿಕೊಂಡಿರುವ ಪ್ರಾಣಿಗಳ ಎಲ್ಲಾ ದುಃಖಗಳು ನಾಶವನ್ನು ಹೊಂದುತ್ತವೋ (ಆ ಶ್ರೀ ಹರಿಗೆ ದುಃಖಸಂಭಾವನೆಯೂ ಕೂಡ) ಯಾವುದರಿಂದ ಬಂದೀತು? (ಹಾಗದರೆ ಯಾವುದಕ್ಕಾಗಿ ಹಾಗೆ ದುಃಖಾದಿಗಳನ್ನು ತೋರಿಸಿರುವನು ಎಂದರೆ—ಹಾಗೆ ತೋರಿಸುವುದಕ್ಕೆ ಪ್ರಯೋಜನವನ್ನು ಹೇಳುತ್ತಾರೆ.) ಬ್ರಹ್ಮನಿಂದ ನಮಸ್ಕರಿಸಿಕೊಳ್ಳಲ್ಪಡತಕ್ಕ ಪಾದಗಳುಳ್ಳ ಶ್ರೀ ರಾಮನ ದುರ್ಜನರನ್ನು ಮೋಹಿಸುವುದಕ್ಕಾಗಿ ಸ್ತ್ರೀಯರಲ್ಲಿ ಆಸಕ್ತರಾದವರೆಗೆ ಹೀಗೆ ರತಿಯನ್ನು ಪ್ರಸಿದ್ಧಿಪಡಿಸುವವನಾಗಿ ಸಂಚರಿಸುತ್ತಾ ಇದ್ದನು.

ವಿಶೇಷಾಂಶ--- (1) ದುರ್ಜನರನ್ನು ಮೋಹಿಸುವುದು ಒಂದು ಪ್ರಯೋಜನವು. (2) ಸ್ತ್ರೀಯರಲ್ಲಿ ಆಸಕ್ತರಾದವರಿಗೆ ಹಿಂದೆ ಹೇಳಿದ ಪ್ರಕಾರ ದುಃಖಸಾಧನಭೂತವಾದುದು ರತಿಯು ಎಂದು ಲೋಕದಲ್ಲಿ ಪ್ರಸಿದ್ಧಿಪಡಿಸುವುದು ಎರಡನೇ ಪ್ರಯೋಜನವು ॥ ೧೪೫ ॥

ಭಾಗವತದಲ್ಲಿ ಹೇಳಿದ ಈ ಪ್ರಮೇಯವನ್ನೇ ಭಾರತಸಮಾಖ್ಯಾವಾಕ್ಯದಿಂದಲೂ ದೃಢೀಕರಿಸುತ್ತಾರೆ—

ಮೂ ॥ ಕ್ವಚಿಚ್ಛಿವಂ ಕ್ವಚಿದ್ಋಷೀನ್ ಕ್ವಚಿದ್ದೇವಾನ್ ಕ್ವಚಿನ್ನರಾನ್ ॥
ನಮತ್ಯರ್ಚಯತಿ ಸ್ತೌತಿ ವರಾನರ್ಥಯತೇಽಪಿ ಚ ॥
ಲಿಂಗಂ ಪ್ರತಿಷ್ಠಾಪಯತಿ ವೃಷೋತ್ಸವರತೋ ವರಾನ್ ॥ ೧೪೬ ॥

ಅ ॥ (ಶ್ರೀ ಹರಿಯು) ಕೆಲವುಕಡೆ ಶಿವನನ್ನೂ, ಕೆಲವುಕಡೆ ಋಷಿಗಳನ್ನೂ, ಕೆಲವು ಕಡೆ ದೇವತೆಗಳನ್ನೂ, ಕೆಲವುಕಡೆ ಮನುಷ್ಯರನ್ನೂ ನಮಸ್ಕರಿಸುತ್ತಾನೆ; ಪೂಜಿಸುತ್ತಾನೆ; ಸ್ತೋತ್ರಮಾಡುತ್ತಾನೆ; (ಶಿವಾದಿಗಳಿಂದಲೂ) ವರಗಳನ್ನು ಬೇಡಿಕೊಳ್ಳುತ್ತಾನೆ; ಶಿವಲಿಂಗವನ್ನೂ ಪ್ರತಿಷ್ಠೆ ಮಾಡುತ್ತಾನೆ; ಅಸುರರ ದೆಶೆಯಿಂದ ವರಗಳನ್ನೂ ಬೇಡಿಕೊಳ್ಳುತ್ತಾನೆ.

ವಿಶೇಷಾಂಶ— (1) ಮದಾಂಧರಾದ ಮಧುಕೈಟಭರು ವರವನ್ನು ಬೇಡಿಕೊಳ್ಳಿ ಎಂದು ಶ್ರೀ ಕೃಷ್ಣನ ಪತ್ತಿರ ಹೇಳುತ್ತಿರಲು ಶ್ರೀ ಕೃಷ್ಣನು ನಿಮ್ಮಿಬ್ಬರನ್ನು ಸಂಹರಿಸತಕ್ಕವನು ಆಗುವೆನೆಂದು ವರವನ್ನು ಸ್ವೀಕರಿಸಿದನು. ಕೊಟ್ಟ ವರವನ್ನು ವ್ಯತ್ಯಾಸಪಡಿಸಿದರೆ ತಮ್ಮ ಮಹಿಮೆಗೆ ನ್ಯೂನತೆಯು ಬಂದೀತು ಎನ್ನುವ ಹೆದರಿಕೆಯಿಂದ ಆ ಮಧುಕೈಟಭರು ಹಾಗೆಯೇ ಆಗಲಿ ಎಂದು ಹೇಳಿರುವರು. ಎನ್ನುವ ಕಥೆಯನ್ನು ಸಂಗ್ರಹಿಸಿಕೊಳ್ಳುವುದಕ್ಕಾಗಿ **'ವೃಣೋತ್ಯಸುರತೋ ವರಾನ್'** ಎಂದು ಹೇಳಿರುವರು. (2) ಈ ವಿಷಯವನ್ನು ಮಾರ್ಕಂಡೇಯ ಪುರಾಣದಲ್ಲಿಯೂ, ದೇವೀಮಾಹಾತ್ಮ್ಯದಲ್ಲಿಯೂ ಹೇಳಿರುವರು. **'ತದಾ ದ್ವಾವಸುರೌ ಘೋರೌ ವಿಖ್ಯಾತೌ ಮಧುಕೈಟಭೌ । ವಿಷ್ಣುಕರ್ಣಮಲೋದ್ಭೂತೌ ಹಂತುಂ ಬ್ರಹ್ಮಾಣಮುದ್ಯತೌ ॥ ಅಧ್ಯಾ ೧ ಶ್ಲೋ. ೬೮ ॥ ತಾವಪ್ಯತಿಬಲೋನ್ಮತ್ತೌ ಮಹಾಮಾಯಾ ವಿಮೋಹಿತೌ ।೯೪॥ ಉಕ್ತವಂತೌ ವರೋಽಸ್ಮತ್ತೋವ್ರಿಯತಾಮಿತಿ ಕೇಶವಂ ॥೯೫॥ ಭವೇತಾಮದ್ಯ ಮೇ ತುಷ್ಟೌ ಮಮ ವಧ್ಯಾವುಭಾವಪಿ ೯೭॥ ಕಿಮನ್ಯೇನ ವರೇಣಾತ್ರ ಏತಾವದ್ಧಿ ವೃತಂ ಮಯಾ' ॥೯೮॥** ಆಗ ಪ್ರಸಿದ್ಧರಾದ ಮಧುಕೈಟಭಾಖ್ಯ ಅಸುರರು ವಿಷ್ಣುವಿನ ಕಿವಿಯ ಮಲದಿಂದ ಹುಟ್ಟಿದವರು; ಬ್ರಹ್ಮನನ್ನು ಕೊಲ್ಲಲಿಕ್ಕೆ ಉದ್ಯುಕ್ತರಾದರು. ಅತಿಬಲದಿಂದ ದೃಪ್ತರಾದ ಆ ಅಸುರರು ಮಾಯೆಯಿಂದ ವಿಮೋಹಿತರಾಗಿ ನಮ್ಮಿಂದ ವರವನ್ನು ಬೇಡಿಕೊ ಎಂದು ಶ್ರೀ ಕೇಶವನ ಹತ್ತಿರ ಹೇಳುತ್ತಿರಲು, ನಿಮ್ಮಿಬ್ಬರನ್ನು ಕೊಲ್ಲತಕ್ಕವರಾಗುವೆನು. ಬೇರೆ ವರವನ್ನು ಬೇಡಿದುದರಿಂದ ಏನು ಪ್ರಯೋಜನವು? ಇಷ್ಟೇ ವರವನ್ನು ಕೇಳಿಕೊಂಡೆನು ಎಂದು ಹೇಳಿದನು ಎಂದು ಇದೆ. (3) ಇದೇ ಅಭಿಪ್ರಾಯವು ಭಾರತದ ಆದಿಪರ್ವದಲ್ಲಿಯೂ ಇದೆ. **'ಪ್ರತಿಗೃಹ್ಣೀ ವರಂ ವೀರಾ ವೀಪ್ಸಿತಂ ಚ ವರೋ ಮಮ । ಯುವಾಂ ಚ ವೀರ್ಯಸಂಪನ್ನೌ ನ ವಾಮಸ್ತಿ ಸಮಃ ಪುಮಾನ್ ॥ ವಧ್ಯತ್ವಮುಪಗಚ್ಛೇತಾಂ ಮಮ ಸತ್ಯಪರಾಕ್ರಮೌ** ಇತ್ಯಾದಿ ।೧೩೬॥

ಶಕ್ತಿಯಿಲ್ಲದಿರುವುದರಿಂದಲೇ ನಮನಾದಿಗಳು ಎಂದಾಶಂಕಿಸಿದರೆ— ಸರ್ವೈಶ್ವರ್ಯ ಮೊದಲಾದ ಗುಣಗಳಿಂದ ಯುಕ್ತನಾದ ಪ್ರಯುಕ್ತ ಶಕ್ತ್ಯಭಾವವು ಅಲ್ಲ ಎನ್ನುವ ಅಭಿಪ್ರಾಯದಿಂದ ಆ ಗುಣಗಳನ್ನು ಅನುವಾದಮಾಡುತ್ತಾ ನಮನಾದಿಗಳಿಗೆ ಪ್ರಯೋಜನವನ್ನು ಹೇಳುತ್ತಾರೆ—

ಮೂ ॥ ಸರ್ವೇಶ್ವರಃ ಸ್ವತಂತ್ರೋಽಪಿ ಸರ್ವಶಕ್ತಿಶ್ಚ ಸರ್ವದಾ॥
ಸರ್ವಜ್ಞೋಽಪಿ ವಿಮೋಹಾಯ ಜನಾನಾಂ ಪುರುಷೋತ್ತಮಃ ॥೧೩೭॥

ಅ ॥ ಕ್ಷರ, ಅಕ್ಷರ ಪುರುಷರಿಂದುತ್ತಮನಾದ ಶ್ರೀ ಹರಿಯು ಸರ್ವರಿಗೂ ನಿಯಾಮಕನಾದಾಗ್ಯೂ, ಸರ್ವಸ್ವತಂತ್ರನಾದಾಗ್ಯೂ, ಸರ್ವದಾ ಸರ್ವಶಕ್ತನಾದಾಗ್ಯೂ, ಸರ್ವಜ್ಞನಾದಾಗ್ಯೂ ಜನರನ್ನು ಮೋಹಿಸುವುದಕ್ಕಾಗಿ (ನಮಸ್ಕಾರಗಳನ್ನು ಮಾಡುತ್ತಾನೆ) ॥೧೩೭॥

ಈ ಪ್ರಕಾರವಾಗಿ ಪ್ರತ್ಯೇಕ ಪ್ರತ್ಯೇಕವಾಗಿ ಗ್ರಂಥಗಳನ್ನು ವಿಚಾರಮಾಡುತ್ತಿರಲು ಈ ನಿರ್ಣಯವು ಉಂಟಾಯಿತೆನ್ನುತ್ತಾರೆ—

ಮೂ ॥ ತಸ್ಮಾದ್ಯೋ ಮಹಿಮಾ ವಿಷ್ಣೋಃ ಸರ್ವಶಾಸ್ತ್ರೋದಿತಃ ಸ ಹಿ॥
ನಾನ್ಯದಿತ್ಯೇಷ ಶಾಸ್ತ್ರಾಣಾಂ ನಿರ್ಣಯಃ ಸಮುದಾಹೃತ ॥೧೩೮॥

ಅ ॥ ಆದುದರಿಂದ ಯಾವುದು ಶ್ರೀವಿಷ್ಣುವಿನ ಮಹಿಮೆಯೋ ಅದುವೇ ಸರ್ವಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆ. (ಅನ್ಯತ್-) ಇತರವಾದುದು (ಅಂದರೆ ಮನುಷ್ಯರನ್ನು ಅನುಕರಣಮಾಡುವುದಕ್ಕಾಗಿಯೂ, ಅಸುರರನ್ನು ಮೋಹಿಸುವುದಕ್ಕಾಗಿಯೂ ಮಾಡಲ್ಪಟ್ಟದ್ದು ಯಾವುದು ತನ್ನ ಮಹಿಮೆಗೆ ವಿರೋಧಿಯಾದುದು ಕೈಲಾಸಯಾತ್ರಾ ಮೊದಲಾದ ಚರಿತ್ರೆಯೋ, ಅದು ಶಾಸ್ತ್ರ ತಾತ್ಪರ್ಯಕ್ಕೆ ವಿಷಯವಾಗಿ ಹೇಳಲ್ಪಟ್ಟದ್ದು) ಅಲ್ಲ. ಇದುವೇ ಸರ್ವಶಾಸ್ತ್ರಗಳ ನಿಶ್ಚಯವೆಂದು ಚೆನ್ನಾಗಿ ಹೇಳಲ್ಪಟ್ಟಿದೆ.

ವಿಶೇಷಾಂಶ— ಶ್ರೀ ಹರಿಯೇ ಮಾಡಿರುವುದರಿಂದ ಆ ಕೈಲಾಸ ಯಾತ್ರಾದಿಗಳನ್ನು ಶಾಸ್ತ್ರದಲ್ಲಿ ಕೆಲಕೆಲವುಕಡೆ ಶಾಸ್ತ್ರಕಾರರು ಹೇಳುತ್ತಾರೆ. ಆದಾಗ್ಯೂ ಈ ಕೈಲಾಸ ಯಾತ್ರಾಮೊದಲಾದುದು ಶ್ರೀವಿಷ್ಣುವಿನ ಮಹಿಮೆಗೆ ವಿರೋಧಿಯಾದುದರಿಂದ ಶಾಸ್ತ್ರತಾತ್ಪರ್ಯ ವಿಷಯೀಭೂತವಾದ ಅರ್ಥವು ಆಗುವುದಿಲ್ಲ. ॥೧೩೮॥

ಪ್ರಕಾರಾಂತರದಿಂದಲೂ ಭಾರತಾರ್ಥವು ಮೂರು ವಿಧವಾಗಿದೆ ಎಂದು ಹೇಳಲಿಕ್ಕೆ ಉಪಕ್ರಮಿಸುತ್ತಾರೆ. ಅಥವಾ ಭಾಗವತವು ಕೇವಲ ಭಗವತ್ಪರವಾಗಿರುವುದರಿಂದ ಸರ್ವ ಶಾಸ್ತ್ರಗಳಲ್ಲಿ ಉತ್ತಮವಾಗಿದೆ, ಎಂದು ಯಾವುದು ಉಕ್ತವಾಗಿದೆಯೋ ಅದನ್ನು ಉಪಪಾದಿಸುವುದಕ್ಕಾಗಿ ಭಾರತಪ್ರತಿಪಾದ್ಯವಾದ ಮೂರು ಅರ್ಥವನ್ನು ಹೇಳುತ್ತಾರೆ—

ಮೂ ॥ ಭಾರತಾರ್ಥಸ್ತ್ರಿಧಾ ಪ್ರೋಕ್ತಃ ಸ್ವಯಂ ಭಗವತೈವ ಹಿ ॥
ಮನ್ವಾದಿಕೇಚಿದ್ಬ್ರುವತೇ ಹ್ಯಾಸ್ತಿ[ಸ್ತೀ]ಕಾದಿ ತಥಾ ಪರೇ ॥೧೩೯॥
ತಥೋಪರಿಚರಾದ್ಯನ್ಯೇ ಭಾರತಂ ಪರಿಚಕ್ಷತೇ ॥೧೪೦॥

ಅ ॥ (ಆ ಭಗವದ್ವಾಕ್ಯಗಳನ್ನೇ ಹೇಳುತ್ತಾರೆ). ಕೆಲವು ವ್ಯಾಖ್ಯಾನಗಾರರು ಭಾರತವನ್ನು ಮನ್ವಾದಿಯನ್ನಾಗಿ (ಅಂದರೆ ಮನ್ವಾದಿ ಸಂಜ್ಞಾರ್ಥಪ್ರತಿಪಾದಕವನ್ನಾಗಿ) ಹೇಳುತ್ತಾರೆ. ಹಾಗೆಯೇ ಇನ್ನು ಕೆಲವರು ಭಾರತವನ್ನು ಆಸ್ತಿಕಾದಿ ಸಂಜ್ಞಾರ್ಥಪ್ರತಿಪಾದಕವನ್ನಾಗಿ ವ್ಯಾಖ್ಯಾನ ಮಾಡುತ್ತಾರೆ. ಹಾಗೆಯೇ ಇತರರು ಭಾರತವನ್ನು ಉಪರಿಚರಾದಿ ಸಂಜ್ಞಾರ್ಥಪ್ರತಿಪಾದಕವನ್ನಾಗಿ ಹೇಳುತ್ತಾರೆ. ಹೀಗೆ ಸಾಕ್ಷಾತ್ ವೇದವ್ಯಾಸರಿಂದಲೇ ಭಾರತಾರ್ಥವು ಮೂರು ವಿಧವೆಂದು ಹೇಳಲ್ಪಟ್ಟಿದೆ; ಪ್ರಸಿದ್ಧವು.

ವಿಶೇಷಾಂಶ— (1) 'ಮನ್ವಾದಿಕೇಚಿದ್ಬ್ರುವತೇ' ಎನ್ನುವ ಶ್ಲೋಕಕ್ಕೆ ಮನುಗಳು ಆಸ್ತೀಕಾಖ್ಯ ಋಷಿಯು, ಉಪರಿಚರಾಖ್ಯವಸುವು ಈ ಅರ್ಥಗಳು ಆಪಾತತಃ ತೋರುತ್ತವೆ. ಆದರೆ ಈ ಅರ್ಥವು ಕೂಡುವುದಿಲ್ಲ. ಏಕೆಂದರೆ—ಭಾರತದಲ್ಲಿ ಮನುಗಳ ಪ್ರವೃತ್ತಿಯೇ ಇಲ್ಲ ಆಸ್ತೀಕ ಋಷಿ, ಉಪರಿಚರಾಖ್ಯವಸು ಇವರಿಗೆ ಕ್ರಮವಾಗಿ ಸರ್ಪಯಾಗದಲ್ಲಿ ವಿಘ್ನವನ್ನುಂಟುಮಾಡುವುದಕ್ಕೋಸ್ಕರವೂ. ಸತ್ಯವತಿಯ ಉತ್ಪತ್ತಿಗೋಸ್ಕರವೂ ಆದಿಪರ್ವದ ಆಧಿಭಾಗದಲ್ಲಿ ಒಂದೊಂದು ಅಧ್ಯಾಯಮಾತ್ರದಿಂದ ಪ್ರಸಕ್ತಿಯಿದ್ದರೂ ಆದಿಪರ್ವದಲ್ಲಿಯೂ ಕೂಡ ಅಂತ್ಯದಲ್ಲಿ ಪ್ರಸಕ್ತಿಯೇ ಇಲ್ಲದಿರುವುದರಿಂದ ಸಕಲ ಭಾರತಪ್ರತಿಪಾದ್ಯತ್ವವು ಸುತರಾಂ ಕೂಡಲಾರದು. ಆದುದರಿಂದ,

ವೇದೇ ರಾಮಾಯಣೇ ಚೈವ ಪುರಾಣೇ ಭಾರತೇ ತಥಾ । ಆದಾವಂತೇಚ ಮಧ್ಯೇಚ ವಿಷ್ಣುಃ ಸರ್ವತ್ರಗೀಯತೇ ॥' ಎಂದು ಭಾರತದಲ್ಲಿಯೇ ಹೇಳಿರುವುದರಿಂದ ಉಪರಿ–ಸರ್ವೇಷಾಂ ಉಪರಿ ಚರತೀತಿ ಉಪರಿಚರಃ ಸರ್ವೋತ್ತಮನಾದವನು ನಾರಾಯಣನು, ಸ್ವರ–ವರ್ಣ ವಾಕ್ಯಾತ್ಮಕ ಸಕಲ ಭಾರತಗ್ರಂಥದಿಂದ ಆ ಶ್ರೀ ನಾರಾಯಣನೇ ಪರಮ ಮುಖ್ಯ ವೃತ್ತಿಯಿಂದ ಪ್ರತಿಪಾದಿಸಿಕೊಳ್ಳಲ್ಪಡುತ್ತಾನೆನ್ನುವುದು ಅರ್ಥವು ಯೋಗ್ಯವು. (2) **'ಚರಿತಂ ವೈಷ್ಣವಾನಾಂ ಚ ವಿಷ್ಣೂದ್ರೇಕಾಯ ಕಥ್ಯತೇ'** ಎನ್ನುವ ವಚನದೆಶೆಯಿಂದ ವೈಷ್ಣವಾಗ್ರೇಸರರಾದ ಪಾಂಡವರ ಮತ್ತು ದ್ರೌಪದಿಯ ಕಥೆಯು ಕೂಡ ಶ್ರೀ ವಿಷ್ಣುವಿನ ಮಹಿಮೆಯನ್ನು ಹೇಳಿದ ಮೇಲೆಯೇ ಹೇಳಲರ್ಹವು. ಪಾಂಡವರದ್ದೇ ಉತ್ಪತ್ಯಾದಿಗಳೂ ಕೂಡ ಭಾರತದಲ್ಲಿ ಎಲ್ಲಾ ಕಡೆಗಳಲ್ಲಿಯೂ ತೋರುತ್ತದೆ. (3) **'೧ ವಿವಿದಿಷಂತಿ ಯಜ್ಞೇನ ದಾನೇನ ತಪಸಾ ನಾಶಕೇನ'** ಎನ್ನುವ ಶ್ರುತಿಯು **'೨ ಭಕ್ತಿರೇವೈನಂ ನಯತಿ ೩ ಭಕ್ತ್ಯಾತ್ವನನ್ಯಯಾ ಶಕ್ಯಃ ೪ ಶ್ರೋತ್ರವ್ಯೋ ಮಂತವ್ಯೋ ನಿದಿಧ್ಯಾಸಿತವ್ಯಃ ೫ ತದ್ವಿಜ್ಞಾನಾರ್ಥಂ ಗುರುಮೇವಾಭಿಗಚ್ಛೇತ್' ೬ ವೇದಾಹ್ಯೇವೈನಂ ವೇದಯಂತಿ'** ಇದು ಮೊದಲಾದ ವಚನಗಳ ದೆಶೆಯಿಂದ ಧರ್ಮಾಚರಣವು, ಭಕ್ತಿ ವೈರಾಗ್ಯಾದಿ ಗುಣಗಳೂ, ಶ್ರವಣಮನನಾದಿಗಳೂ, ಗುರೂಪಸತ್ಯಾದಿ ವಿನಯಗಳೂ, ವೇದವೂ—ಇತ್ಯಾದಿಗಳೆಲ್ಲವೂ ವಿಷ್ಣುಭಕ್ತರಾದ ದೇವಾದಿಗಳಿಗೇನೇ ಆ ವಿಷ್ಣುವಿನ ಸಾಕ್ಷಾತ್ಕಾರ ಪ್ರಸಾದಾದಿಗಳಲ್ಲಿಯೇ ಅಂಗಗಳಾಗಿವೆ. ಆ ವಿಷ್ಣುವಿನ ವಂದನವನ್ನೂ ಕೂಡ ಪಾಂಡವರ ಉಪಕಾರಕ್ಕಾಗಿಯೇ ಮಾಡಲರ್ಹವು. ಏವಂಚ ಮುಖ್ಯವಾಗಿ ಶ್ರೀ ಹರಿಯು. ಅಮೇಲೆ ಪಾಂಡವರು. ಹಾಗೆಯೇ ಧರ್ಮವು, ಭಕ್ತ್ಯಾದಿಗುಣಗಳು—ಇವುಗಳನ್ನು ಹೊಗಳುವುದೇ ನ್ಯಾಯಪ್ರಾಪ್ತವಾದುದು. ಸಭಾಪರ್ವಾಶ್ವಮೇಧಿಕ ಪರ್ವಾದಿಗಳಲ್ಲಿಯೂ ರಾಜಸೂಯಾಶ್ವಮೇಧಿಕ ಪರ್ವಾದಿಗಳಲ್ಲಿಯೂ, ರಾಜಸೂಯಾಶ್ವಮೇಧಾದಿ ಧರ್ಮಗಳಿಗೆ ಪ್ರಶಕ್ತಿಯೂ ಇದೆ. ಅವುಗಳ ಪ್ರಶಂಸೆಯನ್ನೂ ಮಾಡಿರುವರು. ಅದರಲ್ಲಿಯೂ ಶ್ರೀ ಕೃಷ್ಣನಿಗೇನೇ ಅಗ್ರಪೂಜೆಯನ್ನು ಮಾಡಿರುವುದರಿಂದ ಶ್ರೀ ಕೃಷ್ಣನಲ್ಲಿ ನಿರುಪಚರಿತವಾದ ಭಕ್ತಿಯೂ ಶ್ರುತವಾಗುತ್ತದೆ. ಕೆಲವು ಕೆಲವುಕಡೆ ಶ್ರವಣ ಮನನಾದಿಗಳನ್ನು ಮಾಡಬೇಕೆಂದೂ ಹೇಳಿಯಿದೆ. (4) ಸಮೃದ್ಧವಾದ ರಾಜ್ಯವನ್ನು ಪರಿತ್ಯಾಗ ಮಾಡಿದವರಿಂದ ವೈರಾಗ್ಯವೂ, ಸತ್ಯಪರಿಪಾಲನವೂ, ಮಾರ್ಕಂಡೇಯ ಮೊದಲಾದ ಋಷಿಗಳದೆಶೆಯಿಂದ ಭಗವಂತನ ಕಥೆ ಸದ್ಧರ್ಮ–ಇವುಗಳ ಶ್ರವಣ ಮನನಾದಿಗಳು ಆರಣ್ಯಕ ಪರ್ವಾದಿಗಳಲ್ಲಿ ಶ್ರುತವಾಗುತ್ತದೆ. ಜ್ಯೇಷ್ಠನನ್ನು ಅನುಸರಿಸಿಕೊಂಡಿರುವುದರಿಂದ ವಿನಯವೊದಲಾದುದೂ ಅಲ್ಲಲ್ಲಿ ಹೇಳಲ್ಪಡುತ್ತದೆ. (5) ಏಯತೇ–ಪ್ರಮೀಯತೇ ಏಭಿಃ ಪರಮಾತ್ಮಾ ಶ್ರೀ ಹರಿಯು ಧರ್ಮಗಳಿಂದ ತಿಳಿಯಲ್ಪಡುತ್ತಾನೆ. ಆದಕಾರಣ, ಮನವಃ ೧ ಧರ್ಮಗಳು, ೨ ಭಕ್ತಿ ಮೊದಲಾದವು ಹತ್ತು, ೩ ಶ್ರವಣಾದಿಗಳು, ೪ ಶೀಲ ವಿನಯಗಳು, ೫ ವೇದವು ಹೀಗೆ ಮನುಪದವಾಚ್ಯವಾದುದು ಐದು ಎಲ್ಲೆಲ್ಲಿ ಪ್ರಸ್ತುತವಾಗುತ್ತದೋ ಆಯಾಯ ಅಂಶದಲ್ಲಿ ೧ ಧರ್ಮಾಭಿಮಾನಿಯಾದುದರಿಂದ ಮನುಪಧವಾಚ್ಯನು ಧರ್ಮರಾಜನು. ೨ ಭಕ್ತಿಮೊದಲಾದ ಹತ್ತು ಗುಣಗಳಿಗೆ ಅಭಿಮಾನಿಯಾದುದರಿಂದ ಮನುಪದವಾಚ್ಯನು ಭೀಮಸೇನನು. ೩ ಶ್ರವಣಾದಿಗಳಿಗೆ ಅಭಿಮಾನಿಯಾದುದರಿಂದ ಮನುಪದವಾಚ್ಯನು ಅರ್ಜುನನು, ೪ ಶೀಲ ವಿನಯಗಳಿಗೆ ಅಭಿಮಾನಿಗಳಾಗಿರುವುದರಿಂದ ಮನುಪದವಾಚ್ಯರು ನಕುಲ–ಸಹದೇವರು. ೫ ವೇದಗಳಿಗೆ ಅಭಿಮಾನಿಯಾದುದರಿಂದ ಮನುಪದವಾಚ್ಯಳು ದ್ರೌಪದಿಯು. ಈ ಐವರು ಅವಾಪ ಅಂಶದಿಂದ ಪ್ರತಿಪಾದಿಸಿಕೊಳ್ಳಲ್ಪಡುತ್ತಾರೆ? ತಥಾಚ 'ಮನವಃ ಆದೀಯಮಾನತ್ವಾತ್ ಅದಯಃ ಪ್ರತಿಪಾದ್ಯಾಃ ಯಸ್ಯ ತತ್' ಎನ್ನುವ ವ್ಯುತ್ಪತ್ತಿಯಿಂದ ಧರ್ಮರಾಜಾದಿಗಳು ಭಾರತದಲ್ಲಿ ಪ್ರತಿಪಾದ್ಯರಾದುದರಿಂದ ಭಾರತವು ಮನ್ವಾದಿ ಎನ್ನಿಸಿಕೊಳ್ಳಲ್ಪಡುತ್ತದೆ, ಎಂದು ಕೆಲವರು ಹೇಳುತ್ತಾರೆ. ಅಭಿಮನ್ಯಮಾನವಾದುದನ್ನು ಹೇಳುವ

ವ್ಯಾಜದಿಂದ ಆ ಧರ್ಮಾದಿಗಳಿಗೆ ಅಭಿಮಾನಿಗಳಾದ ಪಂಚಪಾಂಡವರೂ ಮತ್ತು ದ್ರೌಪದಿ ಇವರನ್ನು ಸ್ತೋತ್ರಮಾಡುವುದಕ್ಕಾಗಿ ಭಾರತವು ಪ್ರವೃತ್ತವಾಗಿದೆ ಎಂದು ಹೇಳುತ್ತಾರೆ. (6) ಅಸ್ತೀಕಾಃ –ಪರದೇವತೆಯು ಇದೆ, ಪರಲೋಕವಿದೆ ಎಂದು ಯಾವಾಗಲೂ ತಿಳಿಯುವವರು ಪಾಂಡವರು, ದ್ರೌಪದಿಯು ಕೂಡ ಆಸ್ತಿಕರು ಎಂದು ಹೇಳಲ್ಪಡುತ್ತಾರೆ. ಆಸ್ತಿಕರೇ ಆಸ್ತಿಕರು. ಆಸ್ತಿಕರಾದ ಮನುಗಳೂ ಋಷ್ಯಾದಿಗಳೂ ಇವರಿಂದಲೂ ಅತಿಶಯವಾಗಿ ಪಾಂಡವರೂ ಆಸ್ತಿಕರು ಎಂದು ಸೂಚಿಸುವುದಕ್ಕಾಗಿ ಆಸ್ತೀಕಾದಿ ಎಂದು ದೀರ್ಘವು. ಧರ್ಮಾದಿಗಳನ್ನು ಅಂತರ್ಭಾವಿಸದೆ (ಅಂದರೆ ಹೇಳದೆ) ಕೇವಲ ಆಸ್ತೀಕರಾದ ಪಾಂಡವರನ್ನೇ ಪುರಸ್ಕರಿಸಿಕೊಂಡು ಪಾಂಡವರ ಉತ್ಪತ್ತಿ, ಪಾಂಡವರ ಚರಿತ್ರೆ, ಪಾಂಡವರು ಮಾಡಿದ ಯುದ್ಧಾದಿಗಳನ್ನು ಯಾವ ಭಾಗದಲ್ಲಿ ಹೆಚ್ಚಾಗಿ ವರ್ಣಿಸುವರೋ ಆ ಭಾಗವು ಆಸ್ತೀಕಾದಿ ಎನ್ನಿಸುತ್ತದೆ. ಏವಂಚ ಹಿಂದೆ ಹೇಳಿದ ಪ್ರಕಾರ, 'ಆಸ್ತೀಕಾಃ ಆದಯಃ ಯಸ್ಯತತ್' ಎನ್ನುವ ವ್ಯುತ್ಪತ್ತಿಯಿಂದ ಮುಖ್ಯವಾದ ಆಸ್ತಿಕರಾದ ದ್ರೌಪದೀಸಹಿತರಾದ ಪಂಚಪಾಂಡವರು ಪ್ರತಿಪಾದ್ಯರಾಗಿವುಳ್ಳ ಭಾಗವು ಆಸ್ತೀಕಾದಿಯು. ತಥಾಚ ಧರ್ಮಾದಿಗಳನ್ನು ಅಂತರ್ಭಾವಿಸದೆ, ಪರಮಾಸ್ತಿಕಶಿರೋಮಣಿಗಳಾಗಿರುವುದರಿಂದ ಪುಣ್ಯಕೀರ್ತಿಯಳ್ಳ ಪಾಂಡವರೇ ಹೆಚ್ಚಾಗಿ ವರ್ಣಿಸಿಕೊಳ್ಳಲ್ಪಡುತ್ತಾರೆ ಎಂದು ಗ್ರಂಥಕಾರರ ಗ್ರಂಥಕ್ಕೆ ಎಲ್ಲಿ ಅಭಿಸಂಧಿಯಿದೆಯೋ ಆ ಎಲ್ಲಾ ಪ್ರಕರಣವು ಆಸ್ತೀಕಾದಿ ಎನ್ನಿಸಿಕೊಳ್ಳುತ್ತದೆ. ಸಕಲ ಭಾರತವು ಅನ್ಯದ್ವಾರದಿಂದಲಾಗಲೀ ಸ್ವತಂತ್ರವಾಗಿ ಆಗಲೀ ಪರಮ ವೈಷ್ಣವರಾದ ಪಾಂಡವರನ್ನು ಸ್ತುತಿಸುವುದಕ್ಕಾಗಿಯೇ ಪ್ರವೃತ್ತವಾದುದು. (7) 'ಉಪರಿಚರಃ ಆದಿಃ ಯಸ್ಯ ತತ್' ಎನ್ನುವ ವ್ಯುತ್ಪತ್ತಿಯಿಂದ ಸರ್ವೋತ್ತಮನಾಗಿರುವುದರಿಂದ ಉಪರಿಚರನೆಂದು ಹೆಸರುಳ್ಳ ಮಹಾವಿಷ್ಣುವೇ ಆದಿಭಾಗದಲ್ಲಿಯೂ, ಮಧ್ಯಭಾಗದಲ್ಲಿಯೂ, ಅಂತ್ಯಭಾಗದಲ್ಲಿಯೂ ಪ್ರತಿಪಾದ್ಯನಾಗಿವುಳ್ಳ ಪ್ರಕರಣವು ಉಪರಿಚರಾದಿ ಎನ್ನಿಸಿಕೊಳ್ಳುತ್ತದೆ. ಇಲ್ಲಿ ಪರಮ ಮುಖ್ಯವೃತ್ತಿಯಿಂದ ಸ್ವರವರ್ಣ ವಾಕ್ಯರೂಪಗಳಾದ ಸಕಲ ಭಾರತಗಳಲ್ಲಿಯೂ ಶ್ರೀ ವಿಷ್ಣುವೇ ಪ್ರತಿಪಾದಿಸಿಕೊಳ್ಳಲ್ಪಡುತ್ತಾನೆ ಎಂದಭಿಪ್ರೇತವಾಗಿರುವುದರಿಂದ ಪಾಠಕ್ರಮದೆಶೆಯಿಂದ ಅರ್ಥಕ್ರಮವು ಶ್ರೇಷ್ಠವು ಎನ್ನುವ ನ್ಯಾಯದಿಂದ ಅಂತ್ಯದಲ್ಲಿ ಹೇಳಿಸಿಕೊಳ್ಳಲ್ಪಟ್ಟಾಗ್ಯೂ ಶ್ರೀ ವಿಷ್ಣುಪ್ರತಿಪಾದಕತ್ವವೇ ಎಲ್ಲಾದರದೆಶೆಯಿಂದಲೂ ಮುಖ್ಯವಾಗಿ ಗ್ರಂಥಕಾರರಿಗೆ ಅಭಿಮತವಾಗಿದೆ. ಮಧ್ಯದಲ್ಲಿ ಹೇಳಿಸಿಕೊಳ್ಳಲ್ಪಟ್ಟ ಕೇವಲ ಪಾಂಡವಪ್ರತಿಪಾದಕತ್ವವು ಮಧ್ಯಮವಾಗಿ ಅಭಿಮತವಾಗಿದೆ. ಆದಿಯಲ್ಲಿ ಹೇಳಿದಾಗ್ಯೂ ಅನ್ಯದ್ವಾರದಿಂದ ಕೆಲವು ಭಾಗದಲ್ಲಿ ಪ್ರತಿಪಾದಿಸಿದ್ದು ಅಮುಖ್ಯವು ಎಂದು ತಾತ್ಪರ್ಯವು ॥೧೩೯॥೧೪೦॥

ಹೇಳಿದ ಪ್ರಮೇಯವನ್ನೆ ಇಲ್ಲಿ ವಿಶದೀಕರಿಸುತ್ತಾರೆ –

ಮೂ ॥ ಸಕೃಷ್ಣಾನ್ ಪಾಂಡವಾನ್ ಗೈಹ್ಯ ಯೋಽಯಮರ್ಥಃ ಪ್ರವರ್ತತೇ ॥
ಪ್ರಾತಿಲೋಮ್ಯಾದಿನೈಚಿತ್ಯಾತ್ತಮಾಸ್ತೀಕಂ ಪ್ರಚಕ್ಷತೇ ॥೧೪೧॥

ಅ ॥ ಪ್ರಾತಿಲೋಮ್ಯ ವ್ಯತ್ಯಾಸ ಮೊದಲಾದ ವೈಚಿತ್ರ್ಯದೆಶೆಯಿಂದ, ದ್ರೌಪದಿಯಿಂದ ಸಹಿತರಾದ ಪಾಂಡವರನ್ನು ಅನ್ಯೋಪಾಧಿಯಿಲ್ಲದೇನೇ ಪರಿಗ್ರಹಿಸಿಕೊಂಡು ಯಾವುದೊಂದು ಹಿಂದೆ ಹೇಳಿದ ಅರ್ಥವು ಪ್ರವೃತ್ತವಾಗುತ್ತದೋ, ಅಂತಹುದನ್ನು ಆಸ್ತೀಕವನ್ನಾಗಿ ಹೇಳುತ್ತಾರೆ.

ವಿಶೇಷಾಂಶ – (1) ಮುಂದಕ್ಕೆ ಹೇಳಲರ್ಹವಾದ ಪ್ರಮೇಯವನ್ನು ಪ್ರಸಂಗಸಂಗತಿಯಿಂದ ಮೊದಲು ಹೇಳುವುದು. ಕೆಲವುಕಡೆ ಆದಿಯಲ್ಲಿ ಹೇಳಲರ್ಹವಾದ ಪ್ರಮೇಯವನ್ನೂ

ಮುಂದಕ್ಕೆ ಹೇಳುವ ಪ್ರಮೇಯದಲ್ಲಿ ಸಂಗತವಾಗುವುದರಿಂದ ಮೇಲೆಯೇ ಹೇಳುವುದು. ಇದೇ ಪ್ರಾತಿಲೋಮ್ಯವು. (2) ಕೆಲವುಕಡೆ ಅರ್ಜುನಾದಿಗಳು ಮಾಡಿದ ಚರಿತ್ರೆಯನ್ನು ಪ್ರಾಧಾನ್ಯದಿಂದ ಭೀಮಸೇನಾದಿಗಳು ಮಾಡಿದ್ದು ಎಂದು ಹೇಳುವುದು **ವ್ಯತ್ಯಾಸವು**, ಇತ್ಯಾದಿ ವಿಚಿತ್ರಪ್ರಕಾರದಿಂದ ಪ್ರವೃತ್ತವಾದ ಅರ್ಥವನ್ನು ಆಸ್ತೀಕವೆಂದು ಹೇಳುತ್ತಾರೆ ॥೧೪೧॥

ಮೂ ॥ ಧರ್ಮೋ ಭಕ್ತ್ಯಾದಿ ದಶಕಃ ಶ್ರುತಾದಿಃ ಶೀಲವೈನಯೌ ॥
ಸುಬ್ರಹ್ಮಕಾಸ್ತು ತೇ ಯತ್ರ ಮನ್ವಾದಿಂ ತಂ ವಿದುರ್ಬುಧಾಃ ॥೧೪೨॥

ಅ ॥ ಧರ್ಮಗಳಿಗೆ ಅಭಿಮಾನಿಯಾದ ಯುಧಿಷ್ಠಿರನು, ಭಕ್ತಿ – ಜ್ಞಾನ – ವೈರಾಗ್ಯ ಮೊದಲಾದ ಶೋಭನಗುಣಗಳಿಗೆ ಅಭಿಮಾನಿಯಾದ ಪರಮಭಕ್ತಾಗ್ರೇಸರನಾದ ಭೀಮಸೇನನು, ಶ್ರೀಕೃಷ್ಣನ ಮುಖದಿಂದಲೇ ಸಕಲ ಶಾಸ್ತ್ರಾರ್ಥಗಳ ನಿರ್ಣಯರೂಪವಾದ ಭಗವದ್ಗೀತಾ ಶ್ರವಣದಿಂದಲೂ ಮನನದಿಂದಲೂ ಶ್ರುತಾದಿ (ಶ್ರವಣಾದಿ)ಗಳಿಗೆ ಅಭಿಮಾನಿಯಾದ ಅರ್ಜುನನು, ಶೀಲವಿನಯಗಳಿಗೆ ಅಭಿಮಾನಿಗಳಾದ ನಕುಲಸಹದೇವರು, ಆ ವೇದಗಳಿಗೆ ಅಭಿಮಾನಿನಿಯಾದ ದ್ರೌಪದಿಯಿಂದ ಸಹಿತರಾದ ಆ ಪಂಚಪಾಂಡವರು ಭಾರತದಲ್ಲಿ ಯಾವ ಪ್ರದೇಶದಲ್ಲಿ ಪ್ರತಿಪಾದಿಸಿಕೊಳ್ಳಲ್ಪಡುತ್ತಾರೋ ಆ ಪ್ರದೇಶವನ್ನು ಮನ್ವಾದಿಯನ್ನಾಗಿ ಜ್ಞಾನಿಗಳು ಹೇಳುತ್ತಾರೆ. ॥೧೪೨॥

ಮೂ ॥ ನಾರಾಯಣಸ್ಯ ನಾಮಾನಿ ಸರ್ವಾಣಿ ವಚನಾನಿ ತು ॥
ತತ್ಸಾಮರ್ಥ್ಯಾಭಿಧಾಯೀನಿ ತಮೌಪರಿಚರಂ ವಿದುಃ ॥೧೪೩॥

ಅ ॥ ಶ್ರೀ ನಾರಾಯಣನ ಎಲ್ಲಾ ನಾಮಗಳೂ, ಶ್ರೀ ಹರಿಯ ಸಾಮರ್ಥ್ಯವನ್ನು ಹೇಳತಕ್ಕ ಎಲ್ಲಾ ಭಾರತವಚನಗಳೂ ಎಲ್ಲಿ ಭಾರತಪ್ರದೇಶದಲ್ಲಿ ಪ್ರತಿಪಾದಿಸಿಕೊಳ್ಳಲ್ಪಡುತ್ತವೋ ಅದನ್ನು ಔಪರಿಚರವನ್ನಾಗಿ ಹೇಳುತ್ತಾರೆ ॥೧೪೩॥

ಭಕ್ತಿ ಮೊದಲಾದುದು ಹತ್ತು ಯಾವುದು ಎಂದರೆ—

ಮೂ ॥ ಭಕ್ತಿರ್ಜ್ಞಾನಂ ಸವೈರಾಗ್ಯಂ ಪ್ರಜ್ಞಾ ಮೇಧಾ ಧೃತಿಃ ಸ್ಥಿತಿಃ ॥
ಯೋಗಃ ಪ್ರಾಣೋಬಲಂ ಚೈವ ವೃಕೋದರ ಇತಿ ಸ್ಮೃತಂ(:)॥೧೪೪॥

ಅ ॥ ಮಾಹಾತ್ಮ್ಯಜ್ಞಾನಪೂರ್ವಕ ಸುದೃಢಸ್ನೇಹವು, ವೈರಾಗ್ಯದಿಂದ ಕೂಡಿರುವ ಜ್ಞಾನವು, (ಪ್ರಜ್ಞಾ) ಶೀಘ್ರವಾಗಿ ಗ್ರಹಿಸತಕ್ಕ ಸಾಮರ್ಥ್ಯವು, (ಮೇಧಾ) ಗುರುಮುಖದಿಂದ ಶ್ರುತವಾದುದನ್ನು ಧರಿಸುವುದು, ಧೈರ್ಯವು, ಸ್ಥಿತಿಯು, ಯೋಗವು, ಪ್ರಾಣವು, ಬಲವು, ಈವುಗಳು ಹತ್ತು ಭೀಮಸೇನನೆಂದು ಸ್ಮೃತವಾಗಿದೆ ॥೧೪೪॥

ಈ ಭಕ್ತ್ಯಾದಿ ಶಬ್ದವಾಚ್ಯತ್ವವು ಭೀಮಸೇನನಿಗೆ ಯಾವುದರಿಂದ ಎಂದರೆ—

ಮೂ ॥ ಏತದ್ದಶಾತ್ಮಕೋ ವಾಯುಸ್ತಸ್ಮಾದ್ಭೀಮಸ್ತದಾತ್ಮಕಃ ॥
ಸರ್ವವಿದ್ಯಾ ದ್ರೌಪದೀ ತು ಯಸ್ಮಾತ್ಸೈವ ಸರಸ್ವತೀ॥೧೪೫॥

ಅ ॥ ಯಾವ ಕಾರಣದಿಂದೆಯಿಂದ ವಾಯುದೇವರು ಭಕ್ತಿ ಮೊದಲಾದ ಹತ್ತು ಶುಭ ಧರ್ಮಗಳ ಸ್ವರೂಪವುಳ್ಳವರೋ ಆದಕಾರಣ ಭೀಮಸೇನನು ವಾಯುದೇವರ ಸ್ವರೂಪನೇ ಆಗಿರುವುದರಿಂದ ಭಕ್ತ್ಯಾದಿ ಸ್ವರೂಪನು. (ಭಾರತದಲ್ಲಿ ಪಂಚಪಾಂಡವರು ಪ್ರತಿಪಾದ್ಯರು ಎಂದು

ಹೇಳಿ ಈಗ ಹೇಯರಾಗಿರುವುದರಿಂದಲೂ, ವಧ್ಯರಾಗಿರುವುದರಿಂದಲೂ ಅನಾದರದಿಂದ ದುರ್ಯೋಧನಾದಿಗಳನ್ನೂ, ಅವರ ಸೇನೆಯನ್ನೂ ಮತ್ತು ಉಭಯ ಸೇನೆಯಲ್ಲಿರತಕ್ಕ ಭೀಷ್ಮ, ದ್ರೋಣ, ಕರ್ಣ, ದ್ರುಪದ, ವಿರಾಟ ಮೊದಲಾದ ಶುಭ ಸೇನೆಯನ್ನೂ, ಹೀಗೆ ಸಜ್ಜನರನ್ನೂ, ಅಸಜ್ಜನರನ್ನೂ ಭಾರತದಲ್ಲಿ ಹೇಳಿಯದೆ ಎನ್ನುವ ಅಭಿಪ್ರಾಯದಿಂದ ಆ ಕಥಾಪ್ರಕಾರವನ್ನು ಹೇಳುತ್ತಾರೆ.) (ಮುಖದಲ್ಲಿರತಕ್ಕ ಯಾವ ವಾಣಿಯೋ ಆ ವಾಣಿಯ ಉಪಮಾನದಿಂದ ದ್ರೌಪದಿಯು ಹೇಳಿಸಿಕೊಳ್ಳಲ್ಪಟ್ಟಿದ್ದಾಳೆ). ಯಾವ ಕಾರಣದಿಂದೆಯಿಂದ ದ್ರೌಪದಿಯು ಸರ್ವವಿದ್ಯೆಗಳಿಗೆ ಅಭಿಮಾನಿಯಾಗಿದ್ದಾಳೋ, ಆದಕಾರಣ ಆ ದ್ರೌಪದಿಯೇ ಸರಸ್ವತಿಯು. (ಮುಖದಲ್ಲಿರತಕ್ಕ ವಾಣಿಯು. ಅಥವಾ ಯಾವ ಕಾರಣದಿಂದ ದ್ರೌಪದಿಯೇ, ಸರಸ್ವತಿಯು, ಆದಕಾರಣ ದ್ರೌಪದಿಯು ಎಲ್ಲಾ ವಿದ್ಯೆಗಳಿಗೂ ಅಭಿಮಾನಿನಿಯೆಂದು ಹೇಳಿಸಿಕೊಳ್ಳಲ್ಪಡುತ್ತಾಳೆ ॥೧೪೫॥

ಮೂ ॥ ಅಜ್ಞಾನಾದಿ ಸ್ವರೂಪಸ್ತು ಕಲಿರ್ದುರ್ಯೋಧನಃ ಸ್ಮೃತಃ ॥
ವಿಪರೀತಂ ತು ಯಜ್ಞಾನಂ ದುಃಶಾಸನ ಇತೀರಿತಃ ॥೧೪೬॥

ಅ ॥ ಅಜ್ಞಾನಾದಿಗಳೇ ಸ್ವರೂಪವಾಗಿವುಳ್ಳ, ಅಜ್ಞಾನ, ಭ್ರಮ, ಪ್ರಮಾದಾದಿಗಳಿಗೆ ಅಭಿಮಾನಿಯಾಗಿ ದೇಹದಲ್ಲಿರತಕ್ಕವನು (ಯಾವನು) ಕಲಿಯೋ, (ಅವನೇ ದುರ್ಯೋಧನನೆಂದು ಹೇಳಿಸಿಕೊಳ್ಳಲ್ಪಡುತ್ತಾನೆ. (ದೇಹದಲ್ಲಿ) ವಿಪರೀತವಾದುದು ಯಾವುದು ಜ್ಞಾನವೋ, (ಕೇವಲ ಅದಕ್ಕೆ ಅಭಿಮಾನಿಯಾದ ದೈತ್ಯನು) ದುಃಶಾಸನನೆಂದು ಹೇಳಿಸಿಕೊಳ್ಳಲ್ಪಡುತ್ತಾನೆ ॥೧೪೬॥

ಮೂ ॥ ನಾಸ್ತಿಕ್ಯಂ ಶಕುನಿರ್ನಾನು ಸರ್ವದೋಷಾತ್ಮಕಾಃ ಪರೇ ॥
ಧಾರ್ತರಾಷ್ಟ್ರಾಸ್ತ್ವಹಂಕಾರೋ ದ್ರೌಣೇ ರುದ್ರಾತ್ಮಕೋ ಯತಃ ॥೧೪೭॥

ಅ ॥ (ಪುರುಷನ ಶರೀರದಲ್ಲಿ ಯಾವುದು) * ನಾಸ್ತಿಕ್ಯವೋ, (ಅಂದರೆ ಪರಲೋಕವಿಲ್ಲ ಇತ್ಯಾದಿಯೋ) (ಅದಕ್ಕೆ ಅಭಿಮಾನಿಯಾದ ದೈತ್ಯನು) ಶಕುನಿಯೆಂದು ಪ್ರಸಿದ್ಧನಾದವನು. (ಪುರುಷನ ಶರೀರದಲ್ಲಿ ಕಾಮ, ಕ್ರೋಧ, ಮದ, ಮಾತ್ಸರ್ಯ ಮೊದಲಾದ ಯಾವ ದೋಷಗಳು ಇರುತ್ತವೋ ಆ) ಎಲ್ಲಾ ದೋಷಗಳಿಗೆ ನಿಯಾಮಕರಾದ (ಯಾವ ದೈತ್ಯರೋ, ಅವರು ದುರ್ಯೋಧನ-ದುಃಶಾಸನರಿಂದ) ವ್ಯತಿರಿಕ್ತರಾದ ಧೃತರಾಷ್ಟ್ರಪುತ್ರರು. (ಪುರುಷನ ಶರೀರದಲ್ಲಿ ಯಾವುದು) ಅಹಂಕಾರವೋ ಅದಕ್ಕೆ ಅಭಿಮಾನಿಯಾದವನು ಅಶ್ವತ್ಥಾಮನು. ಯಾವ ಕಾರಣದಿಂದ ಅಹಂಕಾರಾಭಿಮಾನಿಯು ರುದ್ರಸ್ವರೂಪನೋ, ॥೧೪೭॥

ಮೂ ॥ ದ್ರೋಣಾದ್ಯಾ ಇಂದ್ರಿಯಾಣ್ಯೇವ ಪಾಪಾನ್ಯನ್ಯೇ ತು ಸೈನಿಕಾಃ ॥
ಪಾಂಡವೇಯಾಸ್ತು (ಕೃ) ಪುಣ್ಯಾನಿ ಕೇಷಾಂ ವಿಷ್ಣುರ್ನಿಯಾಮಕಃ ॥೧೪೮॥

ಅ ॥ (ದೇಹದಲ್ಲಿ ಯಾವುಗಳು) ಇಂದ್ರಿಯಗಳೋ, (ಆವರು) ದ್ರೋಣಾದಿಗಳು. (ಅಂದರೆ ದ್ರೋಣ, ಕರ್ಣ, ಭೀಷ್ಮ ಮೊದಲಾದವರು), ಇವರಿಂದ ಇತರರಾದ ದುರ್ಯೋಧನ

* ನಾಸ್ತಿಕ್ಯವು ಸ್ಸಜ್ಜನರಲ್ಲಿ ಅಂದರೆ ದುಃಖಾದಿಗಳ ಅನುಭವ ಸಂಕಟದಿಂದ ಇರುತ್ತದೆ. ದುರ್ಜನರಲ್ಲಿ ಆದರೆ ಸ್ವಾಭಾವಿಕವಾಗಿಯೇ ಇರುತ್ತದೆ.

ಪಕ್ಷದಲ್ಲಿರತಕ್ಕ ಸೈನ್ಯಗಳು ಪಾಪಸ್ವರೂಪಗಳು. (ಅಂದರೆ ಪರಹಿಂಸಾ, ಪರದ್ರವ್ಯ, ಪರ ನಿಂದಾ, ಪರನಾರೀಗಮನ ಮೊದಲಾದ ಸ್ವರೂಪಗಳು; ಪಾಂಡವರ ಸೈನ್ಯಗಳು ಪುಣ್ಯಾಭಿಮಾನಿಗಳಾದ ದೇವತೆಗಳು. ಆ ವಾಣ್ಯಾದಿಗಳಿಗೂ, ದ್ರೌಪದ್ಯಾದಿಗಳಿಗೂ ನಿಯಾಮಕನಾದವನು ನಾರಾಯಣನು.

ವಿಶೇಷಾಂಶ— (1) (೧) ದ್ರೋಣಾಚಾರ್ಯರು ಶ್ರೋತ್ರಾಭಿಮಾನಿಯಾದ ಬೃಹಸ್ಪತಿ ರೂಪರಾಗಿ ಇರುತ್ತಾರೆ. (೨) ಕರ್ಣನು ಕಣ್ಣಿಗೆ ಅಭಿಮಾನಿಯಾದ ಸೂರ್ಯನ ಸ್ವರೂಪನಾಗಿರುತ್ತಾನೆ. (೩) ಭೀಷ್ಮಾಚಾರ್ಯರು ವಾಗಭಿಮಾನಿಯಾದ ಅಗ್ನಿಯ ಸ್ವರೂಪನಾಗಿರುತ್ತಾರೆ. (೪) ಅಭಿಮನ್ಯುವು ಮನೋಭಿಮಾನಿಯಾದ ಚಂದ್ರನ ಸ್ವರೂಪನಾಗಿರುತ್ತಾನೆ. (೫) ನಕುಲಸಹದೇವರು ಘ್ರಾಣಕ್ಕೆ ಅಭಿಮಾನಿಗಳಾದ ಅಶ್ವಿನೀದೇವತೆಗಳ ಸ್ವರೂಪರಾಗಿರುತ್ತಾರೆ. (೬) ಅರ್ಜುನನು ಮನೋಭಿಮಾನಿಯಾದ ಇಂದ್ರನ ಸ್ವರೂಪನಾಗಿರುತ್ತಾನೆ. ಇತ್ಯಾದಿ ಪ್ರಕಾರ ತಿಳಿಯತಕ್ಕುದು. (2) ಕಾಮ–ಕ್ರೋಧಾದಿಗಳು ಸ್ವಾಭಾವಿಕವಾಗಿ ಪ್ರಬಲ ದೋಷಗಳಾಗಿವೆ. ಆದುದರಿಂದ ದುರ್ಯೋಧನನ ಉಪಮಾನವು. ಈ ಪಾಪಗಳಾದರೂ ಕೆಲವು ಸಮಯದಲ್ಲಿಯೇ ಇರುವುದರಿಂದ ಸೈನ್ಯದ ದೃಷ್ಟಾಂತವು. (3) ಸರಸ್ವತಿ ಮೊದಲಾದವರಿಗೂ, ದ್ರೌಪದಿ ಮೊದಲಾದವರಿಗೂ, ಶರೀರದೊಳಗೆ ನಿಯಾಮಕರಾದವರಿಗೂ, ಹೊರಗೆ ಇದ್ದವರಿಗೂ, ಸರ್ವರಿಗೂ ನಿಯಾಮಕನು ನಾರಾಯಣನು. ಅಂದರೆ ಸಾಕ್ಷಾತ್ ಕೃಷ್ಣನೇ (4) ತಥಾಚ ಶ್ರೀಹರಿಯು ತಾನೇವೇ ಭಕ್ತಜನರಿಗೆ ಮುಕ್ತಿಕೊಡುವುದಕ್ಕಾಗಿ ಉತ್ತಮ ಜೀವರ ದೇಹವನ್ನು ಸೃಷ್ಟಿಸಿದರೂ ಅಪರೋಕ್ಷಜ್ಞಾನದಲ್ಲಿ ಅವರು ಮಾಡಿದ ದುಷ್ಕರ್ಮವನ್ನು ಸಂಗ್ರಹಿಸುವುದಕ್ಕಾಗಿಯೂ, ಅವರು ಮಾಡಿದ ಅಧಿಕ ಪುಣ್ಯವನ್ನು ಸಂಗ್ರಹಿಸುವುದಕ್ಕಾಗಿಯೂ ಸಜ್ಜನರನ್ನೂ, ಅಸಜ್ಜನರನ್ನೂ ಸಂಗ್ರಹಿಸಿದಂತೆಯೇ ವ್ಯಾಸರೂ ಕೂಡ ತಾನು ಮಾಡಿದ ಗ್ರಂಥದಲ್ಲಿ ದುರ್ಜನರಿಗೆ ತಿರಸ್ಕಾರವನ್ನು ಹೇಳುವುದಕ್ಕಾಗಿಯೂ, ತನ್ನ ಭಕ್ತರಿಗೆ ಸಕಲ ಕಾರ್ಯಗಳಲ್ಲಿ ದಿಗ್ವಿಜಯವನ್ನು ಹೇಳುವುದಕ್ಕಾಗಿಯೂ, ಸಜ್ಜನರನ್ನೂ, ಅಸಜ್ಜನರನ್ನೂ, ಎಲ್ಲರನ್ನೂ ಸಂಗ್ರಹಿಸಿದರು ॥೧೫೯॥

ಭಾರತಕ್ಕೆ ದುರ್ಜ್ಞೇಯತ್ವವನ್ನು ಸಂಹಾರ ಮಾಡುತ್ತಾರೆ—

ಮೂ ॥ ಏವಮಧ್ಯಾತ್ಮನಿಷ್ಠಂ ಹಿ ಭಾರತಂ ಸರ್ವಮುಚ್ಯತೇ ॥
ದುರ್ವಿಜ್ಞೇಯಮತಃ ಸರ್ವೈರ್ಭಾರತಂ ತು ಸುರೈರಪಿ ॥೧೬೦॥

ಅ ॥ ಯಾವ ಕಾರಣದಿಂದೆಯಿಂದ ಹಿಂದೆ ಹೇಳಿದ ಪ್ರಕಾರ ನಿಖಿಲ ಭಾರತವು ದೇಹಾದ್ಯಂತರ್ಯಾಮಿಯನ್ನು ಪ್ರತಿಪಾದಿಸತಕ್ಕುದು ಎಂದು ಹೇಳಲ್ಪಡುತ್ತದೋ, ಆದಕಾರಣ ಭಾರತವಾದರೂ ಮನುಷ್ಯ ಮೊದಲಾದ ಎಲ್ಲಪರಿಂದಲೂ, ದೇವತೆಗಳಿಂದಲೂ ತಿಳಿಯಲಶಕ್ಯವು ॥೧೬೦॥

ಅದನ್ನೇ ಪ್ರಕಟೀಕರಿಸುತ್ತಾರೆ—

ಮೂ ॥ ಸ್ವಯಂ ವ್ಯಾಸೋ ಹಿ ತದ್ವೇದ ಬ್ರಹ್ಮಾ ವಾ ತತ್ಪ್ರಸಾದತಃ ॥
ತಥಾಪಿ ನಿಷ್ಣುಪರತಾ ಭಾರತೇ ಸರ್ವಸಂಗ್ರಹಃ ॥೧೬೧॥

ಅ ॥ ಎಲ್ಲಾ ಅರ್ಥವನ್ನು ವೇದವ್ಯಾಸದೇವರು ತಾನಾಗಿಯೇ ತಿಳಿದಿರುವರು. ಬ್ರಹ್ಮನೂ ಕೂಡ ವ್ಯಾಸದೇವರ ಅನುಗ್ರಹದೆಶೆಯಿಂದ ತಿಳಿದಿರುತ್ತಾರೆ. (ಹಾಗಾದರೆ ಮನುಷ್ಯರಿಗೆ ಭಾರತವು ತಿಳಿಯಲಸಾಧ್ಯವಾದರೆ ಭಾರತವನ್ನು ಕಲಿಯುವುದು ವ್ಯರ್ಥವು. ಏಂದರೆ—) (ಯದ್ಯಪಿ ಭಾರತವು ದುರ್ಜ್ಞೇಯವು,) ಆದಾಗ್ಯೂ (ಮನುಷ್ಯರಿಂದಲೂ ಕೂಡ) ಭಾರತದಲ್ಲಿ ವಿಷ್ಣುಪರತ್ವವು ಅರ್ಥಸಾರವ ಏಕೀಕರಣವು ॥೧೫೦॥

ವಿಷ್ಣೂತ್ಕರ್ಷವನ್ನು ಉಪಸಂಹಾರ ಮಾಡುತ್ತಾರೆ—

ಮೂ ॥ ಇತ್ಯಾದಿ ವ್ಯಾಸವಾಕ್ಯೈಸ್ತು ವಿಷ್ಣೂತ್ಕರ್ಷೋಽವಗಮ್ಯತೇ ॥
ಪ್ರಾ ವಾಯ್ವಾದೀನಾಂ ಕ್ರಮಶ್ಚೈವ ತದ್ವಾಕ್ಯೈರೇವ ಚಿಂತ್ಯತೇ ॥೧೫೧॥

ಅ ॥ ಇದು ಮೊದಲಾದ ವ್ಯಾಸವಾಕ್ಯಗಳಿಂದಲಾದರೂ ವಿಷ್ಣುಸರ್ವೋತ್ತಮತ್ವವು ತಿಳಿಯಲ್ಪಡುತ್ತದೆ. ವಾಯು ಮೊದಲಾದವರ ತಾರತಮ್ಯಕ್ರಮವೂ ಕೂಡ ಆ ವ್ಯಾಸವಾಕ್ಯಗಳಿಂದಲೇ ವಿಚಾರಮಾಡಲ್ಪಡುತ್ತದೆ ॥೧೫೧॥

ಮೂ ॥ ವಾಯುರ್ಹಿ ಬ್ರಹ್ಮತಾಮೇತಿ ತಸ್ಮಾದ್ಬ್ರಹ್ಮೈವ ಸ ಸ್ಮೃತಃ ॥
ನ ಬ್ರಹ್ಮಸದೃಶಃ ಕಶ್ಚಿಚ್ಛಿವಾದಿಷು ಕಥಂಚನ ॥೧೫೨॥

ಅ ॥ ವಾಯುದೇವರೇ ಬ್ರಹ್ಮಪದವಿಯನ್ನು ಹೊಂದುತ್ತಾರೆ. ಆದಕಾರಣ ಆ ವಾಯುದೇವರೇ ಬ್ರಹ್ಮನೆಂದು ಹೇಳಲ್ಪಡುತ್ತಾನೆ. ರುದ್ರಮೊದಲಾದವರಲ್ಲಿ ಯಾವನೊಬ್ಬನು ಹರಿಭಕ್ತ್ಯಾದಿ ವಿಷಯದಲ್ಲಿ ಬ್ರಹ್ಮನಿಗೆ ಸದೃಶನಾದವನು ಇಲ್ಲವೇ ಇಲ್ಲ (೧೫೨॥

~~ಬ್ರಹ್ಮದೇವರು ವಾಯುಸ್ವರೂಪರಾಗಿರುವುದರಿಂದಲೂ, ವಾಯುದೇವರು ಹನುಮಂತನ ಸ್ವರೂಪರಾಗಿರುವುದರಿಂದಲೂ~~ ಹನುಮಂತನಿಗೆ ಉತ್ತಮತ್ವವು ಸಿದ್ಧವಾಗುವುದರಿಂದ ಬ್ರಹ್ಮನಿಗೆ ಸುತರಾಂ ಉತ್ತಮತ್ವವು ಸಿದ್ಧಿಸುವುದರಿಂದ ಹನುಮಂತನಿಗೆ ಉತ್ತಮತ್ವವಿಷಯದಲ್ಲಿ ಪ್ರಮಾಣವನ್ನು ಹೇಳುತ್ತಾರೆ.

ಮೂ ॥ ಜ್ಞಾನೇ ವಿರಾಗೇ ಹರಿಭಕ್ತಿಭಾವೇ
ಧೃತಿಸ್ಥಿತಿಸ್ಥಾಣಬಲೇಷು ಯೋಗೇ ॥
ಬುದ್ಧೌ ಚ ನಾನ್ಯೋ ಹನುಮತ್ಸಮಾನಃ
ಪುಮಾನ್ ಕದಾಚಿತ್ಕ್ವ ಚ ಕಶ್ಚ ನೈವ ॥೧೫೩॥

ಅ ॥ ಜ್ಞಾನವಿಷಯದಲ್ಲಿಯೂ, ವೈರಾಗ್ಯವಿಷಯದಲ್ಲಿಯೂ, ಶ್ರೀ ಹರಿಯ ಭಕ್ತಿವಿಷಯದಲ್ಲಿಯೂ, ಧೈರ್ಯದಲ್ಲಿಯೂ, ಸ್ಥೈರ್ಯದಲ್ಲಿಯೂ, ಚೇಷ್ಟಾವಿಷಯದಲ್ಲಿಯೂ, ಸಾಮರ್ಥ್ಯವಿಷಯದಲ್ಲಿಯೂ ಯೋಗ ವಿಷಯದಲ್ಲಿಯೂ, ಬುದ್ಧಿ ವಿಷಯದಲ್ಲಿಯೂ ವಾಯ್ವವತಾರದ್ದೆಶೆಯಿಂದ ಇತರನಾದ ಯಾವನ್ನೊಬ್ಬ ರುದ್ರಾದಿಯು ಯಾವಾಗಲೂ, ಯಾವಕಾಲವಲ್ಲಿಯೂ, ಯಾವ ದೇಶದಲ್ಲಿಯೂ ಇಲ್ಲವೇ ಇಲ್ಲ ॥೧೫೩॥

ಶ್ರೀಹರಿಯು ಸರ್ವೋತ್ತಮನೆನ್ನುವ ವಿಷಯದಲ್ಲಿಯೂ ವಾಯುದೇವರು ಪ್ರಧಾನಾಂಗಭೂತರುಎನ್ನುವ ವಿಷಯದಲ್ಲಿಯೂ ಸ್ಮೃತಿಗಳನ್ನುದಾಹರಿಸಿ ಈಗ ಶ್ರುತಿಗಳನ್ನೂ ಉದಾಹರಿಸುತ್ತಾರೆ—

ಮೂ ॥ ಬಳಿತ್ಥಾ ತದ್ವಪುಷೇ ಧಾಯಿ ದರ್ಶತಂ
ದೇವಸ್ಯ ಭರ್ಗಃ ಸಹಸೋ ಯತೋಽಜನಿ ॥
ಯದೀಮುಪ ಹ್ವರತೇ ಸಾಧತೇ ಮತಿ-
ರ್ಋತಸ್ಯ ಧೇನಾ ಅನಯಂತ ಸಸ್ರುತಃ ॥೧೫೪॥

ಅ ॥ ಯತಃ – ಯಾವ ಶ್ರೀ ನಾರಾಯಣದೇವರದ್ದೆಶೆಯಿಂದ, ಅಜನಿ – ತಾನೇ ಹುಟ್ಟಿರುವರೋ, ದೇವಸ್ಯ – ಆ ನಾರಾಯಣದೇವರ ಪ್ರೀತಿಗಾಗಿ ಮತ್ತು ಆ ನಾರಾಯಣ ದೇವರ ಆಜ್ಞೆಯಿಂದಲೂ, ಸಹಸಃ–ಬಲರೂಪನಾದ, ಮತ್ತು ಕಲಿ ಮೊದಲಾದ ಅಸುರರಿಂದ ಮಾಡಲ್ಪಟ್ಟ ಉಪದ್ರವವನ್ನು ಸಹಿಸುವ ಸ್ವಭಾವವುಳ್ಳ, ಮತ್ತು-ಅತಿವೇಗವುಳ್ಳ, ಮುಖ್ಯಪ್ರಾಣ ದೇವರ, ಬಟ್ – ಬಲಾತ್ಮಕವಾದ, ದರ್ಶತಂ–ಜ್ಞಾನದಿಂದ ವ್ಯಾಪ್ತವಾದ, ಭರ್ಗಃ-ಶ್ವಾಸ ರೂಪದಿಂದ ಜಗತ್ತನ್ನು ಧರಿಸುವ, ತತ್–ಆ ವಾಯುದೇವರ ಮೂಲರೂಪವು, ಇತ್ಥಾ-ಈ ಪ್ರಕಾರವಾಗಿಯೇ, (ಅಂದರೆ ಮೂಲರೂಪದಲ್ಲಿ ಹೇಗೆ–ಬಲ–ಜ್ಞಾನ ಮೊದಲಾದೆದು ಇದೆಯೋ ಹಾಗೆಯೇ) ವಪುಷೇ – ಅವತಾರಕ್ಕೋಸ್ಕರ, ಧಾಯಿ-ಧರಿಸಲ್ಪಟ್ಟಿತು. (ಆದರಲ್ಲಿ ಒಂದನೇ ಅವತಾರದ, ನಾಮವನ್ನೂ, ವ್ಯಾಪಾರವನ್ನೂ ಹೇಳುತ್ತಾರೆ) ಯತ್ – ಯಾವ ಒಂದನೇ ಅವತಾರವೋ, (ಅದು) ಮತಿಃ–ಮತಿಶಬ್ದವಾಚ್ಯವಾದುದು, (ಅಂದರೆ ಸರ್ವದಾ ಜ್ಞಾನಶೀಲ ನಾದುದರಿಂದ ಹನುಮನ್ನಾಮಕವಾದುದು) ಋತಸ್ಯ-ಜ್ಞಾನರೂಪನಾದ ರಾಮನ, ಉಪ–ಸಮೀಪದಲ್ಲಿ, ಹರ್ವತೇ ಕ್ರೀಡಿಸುತ್ತದೆ. (ಅಂದರೆ ಭಕ್ತಿಭರದಿಂದ ನಮ್ರೀಭೂತವಾಗಿರುತ್ತದೆ) ಈಂ-ಈ ಪ್ರಕಾರವಾಗಿಯೇ, ಸಾಧತೇ- (ಸಮೀಪದಲ್ಲಿ ಸೇವೆಯನ್ನು ಮಾಡುವುದರಂತೆಯೇ ದೂರದಲ್ಲಿಯಿರುವ ರಾಮಚಂದ್ರದೇವರ ಕಾರ್ಯಗಳನ್ನು) ಸಾಧಿಸುತ್ತಾರೆ. (ಅದು ಯಾವುದು ಕಾರ್ಯವು ಎಂದರೆ ಲೇಶತಃ ಕಾರ್ಯಗಳನ್ನು ತೋರಿಸುತ್ತಾರೆ) ಸಸ್ರುತಃ–ಅಮೃತಸ್ರವಣ ದಿಂದ ಕೂಡಿದ, ಋತಸ್ಯ - ಸತ್ಯವಚನವುಳ್ಳ ರಾಮಚಂದ್ರದೇವರ, ಧೇನಾ – ದೇವತೆಗಳ ಕಾರ್ಯವನ್ನು ಘೋಷಿಸುವುದರಿಂದ ಧೇನಾಶಬ್ದವಾಚ್ಯಗಳಾದ ವಚನಗಳನ್ನು) ಅನಯಂತ–ವೈದರು. (ಅಂದರೆ ರಾಮಚಂದ್ರದೇವರ ಆಜ್ಞೆಯನ್ನು ಸೀತಾದೇವಿಯ ಸಮೀಪಕ್ಕೆ ವೈದನು. ಮತ್ತು ಸೀತಾದೇವಿಯ ಪ್ರಾರ್ಥನೆಯನ್ನು ಹನುಮಂತನು ರಾಮಚಂದ್ರದೇವರ ಸಮೀಪಕ್ಕೆ ವೈದನು. ಅಂತಹ ಹನುಮನ್ನಾಮಕವಾದುದು ಒಂದನೇ ಅವತಾರವು ॥೧೫೪॥

ಎರಡನೇ ಅವತಾರವನ್ನು ನಿರೂಪಿಸುತ್ತಾರೆ—

ಮೂ ॥ ಪೃಕ್ಷೋ ವಪುಃ ಪಿತುಮಾನ್ನಿತ್ಯ ಆಶಯೇ
ದ್ವಿತೀಯಮೂ ಸಪ್ತಶಿವಾಸು ಮಾತೃಷು ॥
ತೃತೀಯಮಸ್ಯ ವೃಷಭಸ್ಯ ದೋಹಸೇ
ದಶಪ್ರಮತಿಂ ಜನಯಂತ ಯೋಷಣಃ ॥೧೫೫॥

ಅ ॥ ದ್ವಿತೀಯಂ–ಎರಡನೇದ್ದಾದ, ವಪುಃ–ಅವತಾರವು, ಪೃಕ್ಷಃ–ಕುರುಸೈನ್ಯವನ್ನು ನಾಶಪಡಿಸುವಪ್ರಯುಕ್ತ ಪೃಕ್ಷಶಬ್ದವಾಚ್ಯವಾದುದು, ಪಿತುಮಾನ್–ಬಹ್ವನ್ನವನ್ನು ಉಣ್ಣುವುದು, ನಿತ್ಯಃ–ಸ್ವಚ್ಛಂದವರಣವುಳ್ಳವನಾದುದರಿಂದ ನಿತ್ಯಶಬ್ದವಾಚ್ಯವಾಚ್ಯವಾದುದು,(ಇಂತಹ ಆ ಭೀಮಸೇನನು) ಸಪ್ತಶಿವಾಸು – ಸಪ್ತಸಂಖ್ಯಾಕಗಳಾದ, ಶೋಭನಗಳಾದ, ಮಾತೃಷು–ಪರಮಾತ್ಮನನ್ನು ತಿಳಿಸಿಕೊಡುವುದರಿಂದ ಮಾತೃಶಬ್ದವಾಚ್ಯಗಳಾದ ವಿದ್ಯೆಗಳಲ್ಲಿ, (ಅಂದರೆ

ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ, ಭಾರತ ಪಂಚರಾತ್ರ, ಮೂಲ ರಾಮಾಯಣ' ಎನ್ನುವ ಏಳು ವಿದ್ಯೆಗಳಲ್ಲಿ) ಆ – ಚೆನ್ನಾಗಿ, ಆಶಯೇ - ಮಲಕೊಂಡಿತು. (ಅಂದರೆ ಹೇಗೆ ಸುಪ್ತಪುರುಷನು ಹೊರಗೆ ಇರತಕ್ಕ ಯಾವುದನ್ನೂ ನೋಡುವುದಿಲ್ಲವೋ ಹಾಗೆಯೇ ಆ ವಿದ್ಯೆಗಳ ಅರ್ಥವಿಚಾರದಲ್ಲಿ ಸಮಾಹಿತವಾದ ಮನಸ್ಸುವುಳ್ಳವರಾದಪ್ರಯುಕ್ತ ಭೀಮಸೇನದೇವರು ಬಾಹ್ಯವ್ಯಾಪಾರವನ್ನು ತಿಳಿಯದೆಯಿದ್ದವರಾಗಿ ಅವುಗಳನ್ನೇ ವಿಚಾರ ಮಾಡುತ್ತಾ ಇದ್ದರು.) ಯೋಷಣಃ– ಶ್ರೀಭೂ ದುರ್ಗಾ ಎನ್ನುವ ವೇದಾಭಿಮಾನಿಗಳಾದ ಸ್ತ್ರೀಯರು, ದೋಹಸೇ–ಸರ್ವಜ್ಞತ್ವವನ್ನು ಪೂರ್ಣೀಕರಿಸುವುದಕ್ಕಾಗಿ, ವೃಷಭಸ್ಯ– ದೇವ ಶ್ರೇಷ್ಠರಾದ, ಅಸ್ಯ-ಈ ವಾಯುದೇವರ, ತೃತೀಯಂ-ಮೂರನೇ ಅವತಾರವನ್ನು, ದಶ ಪ್ರಮತಿಂ– ಪೂರ್ಣಪ್ರಜ್ಞನಾಮಕರನ್ನಾಗಿ –ಜನಯಂತ- ಹುಟ್ಟಿಸಿದರು.

ವಿಶೇಷಾಂಶ— (1) **'ದಶೇತಿ ಸರ್ವಮುದ್ದಿಷ್ಟಂ ಸರ್ವಂ ಪೂರ್ಣಮಿಹೋಚ್ಯತೇ ॥ ಪ್ರಜ್ಞಾಪ್ರಮತಿರುದ್ದಿಷ್ಟಾ ಪೂರ್ಣಪ್ರಜ್ಞಸ್ತತಃಸ್ಮೃತಃ'** ಎನ್ನುವ ಪ್ರಮಾಣದಿಂದ ದಶಪ್ರಮತಿ ಎನ್ನುವುದಕ್ಕೆ ಪೂರ್ಣಪ್ರಜ್ಞಾಚಾರ್ಯರು ಎಂದು ಅರ್ಥವು. (2) ಶ್ರೀ ಭೂ ದುರ್ಗಾ ಎನ್ನುವ ಋಗಾದಿ ವೇದಗಳಿಗೆ ಅಭಿಮಾನಿಗಳಾದ ದೇವಿಯರು ತಮ್ಮಿಂದ ಅಭಿಮಾನಿಗಳಾದ ವೇದ ಗಳನ್ನು ಇತರರು ಕುಶಿಬಿಂದಹಾಗೆ ವ್ಯಾಖ್ಯಾನಮಾಡುವುದರಿಂದ ಯೋಗ್ಯ ರೀತಿಯಾಗಿ ವ್ಯಾಖ್ಯಾ ನಮಾಡುವುದಕ್ಕಾಗಿ ಮಧ್ವಗೇಹಭಟ್ಟರ ಹೆಂಡತಿಯ ಉದರದಲ್ಲಿ ಇದ್ದು ಹುಟ್ಟಿಸಿದರು ॥ ೧೫೫ ॥

ಮೂ ॥ ನಿರ್ಯದೀಂ ಬುಧ್ನಾನ್ಮಹಿಷಸ್ಯ ವರ್ಪಸ
ಈಶಾನಾಸಃ ಶವಸಾ ಕ್ರಂತ ಸೂರಯಃ ॥
ಯದೀಮನು ಪ್ರದಿವೋಮಧ್ವ ಆಧವೇ
ಗುಹಾ ಸಂತಂ ಮಾತರಿಶ್ವಾ ಮಥಾಯತಿ ॥ ೧೫೬ ॥

ಅ ॥ ಬುಧ್ನಾತ್–ಪಂಡಿತರನ್ನು ಸನ್ಮಾರ್ಗದಲ್ಲಿ ಒಯ್ಯುವ, ವರ್ಪಸಃ-(ಸಜ್ಜನರನ್ನು ಅಂಗೀಕರಿಸತಕ್ಕ ಮತ್ತು ರಕ್ಷಿಸತಕ್ಕ. ಮಹಿಷಸ್ಯ- ದೇವಶ್ರೇಷ್ಠರಾದ ವಾಯುದೇವರ, ಯತ್–ಯಾವ ಮೂರನೇ ಅವತಾರದ್ದೆಶೆಯಿಂದ, ಈಂ– ಪೂರ್ವೋಕ್ತಪ್ರಕಾರವಾಗಿ, (ಜ್ಞಾನಪೂರ್ತಿಯು ಮಾಡಲ್ಪಡುತ್ತಿರಲು, ಈಶಾನಾಸಃ-ರುದ್ರಮೊದಲಾದ ದೇವತೆಗಳು, ಶವಸಾ–ಸುಖದಿಂದ ಸೂರಯಃ– ಜ್ಞಾನಿಗಳಾದವರು, ನಿಃ–ಅತ್ಯಂತವಾಗಿ, ಕ್ರಂತ– ಮಾಡಿದರೋ, ಮಧ್ವಃ-ಮಧ್ವ, ನಾಮಕರಾದ, ಮಾತರಿಶ್ವಾ– ವಾಯುದೇವರು, ಪ್ರದಿವಃ ಪ್ರಕೃಷ್ಟಬುದ್ಧಿಪ್ರಕಾಶವುಳ್ಳ ಹಿಂದೆ ಹೇಳಿದ ರುದ್ರಾದಿ ದೇವತೆಗಳನ್ನು, ಅನು-ಪುರಸ್ಕರಿಸಿಕೊಂಡು, ಗುಹಾ- ಹೃದಯ ಗುಹೆಯಲ್ಲಿ, ಸಂತಂ–ಇರತಕ್ಕವನ್ನಾಗಿ, ಆಧವೇ- ಚೆನ್ನಾಗಿ ಪ್ರತಿತ್ವವಿಷಯದಲ್ಲಿ, ಯತ್-ಯಾವಕಾರಣ ದೆಶೆಯಿಂದ, ಮಥಾಯತಿ–ಅನಂತಾನಂತ ವೇದಶಾಸ್ತ್ರಾದಿಗಳ ಚೆನ್ನಾಗಿ ಮಥನವನ್ನು ಮಾಡು ತ್ತಾರೆ. (ಅಂತೂ ಅಪಾರವಾದ ವೇದಶಾಸ್ತ್ರವಿಚಾರವನ್ನು ಮಾಡಿ ಶ್ರೀ ಹರಿಗೆ ಸರ್ವೋತ್ತಮತ್ವ ವನ್ನು ಸ್ಥಾಪಿಸುತ್ತಾರೆ ಆದಕಾರಣ ರುದ್ರಾದಿ ಜ್ಞಾನಿಗಳು ತಿಳಿದರು ಎಂದರ್ಥವು ॥ ೧೫೬

ಮೂ ॥ ಪ್ರಯತ್ಪಿತುಃ ಪರಮಾನ್ನೀಯತೇ ಪರ್ಯಾ–
ಪೃಕ್ಷುಧೋ ವೀರುಧೋ ದಂಸು ರೋಹತಿ ॥
ಉಭಾ ಯದಸ್ಯ ಜನುಷಂ ಯದಿನ್ವತ
ಆದಿದ್ಯವಿಷ್ಠೋ ಅಭವದ್ಧೃಣಾ ಶುಚಿಃ ॥ ೧೫೭ ॥

ಅ ॥ ಯತ್–ಯಾವಕಾರಣದೆಶೆಯಿಂದ, ಪರಮಾತ್ - ಉತ್ತಮರಾದ, ಪಿತುಃ- ಸ್ವಜನಕವಾದ ನಾರಯಣನದೆಶೆಯಿಂದ ಅ-ಚೆನ್ನಾಗಿ, ಪರಿ --ಸುತ್ತಲೂ, ಪ್ರನೀಯತೇ-- ಪ್ರೇರಿಸಲ್ಪಡುತ್ತಾನೋ, ಪೃಕ್ಷುಧಃ-- ಪ್ರಶ್ನೆರೂಪಗಳಾದ, ವೀರುಧಃ ಲತೆಗಳನ್ನು, ದಂಸು-- ದಂತಗಳಲ್ಲಿ, ರೋಹತಿ-- ಆರೋಪಿಸುತ್ತಾನೆ. (ಅಂದರೆ ಹೇಗೆ ಬಲೀವರ್ದವು ಲತೆಗಳನ್ನು ದಂತಗಳಲ್ಲಿಟ್ಟುಕೊಂಡು ನಾಶಪಡಿಸುತ್ತದೋ, ಹಾಗೆಯೇ ಪರರ ಪ್ರಶ್ನೆಗಳನ್ನೂ ಕೂಡ ನಾಶ ಪಡಿಸುತ್ತಾನೆ.) ಯತ್– ಯಾವಕಾರಣದೆಶೆಯಿಂದ, ಉಭಾ- ಇಬ್ಬರು ಲಕ್ಷ್ಮೀನಾರಾಯಣರು ಅಸ್ಯ ಈ ಮಧ್ವಾಚಾರ್ಯರ, ಜನುಷಂ- ಉತ್ಪತ್ತಿಯನ್ನು, ಯತ್ – ಯಾವಜ್ಞಾನವನ್ನುದ್ದೇಶಿಸಿ ಕೊಂಡು, ಇನ್ವತಃ-ಪ್ರತಿಯುಗದಲ್ಲಿಯೂ ಪ್ರೇರಿಸುತ್ತಾರೋ, ತತ್– ಆಕಾರಣದೆಶೆಯಿಂದ, ಆತ್ ಆಕಾರವಾಚ್ಯನಾದ ನಾರಾಯಣನದೆಶೆಯಿಂದ, ಯವಿಷ್ಠಃ–ವಾಯುದೇವರ ಅವತಾರಗಳಲ್ಲಿ ಕನಿಷ್ಠರಾದ ಮಧ್ವಾಚಾರ್ಯರು, ಇತ್-ಈಪ್ರಕಾರ, (ಅಂದರೆ ಈಗ ಕಾಣತಕ್ಕ ರೀತಿಯಿಂದಲೇ) ಘೃಣಾ–ದಯೆಯುಳ್ಳವರ, (ಅಂದರೆ ಹನುಮದ್ಭೀಮರಿಗೆ ದುರ್ಜನರನ್ನು ಶಿಕ್ಷಿಸುವ ವಿಷಯದಲ್ಲಿ ಹದಿಯ ಆಜ್ಞೆಯು ಇದ್ದಂತೆಯೇ ಶ್ರೀಮಧ್ವಾಚಾರ್ಯರಿಗೆ ಇಲ್ಲದಿರುವುದರಿಂದ ವಿತಕ್ಕೆ ಕೊಲ್ಲುವೆನು ಎಂದು ಕೃಪೆಯುಳ್ಳವನು.(ಶುಚಿಃ--ಸ್ವಯಂ ದೈತ್ಯರಾದ ವಿಪ್ರರೂಪರಾದ ವಿದ್ವಾಂಸರು ತನಗೆ ಪ್ರತಿವಾದಿಯಾಗಿ ಬಂದರೂ ಅವರನ್ನು ಮಾತಿನಿಂದ ಬೇಕಾದಷ್ಟು ದೂಷಿಸಿದರೂ ಕೈಯಿಂದ ಹಿಂಸೆ ಮಾಡದೆ ಇರುವುದರಿಂದ ವಿಪ್ರಹತ್ಯಾನಿಮಿತ್ತವಾದ ಜನಾಪವಾದಿಂದ ಅಸ್ಪೃಷ್ಟರಾದರು ॥೧೫೭॥

ಮೂ ॥ ಆದಿನಾತ್ತೃರಾವಿಶದ್ಯಾಸ್ವಾಶುಚಿ–
ರಹಿಂಸ್ಯಮಾನ ಉರ್ವಿಯಾ ವಿವಾವೃಧೇ ॥
ಅನು ಯತ್ಪೂರ್ವಾ ಅರುಹತ್ಸನಾಜುವೋ
ನಿ ನವ್ಯಸೀಷ್ವವರಾ ಸುಧಾವತೇ ॥೧೫೮॥

ಅ ॥ ಆತ್--ಆಕಾರಶಬ್ದವಾಚ್ಯನಾದ ವಿಷ್ಣುವಿನ ಆಜ್ಞೆಯಿಂದ, ಇತ್--ಈ ಪ್ರಕಾರ ಮೂರು ಅವತಾರಗಳಲ್ಲಿಯೂ, ಮಾತೄಃ--ಅಂಜನಾ, ಕುಂತೀ, ವಿಪ್ರಪತ್ನಿಯರನ್ನು, ಆ--ತ್ರೇತಾಯುಗವನ್ನೂ, ದ್ವಾಪರಯುಗವನ್ನೂ, ಕಲಿಯುಗವನ್ನೂ ಅವಧೀಕರಿಸಿಕೊಂಡು, (ವಾಯುದೇವರು) ಆವಿಶತ್--ಪ್ರವೇಶಮಾಡಿದರು. ಯಾಸು--ಯಾವ ಮಾತೄಗಳಲ್ಲಿ, ಉರ್ವಿಯಾ--ಅತ್ಯುತ್ಕೃಷ್ಟವಾದ ತನ್ನ ಶಕ್ತಿಯಿಂದ, ಆ--ಚೆನ್ನಾಗಿ, ಶುಚಿಃ--ದುಷ್ಕರ್ಮಾದಿ ಗಳಿಂದ ಮುಟ್ಟಲ್ಪಡದೆ ಇದ್ದವರಾಗಿ, ಅಹಿಂಸ್ಯಮಾನಃ--)ದುಷ್ಕರ್ಮದಿಂದಾಗಲೀ, ಉದರದಲ್ಲಿ ರತಕ್ಕ ಜಂತ್ವಾದಿಗಳಿಂದಾಗಲೀ,) ಪೀಡಿಸಿಕೊಳ್ಳಲ್ಪಡದಿರುವವರಾಗಿಯೇ, ವಿವಾವೃಧೇ-- ಉತ್ಪತ್ತಿಪರ್ಯತಂರವಾಗಿಯೂ ಬೆಳೆದರು. ಸನಾಜುವಃ--ಸನಾತನನಾದ ಶ್ರೀ ಪರಮಾತ್ಮನನ್ನು ಪ್ರತಿಪಾದಿಸತಕ್ಕ, ಪೂರ್ವಾ--ಏಳು ವಿದ್ಯೆಗಳಲ್ಲಿ ಮೊದಲಿನದ್ದಾದ ಋಗ್ವೇದ, ಯಜುರ್ವೇದ, ಸಾಮವೇದ. ಅಥರ್ವಣವೇದ ಎನ್ನುವ ನಿತ್ಯ ವಿದ್ಯೆಗಳು, ಯತ್--ಯಾವ ಕಾರಣ ದೆಶೆಯಿಂದ, (ನಿತ್ಯಾಃ- ನಿತ್ಯಗಳೋ, ಆ ಕಾರಣದೆಶೆಯಿಂದ) ಅನು–ಋಗಾದಿಗಳ ಅರ್ಥಗಳನ್ನು ತಿಳಿಸಿ ಕೊಡತಕ್ಕ ಶಿಕ್ಷಾ, ಕಲ್ಪ, ವ್ಯಾಕರಣ ಮೊದಲಾದುವುಗಳನ್ನು ಅನುಸರಿಸಿ, ಅರುಹತ್– ಮೆಲ್ಲ ಮೆಲ್ಲಗೆ ವಿಚಾರಮಾಡುತ್ತಾ ಇದ್ದರು. ನಿ-ಅತ್ಯಂತವಾಗಿ, ನವ್ಯಸೀಷು–ನವೀನಗಳಾದ, ಅವರಾಸು-ಪೌರುಷೇಯಗಳಾಗಿರುವ ಪ್ರಯುಕ್ತ ಅವರಗಳಾದ ಪಂಚರಾತ್ರ, ಭಾರತ, ಮೂಲ ರಾಮಾಯಣಾಖ್ಯ ವಿದ್ಯೆಗಳಲ್ಲಿ, ಧಾವತೇ–ಋಗಾದಿಗಳಂತೆ, ಕಾಠಿಣ್ಯವಿಲ್ಲದಿರುವುದರಿಂದ ಅತಿಶೀಘ್ರದಲ್ಲಿಯೇ ವ್ಯಾಖ್ಯಾನಮಾಡುತ್ತಾರೆ.

ವಿಶೇಷಾಂಶ — ಆಲೋಚನೆ ಮಾಡಿದರೆ ಋಜುಗಳಿಗೆ ಸರ್ವವಿಷಯಕಜ್ಞಾನವೂ ಇದೆ. ಆದಕಾರಣ ಋಗಾದಿ ವಿದ್ಯೆಗಳಲ್ಲಿ ಅಪ್ರಸಿದ್ಧಗಳಾದ, ಅಲೌಕಿಕಗಳಾದ ಬಹು ಪದಗಳು ಇದ್ದ ಪ್ರಯುಕ್ತ ಸ್ವರ, ಸಂಹಿತಾ, ಪದಾದಿಗಳು ನಿಯತಗಳಾದ ಪ್ರಯುಕ್ತವೂ, ಸ್ವೇಚ್ಛಾನುಸಾರವಾಗಿ ಅರ್ಥವನ್ನು ಹೇಳುವುದು ಅಯೋಗ್ಯವಾಗಿರುವ ಪ್ರಯುಕ್ತವೂ ಮೆಲ್ಲಗೆ ವ್ಯಾಖ್ಯಾನ ಮಾಡುತ್ತಾರೆ. ಪೌರುಷೇಯ ಗ್ರಂಥಗಳಲ್ಲಿ ಅಂತಹ ಕಾರಣ ಮೊದಲಾದುದು ಇಲ್ಲದಿರುವುದರಿಂದ ಅತಿ ಶೀಘ್ರವಾಗಿಯೇ ವ್ಯಾಖ್ಯಾನ ಮಾಡುವರು ॥೧೫೮॥

ವಿಷ್ಣುವು ಸರ್ವೋತ್ತಮನೆನ್ನುವ ವಿಷಯದಲ್ಲಿಯೂ, ವಾಯುದೇವರು ಇತರ ದೇವತೆಗಳಿಂದ ಉತ್ತಮರೆನ್ನುವ ವಿಷಯದಲ್ಲಿಯೂ, ದೇವತೆಗಳಲ್ಲಿಯೂ ತಾರತಮ್ಯವಿದೆ ಎನ್ನುವ ವಿಷಯದಲ್ಲಿಯೂ ಭಾರತಾದಿಗಳಲ್ಲಿರತಕ್ಕ ಪ್ರಮಾಣ ವಾಕ್ಯಗಳನ್ನು ದಾಹರಿಸುತ್ತಾರೆ—

ಮೂ ॥ ಅಶ್ವಮೇಧಃ ಕ್ರತುಶ್ರೇಷ್ಠೋ ಜ್ಯೋತಿಃ ಶ್ರೇಷ್ಠೋ ದಿವಾಕರಃ॥
ಬ್ರಾಹ್ಮಣೋ ದ್ವಿಪದಾಂ ಶ್ರೇಷ್ಠೋ ದೇವಶ್ರೇಷ್ಠಸ್ತು ಮಾರುತಃ ॥೧೫೯॥

ಅ ॥ ಯಾಗಗಳಲ್ಲಿ ಶ್ರೇಷ್ಠವಾದುದು ಅಶ್ವಮೇಧವು. ಜ್ಯೋತಿಸ್ಸುಗಳಲ್ಲಿ ಶ್ರೇಷ್ಠನಾದವನು ಸೂರ್ಯನು ಮನುಷ್ಯರಲ್ಲಿ ಶ್ರೇಷ್ಠನು ಬ್ರಾಹ್ಮಣನು. ದೇವತೆಗಳಲ್ಲಿ ಶ್ರೇಷ್ಠರಾದವರು ವಾಯುದೇವರು ॥೧೫೯॥

ಮೂ ॥ ಬಲಮಿಂದ್ರಸ್ಯ ಗಿರಿಶೋ ಗಿರೀ(ರಿ)ಶಸ್ಯಬಲಂ ಮರತ್ ॥
ಬಲಂ ತಸ್ಯ ಹರಿಃ ಸಾಕ್ಷಾನ್ನ ಹರೇರ್ಬಲಮನ್ಯತಃ ॥೧೬೦॥

ಅ ॥ ಇಂದ್ರನಿಗೆ ರುದ್ರನು ಬಲಪ್ರದನು. ರುದ್ರನಿಗೆ ವಾಯುದೇವರು ಬಲಪ್ರದರು. ಆ ವಾಯುದೇವರಿಗೆ ಶ್ರೀ ಹರಿಯು ಬಲಪ್ರದನು. ಶ್ರೀ ಹರಿಗೆ ಸಾಕ್ಷಾತ್ ಬಲವು. ಶ್ರೀಹರಿಗೆ ಇತರರಿಂದ ಬಲವಲ್ಲ ॥೧೬೦॥

ಮೂ ॥ ವಾಯುರ್ಭೀಮೋ ಭೀಮನಾದೋ ಮಹೌಜಾಃ
ಸರ್ವೇಷಾಂ ಚ ಪ್ರಾಣಿನಾಂ ಪ್ರಾಣಭೂತಃ ॥
ಅನಾವೃತ್ತಿರ್ದೇಹಿನಾಂ ದೇಹಪಾತೇ
ತಸ್ಮಾದ್ವಾಯುರ್ದೇವದೇವೋ ವಿಶಿಷ್ಟಃ ॥೧೬೧॥

ಅ ॥ ದೇಹಿನಾಂ–ಶರೀರಗಳಿಗೆ, ದೇಹಪಾತೇ ಸತಿ –, ಶರೀರದ ಪಾತವಾಗುತ್ತಿರಲು, ಅನಾವೃತ್ತಿಃ ಅನ-ಮುಖ್ಯಪ್ರಾಣದೇವರಿಗೆ, ಆವೃತ್ತಿಃ–ಶರೀರದಲ್ಲಿಯೇ ಆವರ್ತನವು, (ಕಂಡದೆ) ತಸ್ಮಾತ್–ಅನ್ವಯವ್ಯತಿರೇಕಗಳಿಂದ ವಾಯುವಿಗೇನೇ ಉತ್ತಮತ್ವವು ಸಿದ್ಧಿಸುವುದರಿಂದ, ದೇವದೇವಃ – (ದೇವತೆಗಳಲ್ಲಿಯೂ ಅಘಟಿತ-ಘಟಿತ ಮಹಾಸಾಮರ್ಥ್ಯವಿದ್ದುದರಿಂದ) ದೇವತೆಗಳಿಗೂ ದೇವತೆಯಾದ, ಭೀಮಃ– ಭಯಂಕರನಾದ, ಭೀಮನಾದಃ – ಯಮಭಟರಿಗೂ ಭಯಂಕರವಾದ ಪ್ರಾಣಘೋಷಾಖ್ಯ ನಾದವುಳ್ಳ, ಮಹೌಜಾಃ – ಮಹಾಸಾಮರ್ಥ್ಯವುಳ್ಳ, ಸರ್ವೇಷಾಂ ಚ ಪ್ರಾಣಿನಾಂ – ಎಲ್ಲಾ ಪ್ರಾಣಿಗಳಿಗೂ, ಪ್ರಾಣಭೂತಃ - ಶ್ವಾಸಾಭಿಮಾನಿಯಾದ, ವಾಯುಃ – ವಾಯುದೇವರು, ವಿಶಿಷ್ಟಃ – ದೇವಾದಿ ಸಕಲಜೀವರಿಂದಲೂ ಉತ್ತಮನು.

ಅಥವಾ ಯಾವ ಕಾರಣದೆಶೆಯಿಂದ ಶರೀರಗಳಿಗೆ ಶರೀರಪಾತವಾಗುವಾಗ, ಅನಾವೃತ್ತೀ– ತನ್ನ ಮೂಲರೂಪವನ್ನು ಕುರಿತು ಒಂದು ಅಂಶದಿಂದಲೂ ಆವೃತ್ತಿ ಇಲ್ಲದಿರುವವನು ಮುಖ್ಯಪ್ರಾಣನೋ, ಇತರ ದೇವತೆಗಳು ಶರೀರವುಳ್ಳವರಿಗೆ ಮರಣವಾದಾಗ ಒಂದು ಭಾಗದಿಂದ ಅವನನ್ನು ಅನುಸರಿಸುತ್ತಾರೆ. ಮತ್ತೊಂದು ಭಾಗದಿಂದ ತಮ್ಮ ಮೂಲರೂಪಕ್ಕೆ ಸೇರುತ್ತಾರೆ. ಮುಖ್ಯಪ್ರಾಣನಾದರೂ ಒಂದು ಅಂಶದಿಂದಲೂ ತನ್ನ ಮೂಲರೂಪಕ್ಕೆ ಸೇರದೆ ಮೊದಲು ಹೇಗೆ ಇರುತ್ತಿದ್ದರೋ ಹಾಗೆಯೇ, ಜೀವನನ್ನೂ ಪರಮಾತ್ಮನನ್ನೂ ಹೊತ್ತುಕೊಂಡು ಮೊದಲಿನ ದೇಹದಿಂದ ದೇಹಾಂತರಕ್ಕೆ ಹೋಗುತ್ತಾನೆ ಆದುದರಿಂದ ದೇವದೇವನು, ವಿಶಿಷ್ಟನು.

ವಿಶೇಷಾಂಶ— (1) ಶರೀರದಲ್ಲಿ ಪ್ರಾಣವಿಲ್ಲದಿದ್ದರೆ ದೇಹವು ಬೀಳುವುದರಿಂದ ಜೀವನಾಭಾವವೂ ಆವಶ್ಯಕವಾದುದರಿಂದ 'ಪ್ರಾಣಾಭಾವೇ ಜೀವನಾಭಾವಃ' ಎಂದು ವ್ಯತಿರೇಕ ವ್ಯಾಪ್ತಿಯು ಸಿದ್ಧಿಸುತ್ತದೆ. (2) ಚಕ್ಷುರಾದ್ಯಭಿಮಾನಿದೇವತೆಗಳು ಶರೀರದಲ್ಲಿ ಇಲ್ಲದಿರಲು ಅಂಧತ್ವ ಬಧಿರತ್ವಾದಿಗಳುಮಾತ್ರ ಬರುತ್ತವೆ. ಜೀವನವು ಇದ್ದೇ ಇದೆ. 'ಪ್ರಾಣೇ ಸತಿ ಜೀವನಂ ಎಂದು ಅನ್ವಯವ್ಯಾಪ್ತಿಯೂ ಸಿದ್ಧವಾಗಿದೆ. (3) **'ನಾಕ್ಷ್ಣಾವಿಶತ್ ಅಶಯದೇವ ಚಕ್ಷುಃ ಸ್ಯಾನಿಶತ್'** ಇತ್ಯಾದಿ ಶ್ರುತಿಗಳಿಂದಲೂ ವಾಯುವಿಗೇನೇ ದೇವೋತ್ತಮತ್ವವು ಸಿದ್ಧವಾಯಿತು. ವಾಯುದೇವರಿಗೆ ಸರ್ವದೇವೋತ್ತಮತ್ವವು **'ಪ್ರಾಣ ಉದಕ್ರಮಾತ್'** ಇತ್ಯಾದ್ಯೈತರೇಯೋಪನಿಷತ್ತಿನಲ್ಲಿ ಉಕ್ತವಾಗಿದೆ ॥೧೬೧॥

ಮೂ ॥ **ತತ್ವಜ್ಞಾನೇ ವಿಷ್ಣುಭಕ್ತೌ ಧೈರ್ಯೇಸ್ಥೈರ್ಯೇ ಪರಾಕ್ರಮೇ ॥**
ವೇಗೇ ಚ ಲಾಘವೇ ಚೈವ ಪ್ರಲಾಪಸ್ಯ ಚ ವರ್ಜನೇ ॥೧೬೨॥
ಭೀಮಸೇನಸಮೋ ನಾಸ್ತಿ ಸೇನಯೋರುಭಯೋರಪಿ ॥
ಸಾಂಡಿತ್ಯೇ ಚ ಪಟುತ್ವೇಚ ಶೂರತ್ವೇ ಚ ಬಲೇಽಪಿ ಚ ॥೧೬೩॥
ತಥಾ ಯುಧಿಷ್ಠಿರೇಣೈವ(ಣಾಪಿ) ಭೀಮಂ ಪ್ರತಿ ಸಮೀರಿತಂ ॥
ಧರ್ಮಶ್ಚಾರ್ಥಶ್ಚ ಕಾಮಶ್ಚ ಮೋಕ್ಷಶ್ಚೈವ ಯತೋ ಧ್ರುವಂ॥೧೬೪॥

ಅ ॥ ತತ್ವಜ್ಞಾನವಿಷಯದಲ್ಲಿಯೂ ವಿಷ್ಣುಭಕ್ತಿವಿಷಯದಲ್ಲಿಯೂ ಧೈರ್ಯ (ಮನಸ್ಸಿನ ಅಚಾಂಚಲ್ಯ)ದ ವಿಷಯದಲ್ಲಿಯೂ ಸ್ಥೈರ್ಯ (ದೇಹದಲ್ಲಿ ಅಚಾಂಚಲ್ಯ)ದ ವಿಷಯದಲ್ಲಿಯೂ ಪರಾಕ್ರಮವಿಷಯದಲ್ಲಿಯೂ, ವೇಗವಿಷಯದಲ್ಲಿಯೂ, ಲಾಘವದಲ್ಲಿಯೂ, ಅಸರ್ಥವಚನವನ್ನು ಪರಿತ್ಯಾಗಮಾಡುವ ವಿಷಯದಲ್ಲಿಯೂ, ಪಾಂಡಿತ್ಯವಿಷಯದಲ್ಲಿಯೂ, ಪಟುತ್ವವಿಷಯದಲ್ಲಿಯೂ, ಶೂರತ್ವವಿಷಯದಲ್ಲಿಯೂ, ಸಾಮರ್ಥ್ಯವಿಷಯದಲ್ಲಿಯೂ, ಎರಡು ಸೇನೆಗಳಲ್ಲಿಯೂ ಭೀಮಸೇನನಿಗೆ ಸಮಾನಿಕನು ಇಲ್ಲ. ಹಾಗೆಯೇ ಯುಧಿಷ್ಠಿರನಿಂದಲೇ ಭೀಮಸೇನನನ್ನು ಕುರಿತು ಹೇಳಲ್ಪಟ್ಟಿದೆ ॥೧೬೨॥೧೬೩॥೧೬೪॥

ಆ ಸರ್ವೋತ್ಕರ್ಷಪ್ರತಿಪಾದಕವಾದ ವಚನವನ್ನುದಾಹರಿಸುತ್ತಾರೆ—

ತ್ವಯ್ಯಾಯತ್ತಮಿದಂ ಸರ್ವಂ ಸರ್ವಲೋಕಸ್ಯ ಭಾರತ ॥
ವಿರಾಟಪರ್ವಗಂ ಚಾಪಿ ವಚೋ ದುರ್ಯೋಧನಸ್ಯ ಹಿ ॥೧೬೫॥

ಅ ॥ ಧರ್ಮವೂ, ಅರ್ಥವೂ, ಕಾಮವೂ, ಮೋಕ್ಷವೂ, ಯಶಸ್ಸೂ ಕೂಡ ನಿಶ್ಚಯವಾಗಿಯೂ ಇವೆಲ್ಲವೂ ಎಲ್ಲಾ ಜನರೂ ನೋಡುತ್ತಿರುವಾಗಲೇ ನಿನ್ನ ಅಧೀನವಾದುದು, ದುರ್ಯೋಧನನ ವಚನವೂ ಕೂಡ ವಿರಾಟಪರ್ವದಲ್ಲಿದೆ ॥೧೬೫॥

ಮೂ ॥ ವೀರಾಣಾಂ ಶಾಸ್ತ್ರವಿದುಷಾಂ ಕೃತೀ(ತಿ)ನಾಂ ತತ್ವನಿರ್ಣಯೇ ॥
ಸತ್ವೇ ಬಾಹುಬಲೇ ಧೈರ್ಯೇ ಪ್ರಾಣೇ ಶಾರೀರಸಂಭವೇ ॥ ೧೬೬ ॥
ಸಾಂಪ್ರತಂ ಮಾನುಷೇ ಲೋಕೇ ಸದೈತ್ಯೈನರರಾಕ್ಷಸೇ ॥
ಚತ್ವಾರಃ ಪ್ರಾಣಿನಾಂ ಶ್ರೇಷ್ಠಾಃ ಸಂಪೂರ್ಣಬಲಪೌರುಷಾಃ ॥ ೧೬೭ ॥

ಅ ॥ ಶೂರರಾದವರದ್ದು ಯಾವುದು ಶಸ್ತ್ರವೋ ಶಾಸ್ತ್ರವೋ ಅದನ್ನು ತಿಳಿದವರ ಮಧ್ಯದಲ್ಲಿ, ಅಥವಾ ವೇದ–ಪಂಚರಾತ್ರ ಮೊದಲಾದ ಶಾಸ್ತ್ರವನ್ನು ತಿಳಿದವರ, ಕರ್ತವ್ಯಕರ್ಮಗಳ ತತ್ವನಿರ್ಣಯದಲ್ಲಿಯೂ, ಸತ್ಯತ್ವವಿಷಯದಲ್ಲಿಯೂ, ಭುಜಪರಾಕ್ರಮದ ವಿಷಯದಲ್ಲಿಯೂ ಧೀರತನ ವಿಷಯದಲ್ಲಿಯೂ, ಪ್ರಕೃಷ್ಟ ಜೇಷ್ಠಾವಿಷಯದಲ್ಲಿಯೂ ಶರೀರ ಸಂಬಂಧಿಯಾದ ಉದ್ಗಮನ–ಉತ್ಪತ್ತಿ ಮೊದಲಾದುವುಗಳ ಸಂಭಾವನೆಯಲ್ಲಿಯೂ ಈಗ ದೈತ್ಯರೂ, ಮನುಷ್ಯರೂ ರಾಕ್ಷಸರೂ ಇವರಿಂದ ಕೂಡಿದ ಮನುಷ್ಯಲೋಕದಲ್ಲಿ ಸಂಪೂರ್ಣವಾದ ಸಾಮರ್ಥ್ಯ, ಪರಾಕ್ರಮವುಳ್ಳವರು ನಾಲ್ವರೇ ಪ್ರಾಣಿಗಳಲ್ಲಿ ಶ್ರೇಷ್ಠರಾದವರು ॥೧೬೬॥೧೬೭॥

ಮೂ ॥ ಭೀಮಶ್ಚ ಬಲಭದ್ರಶ್ಚ ಮದ್ರರಾಜಶ್ಚ ವೀರ್ಯವಾನ್ ॥
ಚತುರ್ಥಃ ಕೀಚಕಸ್ತೇಷಾಂ ಪಂಚಮಂ ನಾನು ಶುಶ್ರುಮಃ ॥ ೧೬೮ ॥
ಅನ್ಯೋನ್ಯಾನಂತರಬಲಾಃ ಕ್ರಮಾದೇವ ಪ್ರಕೀರ್ತಿತಾಃ ॥
ವಚನಂ ವಾಸುದೇವಸ್ಯ ತೆಥೋದ್ಯೋಗಗತಂ ಪರಂ ॥ ೧೬೯ ॥

ಅ ॥ ವೀರ್ಯವುಳ್ಳಭೀಮನು, ಬಲರಾಮನ, ಮದ್ರರಾಜನಃ, ಅವರಲ್ಲಿ ನಾಲ್ಕನೇಯವನು ಕೀಚಕನು. ಐದನೇಯವನನ್ನು ಕೇಳುವುದಿಲ್ಲ. ಕ್ರಮದಿಂದಲೇ ಅನ್ಯೋನ್ಯವಾಗಿ ಮೇಲೆ ಮೇಲೆ ಕಡಿಮೆ ಬಲವುಳ್ಳವರಾಗಿಯೇ ಹೇಳಲ್ಪಡುತ್ತಾರೆ. ಹಾಗೆಯೇ ಶ್ರೀ ಕೃಷ್ಣನ ಉತ್ಕೃಷ್ಟವಾದ ಮಾತು ಉದ್ಯೋಗ ಪರ್ವದಲ್ಲಿದೆ. ॥೧೬೮ ೧೬೯॥

ಮೂ ॥ ಯೆತ್ಕಿಂಚಾತ್ಮನಿ ಕಲ್ಯಾಣಂ ಸಂಭಾವಯೆಸಿ ಪಾಂಡವ ॥
ಸಹಸ್ರಗುಣಮುಪ್ಯೇತತ್ತ್ವಯಿ ಸಂಭಾವಯಾಮ್ಯಹಂ ॥ ೧೭೦ ॥

ಅ ॥ ಎಲೋ, ಭೀಮನೇ ! ತನ್ನಲ್ಲಿ ಯಾವುದೊಂದು ಭಕ್ತಿ–ವಿರಕ್ತಿ ಮೊದಲಾದ ಶೋಭನ ಗುಣವನ್ನು ತಿಳಿದಿರುತ್ತಿಯೋ, ನಾನು ನಿನ್ನಲ್ಲಿ ಇದಕ್ಕಿಂತ ಸಹಸ್ರಗುಣಾಧಿಕ್ಯವನ್ನು ಊಹಿಸುತ್ತೇನೆ. ॥೧೭೦॥

ಮೂ ॥ ಯಾದೃಶೇ ಚ ಕುಲೇ ಜಾತಃ ಸರ್ವರಾಭಿಪೂಜಿತೇ ॥
ಯಾದೃಶೇ ಚ ಕರ್ಮಾಣಿ ಭೀಮ ತ್ವಮಸಿ ತಾದೃಶಃ ॥ ೧೭೧ ॥

ಅ ॥ ಎಲೋ, ಭೀಮನೇ! ನೀನು ಎಲ್ಲಾ ರಾಜರಿಂದಲೂ ಪೂಜಿಸಿಕೊಳ್ಳಲ್ಪಟ್ಟ ಎಂತಹ ಕುಲದಲ್ಲಿ ಹುಟ್ಟಿರುವಿಯೋ, ನೀನು ಅಂತಹನಾಗಿ ಅಂತಹ ಕುಲದಲ್ಲಿ ಹುಟ್ಟಲಿಕ್ಕೆ ಯೋಗ್ಯನು

ಆಗಿರುತ್ತಿ. ಆ ಕುಲದಲ್ಲಿ ಹುಟ್ಟಿದವರಿಗೆ ಎಂತಹ ಕರ್ಮಗಳು ಯೋಗ್ಯಗಳೋ, ನೀನು ಅಂತಹ ಕರ್ಮವುಳ್ಳವನಾಗಿರುತ್ತಿ ॥೧೭೧॥

ಮೂ ॥ ಅಸ್ಮಿನ್ಯುದ್ಧೇ ಭೀಮಸೇನ ತ್ವಯಿ ಭಾರಃ ಸಮಾಹಿತಃ ॥
ಧೂರರ್ಜುನೇನ ವೋಢವ್ಯಾ ವೋಢಾವ್ಯಾ(ವ್ಯ) ಇತರೇ (ರೋ)
ಜನಾಃ (ನಃ) ॥ ೧೭೨॥

ಅ ॥ ಎಲೋ, ಭೀಮಸೇನನೇ! ಈ ಯುದ್ಧದಲ್ಲಿ ನಿನ್ನಲ್ಲಿ ಭಾರವು ಇಡಲ್ಪಟ್ಟಿದೆ. ಯುಗಂಧರವು ಅರ್ಜುನನಿಂದ ಹೊರಲ್ಪಡತಕ್ಕುದು, ಬೇರೆ ಜನರು (ನಿನ್ನಿಂದ) ಹೊರಲ್ಪಡಬೇಕು. (ಅಂದರೆ ನೀನು ರಥಿಕನು. ನಿನಗೆ ಅಂಗಭೂತನು ಅರ್ಜುನನು) ॥೧೭೨॥

ದ್ರೌಪದಿಯು, ಭಾರತಿಯು ಶೇಷಾದಿಗಳಿಂದ ಉತ್ತಮಳೂ ಆಗಿರುತ್ತಾಳೆ ಎನ್ನುವ ವಿಷಯದಲ್ಲಿ ಪ್ರಮಾಣವನ್ನು ಹೇಳುತ್ತಾರೆ—

ಮೂ ॥ ಉಕ್ತಂ ಪುರಾಣೇ ಬ್ರಹ್ಮಾಂಡೇ ಬ್ರಹ್ಮಣಾ ನಾರದಾಯ ಚ ॥
ಯಸ್ಯಾಃ ಪ್ರಸಾದಾತ್ಪರಮಂ ವಿದಂತಿ
ಶೇಷಃ ಸುಪರ್ಣೋ ಗಿರಿಶಃ ಸುರೇಂದ್ರಃ ॥
ಮತಾ ಚ ಯ್ಯೇಷಾಂ ಪ್ರಥಮೈವ ಭಾರತೀ
ಸಾ ದ್ರೌಪದೀ ನಾಮ ಬಭೂವ ಭೂಮೌ ॥೧೭೩॥
ಯಾ ಮಾರುತಾದ್ಗರ್ಭಮಧತ್ತ ಪೂರ್ವಂ
ಶೇಷಂ ಸುಪರ್ಣಂ ಗಿರಿಶಂ ಸುರೇಂದ್ರಂ ॥
ಚತುರ್ಮುಖಾಭಾಂಶ್ಚತುರಃ ಕುಮಾರಾನ್
ಸಾ ದ್ರೌಪದೀ ನಾಮ ಬಭೂವ ಭೂಮೌ ॥೧೭೪॥

ಅ ॥ ಬ್ರಹ್ಮನಿಂದ ನಾರದನಿಗೆ ಬ್ರಹ್ಮಾಂಡ ಪುರಾಣದಲ್ಲಿ ಹೇಳಲ್ಪಟ್ಟಿದೆ. ಶೇಷನೂ, ಗರುಡನೂ, ರುದ್ರನೂ, ದೇವೇಂದ್ರನೂ ಯಾವ ಭಾರತಿಯ ಪ್ರಸಾದದಿಂದ ಶ್ರೀ ಪರಮಾತ್ಮನನ್ನು ತಿಳಿಯುತ್ತಾರೋ, ಯಾವ ಶೇಷಾದಿಗಳಿಗೆ ಪ್ರಥಮ ತಾಯಿಯೇ ಭಾರತಿಯೋ, ಆ ಭಾರತಿಯು ದ್ರೌಪದೀನಾಮಕಳಾಗಿ ಭೂಮಿಯಲ್ಲಿ ಹುಟ್ಟಿದಳು. ಯಾವ ದ್ರೌಪದೀದೇವಿಯು ಮೊದಲು ವಾಯುದೇವರಿಂದ ಗರ್ಭವನ್ನು ಧರಿಸಿರುವಳೋ, ಶೇಷನನ್ನೂ, ರುದ್ರನನ್ನೂ, ಗರುಡನನ್ನೂ ದೇವೇಂದ್ರನನ್ನೂ, ಹೀಗೆ ಚತುರ್ಮುಖನ ಹಾಗೆ ಇರತಕ್ಕ ನಾಲ್ಕು ಮಕ್ಕಳನ್ನು ಪಡೆದಳೊ, ಅವಳು ದ್ರೌಪದೀನಾಮಕಳಾಗಿ ಭೂಮಿಯಲ್ಲಿ ಹುಟ್ಟಿದಳು । ೧೭೩॥೧೭೪॥

ಶೇಷನು ಇಂದ್ರಾದಿಗಳಿಗಿಂತ ಅಧಿಕನು ಎನ್ನುವಲ್ಲಿ ಭಾರತವನ್ನುದಾಹರಿಸುತ್ತಾರೆ—

ಮೂ ॥ ಯಸ್ಯಾಧಿಕೋ ಬಲೇ ನಾಸ್ತಿ ಭೀಮಮೇಕ (ಸೇನ) ಮೃತೇ ಕ್ವಚಿತ್ ॥
ನ ವಿಜ್ಞಾನೇ ನ ಚ ಜ್ಞಾನೇ ಏಷ ರಾಮಃ ಸ ಲಾಂಗಲೀ ॥೧೭೫॥

ಅ ॥ ಯಾವ ಶೇಷನಿಗೆ ಒಬ್ಬ ಭೀಮನನ್ನು ಹೊರತು ಎಲ್ಲಿಯೂ ಬಲದಲ್ಲಿ ಅಧಿಕನು ಇಲ್ಲವೋ, ವಿಶೇಷಜ್ಞಾನದಲ್ಲಿಯೂ ಇಲ್ಲವೋ, ಸಾಮಾನ್ಯ ಜ್ಞಾನದಲ್ಲಿಯೂ ಇಲ್ಲವೋ, ಈ ಶೇಷನೇ ಬಲರಾಮನು. ಆತನು ಮುಸಲಾಯುಧನು ॥ ೧೭೫ ॥

ಈಗ ಶೇಷನ ಸ್ವರೂಪವನ್ನು ಹೇಳುತ್ತಾರೆ—

ಮೂ ॥ ಯಸ್ಯ ನ ಪ್ರತಿಯೋದ್ಧಾಸ್ತಿ ಭೀಮಮೇಕಮೃತೇ ಕ್ವಚಿತ್
ಅಸ್ತ್ರಿಷ್ವಾಪಿ ತ್ರಿಲೋಕೇಷು ಸ ಏಷ ಮುಸಲಾಯುಧಃ ॥ ೧೭೬ ॥

ಅ ॥ ಮೂರು ಲೋಕಗಳಲ್ಲಿ ಹುಡುಕಿದರೂ ಒಬ್ಬ ಭೀಮನನ್ನು ಹೊರತು ಎಲ್ಲಿಯೂ ಯಾರಿಗೂ ಪ್ರತಿಯುದ್ಧ ಮಾಡುವವನು ಇಲ್ಲವೋ ಆ ಈ ಬಲರಾಮನು ಮುಸಲಾಯುಧನು ॥೧೭೬॥

ಈಗ ಇಂದ್ರಾವತಾರಭೂತನಾದ ಅರ್ಜುನನ ಸ್ವರೂಪವನ್ನು ಹೇಳುತ್ತಾರೆ—

ಮೂ ॥ ತಥಾ ಯುಧಿಷ್ಠಿರೇಣೈವ ಭೀಮಾಯ ಸಮುದೀರಿತಂ ॥
ಅನುಜ್ಞಾತೋ ರೌಹಿಣೇಯಾತ್ತ್ವಯಾ ಚೈವಾಪರಾಜಿತಃ(ತ) ॥ ೧೭೭
ಸರ್ವವಿದ್ಯಾಸು ಬೀಭತ್ಸುಃ ಕೃಷ್ಣೇನ ಚ ಮಹಾತ್ಮನಾ ॥
ಅನ್ವೇಷ ರೌಹಿಣೇಯಂ ಚ ತಾಂ್ವ ಚ ಭೀಮಾಪರಾಜಿತಂ ॥ ೧೭೮॥

ಅ ॥ ಹಾಗೆಯೇ ಯುಧಿಷ್ಠಿರನಿಂದಲೇ ಭೀಮನಿಗೋಸ್ಕರ ಹೇಳಲ್ಪಟ್ಟಿದೆ- (ಯಾವಕಾರಣ ದೆಶೆಯಿಂದ) ಅರ್ಜುನನು ಬಲರಾಮನ ದೆಶೆಯಿಂದಲೂ, ನಿನ್ನಿಂದಲೂ, ಮಹಾನುಭಾವನಾದ ಶ್ರೀ ಕೃಷ್ಣನಿಂದಲೂ ಎಲ್ಲಾ ವಿದ್ಯೆಗಳಲ್ಲಿಯೂ ಅನುಜ್ಞೆಯನ್ನು ಹೊಂದಿರುವನು ಆದುದರಿಂದಲೇ ಅಪರಾಜಿತನು. (ಇದರಿಂದ ಕೃಷ್ಣನಿಂದಲೂ ವಾಯುದೇವರಿಂದಲೂ ಬಲರಾಮನಿಂದಲೂ ಮೇಲೆ ಅರ್ಜುನನು ಎಂದುಕ್ತವಾಯಿತು.) ನಿನ್ನ ಅನಂತರದಲ್ಲಿಯೂ ಬಲರಾಮನ ಅನಂತರದಲ್ಲಿಯೂ ಈ ಅರ್ಜುನನು ಎಲ್ಲೋ ಭೀಮನೇ ಪರಾಜಯವಿಲ್ಲದಿರುವವನು ॥೧೭೭॥೧೭೮॥

ಮೂ ॥ ವೀರ್ಯೇ ಶೌರ್ಯೇ ಬಲೇ(ಪಿವಾ) ನಾನ್ಯಸ್ತೃತೀಯಃ ಫಲ್ಗುನಾ ದೃತೇ॥
ತಥೈವ ದ್ರೌಪದೀವಾಕ್ಯಂ ವಾಸುದೇವಂ ಪ್ರತೀರಿತಂ ॥೧೭೯॥
ಅಧಿಜ್ಯಮಪಿ ಯತ್ಕರ್ತುಂ ಶಕ್ಯತೇ ನೈವ ಗಾಂಡಿವಂ ॥
ಅನ್ಯತ್ರ ಭೀಮಸಾರ್ಥಾಭ್ಯಾಂ ಭವತಶ್ಚ ಜನಾರ್ದನ ॥೧೮೦॥

ಅ ॥ ಅದೇರೀತಿಯಾಗಿ ವಾಸುದೇವನನ್ನು ಕುರಿತು ಹೇಳಲ್ಪಟ್ಟ ದ್ರೌಪದೀ ವಾಕ್ಯವಿದೆ. ಎಲೋಜನಾರ್ದನನೇ ನಿನ್ನಿಂದಲೂ ಭೀಮ-ಅರ್ಜುನರಿಂದಲೂ ಹೊರತು ನನ್ನಲ್ಲಿ ಗಾಂಡೀವವನ್ನು ಜ್ಯಾಸಹಿತವಾದುದನ್ನಾಗಿ ಮಾಡಲಿಕ್ಕೆ ಯಾವ ಕಾರಣದಿಂದ ಯಾರೂ ಶಕ್ಯರಾಗುವುದಿಲ್ಲವೋ ಆದಕಾರಣ ವೀರ್ಯವಿಷಯದಲ್ಲಿಯೂ, ಶೌರ್ಯವಿಷಯದಲ್ಲಿಯೂ, ಬಲವಿಷಯದಲ್ಲಿಯೂ, ಅರ್ಜುನನಿಂದ ಹೊರತು ಮತ್ತೊಬ್ಬನು ಮೂರನೆಯವನು ಇಲ್ಲವೇ ಇಲ್ಲ ॥೧೭೯॥೧೮೦॥

ಮೊದಲು ಭೀಮನಿಗಿಂತ ಮೇಲೆ ಶೇಷರೂಪನಾದ ರಾಮನು ಎಂದು ಹೇಳಿಯಿದೆ. ಈ ರುದ್ರರೂಪಿಯಾದ ಅಶ್ವತ್ಥಾಮನೂ ಹಾಗೆಯೇ ಎನ್ನುತ್ತಾರೆ—

ಮೂ ॥ ತಥೈವಾನ್ಯತ್ರ ವಚನಂ ಕೃಷ್ಣದ್ವೈಪಾಯನೇರಿತಂ ॥
ದ್ವಾವೇವ ಪುರುಷೌ ಲೋಕೇ ವಾಸುದೇವಾದನಂತರೌ
ಭೀಮಸ್ತು ಪ್ರಥಮಸ್ತತ್ರ ದ್ವಿತೀಯೋ ದ್ರೌಣಿರೇವಚ ॥೧೮೧॥

ಅ ॥ ಹಾಗೆಯೇ ವೇದವ್ಯಾಸರಿಂದ ಹೇಳಲ್ಪಟ್ಟದ್ದು ವಚನವು ಬೇರೆಕಡೆ ಇದೆ. ವಾಸುದೇವನದೆಶೆಯಿಂದ ಮೇಲೆ ಲೋಕದಲ್ಲಿ ಇವರಿಬ್ಬರು ಪುರುಷರು. ಅದರಲ್ಲಿ ಭೀಮನಾದರೂ ಒಂದನೆಯವನು. ಎರಡನೆಯವನು ಅಶ್ವತ್ಥಾಮನು ॥೧೮೧॥

ಹಾಗಾದರೆ ಅಶ್ವತ್ಥಾಮನಿಗಿಂತ ಅರ್ಜುನನು ಶ್ರೇಷ್ಟನು ಎಂದು ಹೇಳಲ್ಪಡುತ್ತದೆ. ಅದು ಹೇಗೆಂದರೆ—

ಮೂ ॥ ಅಕ್ಷಯೌವಿಷುಧೀ ದಿವ್ಯಃ ಧ್ವಜೋ ವಾನರಲಕ್ಷಣ ಃ ॥
ಗಾಂಡೀವಂ ಧನುಷಾಂ ಶ್ರೇಷ್ಟಂ ತೇನ ದ್ರೌಣೇರ್ವರೋಽರ್ಜುನಃ॥
॥೧೮೨॥

ಅ ॥ ವಿನಾಶವಿಲ್ಲದಿರುವ ದಿವ್ಯಗಳಾದ ಇಷುಧಿ(ಬತ್ತಳಿಗೆ)ಗಳು, ವಾನರಚಿಹ್ನಿತವಾದ ಧ್ವಜವು, ಧನುಸ್ಸುಗಳ ಮಧ್ಯದಲ್ಲಿ ಶ್ರೇಷ್ಟವಾದ ಗಾಂಢೀವವು; ಅದರಿಂದ ಅಶ್ವತ್ಥಾಮನಿಗಿಂತ ಅರ್ಜುನನು ಶ್ರೇಷ್ಟನು. (ಅಂತೂ ಅಶ್ವತ್ಥಾಮನಿಗೆ ಸ್ವಾಭಾವಿಕವಾದುದು, ಅರ್ಜುನನಿಗೆ ಔಪಾಧಿಕವಾದುದೇ) ॥೧೮೨॥

ಈ ಪ್ರಕಾರ ವಿಷ್ಣುಸರ್ವೋತ್ತಮತ್ವವನ್ನೂ ದೇವತಾರತಮ್ಯವನ್ನೂ ಉಪಪಾದಿಸಿ ಉಪಸಂಹಾರಮಾಡಲಿಕ್ಕೆ ಕಾರಣವನ್ನು ಹೇಳುತ್ತಾರೆ—

ಮೂ ॥ ಇತ್ಯಾದ್ಯನಂತವಾಕ್ಯಾನಿ ಸಂತ್ಯೇವಾರ್ಥೇ ವಿವಕ್ಷಿತೇ ॥
ಕಾನಿಚಿದ್ದರ್ಶಿತಾನ್ಯತ್ರ ದಿಙ್ಮಾತ್ರಪ್ರತಿಪತ್ತಯೇ॥೧೮೩॥

ಅ ॥ ಇದುಮೊದಲಾದ ಅನಂತವಾಕ್ಯಗಳು ವಿವಕ್ಷಿತವಾದ ಅರ್ಥದಲ್ಲಿ ಬೇಕಾದಷ್ಟು ಇವೆ. ದಿಙ್ಮಾತ್ರಜ್ಞಾನಕ್ಕಾಗಿ (ಅಂದರೆ ಮಾರ್ಗವನ್ನು ತೋರಿಸುವುದಕ್ಕಾಗಿ) ಕೆಲವು ವಾಕ್ಯಗಳು ತೋರಿಸಲ್ಪಟ್ಟವು ॥೧೮೩॥

ಪುರುಷೋತ್ತಮತ್ವವನ್ನುಪಸಂಹಾರ ಮಾಡುತ್ತಾರೆ—

ಮೂ ॥ ತಸ್ಮಾದುಕ್ತಕ್ರಮೇಣೈವ ಪುರುಷೋತ್ತಮತಾ ಹರೇಃ ॥
ಅನೌಪಚಾರಿಕೀ ಸಿದ್ಧಾ ಬ್ರಹ್ಮತಾ ಚ ವಿನಿರ್ಣಯಾತ್ ॥ ೧೮೪ ॥

ಅ ॥ ಆದುದರಿಂದ ಹಿಂದೆ ಹೇಳಿ ಕ್ರಮದಿಂದಲೇ ಶ್ರೀಹರಿಗೆ ಪುರುಷೋತ್ತಮತ್ವವು, ವಿನಿರ್ಣಯಾತ್—ವಿನಿಶ್ಚಯವಾಗಿ ಪರಬ್ರಹ್ಮತ್ವವೂ ಕೂಡ ಮುಖ್ಯವಾದುದು ಸಿದ್ಧವಾಯಿತು॥ ॥೧೮೪॥

ಹೀಗೆ ಪ್ರತಿಪಾದಿತವಾದ ಅರ್ಥವನ್ನು ಸಂಕ್ಷೇಪದಿಂದ ಹೇಳುತ್ತಾರೆ—

ಮೂ ॥ ಪೂರ್ಣಪ್ರಜ್ಞಕೃತೇಯಂ
ಸಂಕ್ಷೇಪಾದುದ್ಧೃತಿಃ ಸುವಾಕ್ಯಾನಾಂ ॥
ಶ್ರೀಮದ್ಭಾರತಗಾನಾಂ
ವಿಷ್ಣೋಃ ಪೂರ್ಣತ್ವನಿರ್ಣಯಾಯೈವ ।೧೪೫॥

ಅ ॥ ಶ್ರೀ ಹರಿಗೆ ಪರಿಪೂರ್ಣತ್ವವನ್ನು ನಿಶ್ಚಯಿಸುವುದಕ್ಕಾಗಿಯೇ ಶ್ರೀಮದ್ಭಾರತದಲ್ಲಿರ ತಕ್ಕ ಸುವಾಕ್ಯಗಳ ಸಂಕ್ಷೇಪದಿಂದ ಈ ಉದ್ಧಾರವು ಪೂರ್ಣಪ್ರಜ್ಞಾಚಾರ್ಯರಿಂದ ಮಾಡ ಲ್ಪಟ್ಟಿದೆ ॥೧೪೫॥

ಎರಡು ಅಧ್ಯಾಯಗಳಿಂದ ಶ್ರೀ ಹರಿಯು ಸರ್ವೋತ್ತಮನು. ಇತರ ದೇವತೆಗಳಲ್ಲಿ ತಾರತಮ್ಯವೂ ಇದೆ ಎನ್ನುವ ವಿಷಯದಲ್ಲಿಯೂ ಬಹು ಶ್ರುತಿ ಇತಿಹಾಸ ಪಂಚರಾತ್ರ ಪುರಾಣ ವಾಕ್ಯಗಳನ್ನುದಾಹರಿಸಿ ತಾನು ಮಾಡಿದ ಸಕಲ ಶಾಸ್ತ್ರಗಳ ತಾತ್ಪರ್ಯನಿರ್ಣಯರೂಪವಾದ ಹರಿಸೇವೆಗೆ ಋಜುಕುಲದಲ್ಲಿ ಹುಟ್ಟಿರುವುದರಿಂದ ನಿರುಪಾಧಿಕ ಭಕ್ತನಾದ ನನಗೆ ವಿಷ್ಣು ಪ್ರಸಾದವೇ ಫಲವು. ಬೇರೆ ಯಾವುದೂ ಅಪೇಕ್ಷಿತವಲ್ಲವೆನ್ನುವ ತಾತ್ಪರ್ಯದಿಂದ ಹೇಳುತ್ತಾರೆ–

ಮೂ ॥ ಸ ಪ್ರೀಯತಾಂ ಪರತಮಃ ಪರಮಾದನಂತಃ
ಸಂತಾರಕಃ ಸತತಸಂಸೃತಿದುಸ್ತರಾರ್ಣಾತ್ ॥
ಯತ್ಪಾದಪದ್ಮಮುಕರಂದಜುಷೋ ಹಿ ಸಾಧ್ವಾಃ
ಸ್ವಾರಾಜ್ಯಮಾಪುರುಭಯತ್ರ ಸದಾ ವಿನೋದಾತ್ ॥೧೪೬॥

ಅ ॥ ದೇಶದಿಂದಲೂ, ಕಾಲದಿಂದಲೂ, ಗುಣದಿಂದಲೂ ಅವಧಿಯಿಲ್ಲದಿರುವವನು, ಉತ್ತಮರೆಂದು ಪ್ರಸಿದ್ಧರಾದ ಬ್ರಹ್ಮಾದಿಗಳಿಂದಲೂ ಅತಿಶಯವಾಗಿ ಉತ್ತಮನಾದವನು, ಅನಾದಿ ಭೂತವಾದ ಅಥವಾ ಸಾರ್ವಕಾಲಿಕವಾದ ಸಂಸಾರವೆಂಬುವ ದಾಟಲಶಕ್ಯವಾದ ಸಮುದ್ರ ದೆಶೆಯಿಂದ ದಾಟಿಸುವವನು, (ಇದು ಎಲ್ಲಿ ದೃಷ್ಟವಾಗಿದೆ. ಎಂದರೆ) ಪಾಂಡವರು ಯಾವ ಶ್ರೀ ಹರಿಯ ಚರಣವೆಂಬುವ ಕಮಲದ ಸಾರವನ್ನು ಸೇವಿಸುತ್ತಾ ವಿನೋದದಿಂದ ಯಾವಾಗಲೂ ಇಹಲೋಕದಲ್ಲಿಯೂ, ಪರಲೋಕದಲ್ಲಿಯೂ ಎರಡರಲ್ಲಿಯೂ ಸ್ವಾರಾಜ್ಯವನ್ನೇ (ಶ್ರೀಹರಿಯ ಪಾದಪದ್ಮ ಸೇವೆಯಿಂದಲೇ) ಹೊಂದಿರುವರು; ತನ್ನ ಶಕ್ತಿಯಿಂದಲೇ ಅಲ್ಲ.

ವಿಶೇಷಾಂಶ— (1) ಸಮ್ಯಕ್=ಯಾವಾಗಲೂ ಊರ್ಧ್ವಲೋಕ ಅಧೋಲೋಕಗಳಲ್ಲಿ ಗಮನವು, ಯಸ್ಯಾಂ ಸಾ–ಯಾವುದರಲ್ಲಿಯೇ ಅದು ಸಂಸಾರವು, ಎನ್ನುವ ವುತ್ಪತ್ತಿಯಿಂದ ಊರ್ಧ್ವಲೋಕಕ್ಕೆ ಹೋದರೆ ಸುಖವು, ಪುನಃ ಅಧೋಲೋಕಕ್ಕೆ ಹೋದರೆ ದುಃಖವು, ಹೀಗೆ ಸುಖದುಃಖಪರಿಹಾರ ರೂಪವಾಗಿರುವುದರಿಂದ ಸಂಸಾರವು ಹೇಯವು ಎಂದು ತಾತ್ಪರ್ಯವು (2)ಸ್ವಯಮೇವ ರಾಜತೇ ಇತಿ ಸ್ವರಾಟ್-ಸ್ವರಾಜೋ ಭಾವಃ ಸ್ವಾರಾಜ್ಯಂ–ಭೂಮಿಯಲ್ಲಿಯೂ ಸ್ವರ್ಗದಲ್ಲಿಯೂ ಶತ್ರುಭೂತರಾದ ಕಲ್ಯಾದಿಗಳನ್ನು ಸಂಹರಿಸಿ ತಾನೇ ರಾಜನಾಗಿರುತ್ತಾನೆ. ಎನ್ನುವುದು. ಯಾವುದೋ ಇದು ಐಹಿಕ ಸಾಮ್ರಾಜ್ಯವು. ಪರಲೋಕದಲ್ಲಿಯೂ ಮುಕ್ತಿ ಯಲ್ಲಿಯೂ ಬ್ರಹ್ಮೇಂದ್ರರೂಪರಾದಪ್ರಯುಕ್ತ ತಾವೇ ರಾಜರಾಗುತ್ತಾರೆ ಎಂದು ಆಮುಷ್ಮಿಕ

ಸಾಮ್ರಾಜ್ಯವು, ಹೀಗೆ ಉಭಯತ್ರ ಸ್ವಾರಾಜ್ಯವು. ಸ್ವರ್ಗಸಾಮ್ರಾಜ್ಯತ್ರವು ಸದಾತನವಾದ ಪ್ರಯುಕ್ತ ಆಮುಷ್ಮಿಕ ಸಾಮ್ರಾಜ್ಯವು ಮುಕ್ತಿಯೇ. ಶ್ರೀ ಕೃಷ್ಣನ ಕೃಪೆಯಿಂದಲೇ ಎರಡು ಲೀಲೆಯಿಂದಲೇ ಪಾಪ್ತವಾಯಿತು. ॥೧೪೬॥

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ್ರ(ದ)ವಿರಚಿತೇ
ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯೇ ಸುವಾಕ್ಯೋದ್ಧರಣಂ (ದ್ಧಾರೋ)
ನಾಮ ದ್ವಿತೀಯೋಽಧ್ಯಾಯಃ ॥೨॥

ಹೀಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯ್ರದಿಂದ ನಿರ್ಮಿಸಲ್ಪಟ್ಟ
ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಸುವಾಕ್ಯೋದ್ಧರಣವೆನ್ನುವ್ರದು
ಎರಡನೇ ಅಧ್ಯಾಯವು ಸಮಾಪ್ತನಾಯಿತು ॥೨॥

॥ ಶ್ರೀ ಕೃಷ್ಣಾರ್ಪಣಮಸ್ತು ॥

॥ ಶ್ರೀಃ ॥

ಮೂರನೇ ಅಧ್ಯಾಯವು

ಮೂ ॥ ಓಂ ಜಯತ್ಯ ಜೋಽಖಂಡಗುಣೋರುಮಂಡಲಃ ॥
ಸದೋದಿತೋ ಜ್ಞಾನಮರೀಚಿಮಾಲೀ ॥
ಸ್ವಭಕ್ತಹಾದೋರ್ಗಚ್ಛತಮೋನಿಹಂತಾ
ವ್ಯಾಸಾವತಾರೋ ಹರಿರಾತ್ಮಭಾಸ್ಕರಃ ॥ ೧ ॥

ಅ ॥ ಉತ್ಪತ್ತಿರಹಿತನು, ಪರಿಪೂರ್ಣಗಳಾದ ಅಥವಾ ಅಭಿನ್ನಗಳಾದ ಅನಂತಗಳಾದ ಗುಣಗಳೇ ಶರೀರವಾಗಿವುಳ್ಳವನು, ಯಾವಾಗಲೂ ಆವಿರ್ಭೂತನು, ಜ್ಞಾನವೆನ್ನುವ ಕಿರಣಗಳಿಂದ ಶೋಭಿಸಿಕೊಂಡಿರುವವನು, ತನ್ನ ಭಕ್ತರ ಹೃದಯದಲ್ಲಿರತಕ್ಕ ಉತ್ಕೃಷ್ಟವಾದ ಅನಾದಿಕಾಲೀನವಾದ ಬಂಧವಾದ ಅಜ್ಞಾನವನ್ನು ಪರಿಹರಿಸುವವನು, ವ್ಯಾಸಾಖ್ಯ ಅವತಾರವುಳ್ಳವನು, ತನ್ನಿಂದಲೇ (ಇತರರ ಪ್ರೇರಣೆಯಿಲ್ಲದೇನೇ) ಪ್ರಕಾಶಕನಾದ ಹರಿಯು ಉತ್ಕೃಷ್ಟನಾಗಿರುತ್ತಾನೆ.

ವಿಶೇಷಾಂಶ— (ವಾದಿರಾಜೀಯ) (1) ಈಗ 2ನೇ ಅಧ್ಯಾಯದಿಂದ ಹಿಂದೆ ಹೇಳಿದ ಶ್ರೀಹರಿಯು ಮಾಡಿದ ಸೃಷ್ಟಿಶೇಷವನ್ನೂ ಶ್ರೀಹರಿಯ ಅವತಾರಗಳ ಕಥೆಯನ್ನು, ವಿಸ್ತರವಾಗಿಯೋಗ್ಯರೀತಿಯಿಂದ ನಿಶ್ಚಯಿಸಲು ಇಚ್ಛಿಸುವ ಶ್ರೀಮದಾಚಾರ್ಯರು ತನ್ನ ಗ್ರಂಥವು ಪರವ್ಯ ಮಂಗಲರೂಪವೆಂದು ತೋರಿಸುತ್ತಾ, ತನ್ನ ಗುರುಗಳಾದ ವ್ಯಾಸರಿಗೂ, ಸ್ವೇಷ್ಟ ದೇವತೆಯಾದ ರಾಮನಿಗೂ ಶ್ರೀ ಕೃಷ್ಣನಿಗೂ ಸ್ತೋತ್ರರೂಪವಾದ ಮಂಗಳತ್ರಯವನ್ನೂ ಮಾಡಿರುವರು. (2) ವೇದವನ್ನು ವಿಭಾಗಮಾಡಿ ವೇದಾರ್ಥಗಳನ್ನು ನಿರ್ಣಯಿಸತಕ್ಕ ಬ್ರಹ್ಮಸೂತ್ರವನು ಮಾಡಿದರಿಂದಲೂ ಭಾರತಪುರಾಣಾದಿಗಳನ್ನು ಮಾಡಿದರಿಂದಲೂ ಶ್ರೀಹರಿಯ ಪ್ರಕಾಶವನ್ನು (ಜ್ಞಾನವನ್ನು ಬ್ರಹ್ಮರುದ್ರಾದಿ ಸಜ್ಜೀವರಲ್ಲಿ ಗೌತಮಶಾಪವನ್ನು ಕಳೆದು ಸ್ಥಿರೀಕರಿಸುವವನಾದುದರಿಂದ ಆತ್ಮಭಾಸ್ಕರನು (3) ದುಷ್ಟರನ್ನು ಸಂಹರಿಸುವುದರಲ್ಲಿ ಸಮರ್ಥನಾದುದರಿಂದ ಹರಿಶಬ್ದವಾಚ್ಯನು. (4) ಅಕಾರವಾಚ್ಯನಾದ ಸ್ವಮೂಲರೂಪಿಯಾದ ಶ್ರೀನಾರಾಯಣನಿಂದಲೇ ಪ್ರಾದುರ್ಭೂತನಾದನು. ಇದರಿಂದ ಉತ್ಪತ್ತಿ ಇಲ್ಲವೇಯಿಲ್ಲವೆಂದು ಸೂಚಿತವಾಯಿತು. (5) ದೇಶದಿಂದಲೂ ಕಾಲದಿಂದಲೂ ಖಂಡ ರಹಿತಗಳಾದ ಸರ್ವಜ್ಞತ್ವಾದಿ ಗುಣಗಳೇ ಪ್ರಕೃಷ್ಟವಾದ ವಿಗ್ರಹವುಳ್ಳವನು. ಅಂದರೆ ಲೌಕಿಕ ಸೂರ್ಯನು ಪ್ರಾಕೃತ ಪರಿಮಿತ ತೇಜೋಮಂಡಲವುಳ್ಳವನು. ವ್ಯಾಸರಾದರೂ ಅಪ್ರಾಕೃತಗಳಾದ ಪರಿಪೂರ್ಣಗಳಾದ ನಿತ್ಯಗಳಾದ ಅನಂತಗಳಾದ ಗುಣಮಯಗಳಾದ ಜಗದ್ವ್ಯಾಪ್ತವಾದ ಮಂಡಲವುಳ್ಳವನು. (6) ಶ್ರೀ ವ್ಯಾಸರು ಅತ್ಯಂತವಾಗಿ ತಮಸ್ಸನ್ನು ನಾಶಪಡಿಸುತ್ತಾರೆ. ಲೌಕಿಕ ಸೂರ್ಯನು ಭಕ್ತಾಭಕ್ತರ ತಮಸ್ಸನ್ನು ಪರಿಹರಿಸುತ್ತಾನೆ. ಅಲ್ಲಿಯೂ ಬಾಹ್ಯ ತಮಸ್ಸನ್ನೇ ಪರಿಹರಿಸುತ್ತಾನೆ. ಸರ್ವ ತಮಸ್ಸನ್ನು ಅಲ್ಲ. ಅಲ್ಲಿಯೂ ಗಿರಿಯ ಗುಹೆಯಲ್ಲಿ, ಗೇಹಾದಿಗಳಲ್ಲಿ ಅಂತರ್ಗತವಾದ ತಮಸ್ಸು ಉಳಿದಿರುವುದರಿಂದ ನಿತರಾಂ ಸಂಹಾರಕನಲ್ಲ.

(ಪರದರಾಜೀಯ) ಈ ಪ್ರಕಾರ ಒಂದನೇ ಅಧ್ಯಾಯದ ಉಪಕ್ರಮದಲ್ಲಿ 'ಇತ್ಥಂವಿಚಿಂತ್ಯ ಪರಮಃ ಸ ತು ವಾಸುದೇವನಾಮಾ' ಇತ್ಯಾದಿ ವಾಸುದೇವಾದ್ಯವತಾರದ ಪ್ರಸಂಗಸಂಗತಿಯಿಂದ ಅಶೇಷ ಶಾಸ್ತ್ರಗಳ ನಿರ್ಣಯವನ್ನು ಸುವಾಕ್ಯೋದ್ಧಾರವನ್ನೂ ಯಥಾಕ್ರಮವಾಗಿ ಎರಡು

ಅಧ್ಯಾಯಗಳಲ್ಲಿ ನಿಶ್ಚಯಿಸಿ ಈಗ ಅದೇ ಕಥೆಯನ್ನು ಭಾರತವನ್ನು ಅನುಸರಿಸಿ ವಿಸ್ತರಿಸುವವರಾಗಿ ಭಾರತವನ್ನು ವೇದವ್ಯಾಸರು ಮಾಡಿರುವುದರಿಂದ ಅವರ ಸ್ತೋತ್ರವನ್ನೂ, ಭಾರತದಲ್ಲಿ ಪ್ರತಿಪಾದ್ಯರಾದ ರಾಮಕೃಷ್ಣರ ಸ್ತೋತ್ರವನ್ನೂ ಕ್ರಮದಿಂದ ಶ್ರೀಮದಾಚಾರ್ಯರು ಮಾಡುವರು

(ಜನಾರ್ದನಭಟ್ಟೀಯ) (1) ಈ ಪ್ರಕಾರ ಸರ್ವ ಶಾಸ್ತ್ರಗಳ ನಿರ್ಣಯವನ್ನೂ, ಅವುಗಳ ಅರ್ಥಭೂತವಾದ ಭಾರತನಿರ್ಣಯವನ್ನೂ ಎರಡು ಅಧ್ಯಾಯಗಳಿಂದ ಮಾಡಿ ಮೇಲಿನ ಅಧ್ಯಾಯಗಳಿಂದ ಕಥಾವ್ಯತ್ಯಾಸಾದಿಗಳನ್ನು ಪರಿಹರಿಸುವುದಕ್ಕಾಗಿ ಶ್ರೀ ಹರಿಯ ಕಥೆಯನ್ನು ಹೇಳುವುದಕ್ಕಾಗಿ ಅದರಲ್ಲಿ ವಿಶೇಷವಾಗಿ ವ್ಯಾಸ-ರಾಮ-ಕೃಷ್ಣರ ಕಥೆಗಳನ್ನು ಕ್ರಮದಿಂದ ವಿಸ್ತಾರವಾಗಿ ಹೇಳುತ್ತಾ ಅವರನ್ನು ನಮಸ್ಕರಿಸಿದರು. (2) ಪ್ರಸಿದ್ಧ ಭಾಸ್ಕರನು ಪರಾಧೀನವಾದ ಪ್ರಕಾಶವುಳ್ಳವನು. ವೇದವ್ಯಾಸರಾದರೂ ಸ್ವತಂತ್ರವಾದ ಪ್ರಕಾಶವುಳ್ಳವರು (ಶ್ರೀ) ಹರಿಯು ಯಾರಿಂದಲೂ ಹುಟ್ಟದಿರುವವನು. ಸೂರ್ಯನಾದರೂ ಕಶ್ಯಪಾದಿಗಳಿಂದ ಹುಟ್ಟಿದವನು. (4) ವೇದವ್ಯಾಸರು ಅಖಂಡ ಗುಣಗಳ ಸಮೂಹವುಳ್ಳವರು. ಸೂರ್ಯನು ಖಂಡವಾದ ಅಲ್ಪವಾದ ತೇಜಸ್ಸುವುಳ್ಳವನು. (5) ಸೂರ್ಯನು ಕೆಲವು ವೇಳೆ ಹಗಲಿನಲ್ಲಿಯೇ ಉದಯವನ್ನು ಹೊಂದುದರಿಂದಲೂ, ರಾತ್ರಿಯಲ್ಲಿ ಅಸ್ತಮಾನವನ್ನು ಹೊಂದುವುದರಿಂದಲೂ, ಪ್ರಾಕೃತ ಕಿರಣಗಳಿಂದ ಶೋಭಿಸಿಕೊಂಡು ಇರುವುದರಿಂದಲೂ ಅವನಕ್ಕಿಂತ ಸರ್ವದಾ ಉದಿತರಾದ ಅಪ್ರಾಕೃತ ಕಿರಣಗಳುಳ್ಳ ವ್ಯಾಸರು ವಿಲಕ್ಷಣರು. (6) ಸೂರ್ಯನು ಅತ್ಯಂತವಾಗಿ ತಮಸ್ಸನ್ನು ನಾಶಪಡಿಸುವವನಲ್ಲ. ಬಾಹ್ಯತಮಸ್ಸನ್ನೇ ನಾಶಪಡಿಸುವವನು **'ಯದಾದಿತ್ಯ ಗತಂ ತೇಜೋ ಜಗದ್ಭಾಸಯತೇಽಖಿಲಂ । ಯಚ್ಚೇಂದ್ರಮಸಿ ಯಚ್ಚಾಗ್ನೌ ತತ್ತೇಜೋ ವಿದ್ಧಿ ಮಾಮಕಂ'** ಎಂಬ ವಚನದ್ದೆಶೆಯಿಂದ ಶ್ರೀ ಹರಿಯ ತೇಜಸ್ಸಿನಿಂದ ಯುಕ್ತವಾದ ಪ್ರಯುಕ್ತವೇ ತಮಸ್ಸನ್ನು ನಾಶಪಡಿಸುತ್ತಾನೆ. ತನ್ನ ಸ್ವಭಾವದಿಂದ ಅಲ್ಲ. ವೇದವ್ಯಾಸರಾದರೂ ಸರ್ವದಾ ಹನನಸ್ವಭಾವವುಳ್ಳವರು, ತನ್ನ ಸ್ವಭಾವದಿಂದಲೇ ಸಂಪೂರ್ಣ ತಮಸ್ಸನ್ನು ನಾಶಪಡಿಸುವವರು. ಇತರೋಪಾಧಿನಿಮಿತ್ತಕವಲ್ಲ. ಆದಕಾರಣ ವ್ಯಾಸರಿಗೂ ಲೌಕಿಕ ಸೂರ್ಯನಿಗೂ ಮಹಾ ವೈಲಕ್ಷಣ್ಯವಿದೆ ೧॥

ಹೀಗೆ ಶ್ರೀವೇದವ್ಯಾಸರ ಸ್ತೋತ್ರವನ್ನು ಮಾಡಿ ಈಗ ರಾಮನನ್ನು ಸ್ತೋತ್ರಮಾಡುತ್ತಾರೆ-

ಮೂ ॥ ಜಯೆತ್ಯಜೋಽಕ್ಷೀಣಸುಖಾತ್ಮಬಿಂಬಃ
ಸ್ವೈಶ್ವರ್ಯಕಾಂತಿಪ್ರತತೈಃ ಸದೋದಿತೈಃ
ಸ್ವಭಕ್ತಸಂತಾಪದುರಿಷ್ಟಹಂತಾ
ರಾಮಾವತಾರೋ ಹರಿರೀಶಚಂದ್ರಮಾಃ ॥ ೨ ॥

ಅ ॥ ಉತ್ಪತ್ತಿರಹಿತನಾದವನು, ನಾಶವಿಲ್ಲದಿರುವ ಸುಖಿಸ್ವರೂಪವಾದ ಶರೀರವುಳ್ಳವನು, ಸ್ವರೂಪಭೂತಗಳಾದ ಐಶ್ವರ್ಯ ಮತ್ತು ಕಾಂತಿ ಇವುಗಳಿಂದ ಚೆನ್ನಾಗಿ ವ್ಯಾಪ್ತನಾದವನು ಅಥವಾ ಅಪ್ರಾಕೃತವಾಗಿರುವುದರಿಂದ ಶೋಭನಗಳಾದ ಐಶ್ವರ್ಯ ಕಾಂತಿಗಳಿಂದ ವ್ಯಾಪ್ತನಾದವನು, ಯಾವಾಗಲೂ ಆವಿರ್ಭೂತನು, ತನ್ನ ಭಕ್ತರ ಆದಿಭೌತಿಕಾದಿ ಸಂತಾಪಾಖ್ಯವಾದ ದುಃಖವನ್ನು ಸಂಸಾರವನ್ನಾಗಲೀ ಶತ್ರುಗಳನ್ನಾಗಲೀ ನಾಶಮಾಡುವವನು, ಪಾಪ ಪರಿಹಾರಕನಾದವನು, ಇಂತಹ ರಾಮಾವತಾರಭೂತನಾದ ಚಂದ್ರನೆನ್ನುವ ಹರಿಯು ಉತ್ಕೃಷ್ಟನಾಗಿರುತ್ತಾನೆ. ಪ್ರಸಿದ್ಧ ಚಂದ್ರನನ್ನೂ ಜಯಿಸುತ್ತಾನೆ.

ವಿಶೇಷಾಂಶ—(1) ಶ್ರೀ ರಾಮನಿಗೂ ಚಂದ್ರನಿಗೂ ಮಹಾ ವೈಲಕ್ಷಣ್ಯವಿದೆ. ಹೇಗೆಂದರೆ– ರಾಮನು ಸರ್ವ ಜಗತ್ತಿಗೂ ಸರ್ವದಾ ಈಶನು, ಪ್ರಕಾಶಕನು. ಲೌಕಿಕ ಚಂದ್ರನಾದರೂ ರಾತ್ರಿಯಲ್ಲಿಯೇ ಪ್ರಕಾಶಕನು. (2) ಶ್ರೀ ರಾಮನು ಸರ್ವದಾ ಸುಖಾತ್ಮಕವಾದ ಕ್ಷೀಣವಾಗದೆ ಇರುವ ಸ್ವಭಾವವುಳ್ಳವನು. ಪ್ರಸಿದ್ಧ ಚಂದ್ರನಾದರೂ ಪ್ರತಿಪಕ್ಷದಲ್ಲಿಯೂ ಕ್ಷೀಯಮಾಣವಾದ– ಪ್ರಾಕೃತವಾದ-ಪರಿಚ್ಛಿನ್ನವಾದ ಮಂಡಲವುಳ್ಳವನು. (3) ಶ್ರೀ ರಾಮನು ಅಪ್ರಾಕೃತ ಐಶ್ವರ್ಯ ಕಾಂತಿಗಳಿಂದ ಯುಕ್ತನು. ಪ್ರಸಿದ್ಧ ಚಂದ್ರನಾದರೂ ಪ್ರಾಕೃತ ಐಶ್ವರ್ಯದಿಂದಲೂ ಪ್ರಾಕೃತ ಕಾಂತಿಯಿಂದಲೂ ಅಲ್ಪವಾಗಿ ವ್ಯಾಪ್ತನು (4) ಲೌಕಿಕ ಚಂದ್ರನು ರಾತ್ರಿಯಲ್ಲಿಯೇ ಉದಿತನು, ಸರ್ವದಾ ಉದಿತನಲ್ಲ. ಶ್ರೀ ರಾಮನು ಸರ್ವದಾ ಉದಿತನು. (5) ಆತ್ಯಂತಿಕ ದುಃಖನಿವೃತ್ತಿ ರೂಪ ಮೋಕ್ಷವನ್ನು ಕೊಡೋಣದರಿಂದ ತನ್ನ ಭಕ್ತರದ್ದೇ ತಾಪತ್ರಯವನ್ನೂ ಸಂಸಾರವನ್ನೂ ಶತ್ರುಗಳನ್ನೂ ಚೆನ್ನಾಗಿ ಪರಿಹರಿಸುತ್ತಾನೆ. ಪುನಃ ಹೇಗೆ ಸ್ಪರ್ಶವಾಗಲಾರದೋ ಹಾಗೆ ಪರಿಹರಿಸುತ್ತಾನೆ. ಲೌಕಿಕ ಚಂದ್ರನಾದರೂ ಭಕ್ತರದ್ದೂ, ಅಭಕ್ತರದ್ದೂ ತಾಪಾದಿಗಳನ್ನು ನಾಶಪಡಿಸುತ್ತಾನೆ. ಅಲ್ಲಿಯೂ ಚೆನ್ನಾಗಿ ನಾಶಪಡಿಸುವುದಿಲ್ಲ. ಆದಕಾರಣ ರಾಮಚಂದ್ರನಿಗೂ ಲೌಕಿಕ ಚಂದ್ರನಿಗೂ ಮಹಾ ವೈಲಕ್ಷಣ್ಯವು ಸಿದ್ಧವಾಯಿತು ॥೨॥

ಮೂ ॥ **ಜಯತ್ಯ ಸಂಖ್ಯೇರುಬಲಾಂಬುಪೂರೋ-**
ಗುಣೋಚ್ಚರತ್ನಾಕರ ಆತ್ಮವೈಭವಃ ॥
ಸದಾ ಸದಾತ್ಮಜ್ಞನದೀಭಿರಾಪ್ಯ ಃ
ಕೃಷ್ಣಾವತಾರೋ ಹರಿರೇಕಸಾಗರಃ ॥೩॥

ಅ ॥ ಅಪರಿಮಿತಗಳಾದ, ಉತ್ಕೃಷ್ಟಗಳಾದ, ಪೂರ್ಣಗಳಾದ ಸಾಮರ್ಥ್ಯಗಳೆನ್ನುವ ಜಲಗಳ ಪೂರ್ತಿಯುಳ್ಳವನು, ಜ್ಞಾನಾನಂದಾದಿ ಗುಣಗಳೆನ್ನುವ ಶ್ರೇಷ್ಠ ರತ್ನಗಳಿಗೆ ಆಶ್ರಯ ಭೂತನು ತನ್ನ ಮಹಿಮೆಯಿಂದಲೇ ವೈಭವವುಳ್ಳವನು, ಯಾವಾಗಲೂ ಸರ್ವೋತ್ತಮನಾದ ಶ್ರೀ ಹರಿಯನ್ನು ತಿಳಿದಿರತಕ್ಕ ಜ್ಞಾನಿಗಳೆನ್ನುವ ನದಿಗಳಿಂದ ಯಾವಾಗಲೂ ಹೊಂದಲ್ಪಡ ತಕ್ಕವನು, ಮುಖ್ಯ ಸಾಗರಭೂತನು, ಏಕಪ್ರಕಾರವಾದ ಸಾಗರರೂಪನು, ಇಂತಹ ಶ್ರೀ ಕೃಷ್ಣಾವತಾರಭೂತನಾದ ಶ್ರೀ ಹರಿಯು ಉತ್ಕೃಷ್ಟನಾಗಿರುತ್ತಾನೆ.

ವಿಶೇಷಾಂಶ— (1) ಶ್ರೀಕೃಷ್ಣನಾದರೂ ಸರ್ವೋತ್ತಮ ಸಾಗರಸ್ವರೂಪನು. ಲೌಕಿಕ ಸಾಗರವಾದರೂ ಸೂರ್ಯ–ಚಂದ್ರರಿಗಿಂತಲೂ ನಿಕೃಷ್ಟವು. ಶ್ರೀ ಕೃಷ್ಣಾಖ್ಯ ಸಮುದ್ರವಾದರೂ ಸರ್ವಕಾಲಗಳಲ್ಲಿಯೂ ಏಕಪ್ರಕಾರವಾದುದು. ಲೌಕಿಕಸಮುದ್ರವಾದರೂ ಲವಣಸಮುದ್ರ ಇತ್ಯಾದಿರೂಪದಿಂದ (೭) ಏಳು ಪ್ರಕಾರವಾದುದು. ಶ್ರೀಹರಿಯಾದರೂ ವೃದ್ಧಿ – ಹ್ರಾಸಗಳಿಲ್ಲದಿರುವವನು. ಲೌಕಿಕ ಸಮುದ್ರವಾದರೂ ಪ್ರತಿನಿತ್ಯವೂ ಚಂದ್ರೋದಯವಾಗುವಾಗ ಅಭಿವೃದ್ಧವಾಗುತ್ತದೆ. ಮತ್ತು ಕ್ಷೀಣವಾಗುತ್ತದೆ. ಚಂದ್ರಾಸ್ತಮಯವಾಗುವಾಗ ಮತ್ತೂ ಮತ್ತೂ ಅಭಿವೃದ್ಧವಾಗುತ್ತದೆ, ಕ್ಷೀಣವಾಗುತ್ತದೆ. ಆದಕಾರಣ ಶ್ರೀಕೃಷ್ಣ – ಸಮುದ್ರಗಳಿಗೆ ಮಹಾ ವೈಲಕ್ಷಣ್ಯವಿದೆ. (2) ಶ್ರೀ ರಾಮಾವತಾರದಲ್ಲಿ ರಾವಣನನ್ನು ಸಂಹರಿಸುವಕ್ಕಾಗಿ ಬಲವನ್ನು ಪ್ರಕಾಶಪಡಿಸಿರುವರು. ಅನೇಕಾವರ್ತಿ ಪ್ರಕಾಶಪಡಿಸಲಿಲ್ಲ. ಕೃಷ್ಣಾವತಾರದಲ್ಲಿ ಆದರೂ ಬಾಲ್ಯಾವಸ್ಥೆಯನ್ನು ಆರಂಭಿಸಿ, ಪೂತನಾಕೇಶಿಪರ್ಯಂತವಾಗಿ ಅನೇಕಾನೇಕ ದೈತ್ಯರನ್ನು ಸಂಹರಿಸುವುದಕ್ಕಾಗಿಯೂ, ಗೋವರ್ಧನ ಗಿರಿಯನ್ನು ಎತ್ತುವುದಕ್ಕಾಗಿಯೂ, ಪುನಃ ಮಲ್ಲ–ಕಂಸಾದಿಗಳನ್ನು ಸಂಹರಿಸುವುದಕ್ಕಾಗಿಯೂ, ಆ ಮೇಲೆ ಹದಿನೆಂಟಾವರ್ತಿ ಜರಾಸಂಧನು ತಂದಿರತಕ್ಕ

ಅನೇಕ ಅಕ್ಷೌಹಿಣೀ ಸೇನೆಯನ್ನು ಸಂಹರಿಸುವುದಕ್ಕಾಗಿಯೂ, ನರಕಾಸುರನನ್ನು ಸಂಹರಿಸುವುದಕ್ಕಾಗಿಯೂ ಶ್ರೀಕೃಷ್ಣಾವತಾರದಲ್ಲಿ ಅನೇಕಾವರ್ತಿ ಬಲವನ್ನೇ ತೋರಿಸಿರುವರು. ಜ್ಞಾನಾದಿ ಗುಣಗಳನ್ನು ಬಿಟ್ಟು, ಕೃಷ್ಣಾಖ್ಯ ಸಮುದ್ರಕ್ಕೆ ಬಲವನ್ನೇ ಜಲವನ್ನಾಗಿ ವರ್ಣಿಸಿರುವರು. ಲೌಕಿಕ ಸಮುದ್ರವಾದರೂ ಅಲ್ಪ ಸಂಖ್ಯೆಯುಳ್ಳ ಜಲಪೂರ್ತಿಯಳ್ಳದ್ದು. (3) ಶ್ರೀ ಹರಿಯು ಉಚ್ಚಗುಣಗಳಿಗೆ ಆಶ್ರಯನು. ಸಮುದ್ರವು ಜಡಭೂತಗಳಾದ ಅಲ್ಪ ರತ್ನಗಳಿಗೆ ಆಶ್ರಯಭೂತವು. (4) ಶ್ರೀಕೃಷ್ಣನು ತನ್ನ ಮಹಿಮೆಯಿಂದಲೇ ಮಹಾ ವೈಭವವುಳ್ಳವನು, ಸಮುದ್ರವಾದರೂ ಪಶ್ಚಿಮ ದಿಕ್ಕಿಗೆ ಪಾಲಕನಾಗಿ ಶ್ರೀಹರಿಯಿಂದಲೇ ಕೊಡಲ್ಪಟ್ಟ ವೈಭವವುಳ್ಳದ್ದು. ದ್ವಾರಾವತಿಯಲ್ಲಿ ಸಮುದ್ರದೊಳಗೆ ರತ್ನಮಯವಾದ ಮಂಟಪವನ್ನು ಮಾಡಿದರಿಂದಲೂ, ಕ್ಷೀರಸಮುದ್ರದಲ್ಲಿ ದಿವ್ಯವಾದ ರತ್ನಮಯವಾದ ಮಂಟಪದಲ್ಲಿರತಕ್ಕ ಶ್ರೀ ಹರಿಯಿಂದ ಕೊಡಲ್ಪಟ್ಟ ವೈಭವವುಳ್ಳವನು. (5)ಶ್ರೀ ಕೃಷ್ಣನಾದರೂ ಜ್ಞಾನಿಗಳಿನ್ನುವ ನದಿಗಳಿಂದ ಹೊಂದಲ್ಪಡತಕ್ಕವನು. ಸಮುದ್ರವಾದರೂ ಜಡಭೂತಗಳಾದ ಜಲಗಳಿಂದ ಹೊಂದಲ್ಪಡತಕ್ಕುದು ಹೀಗೆ ಶ್ರೀಕೃಷ್ಣನಿಗೂ ಸಮುದ್ರಕ್ಕೂ ಮಹಾವೈಲಕ್ಷಣ್ಯವಿದೆ ॥ ೫ ॥

ಗ್ರಂಥಾದಿಯಲ್ಲಿ ಶ್ರೀ ಹರಿಯ ನಮಸ್ಕಾರಾದಿಗಳಂತೆಯೇ ಗುರುಗಳ ನಮಸ್ಕಾರಾದಿಗಳನ್ನು ಆವಶ್ಯವಾಗಿ ಮಾಡಬೇಕು. ಆ ಮೇಲೆಯೇ ಗ್ರಂಥವನ್ನು ಆರಂಭಿಸಬೇಕು. ಹೀಗೆ ಶಿಷ್ಟಾಚಾರವನ್ನು ಸೂಚಿಸುವುದಕ್ಕಾಗಿ ಅದರ ಅರ್ಥವನ್ನು ಪ್ರತಿಪಾದಿಸತಕ್ಕ ಭಾರತವಾಕ್ಯವನ್ನೇ ಹೇಳುತ್ತಾರೆ—

ಮೂ ॥ ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಂ ॥
ದೇವೀಂ ಸರಸ್ವತೀಂ ವ್ಯಾಸಂ ತತೋ ಜಯಮುದೀರಯೇ ॥ ೪ ॥

ಅ ॥ ಶ್ರೀನಾರಾಯಣನನ್ನೂ ನರೋತ್ತಮರಾದ ವಾಯುದೇವರನ್ನೂ, ಲಕ್ಷ್ಮೀದೇವಿಯನ್ನೂ, ಸರಸ್ವತೀದೇವೀಯನ್ನೂ, ವ್ಯಾಸರನ್ನೂ ನಮಸ್ಕರಿಸಿ, ಆ ಮೇಲೆ ಜಯ (ಇತಿಹಾಸ)ವನ್ನು ಹೇಳುತ್ತೇನೆ. ॥ ೪ ॥

ನರಪದಕ್ಕೆ ಕೇವಲ ಮನುಷ್ಯಪರತ್ವ ಪ್ರತೀತಿಯನ್ನೂ, ನರೋತ್ತಮಪದಕ್ಕೆ ರಾಜಾದಿ ಪರತ್ವಪ್ರತೀತಿಯನ್ನು 'ದೇವೀಂ ಸರಸ್ವತೀಂ'ಎನ್ನುವಲ್ಲಿ ಸರಸ್ವತೀದೇವೀಯನ್ನು ಎಂದು ಸಾಮಾನಾಧಿಕರಣ ಪ್ರತೀತಿಯನ್ನೂ ವ್ಯಾಸ–ನಾರಾಯಣರಿಗೆ ಭೇದಪ್ರತೀತಿಯನ್ನಾಗಲೀ ಪೌನರುಕ್ತ್ಯಶಂಕೆಯನ್ನಾಗಲೀ ಜಯಶಬ್ದಕ್ಕೆ ಶತ್ರುಜಯಾದ್ಯರ್ಥತ್ವ ಪ್ರತೀತಿಯನ್ನಾಗಲೀ ನಿವಾರಣ ಮಾಡುವುದಕ್ಕಾಗಿಯೂ, ಇವರಿಗೇನೇ ನಮಸ್ಕಾರವನ್ನು ಮಾಡಲಿಕ್ಕೆ ಕಾರಣವನ್ನು ಹೇಳುವುದಕ್ಕಾಗಿಯೂ ವ್ಯಾಖ್ಯಾನಮಾಡುತ್ತಾರೆ–

ಮೂ ॥ ಜಯೋ ನಾಮೇತಿಹಾಸೋಽಯಂ ಕೃಷ್ಣದ್ವೈಪಾಯನೇರಿತಃ ॥
ವಾಯುರ್ನರೋತ್ತಮೋ ನಾಮ ದೇವೀತಿ ಶ್ರೀರುದಾಹೃತಾ । ೫ ॥
ನಾರಾಯಣೋ ವ್ಯಾಸ ಇತಿ ವಾಚ್ಯವಕ್ತೃಸ್ವರೂಪಕಃ ॥
ಏಕಃ ಸ ಭಗವಾನುಕ್ತಃ ಸಾಧಕೇಶೋ ನರೋತ್ತಮಃ ॥
ಉಪಸಾಧಕೋ ನರಶ್ಚೋಕ್ತೋ ದೇವೀ ಭಾಗ್ಯಾತ್ಮಿಕಾ ಸ್ಮೃತಾಂ
ಸರಸ್ವತೀ ವಾಕ್ಯರೂಪಾತಸ್ತಾನ್ನಮ್ಯಾಹಂ ತೇಽಖಿಲ್ಲಾಃ ॥ ೬ ॥

ಅ ॥ (ವೇದಾದಿಗಳನ್ನೂ, ಭಾರತವನ್ನೂ ತುಲೆ (ತಕ್ಕಿ) ಯಲ್ಲಿ ಆರೋಪಿಸಿದರೂ ಇತರ ಗ್ರಂಥಗಳಿಲ್ಲವನ್ನೂ ಜಯಿಸುವ ಪ್ರಯುಕ್ತ) ವೇದವ್ಯಾಸರಿಂದ ಹೇಳಿಸಿಕೊಳ್ಳಲ್ಪಟ್ಟ ಈ ಇತಿಹಾಸವು ಜಯವೆನ್ನಿಸುತ್ತದೆ, ವಾಯುದೇವರೇ ನರೋತ್ತಮರೆನಿಸುತ್ತಾರೆ, ದೇವಿಯೆಂದರೆ ಲಕ್ಷ್ಮೀದೇವಿಯು ಹೇಳಿಸಿಕೊಳ್ಳಲ್ಪಡುತ್ತಾಳೆ.(ಅರ್ಥವನ್ನು ಹೇಳಿ,ಈಗ ನಮ್ಯತ್ವದಲ್ಲಿ ಹೇತುವನ್ನು ಹೇಳುತ್ತಾರೆ). ವಾಚ್ಯ(ಹೇಳಲ್ಪಡತಕ್ಕ) ಸ್ವರೂಪವುಳ್ಳ, ವಕ್ತೃ(ಪ್ರತಿಪಾದಿಸತಕ್ಕ) ಸ್ವರೂಪವುಳ್ಳ ನಾರಾಯಣನೂ, ವ್ಯಾಸನೂ ಎಂದೂ ಒಬ್ಬನೇ ಆ ಶ್ರೀ ಹರಿಯು ಹೇಳಿಸಿಕೊಳ್ಳಲ್ಪಡುತ್ತಾನೆ. ವಾಯುದೇವರು ವ್ಯಾಸರ ಮುಖದಿಂದ ಕೇಳಿ ಯಾರು ಭಾರತಾರ್ಥವನ್ನು ಸಾಧಿಸಿಕೊಡುವ ಶುಕಾದಿಗಳೋ, ಅವರಿಗೆ ನಿಯಾಮಕರು. ಶೇಷದೇವರು ಉಪಸಾಧಕರು. (ಅಂದರೆ ಮುಖ್ಯ ಸಾಧಕರಿಂದ ಶಾಸ್ತ್ರಾರ್ಥಜ್ಞಾನವನ್ನು ಸಾಧಿಸಿಕೊಡುವವರು). ಲಕ್ಷ್ಮೀದೇವಿಯು ಮನುಷ್ಯರಿಗೆ ಐಶ್ವರ್ಯದಾಯಕಳು. ಸರಸ್ವತೀದೇವಿಯು ಭಾರತವಾಕ್ಯಕ್ಕೆ ಅಭಿಮಾನಿಯು. ಅದಕಾರಣ ಅವರೆಲ್ಲರೂ ನಮಸ್ಕರಿಸಿಕೊಳ್ಳಲ್ಪಡತಕ್ಕವರು ಪ್ರಸಿದ್ಧವು.

ವಿಶೇಷಾಂಶ— (1) ಶೇಷದೇವರು ನರೋತ್ತಮರಾದುದರಿಂದ, ಶೇಷದೇವರಿಂದು ತ್ತಮತ್ವವು ವಾಯುದೇವರಿಗೇನೇ ಕೂಡುತ್ತದೆ, ಎನ್ನುವ ಅಭಿಪ್ರಾಯದಿಂದ ವಾಯುವು ನರೋತ್ತಮನೆಂದು ಹೇಳಿದ್ದು. (2) ಕ್ರೀಡ್ಯಾದಿಗುಣವಿಶಿಷ್ಟನಾದ ಪ್ರಯುಕ್ತ ನಾರಾಯಣನೇ ದೇವನು. ಇತರರು ದೇವತ್ವಜಾತಿಯಿಂದ ದೇವಶಬ್ದವಾಚ್ಯರು. ಏವಂಚ ಯೋಗ ರೂಢಿಗಳಿದ್ದ ಪ್ರಯುಕ್ತ ಶ್ರೀ ನಾರಾಯಣನೇ ಮುಖ್ಯವಾಗಿ ದೇವಶಬ್ದವಾಚ್ಯನು. 'ದೇವಸ್ಯೇಯಂ' ಎಂಬುವ ವ್ಯುತ್ಪತ್ತಿಯಿಂದ ಲಕ್ಷ್ಮೀಯೇ ದೇವಿಯೆನ್ನಿಸಿಕೊಳ್ಳುತ್ತಾಳೆ. (3) ವಾಚ್ಯತ್ವೇನ ನಾರಾಯಣನನ್ನು ಗ್ರಹಣ ಮಾಡಿದ್ದು, ವಕ್ತೃಗಳಾಗಿರುವುದರಿಂದ ವಾಸ್ಕರನ್ನು ಗ್ರಹಣಮಾಡಿದ್ದು, ಹೀಗೆ ಒಬ್ಬರನ್ನೇ ಎರಡಾವರ್ತಿ ಗ್ರಹಣಮಾಡಿದ್ದು. ಆದ ಪ್ರಯುಕ್ತ ಇಬ್ಬರಿಗೂ ನಮಸ್ಕಾರ ಮಾಡಿದ್ದು. (4) ಸ್ಫಾಟ್ಟಾತ್ ವಾಯುಮುಖದಿಂದ ಶ್ರವಣಾದಿಗಳನ್ನು ಮಾಡಲಿಕ್ಕೆ ಶಕ್ತರಾದವರಿಗೆ ಉಪಸಾಧಕರು ಅಪೇಕ್ಷಿತರು. (5) ವಕ್ತೃ-ಶ್ರೋತೃತ್ವಾದಿಗಳಿಗೆ ಅನ್ನಪಾನಾದಿಗಳಿಲ್ಲದಿದ್ದರೂ ವಚನವೇ ಕೂಡದಿದ್ದ ಪ್ರಯುಕ್ತ ಶ್ರವಣಕ್ಕೆ ಯೋಗ್ಯವಾದ ಭಾಗ್ಯವು ಸಿಗುವುದಕ್ಕಾಗಿ ಲಕ್ಷ್ಮೀದೇವಿಗೆ ನಮಸ್ಕಾರವು (6) ಸರಸ್ವತಿಯು ಭಾರತವಾಕ್ಯಕ್ಕೆ ಅಭಿಮಾನಿಯು. ಕೋಶದಲ್ಲಿರತಕ್ಕ ಧನವು ಸಿಗುವುದಕ್ಕಾಗಿ ಕೋಶಪಾಲನನ್ನು ಅನುಸರಿಸುವಂತೆ ಸರಸ್ವತಿಗೂ ನಮಸ್ಕಾರವು ಅವಶ್ಯಕವು ॥೫॥೬॥

ಕೇವಲ ಮೂಲರೂಪಿಯಾದ ನಾರಾಯಣನಿಗೆ ಮೂಲರೂಪದಿಂದಲೇ ಪ್ರತಿಪಾದ್ಯತ್ವವಿದ್ದ ಪ್ರಯುಕ್ತ ನಮಸ್ಕಾರವಲ್ಲ. ಮತ್ತೆ ಕೃಷ್ಣಾಖ್ಯ ಅವತಾರರೂಪದಿಂದ ಪರಿಪಾಲಿಸಿಕೊಳ್ಳಲ್ಪಡುವ ಪ್ರಯುಕ್ತವೂ ನಮಸ್ಕಾರವು. ವೇದವ್ಯಾಸರಿಗೂ ವಕ್ತೃತ್ವದಿಂದಲೇ ಕೇವಲ ನಮಸ್ಕಾರವಲ್ಲ. ಮತ್ತೆ ಗ್ರಂಥಪ್ರತಿಪಾದ್ಯರಾಗಿರುವಪ್ರಯುಕ್ತ ನಮಸ್ಕಾರವು. ಹಾಗೆಯೇ ಲಕ್ಷ್ಮೀದೇವಿಯು ವಾಯುದೇವರು, ಸರಸ್ವತೀದೇವಿಯು, ನಾರಾಯಣದೇವರು ಇವರಿಗೂ ಕೇವಲ ಹಿಂದೆಹೇಳಿದ ಹೇತುಗಳಿಂದ ನಮ್ಯತ್ವಲ್ಲ. ಮತ್ತೆ ಅವತಾರರೂಪದಿಂದಲೂ, ಗ್ರಂಥಪ್ರತಿಪಾದ್ಯತ್ವವಿದ್ದ ಪ್ರಯುಕ್ತವೂ ನಮಸ್ಕಾರವೆನ್ನುತ್ತಾರೆ—

ಮೂ ॥ ಕೃಷ್ಣೌ ಸತ್ಯಾ ಭೀಮಸಾಥ್ಯೌ ಕೃಷ್ಣೇತ್ಯುಕ್ತಾ ಹಿ ಭಾರತೇ ॥೭॥

ಅ ॥ ವಾಸಿಷ್ಠ (ವ್ಯಾಸ)ಯಾದವ – ಕೃಷ್ಣರು, ಸತ್ಯಭಾಮಾದೇವಿಯೂ, ರುಗ್ಮಿಣಿಯೂ ಕೂಡ ಭೀಮಾರ್ಜುನರು ನರಾವತಾರಭೂತನಾದ ಬಲರಾಮನೂಕೂಡ ದ್ರೌಪದಿದೇವಿಯು, ಇವರೆಲ್ಲರೂ ಭಾರತದಲ್ಲಿ ಹೇಳಲ್ಪಟ್ಟಿದ್ದಾರೆ.

ವಿಶೇಷಾಂಶ--- (1)ವನವಾಸಕಾಲದಲ್ಲಿ ಪಾಂಡವರ ದುಃಖವನ್ನು ಪರಿಹರಿಸುವುದಕ್ಕಾಗಿ ಸತ್ಯಭಾಮೆಯನ್ನೇಕರಿಸಿರುವುದರಿಂದ ಸತ್ಯಾ ಎಂದು ಗ್ರಹಣಮಾಡಿರುವರು. (2)ಅವರವರ ಕಥಾ ಪ್ರಸಂಗಕಾಲದಲ್ಲಿ ಅಲ್ಲಲ್ಲಿ ಪ್ರಧಾನರಾಗಿ ಕೃಷ್ಣಾದಿಗಳೇ ಹೇಳಿಸಿಕೊಳ್ಳಲ್ಪಡುತ್ತಾರೆ. (3) ವ್ಯಾಸಾವತಾರಕಾಲದಲ್ಲಿ ವ್ಯಾಸಕಥೆಯನ್ನು ಸವಿಸ್ತರವಾಗಿ ಹೇಳಿರುವರು. (4)ಅರ್ಜುನನಿಗೆ ಸಾರಥ್ಯಾದಿಗಳನ್ನು ಮಾಡಿದರಿಂದಲೂ, ಗೀತೆಯನ್ನುಪದೇಶಕೊಟ್ಟಿದ್ದರಿಂದಲೂ, ಅನೇಕಾವರ್ತಿವಿಶ್ವರೂಪವನ್ನು ತೋರಿಸಿದ್ದುದರಿಂದಲೂ ಶ್ರೀ ಕೃಷ್ಣನ ಕಥೆಯನ್ನು ಸವಿಸ್ತರವಾಗಿ ಹೇಳಿರುವರು. (5) ರಾಜಸೂಯಾಶ್ವಮೇಧಾದಿಗಳಲ್ಲಿ ರುಗ್ಮಿಣೀ-ಸತ್ಯಭಾಮೆ ಇವರ ಕಥೆಯನ್ನು ಸವಿಸ್ತರವಾಗಿ ಹೇಳಿರುವರು, (6) ಬಲರಾಮನ ಕಥೆಯೂ ಕೂಡ ತೀರ್ಥಯಾತ್ರಾದಿಗಳಲ್ಲಿಯೂ ಗದಾಯುದ್ಧಾದಿಗಳಲ್ಲಿಯೂ ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ. (7) ಭೀಮ-ಅರ್ಜುನ-ದ್ರೌಪದಿಯರ ಕಥೆಯನ್ನು ಹೇಳುವುದಕ್ಕಾಗಿಯೇ ಸಮಸ್ತಭಾರತವೂ ಪ್ರವೃತ್ತವಾಗಿದೆ. (8) ಏವಂಚ ಕೃಷ್ಣಾಖ್ಯ ಅವತಾರರೂಪದಿಂದಲೂ, ಮೂಲರೂಪದಿಂದಲೂ ಪ್ರತಿಪಾದ್ಯರಾಗಿರುವುದರಿಂದ ಶ್ರೀ ನಾರಾಯಣನಿಗೆ ನಮಸ್ಕಾರವು. ವೇದವ್ಯಾಸರಿಗಾದರೂ ತನಗೇನೇ ಪ್ರತಿಪಾದ್ಯತ್ವವಿದ್ದ ಪ್ರಯುಕ್ತವೂ ಕರ್ತೃತ್ವವಿದ್ದಪ್ರಯುಕ್ತವೂ ನಮಸ್ಕಾರವು. (9) ಲಕ್ಷ್ಮೀದೇವಿಗಾದರೂ, ಸತ್ಯಭಾಮಾದಿರೂಪದಿಂದ ಪ್ರತಿಪಾದ್ಯತ್ವವಿದ್ದ ಪ್ರಯುಕ್ತವೂ, ಭಾಗ್ಯದಾತೃತ್ವವಿದ್ದ ಪ್ರಯುಕ್ತವೂ ನಮಸ್ಕಾರವು (10) ವಾಯುದೇವರು ಭೀಮರೂಪದಿಂದ ಸರ್ವತ್ರಪ್ರತಿಪಾದ್ಯರಾಗಿರುವುದರಿಂದಲೂ, ಮೂಲರೂಪದಿಂದಲೂ ವ್ಯಾಸರ ಮುಖದಿಂದಲೂ, ಸಕಲ ಭಾರತಾರ್ಥವನ್ನು ಸಂಗ್ರಹಿಸುವುದರಿಂದಲೂ, ಸಾಧಕರಲ್ಲಿ ಅಗ್ರೇಸರವಾಗಿರುವುದರಿಂದಲೂ ನಮಸ್ಕಾರವು ಯುಕ್ತವು.(11) ಸರಸ್ವತಿಗಾದರೂ, ದ್ರೌಪದೀರೂಪದಿಂದ ಭಾರತದಲ್ಲಿ ಪ್ರತಿಪಾದ್ಯತ್ವವಿದ್ದಪ್ರಯುಕ್ತವೂ, ಸಕಲ ಭಾರತ ವಾಕ್ಯಗಳಿಗೆ ಅಭಿಮಾನಿತ್ವವಿದ್ದಪ್ರಯುಕ್ತವೂ ನಮಸ್ಕಾರವು. (12) ಶೇಷನಾದರೂ ಸಾಕ್ಷಾತ್ ನರಾವತಾರದಿಂದ ಅರ್ಜುನನಲ್ಲಿ ಪ್ರವಿಷ್ಟವಾದ, ಅತ್ಯಂತಪ್ರಬಲವಾದ, ಸ್ವಾಂಶರೂಪದಿಂದ ಪ್ರತಿಪಾದ್ಯನಾಗಿರುವುದರಿಂದಲೂ ಮೂಲರೂಪದಿಂದ ಭಾರತಾರ್ಥವನ್ನು ಉಪಸಾಧಿಸಿಕೊಡುವುದರಿಂದಲೂ ನಮಸ್ಕಾರವು ಯುಕ್ತವು ॥೭॥

ಎರಡು ಅಧ್ಯಾಯಗಳಲ್ಲಿ ಹೇಳಿದ್ದನ್ನು ಅನುವಾದಮಾಡುತ್ತಾ ಉತ್ತರವಾದ ಎಲ್ಲಾಪ್ರಬಂಧಗಳಲ್ಲಿ ಪ್ರತಿಪಾದ್ಯವಾದುದನ್ನು ಹೇಳುತ್ತಾರೆ–

ಮೂ ॥ ಸರ್ವಸ್ಯ ನಿರ್ಣಯಸುವಾಕ್ಯಸಮುದ್ಧೃತೀ ತು
ಸ್ವಧ್ಯಾಯಯೋರ್ಹರಿಪದಸ್ಮರಣೇನ ಕೃತ್ವಾ ॥
ಆನಂದತೀರ್ಥವರನಾಮತೀ ತೃತೀಯೋ
ಭೈ(ಭೌ)ವೋ ತನುರ್ಮರುತ ಆಹ ಕಥಾಃ ಪರಸ್ಯ ॥ ೮ ॥

ಅ ॥ ಶೋಭನಗಳಾದ ಅಧ್ಯಾಯಗಳಲ್ಲಿ ಸರ್ವಶಾಸ್ತ್ರಾರ್ಥನಿರ್ಣಯವು (೧ನೇಅಧ್ಯಾಯದಲ್ಲಿಯೂ) ಪ್ರಶಸ್ತ ವಾಕ್ಯಗಳ ಸಮುದ್ಧಾರವೂ, (೨ನೇ ಅಧ್ಯಾಯದಲ್ಲಿ) ಇವುಗಳನ್ನು ಶ್ರೀ ಹರಿಯ ಪಾದಗಳ ಸ್ಮರಣದಿಂದ ಮಾಡಿ, ಆನಂದತೀರ್ಥರೆನ್ನುವ ಉತ್ಕೃಷ್ಟವಾದ ನಾಮಧೇಯವುಳ್ಳ, ಭೂಮಿಸಂಬಂಧಿಯಾದ (ಅಂದರೆ ಭೂಮಿಯಲ್ಲಿ ಅವತಾರ ಮಾಡಿದ) ವಾಯುದೇವರ ಮೂರನೇದ್ದಾದ ಮಧ್ವಾಖ್ಯ ಅವತಾರವು ಶ್ರೀ ಹರಿಯ ಕಥೆಗಳನ್ನು ಪ್ರತಿಪಾದಿಸುತ್ತದೆ ॥೮॥

ಪ್ರಥಮಾಧ್ಯಾಯದಲ್ಲಿ ಸೂಕ್ಷ್ಮವಾಗಿ ಸೃಷ್ಟಿಸಲ್ಪಟ್ಟವುಗಳಿಗೆ ಸ್ಥೂಲರೂಪದಿಂದ ಸೃಷ್ಟಿಯನ್ನು ಹೇಳುವುದಕ್ಕಾಗಿ ಹಿಂದೆ ಹೇಳಿದ ಸೃಷ್ಟಿಯನ್ನು ಅನುವಾದ ಮಾಡುತ್ತಾ ಹೇಳದೆ ಇದ್ದ ಸೃಷ್ಟಿಯನ್ನು ಹೇಳುತ್ತಾರೆ—

ಮೂ ॥ ವ್ಯೂಢಶ್ಚತುರ್ಧಾ ಭಗವಾನ್ಸ ಏಕೋ
ಮಾಯಾಂ ಶ್ರಿಯಂ ಸೃಷ್ಟಿವಿಧಿತ್ಸಯಾರ ॥
ರೂಪೇಣ ಪೂರ್ವೇಣ ಸ ವಾಸುದೇವ
ನಾಮ್ನಾ ವಿರಿಂಚಂ ಸುಷುವೇ ಚ ಸಾತಃ ॥೯॥

ಅ ॥ ಐಶ್ವರ್ಯಾದಿ ಗುಣಪೂರ್ಣನಾದ ಅವತಾರಾದಿಗಳಲ್ಲಿ ಭೇದರಹಿತನಾದ ಆ ಶ್ರೀ ನಾರಾಯಣನು ನಾಲ್ಕುಪ್ರಕಾರವಾಗಿ ವ್ಯೂಹವನ್ನು ಹೊಂದಿದನು ಅಂದರೆ ಅವತಾರಮಾಡಿದನು. ಆ ಶ್ರೀ ಹರಿಯು ವಾಯುದೇವನಾಮಕನಾದ ಪೂರ್ವರೂಪದಿಂದ ಸೃಷ್ಟಿಯನ್ನು ಮಾಡಬೇಕೆನ್ನುವ ಇಚ್ಛೆಯಿಂದ ಮಾಯಾ ಎಂದು ಹೆಸರುಳ್ಳ ಲಕ್ಷ್ಮೀದೇವಿಯನ್ನು ಹೊಂದಿದನು. ಆ ಮಾಯಾದೇವಿಯು ಈ ವಾಸುದೇವನದೆಶೆಯಿಂದ ಚತುರ್ಮುಖ ಬ್ರಹ್ಮನನ್ನು ಪಡೆದಳು. ॥೯॥

ಮೂ ॥ ಸಂಕರ್ಷಣಾಚ್ಚಾಪಿ ಜಯೋತನೂಜ್ಞೋ
ಬಭೂವ ಸಾಕ್ಷಾದ್ಬಲಸಂವಿದಾತ್ಮಾ ॥
ವಾಯುರ್ಯ ಏವಾಥ ವಿರಿಂಚನಾಮಾ
ಭವಿಷ್ಯ ಆದ್ಯೋ ನ ಪರಸ್ತತೋ ಹಿ ॥೧೦॥

ಅ ॥ ಬಲಜ್ಞಾನಗಳೇ ಸ್ವರೂಪವಾಗಿವುಳ್ಳ ಸಾಕ್ಷಾತ್ (ಮುಖ್ಯ) ವಾಯುದೇವರು ಸಂಕರ್ಷಣನದೆಶೆಯಿಂದ ಜಯಾದೇವಿಯಲ್ಲಿ ಮಗನಾಗಿ ಹುಟ್ಟಿದನು. (ವಾಯುಗಳಲ್ಲಿ ಅನೇಕ ವಾಯುಗಳು ಇದ್ದುದರಿಂದ ಇಲ್ಲಿ ಯಾವ ವಾಯುವನ್ನು ಇಟ್ಟುಕೊಳ್ಳಬೇಕು ಎಂದರೆ) ಕಲ್ಪಾಂತರದಲ್ಲಿ ಯಾವ ವಾಯುವು ಪ್ರಾಥಮಿಕನಾದ ಭಾವಿ ಬ್ರಹ್ಮನೆಂದು ಹೆಸರುಳ್ಳವನೋ, ಆ ವಾಯುವೇ—ಬ್ರಹ್ಮನಿಂದ ಮತ್ತೊಬ್ಬನಲ್ಲ. ಪ್ರಸಿದ್ಧವು ॥೧೦॥

ಗ್ರಂಥಾಂತರದಲ್ಲಿ ವಾಸುದೇವನದೆಶೆಯಿಂದ ಪುರುಷನು ಹುಟ್ಟಿದನು, ಸಂಕರ್ಷಣನ ದೆಶೆಯಿಂದ ಸೂತ್ರನಾಮಕನಾದ ಪುತ್ರನು ಹುಟ್ಟಿದನು, ಎಂದು ಇದೆ. ಅದರ ವಿರೋಧವನ್ನು ಪರಿಹರಿಸುವುದಕ್ಕಾಗಿ ಹೇಳುತ್ತಾರೆ—

ಮೂ ॥ ಸೂತ್ರಂ ಸ ವಾಯುಃ ಪುರುಷೋ ವಿರಿಂಚಃ
ಪ್ರದ್ಯುಮ್ನತಶ್ಚಾಥ ಕೃತೌ ಸ್ತ್ರೀಯೌ ದ್ವೇ ॥
ಪ್ರಜಜ್ಞತುರ್ಯಮಲೇ ತತ್ರ ಪೂರ್ವಾ
ಪ್ರಧಾನಸಂಜ್ಞಾ ಪ್ರಕೃತಿರ್ಜನಿತ್ರೀ ॥೧೧॥

ಆ ॥ (ಗ್ರಂಥಾಂತರದಲ್ಲಿ ಯಾವುದು) ಸೂತ್ರವು (ಎಂದು ಹೇಳಲ್ಪಟ್ಟಿದೋ) ಅವನು ವಾಯುವೇ. (ಯಾರು) ಪುರುಷನು (ಎಂದು ಹೇಳಲ್ಪಟ್ಟಿದೋ) ಅವನು ವಿರಿಂಚನೇ. ಬ್ರಹ್ಮವಾಯುಗಳು ಹುಟ್ಟಿದ ಮೇಲೆ ಪ್ರದ್ಯುಮ್ನನದೆಶೆಯಿಂದ ಕೃತಿನಾಮಕ ದೇವಿಯಲ್ಲಿ ಯಮಲರಾದ ಇಬ್ಬರು ಸ್ತ್ರೀಯರು ಹುಟ್ಟಿದರು. ಆ ಇಬ್ಬರಲ್ಲಿ ಒಂದನೇಯವಳು ಪ್ರಧಾನವೆಂದು ಹೆಸರುಳ್ಳವಳು. ಪ್ರಕೃತಿಯು ರುದ್ರಾದಿಗಳನ್ನು ಹುಟ್ಟಿಸಿದವಳು ॥೧೧॥

ಮೂ ॥ ಶ್ರದ್ಧಾ ದ್ವಿತೀಯೊಾಥ ದ್ವಿತೀಯೊಾಥ ತಯೋಸ್ತು (ಶ್ಚ)ಯೋಗೋ
ಬಭೂವ ಪುಂಸ್ಯೇವ ಚ ಸೂತ್ರನಾಮ್ನಾ ॥
ಹರೇರ್ನಿಯೋಗಾದಥ ಸಂಪ್ರಸೂತೌ
ಶೇಷಃ ಸುಪರ್ಣಶ್ಚ ತಯೋಃ ಸಹೈವ ॥ ೧೨ ॥

ಅ ॥ ಶ್ರದ್ಧಾ ಎನ್ನುವವಳು ಎರಡನೆಯವಳು. ಶ್ರೀ ಹರಿಯ ನಿಯೋಗದೆಶೆಯಿಂದ ಆ ಶ್ರದ್ಧಾ ಪ್ರಧಾನರಿಗೆ ಪುರುಷಶಬ್ದವಾಚ್ಯನಾದ ಸೂತ್ರನೆಂದು ಹೆಸರುಳ್ಳವನಿಂದಲೇ ಸಂಬಂಧವಾಯಿತು. (ಅಂದರೆ ಪುರುಷನಿಂದ ಪ್ರಧಾನಾಖ್ಯಸ್ತ್ರೀಗೂ ಸೂತ್ರದಿಂದ ಶ್ರದ್ಧೆಗೂ ಸಂಬಂಧವಾಯಿತು. ಪುರುಷಸೂತ್ರರಿಗೆ ಏಕಕಾಲದಲ್ಲಿಯೇ ಶೇಷನೂ ಸುಪರ್ಣನೂ ಹುಟ್ಟಿದರು. ॥೧೨॥

ಕೆಲವು ಕಡೆ ಪುರುಷಸೂತ್ರರ ಸಕಾಶದೆಶೆಯಿಂದ ಜೀವಕಾಲರು ಹುಟ್ಟಿದರೆಂದು ತೋರುತ್ತದೆ. ಆ ವಿರೋಧವನ್ನು ಪರಿಹರಿಸುತ್ತಾರೆ—

ಮೂ ॥ ಶೇಷಸ್ತ್ವಯೋರೇವ ಹಿ ಜೀವನಾಮಾ
ಕಾಲಾತ್ಮಕಃ ಸೋಽಥ ಸುಪರ್ಣ ಆಸೀತ್ ॥
ತೌ ವಾಹನಂ ಶಯನಂ ಚೈವ ವಿಷ್ಣೋಃ ॥
ಕಾಲಾ ಜಯೊದ್ಯಾಶ್ಚ ತತಃ ಪ್ರಸೂತಾಃ ॥ ೧೩ ॥

ಅ ॥ ಪುತ್ರರ ಮಧ್ಯೆದಲ್ಲಿ ಶೇಷನೇ ಜೀವನೆಂದು ಹೆಸರುಳ್ಳವನು. ಆಮೇಲೆ ಆ ಗರುಡನು ಕಾಲಸ್ವರೂಪನಾಗಿ ಆದನು. ಆ ಗರುಡ-ಶೇಷರು ಶ್ರೀ ವಿಷ್ಣುವಿಗೆ ವಾಹನಭೂತರೂ ಶಯನ ಭೂತರೂ ಆದರು. ಆ ಮೇಲೆ ಗರುಡ-ಶೇಷರ ಸಕಾಶದೆಶೆಯಿಂದ ಕಾಲನಾಮಕರಾದ ಹರಿ ಪಾರ್ಷದರೂ ಶೇಷನದೆಶೆಯಿಂದ, ಗರುಡವದೆಶೆಯಿಂದಲೂ ಜಯವಿಜಯಾದಿಗಳೂ ಹುಟ್ಟಿದರು. ॥೧೩॥

ಈ ಕಾಲನಾಮಕರಾದ ಪಾರ್ಷದರೂ ಜಯಾದಿಗಳೂ ಯಾರೆಂದರೆ - ಅವರ ಸ್ವರೂಪವನ್ನು ನಿರೂಪಣೆ ಮಾಡುತ್ತಾ ರುದ್ರಾದಿ ದೇವತೆಗಳದೆಶೆಯಿಂದ, ಮೊದಲು ಹುಟ್ಟಿರುವುದರಿಂದ ಅವರಿಂದಲೂ ಉತ್ತಮರೂ ಎನ್ನುವ ಶಂಕಾನಿಮಿತ್ತವನ್ನು ಹೇಳುತ್ತಾ ನಿವಾರಿಸುತ್ತಾರೆ—

ಮೂ ॥ ಕಾಲಾ ಜಯೊದ್ಯಾ ಅಪಿ ವಿಷ್ಣುಪಾರ್ಷದಾ
ಯಸ್ಮಾದಂಡಾತ್ಪರತಃ ಸಂಪ್ರಸೂತಾಃ ॥
ನೀಚಾಃ ಸುರೇಭ್ಯಸ್ತತ ಏವ ತೇಽಖಿಲಾ
ವಿಷ್ವಕ್ಸೇನೋ ವಾಯುಜಃ ಖೇನ ತುಲ್ಯಃ ॥೧೪॥

ಅ ॥ ಕಾಲನಾಮಕರಾದವರು, ಜಯವಿಜಯಾದಿಗಳು ಕೂಡ ಶ್ರೀ ಹರಿಯ ಪಾರ್ಷದರೇ. ಈ ಅಂಡದ್ದೆಶೆಯಿಂದ ಹೊರಗೆ ಹುಟ್ಟಿದವರು. (ಅಂದರೆ ಅಂಡಸೃಷ್ಟಿಯಿಂದ ಮೊದಲು ಹುಟ್ಟಿದವರು. (ಏವಂಚ ಅಂಡದ ಒಳಗೆ ಯಾವುದು ಸೃಷ್ಟಿಯೋ, ಅದೇ ತಾರತಮ್ಯಕ್ಕೆ ಉಪಯುಕ್ತವಾದದ್ದು; ಬಾಹ್ಯಸೃಷ್ಟಿಯಲ್ಲ) ಬ್ರಹ್ಮಾಂಡದೆಶೆಯಿಂದ ಹೊರಗೆ ಸೃಷ್ಟರಾದುದರಿಂದಲೇ ಅವರೆಲ್ಲರೂ ಪೂರ್ವದಲ್ಲಿ ಹುಟ್ಟಿದಾಗ್ಯೂ ದೇವತೆಗಳದೆಶೆಯಿಂದ ನೀಚರು; (ಆದರೆ) ವಿಷ್ವಕ್ಸೇನನು ವಾಯುವಿನಿಂದ ಹುಟ್ಟಿದವನು. ಆಕಾಶಾಭಿಮಾನಿಯಾದ ಗಣಪತಿಯಿಂದ ಸಮಾನಿಕನು ॥೧೪॥

ಮೂ ॥ ವ್ಯೂಹಾತ್ತೃತೀಯೋತ್ಪನರೇವ ವಿಷ್ಣೋ-
ರ್ದೇವಾನಾಶ್ಚತುರ್ವರ್ಣಗತಾನ್ ಸಮಸ್ತಾನ್ ॥
ಸಂಗೃಹ್ಯ ಬೀಜಾತ್ಮತಯಾನಿರುದ್ಧೋ-
ನ್ಯಧತ್ತ ಶಾಂತ್ಯಾಂ ತ್ರಿಗುಣಾತ್ಮಿಕಾಯಾಂ ॥೧೫॥

ಅ ॥ ಅನಿರುದ್ಧರೂಪಿಯಾದ ಶ್ರೀ ಹರಿಯು, ವಿಷ್ಣುವಿನ ಮೂರನೇ ಅವತಾರವಾದ ಪ್ರದ್ಯುಮ್ನನದೆಶೆಯಿಂದಲೇ ಎಲ್ಲಾ ನಾಲ್ಕು ವರ್ಣದಲ್ಲಿಯೂ ಇರತಕ್ಕ ದೇವತೆಗಳನ್ನು ಸಂಗ್ರಹಿಸಿ ಸತ್ವ- ರಜ- ತಮೋಗುಣಗಳಿಗೆ ಅಭಿಮಾನಿನಿಯಾದ ಶಾಂತಿದೇವಿಯಲ್ಲಿ ಬೀಜರೂಪದಿಂದ ಹುಟ್ಟಿದನು.

ವಿಶೇಷಾಂಶ— (1) ಹಾಗಾದರೆ **'ಪ್ರದ್ಯುಮ್ನಸಂಜ್ಞಕಃ ಇಮಾನ್ ಚರಮಾತ್ಮ ನೇಽದಾತ್'** ಎಂದು ಪ್ರದ್ಯುಮ್ನನು ತನ್ನ ಹೊಟ್ಟೆಯಲ್ಲಿ ಇರತಕ್ಕ ಜೀವರನ್ನು ಅನಿರುದ್ಧನ ಹೊಟ್ಟೆಯಲ್ಲಿ ಪ್ರವೇಶ ಮಾಡಿಸಿದನೆಂದು ಮೊದಲೇ ಹೇಳಿಯದೆ. ಈಗ ವಿಷ್ಣುವಿನ ಮೂರನೇ ಅವತಾರವಾದ ಪ್ರದ್ಯುಮ್ನನದೆಶೆಯಿಂದ ಸಂಗೃಹ್ಯ ಎಂದು ಹೇಳಿದ್ದು ಹೇಗೆ ಕೂಡುತ್ತದೆ? ಎಂದರೆ ಸತ್ಯವೇ. ಮೊದಲು ಒಂದಾವರ್ತಿ ಅನಿರುದ್ಧನ ಕೈಯಲ್ಲಿ ಕೊಟ್ಟು ಸೂಕ್ಷ್ಮಕರ ದೇಹಗಳಿಂದ ಕೂಡಿದವರನ್ನಾಗಿ ಮಾಡಿಸಿ ಮತ್ತು ಅವರೆಲ್ಲರನ್ನೂ ಪ್ರದ್ಯುಮ್ನನೇ ತನ್ನ ಹೊಟ್ಟೆಯಲ್ಲಿ ಪ್ರವೇಶಮಾಡಿಸಿದನು. ಈ ಕಥೆಗಳನ್ನು ಪುನಃ ಸಂಗ್ರಹಿಸಿ ಎಂದು ಹೇಳತಕ್ಕ ಆಚಾರ್ಯರು ಸಂಗ್ರಹಿಸಿರುವರು. ಆದುದರಿಂದ ವಿರೋಧವಿಲ್ಲವೆಂದು ಪರಿಹಾರವು ಕೂಡುವುದರಿಂದ ಬ್ರಾಹ್ಮಣ ಕ್ಷತ್ರಿಯಾದಿ ನಾಲ್ಕುವರ್ಣಗಳಲ್ಲಿರತಕ್ಕವರನ್ನು ಸಂಗ್ರಹಿಸಿ ಎಂದು ಹೇಳಿರುವರು. ದೇವತೆಗಳಲ್ಲಿಯೂ ಬ್ರಾಹ್ಮಣ ಕ್ಷತ್ರಿಯಾದಿ ವರ್ಣಭೇದವಿದೆ. ಆದುದರಿಂದಲೇ ಸೂರ್ಯನ ದೆಶೆಯಿಂದಲೂ ಸೋಮನದೆಶೆಯಿಂದಲೂ ಕ್ಷತ್ರಿಯವಂಶೋತ್ಪತ್ತಿಯು. ಬ್ರಹ್ಮನದೆಶೆಯಿಂದ ಭೃಗ್ವಾದಿ ಬ್ರಾಹ್ಮಣವಂಶೋತ್ಪತ್ತಿಯು ॥೧೫॥

ಮೂ ॥ ತತೋ ಮಹತ್ತತ್ತ್ವತನುರ್ವಿರಿಂಚಃ
ಸ್ಥೂಲಾತ್ಮನೈನಾಜನಿ ವಾಕ್ಚದೇನೀ ॥
ತಸ್ಯಾಮಹಂಕಾರತನುಂ ಸ ರುದ್ರಂ
ಸಸರ್ಜ ಬುದ್ಧಿಂ ಚ ತದರ್ಧದೇಹಾಂ ॥೧೬॥

ಅ ॥ ಆ ಶಾಂತಿದೇವಿಯ ದೆಶೆಯಿಂದ ಮಹತ್ತತ್ವಕ್ಕೆ ಅಭಿಮಾನಿಯಾದ ಬ್ರಹ್ಮನು ಸ್ಥೂಲ ರೂಪದಿಂದಲೇ ಹುಟ್ಟಿದನು. ವಾಗಭಿಮಾನಿನಿಯಾದ ಸರಸ್ವತಿಯೂ ಕೂಡ ಹುಟ್ಟಿದಳು. ಆ ವಾಗ್ದೇವಿಯಲ್ಲಿ ಆ ಬ್ರಹ್ಮನು ಅಹಂಕಾರತತ್ವಕ್ಕೆ ಅಭಿಮಾನಿಯಾದ ರುದ್ರನನ್ನೂ ರುದ್ರನ ಶರೀರವೇ ಅರ್ಧ ಶರೀರವಾಗಿವುಳ್ಳ ಬುದ್ಧ್ಯಭಿಮಾನಿನಿಯಾದ ಪಾರ್ವತಿಯನ್ನೂ ಸೃಷ್ಟಿ ಮಾಡಿದನು. ॥೧೬॥

ಮೂ ॥ ಬುದ್ಧ್ಯಾಖ್ಯಮುಮಾಯಾಂ ಸ ಶಿವಸ್ತ್ರಿರೂಪೋ
ಮನಶ್ಚ ವೈಕಾರಿಕದೇವಸಂಘಾನ್ ॥
ದಶೇಂದ್ರಿಯಾಣ್ಯೇವ ಚ ತೈಜಸಾನಿ
ಕ್ರಮೇಣ ಖಾದೀನ್ವಿಷಯೈಶ್ಚ ಸಾರ್ಧಂ ॥೧೭॥

ಅ ॥ ವೈಕಾರಿಕ-ತೈಜಸ-ತಾಮಸಗಳೆನ್ನುವ ಮೂರು ವಿಧ ಅಹಂಕಾರಗಳನ್ನು ಪ್ರೇರಿಸುವುದಕ್ಕಾಗಿ ಮೇಲೆ ಹೇಳತಕ್ಕ ಎರಡು ರೂಪಗಳಿಂದ ಕೂಡಿಕೊಂಡು ಮೂರು ರೂಪಗಳುಳ್ಳ ಶಿವನು ಬುದ್ಧ್ಯಭಿಮಾನಿನಿಯಾದ ಪಾರ್ವತಿಯಲ್ಲಿ ವೈಕಾರಿಕ ದೇವತೆಗಳೂ, ಮನಸ್ಸೇ ಮೊದಲಾದ ಹನ್ನೊಂದು ಇಂದ್ರಿಯಾಭಿಮಾನಿಗಳಾದ ದೇವತೆಗಳೂ ಇವರ ಸಮೂಹಗಳನ್ನೂ ಮನಸ್ಸು ಎನ್ನುವ ಇಂದ್ರಿಯವನ್ನೂ, ತೈಜಸಗಳಾದ ದಶೇಂದ್ರಿಯಗಳನ್ನೂ (ಅಂದರೆ ಏಕಾದಶೇಂದ್ರಿಯಾಭಿಮಾನಿ ದೇವತೆಗಳ ದೇಹಗಳನ್ನೂ) ಆಕಾಶಾದಿ ಪಂಚಮಹಾಭೂತಗಳನ್ನೂ ಶಬ್ದಾದಿವಿಷಯಗಳಿಂದ ಕೂಡಿಕೊಂಡು ಕ್ರಮದಿಂದ (ತಾಮಸಾಖ್ಯ ಅಹಂಕಾರದೆಶೆಯಿಂದ) ಸೃಷ್ಟಿಮಾಡಿದನು.

ವಿಶೇಷಾಂಶ— ಶಬ್ದದಿಂದ ಸ್ಪರ್ಶವು; ಸ್ಪರ್ಶದಿಂದ ರೂಪವು; ರೂಪದಿಂದ ರಸವು; ರಸದಿಂದ ಗಂಧವು. ಹೀಗೆ ಭೂತಸೂಕ್ಷ್ಮರೂಪ ಪಂಚ ತನ್ಮಾತ್ರಗಳನ್ನು ಮೊದಲು ಸೃಷ್ಟಿಸಿ ಪುನಃ ' **ಆಕಾಶಾದ್ವಾಯುಃ, ವಾಯೋರಗ್ನಿಃ. ಅಗ್ನೇರಾಪಃ, ಅದ್ಭ್ಯಃ ಪೃಥಿವೀ** ' ಎಂದು ಪಂಚಭೂತಗಳನ್ನು ಸೃಷ್ಟಿಸಿದನು. '**ಮಾತ್ರಾಭೂತಾನಿ ಪಂಚ ಚ**' ಎಂದು ತತ್ವಸಂಖ್ಯಾನದಲ್ಲಿ ಆಚಾರ್ಯರೇ ಹೇಳಿರುವುದರಿಂದ ಮೊದಲು ಮಾತ್ರಾಸೃಷ್ಟಿಯೆಂದು ತಿಳಿಯಬೇಕು॥೧೭॥

ಮೂ ॥ ಪುಂಸಃ ಪ್ರಕೃತ್ಯಾಂ ಚ ಪುನರ್ವಿರಿಂಚಾ-
ಚ್ಛಿವೋಽಥ ತಸ್ಮಾದಖಿಲಾಃ ಸುರೇಶಾಃ ॥
ಜಾತಾಃ ಸಶಕ್ರಾಃ ಪುನರೇವ ಸೂತ್ರಾತ್
ಶ್ರದ್ಧಾ ಸುತಾನಾಪ ಸುರಪ್ರವೀರಾನ್ ॥೧೮॥
ಶೇಷಂ ಶಿವಂ ಚೇಂದ್ರಮಥೇಂದ್ರತಶ್ಚ
ಸರ್ವೇ ಸುರಾ ಯಜ್ಞಗಣಾಶ್ಚ ಜಾತಾಃ ॥೧೯॥

ಅ ॥ ಮತ್ತು ಪುರುಷನಾಮಕನಾದ ವಿರಿಂಚನದೆಶೆಯಿಂದ, ಪ್ರಕೃತಿನಾಮಕವಾದ ಅವ್ಯಕ್ತಕ್ಕೆ ಅವಾಂತರಾಭಿಮಾನಿನಿಯಾದ ಸರಸ್ವತಿಯಲ್ಲಿ ಶಿವನು ಹುಟ್ಟಿದನು. ಆಮೇಲೆ ಆ ರುದ್ರನದೆಶೆಯಿಂದ ದೇವೇಂದ್ರನಿಂದ ಕೂಡಿರುವ ಎಲ್ಲಾ ದೇವಶ್ರೇಷ್ಠರು ಹುಟ್ಟಿರುವರು ಮತ್ತು ಸೂತ್ರನಾಮಕ ವಾಯುದೇವರದೆಶೆಯಿಂದ ಭಾರತಿಯು ದೇವಶ್ರೇಷ್ಠರಾದ ಮಕ್ಕಳನ್ನು ಅಂದರೆ ಶೇಷನನ್ನೂ ಶಿವನನ್ನೂ ಇಂದ್ರನನ್ನೂ ಹೊಂದಿರುವಳು. ಆಮೇಲೆ ಇಂದ್ರನದೆಶೆಯಿಂದ ಅಶ್ವಮೇಧ, ಜ್ಯೋತಿಷ್ಟೋಮ, ಅಗ್ನಿಷ್ಟೋಮಾದಿ ಯಜ್ಞಾಭಿಮಾನಿಗಳಾದ ದೇವತೆಗಳ ಸಮೂಹಗಳೂ ಹುಟ್ಟಿದುವು ।೧೮॥೧೯॥

ವಾಸುದೇವನದೆಶೆಯಿಂದ ಪುನಃ ಸೃಷ್ಟಿಯನ್ನು ಹೇಳುತ್ತಾರೆ—

ಮೂ ॥ ಪುನಶ್ಚ ಮಾಯಾ ತ್ರಿವಿಧಾ ಬಭೂವ
ಸತ್ವಾದಿರೂಪೈರಥ ವಾಸುದೇವಾತ್ ॥
ಸತ್ವಾತ್ಮಿಕಾಯಾಂ ಸ ಬಭೂವ ತಸ್ಮಾತ್
ಸ ವಿಷ್ಣು ನಾಮೈವ ನಿರಂತರೋಽಪಿ ॥ ೨೦ ॥

ಅ ॥ ಮತ್ತು ಕೂಡ (ಸೃಷ್ಟಿಯನ್ನು ಮಾಡುವುದಕ್ಕಾಗಿ) ಮಾಯಾದೇವಿಯು ಸತ್ವಾದಿ ರೂಪಗಳಿಂದ ಮೂರುರೂಪವುಳ್ಳವಳು ಆದಳು. ಆ ಮೇಲೆ ಸತ್ವಾಭಿಮಾನಿನಿಯಾದ ಶ್ರೀದೇವಿಯಲ್ಲಿ ವಾಸುದೇವನದೆಶೆಯಿಂದ ಆ ನಾರಾಯಣನು ಭೇದರಹಿತನಾದಾಗ್ಯೂ ವಿಷ್ಣುನಾಮಕನಾಗಿಯೇ (ರೂಪಾಂತರದಿಂದ ಅದನು)॥೨೦॥

ಮೂ ॥ ರಜಸ್ತನೌ ಚೈವ ವಿರಿಂಚ ಆಸೀತ್
ತಮಸ್ತನೌ ಶರ್ವ ಇತಿ ತ್ರಯೋಽಸ್ಮಾತ್ ॥
ಏತೇ ಹಿ ದೇವಾಃ ಪುನರಂಡಸೃಷ್ಟಾ-
ವಶಕ್ನುವಂತೋ ಹರಿಮೇತ್ಯ ತುಷ್ಟುವುಃ ॥೨೧॥

ಅ ॥ ವಾಸುದೇವನದೆಶೆಯಿಂದ ರಜೋಭಿಮಾನಿನಿಯಾದ ಭೂದೇವಿಯಲ್ಲಿ ವಿರಿಂಚನಾಮಕನು ಆದನು. ವಾಸುದೇವನದೆಶೆಯಿಂದ ತಮೋಭಿಮಾನಿನಿಯಾದ ದುರ್ಗಾದೇವಿಯಲ್ಲಿ ರುದ್ರನು ಹುಟ್ಟಿದನು. ಈ ಪ್ರಕಾರವಾಗಿ ಈ ವಾಸುದೇವನದೆಶೆಯಿಂದ ಮೂವರು ವಿಷ್ಣು-ವಿರಿಂಚ-ಶರ್ವರು ಹುಟ್ಟಿದರು. (ಈಗ ಬ್ರಹ್ಮಾಂಡೋತ್ಪತ್ತಿಯನ್ನು ಹೇಳುವುದಕ್ಕಾಗಿ ತತ್ವದೇವತೆಗಳ ಸ್ತುತಿಯನ್ನು ಹೇಳುತ್ತಾರೆ.) ಈ ತತ್ವಾಭಿಮಾನಿದೇವತೆಗಳು ಅಂಡಸೃಷ್ಟಿಯಲ್ಲಿ ಮತ್ತು ಅಸಮರ್ಥರಾಗಿ ಶ್ರೀ ಹರಿಯನ್ನು ಹೊಂದಿ ಸ್ತೋತ್ರಮಾಡಿದರು ॥೨೧॥

ಮೂ ॥ ತ್ವನ್ಮೋ ಜಗಚ್ಚಿತ್ರವಿಚಿತ್ರಸರ್ಗ
ನಿಃಸೀಮಶಕ್ತಿಃ ಕುರು ಸನ್ನಿಕೇತನಂ ॥
ಇತಿ ಸ್ತುತಸ್ತೈಃ ಪುರುಷೋತ್ತಮೋಽಸೌ
ಸ ವಿಷ್ಣುನಾಮಾ ಶ್ರಿಯಮಾಪ ಸೃಷ್ಟಯೇ ॥೨೨॥

ಅ ॥ ಜಗತ್ತಿನ ಆಶ್ಚರ್ಯರೂಪವಾದ ನಾನಾಪ್ರಕಾರವಾದ ಸೃಷ್ಟಿಯಲ್ಲಿ ಅಪರಿಮಿತವಾದ ಶಕ್ತಿಯುಳ್ಳ ನೀನು ಸಮೀಚೀನವಾದ ಮಂದಿರವನ್ನು ಮಾಡು. ಈ ಪ್ರಕಾರ ದೇವತೆಗಳಿಂದ ಸ್ತೋತ್ರಮಾಡಿಸಿಕೊಳ್ಳಲ್ಪಟ್ಟ ಪುರುಷೋತ್ತಮನು ಆ ವಿಷ್ಣುನಾಮಕನಾಗಿ ಸೃಷ್ಟಿಗಾಗಿ ಲಕ್ಷ್ಮೀದೇವಿಯನ್ನು ಹೊಂದಿದನು ॥೨೨॥

ಮೂ ॥ ಸುಷಾವ ಸೈನಾಂಡಮಧೋಕ್ಷಜಸ್ಯ
ಶುಷ್ಮಂ ಹಿರಣ್ಯಾತ್ಮಕಮುಂಬುಮಧ್ಯೇ ॥
ತಸ್ಮಿನ್ ಪ್ರವಿಷ್ಟಾ ಹರಿಣೈವ ಸಾರ್ಧಂ
ಸರ್ವೇ ಸುರಾಸ್ತಸ್ಯ ಬಭೂವ ನಾಭೇಃ ॥
ಲೋಕಾತ್ಮಕಂ ಪದ್ಮಮಮುಷ್ಯಂ ಮಧ್ಯೇ
ಪುನರ್ವಿರಿಂಚೋಽಜನಿ ಸದ್ಗುಣಾತ್ಮಾ ॥೨೩॥

ಅ ॥ ಆ ಶ್ರೀ ದೇವಿಯೇ ಶ್ರೀ ಹರಿಯ ವೀರ್ಯರೂಪವಾದ ಹಿರಣ್ಯಾತ್ಮಕವಾದ ಅಂಡವನ್ನು ನೀರಿನ ಮಧ್ಯದಲ್ಲಿ ಹಾಕಿದಳು. ಆ ಬ್ರಹ್ಮಾಂಡದಲ್ಲಿ ಶ್ರೀ ಹರಿಯಿಂದ ಕೂಡಿಕೊಂಡೇ ಎಲ್ಲಾ ದೇವತೆಗಳೂ ಪ್ರವಿಷ್ಟರಾಗಿರುವರು. (ಬ್ರಹ್ಮಾಂಡದ ಒಳಗಿನ ಸೃಷ್ಟಿಯನ್ನು ಹೇಳುತ್ತಾರೆ)- ಆ ಶ್ರೀ ಹರಿಯ ನಾಭಿಯದೆಶೆಯಿಂದ ಲೋಕಕ್ಕೆ ಆಧಾರಭೂತವಾದ ಕಮಲವು ಉಂಟಾಯಿತು. ಅದರ ಮಧ್ಯದಲ್ಲಿ ಪುನಃ ಸದ್ಗುಣಗಳಿಗೆ ಸ್ವಾಮಿಯಾದ ಬ್ರಹ್ಮನು ಹುಟ್ಟಿದನು ॥೨೩॥

ದೇವತೆಗಳಿಗೆ ಮೊದಲು ಸೃಷ್ಟಿಸಿದ ಅತಿ ಸೂಕ್ಷ್ಮಗಳಾದ ದೇಹಗಳಲ್ಲಿಯೂ ಪುನಃಪುನಃ ಉತ್ಪತ್ತಿಯಿಂದ ಕಾಂಸ್ಯಕಾರರು ಮಾಡತಕ್ಕ ಮೃತ್ತಿಕಾಲೇಪನದಂತೆ ಮತ್ತೂ ಮತ್ತು ಆವಾವ ದೇಹಕ್ಕೆ ಕ್ರಮಿಕವಾದ ದೇಹಾಂತರಪ್ರಾಪ್ತಿಯಲ್ಲಿ ಕ್ರಮವಾಗಿ ಉಪಚಯವಾಗುತ್ತದೆ. ಇದೇವೇ ಉತ್ಪತ್ತಿಯು. ಮಧ್ಯಮಧ್ಯದಲ್ಲಿ ಪೂರ್ವದೇಹಕ್ಕೆ ವಿನಾಶವನ್ನು ಆಶಂಕಿಸಕೂಡದು. ಆದುದರಿಂದಲೇ 'ಸೂಕ್ಷ್ಮಸೃಷ್ಟಿ–ಸ್ಥೂಲಸೃಷ್ಟಿ' ಎಂದು ಪುರಾಣಗಳಲ್ಲಿಯೂ ಉಕ್ತವಾಗಿದೆ ಎನ್ನುತ್ತಾರೆ.

ಮೂ ॥ ತಸ್ಮಾತ್ ಪುನಃ ಸರ್ವಸುರಾಃ ಪ್ರಸೂತಾಃ
ತೇ ಜಾನಮಾನಾ ಅಪಿ ನಿರ್ಣಯಾಯ ॥
ನೀಸೃತ್ಯ ಕಾಯಾದುತ ಪದ್ಮಯೋನೇಃ
ಸಂಪ್ರಾವಿಶನ್ ಕ್ರಮಶೋ ಮಾರುತಾಂತಾಃ ॥೨೪॥

ಅ ॥ ಆ ಬ್ರಹ್ಮನದೆಶೆಯಿಂದ ಬ್ರಹ್ಮಾಂಡದೊಳಗೆ ಎಲ್ಲಾ ದೇವತೆಗಳೂ ಹುಟ್ಟಿರುತ್ತಾರೆ, ಅವರು ವಾಯುದೇವರಿಗೆ ಉತ್ತಮೋತ್ತಮತ್ವವನ್ನು ತಿಳಿದವರಾದಾಗ್ಯೂ ವಾಯುಪರ್ಯಂತವಾಗಿರತಕ್ಕ ಎಲ್ಲಾ ದೇವತೆಗಳೂ ಜನರಿಗೆ ನಿರ್ಣಯವಾಗುವುದಕ್ಕಾಗಿ ಬ್ರಹ್ಮನ (ಪದ್ಮದಿಂದ ಹುಟ್ಟಿರುವ) ಶರೀರದೆಶೆಯಿಂದ ವಾಗಾದಿಕ್ರಮದಿಂದ ಹೊರಟು ಆ ಮೇಲೆ ಕ್ರಮದಿಂದ ಪ್ರವೇಶಮಾಡಿದರು. (ಶರೀರದಿಂದ ವಾಯುದೇವರು ಸರ್ವರಕ್ಕಿಂತ ಕೊನೆಗೆ ಹೊರಟುಹೋದರು. ಸರ್ವರಕ್ಕಿಂತ ಕೊನೆಗೆ ಪ್ರವೇಶವು ಎಂದೂ ತಿಳಿಯತಕ್ಕುದು.) ॥೨೪॥

ಮೂ ॥ ಪಪಾತ ವಾಯೋರ್ಗಮನಾಚ್ಛರೀರಂ
ತಸ್ಯೈವ ಚಾವೇಶತ ಉತ್ಥಿತಂ ಪುನಃ ॥
ತಸ್ಮಾತ್ ಸ ಏಕೋ ವಿಬುಧಪ್ರಧಾನ
ಇತ್ಯಾಶ್ರಿತಾ ದೇವಗಣಾಸ್ತಮೇವ ॥೨೫॥

ಅ ॥ ಆ ವಾಯುದೇವರ ಗಮನದಿಂದಲೇ ಶರೀರವು ಬಿದ್ದಿತು. ಆ ವಾಯುದೇವರ ಪ್ರವೇಶದಿಂದಲೇ ಪುನಃ ಎದ್ದಿತು. ಬೀಳಲಿಕ್ಕೂ ಏಳಲಿಕ್ಕೂ ಕಾರಣನಾಗಿರುವುದರಿಂದ ಆ ವಾಯುದೇವರು ಮುಖ್ಯರಾದವರು; ದೇವತೆಗಳಲ್ಲಿ ಪ್ರಧಾನರಾದವರು. ಹೀಗೆ ದೇವತೆಗಳ ಸಮೂಹಗಳು ವಾಯುದೇವರನ್ನೇ ಆಶ್ರಯಿಸಿರುವುವು. ॥೨೫॥

ಹರಿ–ವಿರಿಂಚರು ದೇಹದಲ್ಲಿ ಇದ್ದರೂ ಶ್ರೀ ವಾಯುವಿನ ಗಮನದಿಂದ ದೇಹಪಾತವೂ ಆಗಮನದಿಂದ ಉತ್ಥಾನವೂ ಆಗುವುದಾದರೆ ಆಗ ಶ್ರೀ ಹರಿ–ಚತುರ್ಮುಖರಿಗೂ ವಾಯುವೇ ಅಧಿಪತಿಯಾಗಬೇಕಾಗುವನು, ಎಂದರೆ–

ಮೂ ॥ ಹರೇರ್ವಿರಿಂಚಸ್ಯ ಚ ಮಧ್ಯಸಂಸ್ಥಿತೇಃ
ತದನ್ಯದೇವಾಧಿಪತಿಃ ಸ ಮಾರುತಃ ॥
ತತೋ ವಿರಿಂಚೋ ಭುವನಾನಿ ಸಪ್ತ
ಸಸಪ್ತಕಾನ್ಯಾಶು ಚಕಾರ ಸೋಽಬ್ಜಾತ್ ॥೨೬॥

ಅ ॥ ಆ ವಾಯುದೇವರು ಶ್ರೀಹರಿಗೂ ಬ್ರಹ್ಮನಿಗೂ ಇವರಿಬ್ಬರಿಗೆ ಮಧ್ಯದಲ್ಲಿ ಸ್ಥಿತಿ ಇದ್ದಪ್ರಯುಕ್ತ (ಅಂದರೆ ಪರೀಕ್ಷೆಗೋಸ್ಕರ ಅವರಿಬ್ಬರೂ ಉದಾಸೀನರಾಗಿರುವುದರಿಂದ)

ಅವರಿಬ್ಬರಿಂದ ಇತರರಾದ ದೇವತೆಗಳಿಗೆ ಸ್ವಾಮಿಯು. ಪರೀಕ್ಷಾಮಾಡಿದಮೇಲೆ ಆ ಬ್ರಹ್ಮನು ಏಳರಿಂದ ಸಹಿತಗಳಾದ ಏಳು ಲೋಕಗಳನ್ನು (ಅಂದರೆ ೧೪ ಲೋಕಗಳನ್ನೂ) ಪ್ರಯತ್ನವಿಲ್ಲದೆ ಕಮಲದೆಳೆಯಿಂದ ಸೃಷ್ಟಿಸಿದರು ॥೨೬॥

ಮೂ ।। ತಸ್ಮಾಚ್ಚ ದೇವಾ ಋಷಯಃ ಪುನಶ್ಚ
ವೈಕಾರಿಕಾದ್ಯಾಃ ಸಶಿವಾ ಬಭೂವುಃ ॥ ೨೭ ॥

ಅ ॥ ಬ್ರಹ್ಮನದೆಳೆಯಿಂದ ವೈಕಾರಿಕಾಹಂಕಾರದಿಂದ ಹುಟ್ಟಿರುವ ಇಂದ್ರಿಯಾಭಿಮಾನಿ ದೇವತೆಗಳೂ, ತೈಜಸಾಹಂಕಾರದಿಂದ ಹುಟ್ಟಿರುವ ಪ್ರಾಣಾದಿಗಳೂ, ತಾಮಸಾಹಂಕಾರದಿಂದ ಹುಟ್ಟಿರುವ ಗಣೇಶಾದಿಗಳೂ, ರುದ್ರನಿಂದ ಕೂಡಿರುವ ದೇವತೆಗಳೂ ಋಷಿಗಳೂ ಕೂಡ ಪುನಃ ಹುಟ್ಟಿರುವರು ॥೨೭॥

ಯಾರು ಯಾರಿಂದ, ಯಾರು ಯಾರಿಗೆ ಸೃಷ್ಟಿಯು ಎಂದರೆ

ಮೂ ॥ ಅಗ್ರೆ ಶಿವೋಽಹಂ ಭವ ಏವ ಬುದ್ಧೇ-
ರುಮಾ ಮನೋಜ್ಞೌ ಸಹ ಶಕ್ರಕಾಮೌ ॥
ಗುರುರ್ಮನುರ್ದಕ್ಷ ಉತಾನಿರುದ್ಧಃ;
ಸಹೈವ ಶಚ್ಯಾ (ಪಶ್ಚಾತ್) ಮನಸಃ ಪ್ರಸೂತಾಃ ॥೨೮॥

ಅ ॥ ಆದಿಯಲ್ಲಿ ರುದ್ರನು ಅಹಂಕಾರದಿಂದ ಹುಟ್ಟಿದವನು. ಬುದ್ಧಿಯಿಂದ ಪಾರ್ವತೀ ದೇವಿಯು ಬೃಹಸ್ಪತ್ಯಾಚಾರ್ಯರು,ಮೊದಲಾದವರು ಹುಟ್ಟಿದರು.ಆದಿಯಲ್ಲಿ ದೇವೇಂದ್ರ,ಮನ್ಮಥರು ಒಟ್ಟಿಗೇನೇ ಮನಸ್ಸಿನಿಂದ ಹುಟ್ಟಿದರು ಆಮೇಲೆ ಮನಸ್ಸಿನಿಂದ ಬೃಹಸ್ಪತ್ಯಾಚಾರ್ಯರು ಮನುವು, ದಕ್ಷಪ್ರಜಾಪತಿಯು, ಅನಿರುದ್ಧನೂ ಶಚಿಯಿಂದ ಕೂಡಿಕೊಂಡೇ ಹುಟ್ಟಿದರು,

ವಿಶೇಷಾಂಶ— (1) ಅಂತಃಕರಣವು ಅಹಂಕಾರ, ಬುದ್ಧಿ, ಮನಸ್ಸು, ಚೇತನಾ, ಚಿತ್ತ ಹೀಗೆ ಅನೇಕ ಭೇದಗಳಿಂದ ಕೂಡಿದ್ದು. (2) **'ಅಹಮಸ್ಮಿ ಪ್ರಥಮಜಾ ಋತಸ್ಯ'** ಎಂದು ಯಾವಾಗ ಬ್ರಹ್ಮನು 'ದಾಸಃ ಅಹಂ' ಎಂದು ಅಹಂಮತಿಯಾಯಿತೋ, ಆಗ ಬ್ರಹ್ಮಸಂಬಂಧಿಯಾದ ಅಹಂಮತಿಯದ್ದೆಶೆಯಿಂದ ರುದ್ರನು ಅಹಂಕಾರದಿಂದ ಹುಟ್ಟಿದವನು. (3) ಶಿವಪದದಿಂದ ಶಿವಾತ್ಮಕನಾದ ಶೇಷನನ್ನೂ, ಶಿವಸಾಮಾನಿಕನಾದ ಗರುಡನನ್ನೂ ಇಟ್ಟುಕೊಳ್ಳಬೇಕು ॥೨೮॥

ಮೂ ॥ ಚಕ್ಷುಃಶ್ರುತಿಭ್ಯಾಂ ಸ್ವರ್ಕಾತ್ಸಹೈವ
ರವಿಃ ಶಶೀ ಧರ್ಮ ಇಮೇ ಪ್ರಸೂತಾಃ
ಜಿಹ್ವಾಭವೋ ವಾರಿಪತಿರ್ನಸೋಶ್ಚ
ನಾಸತ್ಯದಸ್ರೌ ಕ್ರಮಶಃ ಪ್ರಸೂತಾಃ ॥
ತತಃ ಸನಾದ್ಯಾಶ್ಚ ಮರೀಚಿಮುಖ್ಯಾ
ದೇವಾಶ್ಚ ಸರ್ವೇ ಕ್ರಮಶಃ ಪ್ರಸೂತಾಃ ॥೨೯॥

ಅ ॥ ಚಕ್ಷುಸ್ಸಿನಿಂದಲೂ, ಕಿವಿಗಳಿಂದಲೂ, ಸ್ಪರ್ಶದಿಂದಲೂ ಕ್ರಮವಾಗಿ ಸೂರ್ಯನೂ, ಚಂದ್ರನೂ, ಧರ್ಮನೂ–ಹೀಗೆ ಇವರು ಏಕಕಾಲದಲ್ಲಿಯೇ ಹುಟ್ಟಿರುವರು. ವರುಣನು ನಾಲಿಗೆಯಿಂದ ಹುಟ್ಟಿದವನು. ನಾಸಿಕೆ (ಮೂಗು) ಗಳಿಂದ ನಾಸತ್ಯನು, ದಸ್ರನು— ಹೀಗೆ ಇಬ್ಬರೂ ಕ್ರಮವಾಗಿ ಹುಟ್ಟಿದರು ಆಮೇಲೆ ಸನಕ, ಸನಂದನ, ಸನತ್ಸುಜಾತ ಎನ್ನುವ ಮೂವರೂ, ಮರೀಚಿಋಷಿಯೇ ಪ್ರಧಾನನಾಗಿವುಳ್ಳ ಎಲ್ಲಾ ದೇವತೆಗಳೂ ಕ್ರಮದಿಂದ ಹುಟ್ಟಿರುವರು ॥೨೯॥

ಮೂ ॥ **ತತೋಽಸುರಾದ್ಯಾ ಋಷಯೋ ಮನುಷ್ಯಾ**
ಜಗದ್ವಿಚಿತ್ರಂ ಚ ವಿರಿಂಚತೋಽಭೂತ್ ॥೩೦॥

ಅ ॥ ಆ ಮೇಲೆ ಅಸುರ–ರಾಕ್ಷಸ ಮೊದಲಾದವರೂ, ಋಷಿಗಳೂ, ಮನುಷ್ಯರೂ, ಗೋಗಜಾದಿ ವಿಚಿತ್ರವಾದ ಜಗತ್ತೂ ಬ್ರಹ್ಮನಿಂದ ಹುಟ್ಟಿತು ॥೩೦॥

ತಾರತಮ್ಯದಿಂದ ಇದೇವೇ ಸೃಷ್ಟಿಗೆ ಜ್ಞಾಪಕವಾಗಿವೆ ಎನ್ನುತ್ತಾರೆ–

ಮೂ ॥ **ಉಕ್ತಕ್ರಮಾತ್ಪೂರ್ವಭವಶ್ಚ (ಸ್ತು) ಯೋ ಯೆಃ**
ಶ್ರೇಷ್ಠ ಸ ಸ ಹ್ಯಾಸುರಕಾನೃತೇ ಚ ॥
ಪೂರ್ವಶ್ಚ (ಸ್ತು) ಪಶ್ಚಾತ್ಪುನರೇವ ಜಾತೋ
ನಾಶ್ರೈಷ್ಠ್ಯ (ಷ್ಠ)ತಾಮೇತಿ ಕಥಂಚಿದಸ್ಯ ॥
ಗುಣಾಸ್ತು ಕಾಲಾತ್ಪಿತೃನೂತೃದೋಷಾತ
ಸ್ವಕರ್ಮತೋ ವಾಭಿಭವಂ ಪ್ರಯಾಂತಿ ॥೩೧॥

ಅ ॥ ಹಿಂದೆ ಹೇಳಿದ ಕ್ರಮದಿಂದ (ಪಾದ್ಮಸೃಷ್ಟಿಯಲ್ಲಿ) ಯಾರು ಯಾರು ಮೊದಲು ಹುಟ್ಟಿದವರೋ, ಅವರವರು ಶ್ರೇಷ್ಠರು. (ಇದಕ್ಕೆ ಅಪವಾದವನ್ನು ಹೇಳುತ್ತಾರೆ). ಅಸುರರನ್ನು ಹೊರತು ಮೊದಲು ಹುಟ್ಟಿದವನು ಶ್ರೇಷ್ಠನು, (ಪಾದ್ಮಸೃಷ್ಟಿಯಲ್ಲಿ ಮೊದಲು ಹುಟ್ಟಿದವನು ಯಾವುದಾದರೊಂದು ಸೃಷ್ಟಿಯಲ್ಲಿ ಮೇಲೆ ಹುಟ್ಟಿದರೆ ಆಗ ಹೇಗೆಂದರೆ—) ಪಾದ್ಮಸೃಷ್ಟಿಯಲ್ಲಿ ಮೊದಲು ಹುಟ್ಟಿದವನು ಪುನಃ ಅವಾಂತರ ಸೃಷ್ಟಿಯಲ್ಲಿ ಮತ್ತೆ ಹುಟ್ಟಿದರೆ (ಅಂದರೆ, ಹೇಳಿದ ಕ್ರಮದಿಂದ ಅನ್ಯಥಾ ಹುಟ್ಟಿದವನು). ಯಾವ ಪ್ರಕಾರದಿಂದಲೂ ಅಶ್ರೇಷ್ಠತ್ವವನ್ನು ಹೊಂದುವುದಿಲ್ಲ. ಅವಾಂತರ ಸೃಷ್ಟಿಯಲ್ಲಿ ಮತ್ತೆ ಹುಟ್ಟಿದವನ ಜ್ಞಾನ – ಆನಂದಾದಿ ಗುಣಗಳು ದ್ವಾಪರ–ಕಲಿಯುಗಾದಿ ಕಾಲಬಲದಿಂದಲಾಗಲೀ, ಮನುಷ್ಯಾನ್ನಪರಿಣತರೇತೋ ಯೋನಿಸಂಬಂಧ ಮೊದಲಾದ ದೋಷದಿಂದಲಾಗಲೀ, ಸ್ವಾರ್ಜಿತವಾದ ಪ್ರಾರಬ್ಧಕರ್ಮ ಸಂಬಂಧದಿಂದಲಾಗಲೀ ಅನಭಿವ್ಯಕ್ತಿಯನ್ನು ಹೊಂದುತ್ತಾನೆ ॥೩೧॥

ಲಯಕ್ರಮವೇ ಉತ್ಪತ್ತಿಕ್ರಮವು ಏಕೆ ಆಗಲಾರದೆಂದರೆ—

ಮೂ ॥ **ಲಯೋ ಭವೇದ್ವ್ಯತ್ಕ್ರಮತೋ ಹಿ ತೇಷಾಂ**
ತತೋ ಹರಿಃ ಪ್ರಲಯೇ ಶ್ರೀಸಹಾಯಃ ॥
ಶೇತೇ ನಿಜಾನಂದಮನುಂದಸಾಂದ್ರ
ಸಂದೋಹಮೇಕೋಽನುಭವನ್ನನಂತಃ ॥೩೨॥

ಅ ॥ ಯಾವ ಕಾರಣದಿಂದ ದೇವತೆಗಳ ಸಂಹಾರವು ವ್ಯತ್ಕ್ರಮದಿಂದ (ಅಂದರೆ ನೀಚರನ್ನಾರಂಭಿಸಿ) ಆಗುವುದೊ, (ಆವ ಕಾರಣ ಉತ್ಪತ್ತಿಕ್ರಮವೇ ತಾರತಮ್ಯಕ್ರಮಕ್ಕೆ ನಿಯಾಮಕವು). ಆ ಕಾರಣ ಪ್ರಲಯಕಾಲದಲ್ಲಿ ಶ್ರೀ ಸಹಾಯಕನಾಗಿ ಇರುತ್ತಾನೆ. ಶ್ರೀ ಹರಿಯು ಪೂರ್ಣವಾದ, ನಿಬಿಡವಾದ, ಸಮುದಾಯರೂಪವಾದ, ಸ್ವರೂಪಭೂತವಾದ ಆನಂದವನ್ನು ಒಬ್ಬನೇ ಅನುಭವಿಸುತ್ತಾ ಮೆರೆಯುತ್ತಾನೆ ॥೩೨॥

ಮೂ ॥ ಅನಂತಶೀರ್ಷಾಸ್ಯಕರೋರುಪಾದಃ
ಸೋಽನಂತಮೂರ್ತಿಃ ಸ್ವಗುಣಾನನಂತಾನ್ ॥
ಅನಂತಶಕ್ತಿಃ ಪರಿಪೂರ್ಣಭೋಗೋ
ಭುಂಜನ್ನ ಜಸ್ರಂ ನಿಜರೂಪ ಆಸ್ತೇ ॥೩೩॥

ಅ ॥ ಅಪರಿಮಿತಗಳಾದ ಶಿರಸ್ಸುಗಳೂ, ಮುಖಗಳೂ, ಕೈಗಳೂ, ಉತ್ಕೃಷ್ಟಗಳಾದ ಪಾದಗಳೂ ಇವುಗಳುಳ್ಳ, ಅನಂತಾನಂತ ಅವತಾರಗಳುಳ್ಳ, ಅಪರಿಮಿತ ಶಕ್ತಿಯುಳ್ಳ, ಪರಿಪೂರ್ಣಗಳಾದ ಭೋಗಗಳುಳ್ಳ ಆ ಶ್ರೀ ನಾರಾಯಣನು ಅನಂತಗಳಾದ ಜ್ಞಾನಾನಂದಾದಿ ಗುಣಗಳನ್ನು ಭೋಗಿಸುತ್ತಾ, ನಿರಂತರದಲ್ಲಿಯೂ ನಿಜರೂಪನಾಗಿ ಇರುತ್ತಾನೆ ॥೩೩॥

ಹಾಗಾದರೆ ಪ್ರಲಯಕಾಲದಲ್ಲಿ ಸರ್ವರೂ ನಾಶಹೊಂದುತ್ತಿರಲು, ಪುನಃ ಸೃಷ್ಟಿಯು ಇದೆಯೋ, ಇಲ್ಲವೋ ಎಂದಾಕಾಂಕ್ಷಾ ಬಂದರೆ—

ಮೂ ॥ ಏವಂ ಪುನಃ ಸೃಜತೇ ಸರ್ವಮೇತ
ದನಾದ್ಯನಂತೋ ಹಿ ಜಗತ್ಪ್ರವಾಹಃ ।
ನಿತ್ಯಾ ಹಿ(ಶ್ಚ) ಜೀವಾಃ ಪ್ರಕೃತಿಶ್ಚ ನಿತ್ಯಾ
ಕಾಲಶ್ಚ ನಿತ್ಯಃ ಕಿಮು ದೇವದೇವಃ ॥೩೪

ಅ ॥ ಹೀಗೆಯೇ ಶ್ರೀ ಹರಿಯು ಪುನಃ ಈ ಸರ್ವಜಗತ್ತನ್ನೂ ಸೃಷ್ಟಿಮಾಡುತ್ತಾನೆ. ಜಗತ್ಪ್ರವಾಹವು ಅನಾದ್ಯನಂತವಾದುದು, ಜೀವರೂ ನಿತ್ಯರು, ಪ್ರಕೃತಿಯೂ ನಿತ್ಯವಾದುದು, ಕಾಲವೂ, ಶ್ರೀಹರಿಯೂ ನಿತ್ಯನೆಂದು ಏನು ಹೇಳಬೇಕಾದ್ದು? ॥೩೪॥

ಮೂ ॥ ಯಥಾ ಸಮುದ್ರಾತ್ಸರಿತಃ ಪ್ರಜಾತಾಃ
ಪುನಸ್ತಮೇವ ಪ್ರವಿಶಂತಿ ಶಶ್ವತ್ ॥
ಏವಂ ಹರೇರ್ನಿತ್ಯಜಗತ್ಪ್ರವಾಹ
ಸ್ತಮೇವ ಚಾಸೌ ಪವಿಶತ್ಯಜಸ್ರಂ "೩೫॥

ಅ ॥ ಹೇಗೆ ಸಮುದ್ರದೆಶೆಯಿಂದ ನದಿಗಳು ಹುಟ್ಟುತ್ತವೋ, ಪುನಃ ಸಮುದ್ರವನ್ನೇ ಯಾವಾಗಲೂ ಪ್ರವೇಶ ಮಾಡುತ್ತವೋ, ಹಾಗೆಯೇ ಶ್ರೀಹರಿಯಿಂದ ನಿತ್ಯವಾದ ಜಗತ್ಪ್ರವಾಹವು ಹುಟ್ಟುತ್ತದೆ; ಶ್ರೀ ಹರಿಯನ್ನೇ ನಿರಂತರದಲ್ಲಿಯೂ ಜಗತ್ಪ್ರವಾಹವು ಪ್ರವೇಶಮಾಡುತ್ತದೆ॥೩೫॥

ಸೃಷ್ಟಿ-ಪ್ರಲಯಗಳಿಗೆ ಅವಶ್ಯವಾಗಿ ಜ್ಞೇಯತ್ವವನ್ನು ತಿಳಿಸುವುದಕ್ಕಾಗಿ ಜ್ಞಾನಫಲವನ್ನು ಹೇಳುತ್ತಾರೆ—

ಮೂ ॥ ಏವಂ ವಿದುರ್ಯೋ ಪರಮಾಮನಂತಾ
ಮಜಸ್ರ ಶಕ್ತಿಂ ಪುರುಷೋತ್ತಮಸ್ಯ ॥
ತಸ್ಯ ಪ್ರಸಾದಾದಥ ದಗ್ಧದೋಷಾ
ಸ್ತಮಾಪ್ನುವಂತ್ಯಾಶು ಪರಂ ಸುರೇಶಂ॥೩೬॥

ಅ ॥ ಉತ್ಪತ್ತಿರಹಿತನಾದ, ಪುರುಷೋತ್ತಮನಾದ ಶ್ರೀಹರಿಯ ಅನಂತವಾದ, ಉತ್ತಮವಾದ ಶಕ್ತಿಯನ್ನು ಯಾರು ತಿಳಿಯುತ್ತಾರೋ, ಅವರು ವೈರಾಗ್ಯ–ಭಕ್ತಿ–ಅಪರೋಕ್ಷಜ್ಞಾನವು ಹುಟ್ಟಿದ ಮೇಲೆ ಆತನ ಅನುಗ್ರಹದಿಂದ ಸುಡಲ್ಪಟ್ಟ ದೋಷವುಳ್ಳವರಾಗಿ ಸರ್ವೋತ್ತಮನಾದ, ದೇವಶ್ರೇಷ್ಠನಾದ ಶ್ರೀ ಹರಿಯನ್ನು ಶೀಘ್ರದಲ್ಲಿ ಹೊಂದುತ್ತಾರೆ (ಅಂದರೆ ಆದಿಯಲ್ಲಿ ದೇವತೆಗಳನ್ನು ಹೊಂದಿ ಅಂತ್ಯದಲ್ಲಿ ಶ್ರೀ ಹರಿಯನ್ನು ಹೊಂದುತ್ತಾರೆ) ॥೩೬॥

ದೇವತೆಗಳಿಗೆ ಮುಕ್ತಿಯಾದ ಮೇಲೆ ಪುನಃ ಆವಾವ ಪದಾಧಿಪತ್ಯವು ಹೇಗೆ ಯಾವುದರಿಂದ ಎಂದರೆ—

ಮೂ ॥ ದೇವಾನಿಮಾನ್ಮುಕ್ತಸಮಸ್ತದೋಷಾನ್
ಸ್ವಸನ್ನಿಧಾನೇ ವಿನಿವೇಶ್ಯ ದೇವಃ ॥
ಪುನಸ್ತದನ್ಯಾನಧಿಕಾರಯೋಗ್ಯಾಂ
ಸ್ತತ್ತದ್ಗುಣಾನೇವ ಪದೇ ನಿಯುಂಕ್ತೇ ॥೩೭॥

ಅ ॥ ಶ್ರೀ ಹರಿಯು ಹೋಗಲ್ಪಟ್ಟ ಸಮಸ್ತ ದೋಷಗಳುಳ್ಳ ಈ ದೇವತೆಗಳನ್ನು ತನ್ನ ಸಮೀಪದಲ್ಲಿ ಕೂಡಿಸಿ ಪುನಃ ಮುಕ್ತರಿಂದ ಇತರರಾದ, ಆವಾವ ಅಧಿಕಾರಕ್ಕೆ ಯೋಗ್ಯರಾದ ಋಜು ಮೊದಲಾದ ಗಣಗಳನ್ನೇ ಬ್ರಹ್ಮ-ಶೇಷಾದಿ ಪದದಲ್ಲಿ ನಿಯೋಜಿಸುತ್ತಾನೆ ॥೩೭॥

ಇಷ್ಟರವರೆಗೆ ಸರ್ಗವನ್ನು ಹೇಳಿದರು. ಇನ್ನು ಕಶ್ಯಪಋಷಿಯಿಂದ ಆಗತಕ್ಕ ಅನುಸರ್ಗವನ್ನು ಹೇಳುತ್ತಾರೆ -

ಮೂ ॥ ಪುನಶ್ಚ ಮಾರೀಚತ ಏವ ದೇವಾ
ಜಾತಾ ಅದಿತ್ಯಾಮಸುರಾಶ್ಚ ದಿತ್ಯಾಂ ॥
ಗಾವೋ ಮೃಗಾಃ ಪಕ್ಷ್ಯುರಗಾದಿಸತ್ವಾ
ದಾಕ್ಷಾಯಣೇಷ್ವೇವ ಸಮಸ್ತಶೋಽಪಿ ॥೩೮॥

ಅ ॥ ಮತ್ತು ಕೂಡ ಮಾರೀಚಋಷಿಯ ಮಗನಾದ ಕಶ್ಯಪನದೆಶೆಯಿಂದಲೇ ಅದಿತಿ ದೇವಿಯಲ್ಲಿ ದೇವತೆಗಳು ಹುಟ್ಟಿದರು ದಿತಿದೇವಿಯಲ್ಲಿ ಅಸುರರು ಹುಟ್ಟಿದರು. ವಿನತಾದಿಗಳಲ್ಲಿಯೇ ಗೋವುಗಳೂ, ಮೃಗಗಳೂ, ಪಕ್ಷಿಗಳೂ, ಸರ್ಪಗಳೂ ಇವುಗಳೇ ಮೊದಲಾದ ಪ್ರಾಣಿಗಳೆಲ್ಲವೂ ಹುಟ್ಟಿದವು ॥೩೮॥

ಈ ಶ್ರೀ ಹರಿಯು ಅವತಾರಕಥೆಯನ್ನು ಹೇಳುತ್ತಾರೆ—

ಮೂ ॥ ತತಃ ಸ ಮಗ್ನಾನುಲುಖೋ ಲಯೋದಧೌ
(1) ಮಹೀಂ ವಿಲೋಕ್ಯಾಶು ಹರಿರ್ವರಾಹಃ ॥
ಭೂತ್ವಾ ವಿರಿಂಚಾರ್ಥಮಿಮಾಂ ಸಶೈಲಾ
ಮುದ್ಧೃತ್ಯ ವಾರಾಮುಪರಿ ನ್ಯಧಾತ ಸ್ಥಿರಂ ॥೩೯॥

ಅ ॥ ಆಮೇಲೆ ಪ್ರಲಯರಹಿತನಾದ, ಆದಿವರಾಹಭೂತನಾದ ಶ್ರೀ ಹರಿಯು ಆಗಿ, ಲಯೋದಧೌ—ಲಕ್ಷಯೋಜನ ಘನೀಭೂತವಾದ ಭೂಮಿಯ ಕೆಳಗೆ ಉತ್ತರ ಖರ್ಪರವನ್ನು ಆರಂಭಿಸಿ ದಕ್ಷಿಣ ಖರ್ಪರಪರ್ಯಂತ, ಪೂರ್ವ ಖರ್ಪರವನ್ನು ಆರಂಭಿಸಿ ಪಶ್ಚಿಮ ಖರ್ಪರ ಪರ್ಯಂತ ಐವತ್ತುಕೋಟಿ ವಿಸ್ತೀರ್ಣವಾದ ಒಂದು ಲಕ್ಷ ಕಡಿಮೆಯಾದ ಇಪ್ಪತ್ತೈದು ಕೋಟಿಗಳಿಂದ ಕೆಳಗಿನ ಖರ್ಪರಪರ್ಯಂತವಾಗಿ ಘಾತವುಳ್ಳ ಘನೋದಕಾಖ್ಯ ಮಹಾ ಸಮುದ್ರದಲ್ಲಿ ಭಾರದಿಂದ ತಾನೇ ಮುಳುಗಿದ ಭೂಮಿಯನ್ನು ಶೀಘ್ರದಲ್ಲಿ ನೋಡಿ ಪರ್ವತಗಳಿಂದ ಕೂಡಿದ ಈ ಭೂಮಿಯನ್ನು ಎತ್ತಿ ಸ್ಥಿರವು ಹೇಗೆ ಆದೀತೋ ಹಾಗೆ ಘನೋದಕದ ಜಲಗಳ ಮೇಲೆ ಬ್ರಹ್ಮನಿಗೋಸ್ಕರ ಸ್ಥಾಪಿಸಿದನು.

ವಿಶೇಷಾಂಶ — (1) ದಶಾವತಾರಗಳದೆಶೆಯಿಂದ ಮೊದಲೂ ಸೃಷ್ಟಿಸಿದ ಬ್ರಹ್ಮನ ಉಪಕಾರಕ್ಕಾಗಿ ಶ್ವೇತವರಾಹರೂಪದಿಂದ ಶ್ರೀ ಹರಿಯು ಅವತಾರಮಾಡಿರುವನು ॥೩೯॥

ಈಗ ವರಾಹಾವತಾರ ಪ್ರಸಂಗದಿಂದ ಕ್ರಮವನ್ನುಲ್ಲಂಘಿಸಿ ದಶಾವತಾರದಲ್ಲಿ ತೃತೀಯಾವತಾರಭೂತವಾದ ನೀಲವರಾಹರೂಪಿಯ ಕಥೆಯನ್ನು ಪ್ರಸ್ತಾವಿಸುತ್ತಾರೆ— (2)

ಮೂ ॥ ಅಥಾಬ್ಜನಾಭಪ್ರತಿಹಾರಪಾಲೌ
ಶಾಪಾತ್ತ್ರಿಶೋ ಭೂಮಿತಲೇ ಪ್ರ(sಭೌ ಜಾತೌ ॥
ದಿತ್ಯಾಂ ಹಿರಣ್ಯಾವಥ ರಾಕ್ಷಸೌ ಚ
ಸೈತೃಷ್ಣಸೇಯೌ ಚ ಹರೇಃ ಪುರಸ್ತಾತ್ ॥೪೦॥

ಅ ॥ ಆಮೇಲೆ ಪದ್ಮನಾಭನ ದ್ವಾರಪಾಲಕರಾದ ಜಯವಿಜಯರು ಲಕ್ಷ್ಮೀ ಸನಕಾದಿಗಳ ಶಾಪದೆಶೆಯಿಂದ ಭೂಪ್ರದೇಶದಲ್ಲಿ ಮೂರಾವರ್ತಿ ಹುಟ್ಟಿರುವರು. ದಿತಿದೇವಿಯಲ್ಲಿ ಹಿರಣ್ಯಾಕ್ಷ-ಹಿರಣ್ಯಕಶಿಪು ಎನ್ನುವ, ಆಮೇಲೆ ರಾವಣ ಕುಂಭಕರ್ಣರು. ಆಮೇಲೆ ಶ್ರೀಕೃಷ್ಣನ ಸೋದರತ್ತೆಯ ಮಕ್ಕಳಾದ ಶಿಶುಪಾಲ—ದಂತವಕ್ರರಾಗಿಯೂ ಹುಟ್ಟಿದರು. ॥೪೦॥

ಮೂ ॥ ಹತೋ ಹಿರಣ್ಯಾಕ್ಷ ಉದಾರವಿಕ್ರಮೋ
ದಿತೇಃ ಸುತೋ ಯೋsವರಜಃ ಸುರಾರ್ದೇ॥
ಧಾತ್ರಾರ್ಥಿತೇನೈವ ವರಾಹರೂಪಿಣಾ
ಧರೋದ್ಧೃತಾ ಪೂರ್ವಹತೋsಬ್ಜಜೋದ್ಭವೇ ॥೪೧॥

ಅ ॥ ಆವರಿಬ್ಬರ ಮಧ್ಯದಲ್ಲಿ ಅಥವಾ ದಿತಿದೇವಿಯಲ್ಲಿ ಹುಟ್ಟಿದ ಮೇಲೆ ಉತ್ಕೃಷ್ಟವಾದ ಪರಾಕ್ರಮವುಳ್ಳದ್ವಿತೀಯ ಪುತ್ರನಾದ ಯಾವತಮ್ಮನಾದ ಹಿರಣ್ಯಾಕ್ಷನು ದೇವತೆಗಳಿಗೋಸ್ಕರ ಬ್ರಹ್ಮನಿಂದ ಪ್ರಾರ್ಥಿಸಿಕೊಳ್ಳಲ್ಪಟ್ಟ ವರಾಹರೂಪಿಯಾವ ಶ್ರೀಹರಿಯಿಂದಲೇ ಹಿರಣ್ಯಾಕ್ಷನಿಂದ ಮುಳುಗಿಸಿಕೊಳ್ಳಲ್ಪಟ್ಟ ಭೂಮಿಯನ್ನು ಎತ್ತುವ ಕಾಲದಲ್ಲಿ ಸಂಹೃತನಾಗಿರುವನು. (ಹಿರಣ್ಯಾಕ್ಷನನ್ನು

ಆದಿವರಾಹನೇ ಸಂಹರಿಸುವುದರಿಂದ ಪುನಃ ಸಂಹರಿಸಿದ್ದು ಹೇಗೆಂದರೆ –) (ತನ್ನಷ್ಟಕ್ಕೇನೇ ಮುಳುಗಿದ) ಭೂಮಿಯನ್ನು ಎತ್ತುವಾಗ (ಮಾರ್ಗದಲ್ಲಿ ತಡಿಯಲಿಕ್ಕೆ ಬರುವಾಗ) ಮೊದಲು ಸಂಹರಿಸಿಕೊಳ್ಳಲ್ಪಟ್ಟವನು ಬ್ರಹ್ಮನ ಪುತ್ರನು.

ವಿಶೇಷಾಂಶ —(1) ಅವನು ಆದಿ ಹಿರಣ್ಯಾಕ್ಷನು. (2) ಇವನಾದರೂ ಕಶ್ಯಪನ ಪುತ್ರನು. ಬಲತ್ಕಾರದಿಂದ ಭೂಮಿಯನ್ನು ನೀರಿನಲ್ಲಿ ಮುಳುಗಿಸಿದನು. ಆಗ ಭೂಮಿಯನ್ನುದ್ಧರಿಸತಕ್ಕ ದಶಾವತಾರದಲ್ಲಿಯೇ ಸೇರಿದ ಶ್ರೀ ಹರಿಯಿಂದ ಸಂಹೃತನಾದನು. ಇಬ್ಬರಿಗೂ ಹಿರಣ್ಯಾಕ್ಷನೆಂದೇ ಹೆಸರು. ವರಾಹವೆಂದು ಹೆಸರುಳ್ಳ ಭಗವದ್ರೂಪಗಳೇ ಸಂಹಾರಕಗಳು. (3) ಈ ವಿಷಯವು ಬ್ರಹ್ಮಾಂಡದಲ್ಲಿ ಹೇಳಿಯದೆ. **ಬ್ರಹ್ಮಜಸ್ತು ಹಿರಣ್ಯಾಕ್ಷಃ ಪ್ರಥನುಂ ದಂಷ್ಟ್ರಯಾ ಹತಃ । ಸ ಏವ ಸಾರ್ಷದಾವಿಷ್ಟಃ — ಪೂರ್ವಂ ಲಯೋದಧೌ ಮಗ್ನಾಂ ದ್ವಿತೀಯಾಂ ತೇನ ಮಜ್ಜಿತಾಂ । ಭುವಮುದ್ಧರತೈವಾಸೌ ಹರಿಣಾ ಕ್ರೋಡ ಮೂರ್ತಿನಾ** ಇತ್ಯಾದಿ ॥೪೧॥

ಮತ್ಸ್ಯಾವತಾರವನ್ನು ಹೇಳುತ್ತಾರೆ—

ಮೂ ॥ ಅಥೋ ವಿಧಾತುರ್ಮುಖತೋ ವಿನಿಃಸೃತಾನ್
ವೇದಾನ್ಹಯಾಸ್ಯೋ ಜಗೃಹೇಽಸುರೇಂದ್ರಃ ॥
ನಿಹತ್ಯ ತಂ ಮತ್ಸ್ಯವಪುರ್ಜಗೋಪ
ಮನುಂ ಮುನೀಂಸ್ತಾಂಶ್ಚ ದದೌ ವಿಧಾತುಃ ॥೪೨॥

ಅ ॥ ಆಮೇಲೆ ಹಯಗ್ರೀವನಾಮಕನಾದ ದೈತ್ಯಶ್ರೇಷ್ಠನು ಬ್ರಹ್ಮನ ಮುಖದಿಂದ ಹೊರಟ ವೇದಗಳನ್ನು (ದೇಹಧಾರಿಗಳಾದ ವೇದಾಭಿಮಾನಿಗಳನ್ನು) ಸ್ವೀಕರಿಸಿದನು. ಮತ್ಸ್ಯಾವತಾರನಾದ ಶ್ರೀ ಹರಿಯು ಆ ಹಯಗ್ರೀವಾಸುರನನ್ನು ಸಂಹರಿಸಿ ವೈವಸ್ವತಮನುವನ್ನೂ ಸಪ್ತ ಋಷಿಗಳನ್ನೂ ಕೂಡ ರಕ್ಷಿಸಿದನು. ಆ ವೇದಗಳನ್ನು ಬ್ರಹ್ಮನಿಗೆ ಕೊಟ್ಟನು ॥೪೨॥

ಮೂ ॥ ಮನ್ವಂತರಪ್ರಲಯೇ ಮತ್ಸ್ಯರೂಪೀ
ವಿದ್ಯಾನುದಾನ್ನವೇ ದೇವದೇವಃ ॥
ವೈವಸ್ವತಾಯೋತ್ತಮಸಂವಿದಾತ್ಮಾ
ವಿಷ್ಣೋಃ ಸ್ವರೂಪಪ್ರತಿಪತ್ತಿರೂಪಾಂ ॥೪೩॥

ಅ ॥ ಮನ್ವಂತರ ಪ್ರಲಯವಲ್ಲಿ ದೇವತೆಗಳಿಗೂ ದೇವನಾದ ಸರ್ವೋತ್ಕೃಷ್ಟವಾದ ಜ್ಞಾನವೇ ಸ್ವರೂಪವಾಗಿವುಳ್ಳ ಮತ್ಸ್ಯರೂಪನಾದ ಶ್ರೀ ಹರಿಯು ವೈವಸ್ವತಮನುವಿಗೋಸ್ಕರ ವಿಷ್ಣುವಿನ ಸ್ವರೂಪದ ಯಥಾರ್ಥಜ್ಞಾನವನ್ನು ಹುಟ್ಟಿಸತಕ್ಕ ವಿದ್ಯೆಯನ್ನು ಕೊಟ್ಟನು. (ಈ ಮತ್ಸ್ಯಾವತಾರದಲ್ಲಿ 'ವೇದದಾನ, ವಿದ್ಯಾದಾನ' ಎಂದು ಎರಡು ಪ್ರಯೋಜನಗಳು.) ೪೩॥

ಮತ್ಸ್ಯಾವತಾರವಾದಮೇಲೆ ದೇವತೆಗಳು ಅಮೃತಮಥನವನ್ನು ಮಾಡುವಾಗ ಮಂದರ ಪರ್ವತವನ್ನು ಎತ್ತುವುದಕ್ಕಾಗಿ ಶ್ರೀ ಹರಿಯು ಕೂರ್ಮರೂಪದಿಂದ ಅವತರಿಸಿದನು. ನರ ಸಿಂಹಾವತಾರವನ್ನು ಮಾಡಿದ ಮೇಲೆ ದೇವತೆಗಳು ಅಮೃತಮಥನವನ್ನು ಮಾಡುವಾಗ ಆ ಕೂರ್ಮರೂಪಿಯೇ ಮಂದರಪರ್ವತವನ್ನು ಎತ್ತಿದನು. **'ಅನಂತೋಽಥೋ ಮಂದರಸ್ತು**

ಯದಾ ವೈವಸ್ವತಾಂತರೇ । ಅಮೃತಾರ್ಥಂ ಸುಪರ್ಣೋಽಧೋ ರೈವತಸ್ಯಾಂತರೇ ಮನೋಃ' ಎನ್ನುವ ವಚನದಿಂದೆಯಿಂದ ಕೂರ್ಮಾವತಾರವು ರೈವತಮನ್ವಂತರವಲ್ಲಿಯೂ ಇದೆ, ವೈವಸ್ವತಮನ್ವಂತರದಲ್ಲಿ ನೃಸಿಂಹಾವತಾರವಾದ ಮೇಲೆಯೂ ಇದೆ. ಆದಕಾರಣ ಅವರಿಬ್ಬರ ಕಥೆಯನ್ನು ಸಂಕಲೀಕರಿಸಿ ಹೇಳುತ್ತಾ ನರಸಿಂಹಾವತಾರದ ಕಥೆಯನ್ನು ಹೇಳುತ್ತಾರೆ—

ಮೂ ॥ ಅಥೋ ದಿತೇರ್ಜ್ಯೇಷ್ಠಸುತೇನ ಶಶ್ವತ್
ಪ್ರಪೀಡಿತಾ ಬ್ರಹ್ಮವರಾತ್ಸುರೇಶಾಃ ॥
ಹರಿಂ ವಿರಿಂಚೇನ ಸಹೋಪಜಗ್ಮು-
ರ್ದೌರಾತ್ಮ್ಯಮಸ್ಯಾಪಿ ಶಶಂಸುರಸ್ಮೈ ॥೪೪॥

ಅ ॥ ಆಮೇಲೆ ದಿತಿದೇವಿಯ ಜ್ಯೇಷ್ಠಮಗನಾದ ಹಿರಣ್ಯಕಶಿಪುವಿನಿಂದ ಬ್ರಹ್ಮನ ವರದಿಂದ ಯಾವಾಗಲೂ ಚೆನ್ನಾಗಿ ಪೀಡಿಸಿಕೊಳ್ಳಲ್ಪಟ್ಟ ದೇವಶ್ರೇಷ್ಠರು ಬ್ರಹ್ಮನಿಂದ ಕೂಡಿ ಕೊಂಡು ಶ್ರೀ ಹರಿಯನ್ನು ಹೊಂದಿದರು. ಈ ಹಿರಣ್ಯಕಶಿಪುವಿನಿಂದ ದುಷ್ಟತನವನ್ನು ಶ್ರೀ ಹರಿಗೋಸ್ಕರ ತಿಳಿಸಿದರು ॥೪೪॥

ಮೂ ॥ ಅಭಿಷ್ಟುತಸ್ತೈರ್ಹರಿರುಗ್ರವೀರ್ಯೋ
ನೃಸಿಂಹರೂಪೇಣ ಸ ಆವಿರಾಸೀತ್ ॥
ಹತ್ವಾ ಹಿರಣ್ಯಂ ಚ ಸುತಾಯ ತಸ್ಯ
ದತ್ವಾಭಯಂ ದೇವಗಣಾನತೋಷಯತ್ ॥೪೫॥

ಅ ॥ ದೇವತೆಗಳಿಂದ ಸ್ತೋತ್ರಮಾಡಿಸಿಕೊಳ್ಳಲ್ಪಟ್ಟ ಕ್ರೂರವಾದ ಪರಾಕ್ರಮವುಳ್ಳ ಆ ಶ್ರೀ ಹರಿಯು ನರಸಿಂಹರೂಪದಿಂದ ಪ್ರಾದುರ್ಭೂತನಾದನು. ಹಿರಣ್ಯಕಶಿಪುವನ್ನು ಸಂಹರಿಸಿ ಆತನ ಮಗನಾದ ಪ್ರಹ್ಲಾದನಿಗೋಸ್ಕರ ಅಭಯವನ್ನು ಕೊಟ್ಟು ದೇವತೆಗಳ ಸಮೂಹವನ್ನು ಸಂತೋಷಪಡಿಸಿದನು.

ಕೂರ್ಮಾವತಾರವನ್ನು ಹೇಳುತ್ತಾರೆ—

ಮೂ ॥ ಸುರಾಸುರಾಣಾಮುದಧಿಂ ವಿಮುಷ್ನತಾಂ
ದಧಾರ ಪೃಷ್ಠೇನ ಗಿರಿಂ ಸಮಂದರಂ ॥
ವರಪ್ರದಾನಾದಪರೈರಧಾರ್ಯಂ
ಹರಸ್ಯ ಕೂರ್ಮೋ ಬೃಹದಂಡಯೋಷಾ॥೪೬॥

ಅ ॥ ಬ್ರಹ್ಮಾಂಡಧಾರಕನಾದ ಆ ಕೂರ್ಮರೂಪಿಯಾದ ಶ್ರೀ ಹರಿಯು ದೇವಾಸುರರು ಸಮುದ್ರವನ್ನು ಮಥನಮಾಡುವಾಗ (ಸುವರ್ಣರೂಪನಾದಾಗ್ಯೂ ಆಶೆಯಿಂದ ನಿನ್ನನ್ನು ಯಾರೂ ಕೂಡ ಉದ್ಧರಿಸದೆ ಇರಲಿ ಎಂದು) ರುದ್ರದೇವರು ವರವನ್ನು ಕೊಟ್ಟಿರುವುದರಿಂದ ಇತರರಿಂದ ಧರಿಸಲಿಕ್ಕೆ ಅಶಕ್ಯವಾದ ಮಂದರ ಪರ್ವತವನ್ನು ಪೃಷ್ಠಭಾಗದಿಂದ ಧರಿಸಿದನು ॥೪೬॥

ವಾಮನಾವತಾರವನ್ನು ಹೇಳುತ್ತಾರೆ —

ಮೂ ॥ ವರಾದಜೇಯತ್ವಮವಾಪ ದೈತ್ಯರಾಟ್
ಚತುರ್ಮುಖಸ್ಯೈವ ಬಲಿರ್ಯದಾ ತದಾ ॥
ಅಜಾಯತೇಂದ್ರಾವರಜೋಽದಿತೇಃ ಸುತೋ
ಮಹಾನಜೋಽಪ್ಯಬ್ಜಭವಾದಿಸಂಸ್ತುತಃ ॥೪೭॥

ಅ ॥ ದೈತ್ಯಶ್ರೇಷ್ಠನಾದ ಬಲಿಚಕ್ರವರ್ತಿಯು ಬ್ರಹ್ಮನ ವರಪ್ರಧಾನದಿಂದ ಯಾವಾಗ ಅಜೇಯತ್ವವನ್ನು ಹೊಂದಿರುವನೋ ಆಗ ಬ್ರಹ್ಮಾದಿಗಳಿಂದ ಸ್ತುತಿಸಿಕೊಳ್ಳಲ್ಪಟ್ಟ ಶ್ರೀ ಹರಿಯೂ ಕೂಡ ಅದಿತಿಯ ಮಗನಾಗಿ ಶ್ರೇಷ್ಠನಾಗಿ ಇಂದ್ರನಿಗೆ ತಮ್ಮನಾಗಿ ಹುಟ್ಟಿದನು ॥೪೭॥

ಮೂ ॥ ಸ ವಾಮನಾತ್ಮಾಽಸುರಭೂಭೃತೋಽಧ್ವರಂ
ಜಗಾಮ ಗಾಂ ಸನ್ನಮಯನ್ಪದೇಪದೇ ॥
ಜಹಾರ ಚಾಸ್ಮಾಚ್ಚಲತಸ್ತ್ರಿವಿಷ್ಟಪಂ
ತ್ರಿಭಿಃ ಕ್ರಮೈಸ್ತಚ್ಚ ದದೌ ನಿಜಾಗ್ರಜೇ ॥೪೮॥

ಅ ॥ ಆ ವಾಮನರೂಪಿಯಾದ ಶ್ರೀ ಹರಿಯು ಪ್ರತಿ ಹೆಜ್ಜೆಯಲ್ಲಿಯೂ ಭೂಮಿಯನ್ನು ಬಗ್ಗಿಸುತ್ತಾ ದೈತ್ಯರ ಧುರಂಧರನಾದ ಬಲಿಚಕ್ರವರ್ತಿಯ ಯಾಗವನ್ನು ಹೊಂದಿದನು. ಈ ಬಲಿಚಕ್ರವರ್ತಿಯಿಂದ ಮೂರು ಪಾದವಿಕ್ಷೇಪಗಳಿಂದ ಸ್ವರ್ಗವನ್ನು ಕಪಟದಿಂದ (ಅಂದರೆ - ಮೂರು ಹೆಜ್ಜೆಯಾನ್ನು ಕೊಡು ಎಂದು ಸ್ಥೂಲಸೂಕ್ಷ್ಮಪದತ್ರಯಸಾಧಾರಣವಾದ ವಾಕ್ಯಪ್ರಯೋಗವಾಗುವಾಗ ತನ್ನ ಅಭಿಪ್ರಾಯವನ್ನು ತಿಳಿಯದೆ ಇದ್ದ ಬಲಿಚಕ್ರವರ್ತಿಯು ಆಣುಪದವನ್ನು ಅಪೇಕ್ಷಿಸಿ ಕೊಡುತ್ತೇನೆಂದು ಆಶಾಜನನಾದಿರೂಪವಾದ ಅರ್ಥವುಳ್ಳ ವಾಕ್ಯದೆಯಿಂದ ತನಗೆ ಅಭಿಪ್ರೇತವಾದ ಅರ್ಥವನ್ನು ತಿಳಿಸಿಕೊಡುತ್ತದೆ. ಅಥವಾ ಛಲಾಖ್ಯನಿಗ್ರಹಸ್ಥಾನದಿಂದ) ಬಲಿಚಕ್ರವರ್ತಿಯನ್ನು ತಿರಸ್ಕರಿಸಿ, ಅಪಹರಿಸಿದನು. ಆ ಸ್ವರ್ಗವನ್ನು ತನ್ನ ಅಣ್ಣನಾದ ಇಂದ್ರನಿಗೋಸ್ಕರ ಕೊಟ್ಟನು. ॥೪೮॥

ಬಲತ್ಕಾರದಿಂದ ಏಕೆ ಅಪಹರಿಸಲಿಲ್ಲವೆಂದರೆ —

ಮೂ ॥ ಪಿತಾಮಹೇನಾಸ್ಯ ಪುರಾಭಿಯೋಚಿತೋ
ಬಲೇಃ ಕೃತೇ ಕೇಶವ ಆಹ ಯದ್ವಚಃ ॥
ನಾಯಾಚ್ಞಯಾಹಂ ಪ್ರತಿಹನ್ಮಿ ತಂ ಬಲಿಂ
ಶುಭಾನನೇತ್ಯೇವ ತತೋಽಭ್ಯಯಾಚತ ॥೪೯॥

ಅ ॥ ಈ ಬಲಿಚಕ್ರವರ್ತಿಯ ಪಿತಾಮಹನಾದ ಪ್ರಹ್ಲಾದನಿಂದ ನರಸಿಂಹಾವತಾರಕಾಲದಲ್ಲಿ ಬಲಿಯನ್ನು ರಕ್ಷಿಸುವುದಕ್ಕಾಗಿ ಪ್ರಾರ್ಥಿಸಿಕೊಳ್ಳಲ್ಪಟ್ಟ ಕೇಶವನು ಯಾವ ಕಾರಣದಿಂದ ಮಾತನ್ನು ಹೇಳಿದನೋ ಆ ಕಾರಣ ಆ ವಚನನಿಮಿತ್ತದಿಂದ ಎಲೋ ಶೋಭನವಾದ ಮುಖವುಳ್ಳ ಪ್ರಹ್ಲಾದನೇ ನಾನು ಆ ಬಲಿಚಕ್ರವರ್ತಿಯನ್ನು ಪ್ರಾರ್ಥಿಸದೆ ಕೊಲ್ಲುವುದಿಲ್ಲ. (ಆದಕಾರಣ ಬೇಡಿದನು.) ॥೪೯॥

ಪರಶುರಾಮಾವತಾರವನ್ನು ಹೇಳುತ್ತಾರೆ

ಮೂ ॥ ಬಭೂವಿರೇ ಚಂದ್ರಲಲಾಮತೋ ವರಾತ್
ಪುರಾ ಹ್ಯಜೇಯಾ ಅಸುರಾ ಧರಾತಲೇ ॥
ತೈರರ್ದಿತಾ ವಾಸವನಾಯಕಾಃ ಸುರಾಃ
ಪುರೋ ನಿಧಾಯಾಬ್ಜಜನುಸ್ತುವನ್ಹರಿಂ ॥೫೨॥

ಅ ॥ ಚಂದ್ರನೇ ಭೂಷಣವಾಗಿವುಳ್ಳ ರುದ್ರನ ವರಪ್ರಧಾನದಿಂದ ಜಯಿಸಲಿಕ್ಕೆ ಅಶಕ್ಯರಾದ ಅಸುರರು ಮೊದಲು ಭೂತಲದಲ್ಲಿ (ಕ್ಷತ್ರಿಯರೂಪದಿಂದ) ಹುಟ್ಟಿರುವರು. ಆ ಅಸುರರಿಂದ ಪೀಡಿತರಾದ ಇಂದ್ರನೇ ಅಧಿಪತಿಯಾಗಿವುಳ್ಳ ದೇವತೆಗಳು ಬ್ರಹ್ಮನನ್ನು ಮುಂದೆ ಮಾಡಿಕೊಂಡು ಶ್ರೀ ಹರಿಯನ್ನು ಸ್ತೋತ್ರಮಾಡಿದರು ॥೫೦॥

ಸ್ತುತಿಯನ್ನೇ ಹೇಳುತ್ತಾರೆ—

ಮೂ ॥ ವಿರಿಂಚಸೃಷ್ಟೈರ್ನಿತರಾಮನಧ್ಯೈ
ವರಾದ್ವಿಧಾತುರ್ದಿತಿಜೌ ಹಿರಣ್ಯಕೌ ॥
ತಥಾ ಹಯಗ್ರೀವ ಉದಾರವಿಕ್ರಮಃ
ತ್ವಯಾ ಹತಾ ಬ್ರಹ್ಮಪುರಾತನೇನ ॥೫೧॥

ಅ ॥ ದೈತ್ಯರಾದ ಹಿರಣ್ಯಾಕ್ಷ-ಹಿರಣ್ಯಕಶಿಪುಗಳು ಬ್ರಹ್ಮನ ವರಪ್ರಧಾನದಿಂದ ಬ್ರಹ್ಮನಿಂದ ಸೃಷ್ಟಿಸಲ್ಪಟ್ಟ ದೇವತೆಗಳೂ ಮನುಷ್ಯರೂ (ಅಸುರರೂ ಇವರಿಂದ) ಅತ್ಯಂತವಾಗಿ ಅವಧ್ಯರಾಗಿ ಆದರು. ಅವರಿಬ್ಬರೂ ಹಾಗೆಯೇ ಉತ್ಕೃಷ್ಟವಾದ ಪರಾಕ್ರಮವುಳ್ಳ ಹಯಗ್ರೀವಾಸುರನೂ ಕೂಡ ಚತುರ್ಮುಖ ಬ್ರಹ್ಮನಿಗೂ ಆದಿಕಾಲೀನನಾದ ನಿನ್ನಿಂದ ಸಂಹರಿಸಿಕೊಳ್ಳಲ್ಪಟ್ಟರು ॥೫೧॥

ಮೂ ॥ ಸಚಾಸುರಾನ್ ರುದ್ರವರಾದವಧ್ಯಾನ್
ಇಮಾನ್ ಸಮಸ್ತೈರಪಿ ದೇವದೇವ ॥
ನಿಸ್ಸೀಮಶಕ್ತ್ಯೈವ ನಿಹತ್ಯ ಸರ್ವಾನ್
ಹೃದಂಬುಜೇ ನೋ ನಿವಸಾಥ ಶಶ್ವತ್ ॥೫೨॥

ಅ ॥ ಎಲೋ, ದೇವಾಧಿಪತಿಯೇ ! (ಯಾವ ನಿನ್ನಿಂದ ಸಂಹೃತರಾಗಿರುವರೋ) ಅಂತಪ ನೀನು ರುದ್ರನ ವರಪ್ರಧಾನದಿಂದ, ಎಲ್ಲರಿಂದಲೂ ಸಂಹರಿಸಿಕೊಳ್ಳಲ್ಪಡದಿರುವ ಈ ಎಲ್ಲಾ ಅಸುರರನ್ನೂ ಪೂರ್ಣಶಕ್ತಿಯಿಂದಲೇ ಸಂಹರಿಸಿ, ನಮ್ಮ ಹೃದಯಕಮಲದಲ್ಲಿ ಯಾವಾಗಲೂ ಆವಾಸಮಾಡು ॥೫೨॥

ಮೂ ॥ ಇತ್ಯಾದರೋಕ್ತಸ್ತ್ರಿದಶೈರಜೇಯಃ
ಸ ಶಾರ್ಙ್ಗಧನ್ವಾಥ ಭೃಗೂದ್ವಹೋಽಭೂತ್ ॥
ರಾಮೋ ನಿಹತ್ಯಾಸುರಪೂಗಮುಗ್ರಂ
ಹ್ರ(ನ) ದಾನನಾದಿರ್ವಿದಧೇಽಸೃಜೈವ ॥೫೩॥

ಅ ॥ ಈ ಪ್ರಕಾರವಾಗಿ ದೇವತೆಗಳಿಂದ ಭಕ್ತಿಪೂರ್ವಕವಾಗಿ ಹೇಳಿಸಿಕೊಳ್ಳಲ್ಪಟ್ಟ ಯಾರಿಂದಲೂ ಗೆಲ್ಲಲಿಕ್ಕೆ ಅಶಕ್ಯವಾದ ಆ ಶಾರ್ಙ್ಗಧಾರಿಯಾದ ಶ್ರೀ ನಾರಾಯಣನು ಭೃಗು ಗಳಿಗೆ ರಕ್ಷಕನಾದನು. ಅನಾದಿಯಾದ ಪರಶುರಾಮನು ಕ್ರೂರವಾದ ಅಸುರರ ಸಮುದಾಯವನ್ನು ಸಂಹರಿಸಿ ರಕ್ತದಿಂದಲೇ (ಕುರುಕ್ಷೇತ್ರದಲ್ಲಿ) ಐದು ನದಿಗಳನ್ನು ಮಾಡಿದನು ॥೫೩॥

ರಾಮಾವತಾರದ ಕಥೆಯನ್ನು ಹೇಳುವುದಕ್ಕಾಗಿ ಅದರ ಪ್ರಸಕ್ತಿಯನ್ನು ಹೇಳುತ್ತಾರೆ–

ಮೂ ॥ ತತಃ ಪುಲಸ್ತ್ಯಸ್ಯ ಕುಲೇ ಪ್ರಸೂತೌ
ತಾನಾದಿದೈತ್ಯೌ ಜಗದೇಕಶತ್ರೂ ॥
ಪರೈರವಧ್ಯೌ ವರತಃ ಪುರಾ ಹರೇಃ
ಸುರೈರಜೇಯೌ ಚ ವರಾದ್ವಿಧಾತುಃ ॥೫೪॥

ಅ ॥ ಆ ದಾವ ಆದಿಯಲ್ಲಿ ಹುಟ್ಟಿರುವ, ದಿತಿಪುತ್ರರಾದ, ಜಗತ್ತಿಗೆ ಮುಖ್ಯ ಶತ್ರುಗಳಾದ, (ಸನ್ನಿಂದಲೇ ನೀವು ಇಬ್ಬರೂ ಮೂರು ಜನ್ಮಗಳಲ್ಲಿಯೂ ಸಂಹೃತರಾಗಬೇಕು) ಎನ್ನುವ ಶ್ರೀ ಹರಿಯ ವರದಿಂದ ಇತರರಿಂದ ಅವಧ್ಯರಾದ, ಬ್ರಹ್ಮನ ವರಪ್ರಧಾನದಿಂದ ದೇವತೆಗಳಿಂದ ಜಯಿಸಲಿಕ್ಕೆ ಅಶಕ್ಯರಾದ ಹಿರಣಾಕ್ಷ–ಹಿರಣ್ಯಕಶಿಪುನಾಮಕರು ಪುಲಸ್ತ್ಯ ಋಷಿಯ ಕುಲದಲ್ಲಿ (ವಿಶ್ರವಸ್ ಋಷಿಯಿಂದ) ಹುಟ್ಟಿದರು ॥೫೪॥

'ಬ್ರಹ್ಮನ ವರಪ್ರಧಾನದಿಂದ' ಎಂದು ಹೇಳಿದ್ದನ್ನು ವಿಶದೀಕರಿಸುತ್ತಾರೆ—

ಮೂ ॥ ಸರ್ವೈರಜೇಯಃ ಸ ಚ ಕುಂಭಕರ್ಣಃ
ಪುರಾತನೇ ಜನ್ಮನಿ ಧಾತುರೇವ ॥
ವರಾನ್ನರಾದೀನ್ನೃತ ಏವ ರಾವಣಃ
ತದಾತನಃ ತ್ತೌ ತ್ರಿದಶಾನಬಾಧತಾಂ ॥೫೫॥

ಅ ॥ ಹಿರಣ್ಯಾಕ್ಷ ಜನ್ಮದಲ್ಲಿ 'ಆ ಕುಂಭಕರ್ಣನು (ನರವಾನರಾದಿಗಳನ್ನು ಹೊರತು ಎಲ್ಲರಿಂದಲೂ ಅಜೇಯನು' ಆಗಲಿ) ಎಂದು ಪೂರ್ವಜನ್ಮದಲ್ಲಿಯೇ ಬ್ರಹ್ಮನ ವರವಿದ್ದುದರಿಂದ ನರಾದಿಗಳನ್ನು ಹೊರತು ಸರ್ವರಿಂದಲೂ ಅಜೇಯನು. (ನಿದ್ರಾಳುವಾದ ಕುಂಭಕರ್ಣನಿಗೆ ಈ ಜನ್ಮದಲ್ಲಿರತಕ್ಕುದು ವರವಿಲ್ಲ) ರಾವಣನಾದರೂ ರಾವಣಜನ್ಮದಲ್ಲಿಯೇ ಇರತಕ್ಕ ನರಾದಿಗಳನ್ನು ಹೊರತು ಸರ್ವರಿಂದಲೂ ಅಜೇಯನು ಎನ್ನುವ ಬ್ರಹ್ಮನ ವರವಿದ್ದುದರಿಂದ ನರಾದಿಗಳನ್ನು ಹೊರತೇ ಸರ್ವರಿಂದಲೂ ಅಜೇಯನು, ಆ ರಾವಣ – ಕುಂಭಕರ್ಣರು ದೇವತೆಗಳನ್ನು ಬಾಧಿಸಿದರು ॥೫೫॥

ಮೂ ॥ ತದಾಬ್ಜಜಂ ಶೂಲಿಸಮೇವ ಚಾಗ್ರತೋ
ನಿಧಾಯ ದೇವಾಃ ಪುರುಹೂತಪೂರ್ವಕಾಃ ॥
ಪಯೋಂಬುಧೌ ಭೋಗಿಪಭೋಗಶಾಯಿನಂ
ಸಮೇತ್ಯ ಯೋಗ್ಯಾಂ ಸ್ತುತಿಮಭ್ಯಯೋಜಯನ್ ॥೫೬॥

ಅ ॥ ಬಾಧಿಸುತ್ತಿರುವ ಕಾಲದಲ್ಲಿ ದೇವೇಂದ್ರನೇ ಮೊದಲಾಗಿವುಳ್ಳ ದೇವತೆಗಳು ಬ್ರಹ್ಮನನ್ನೂ ರುದ್ರನನ್ನೂ ಇವರನ್ನೆ ಮುಂದೆಮಾಡಿಕೊಂಡು ಕ್ಷೀರಸಮುದ್ರದಲ್ಲಿ ಶೇಷನ ಶರೀರದಲ್ಲಿ ಮಲಗಿಕೊಂಡು ಇರುವ ಶ್ರೀ ಹರಿಯನ್ನು ಹೊಂದಿ ಯೋಗ್ಯವಾದ ಸ್ತೋತ್ರವನ್ನು ಮಾಡಿದರು ॥ ॥೫೭॥

ಮೂ ॥ ತ್ವಮೇಕ ಈಶಃ ಪರಮಃ ಸ್ವತಂತ್ರ-
ಸ್ತ್ವಮಾದಿರಂತೋ ಜಗತಾಂ (ತೋ) ನಿಯೋಕ್ತಾ ॥
ತ್ವದಾಜ್ಞಯೈವಾsಖಿಲಮಂಬುಜೋದ್ಭವಾ
ವಿತೇನಿರೇsಗ್ರ್ಯಾಶ್ಚ ರಮಾಶ್ಚ ಯೇsನ್ಯೇ ॥೫೭॥

ಅ ॥ ನೀನು ಒಬ್ಬನೇ ಮುಖ್ಯ ಸ್ವಾಮಿಯು, ಸರ್ವೋತ್ತಮನು, ಸರ್ವಸ್ವತಂತ್ರನು, ನೀನು ಆದಿಯಲ್ಲಿರತಕ್ಕವನು, ನೀನು ಅಂತ್ಯದಲ್ಲಿರತಕ್ಕವನು, ಜಗತ್ತುಗಳಿಗೆ ನಿಯಾಮಕನು, ಅತೀತಕಾಲದಲ್ಲಿರತಕ್ಕ ಬ್ರಹ್ಮರೂ ನಿನ್ನ ಆಜ್ಞೆಯಿಂದಲೇ ಎಲಾ ಜಗತ್ತನ್ನೂ ನಿರ್ಮಿಸಿರುವರು. ಇತರರಾದ ಯಾವ ಮುಂದಿನ ಬ್ರಹ್ಮರೋ, ಅವರೂ ಕೂಡಾ ಸೃಷ್ಟಿಸುವರು. ಈಗಿನ ಬ್ರಹ್ಮನೂ ಕೂಡ ಸೃಷ್ಟಿಸುತ್ತಾನೆ ॥೫೭॥

ಮೂ ॥ ಮನುಷ್ಯಮಾನಾತ್ತ್ರಿಶತಂ ಸಷಷ್ಟಿಕಂ
ದಿವೌಕಸಾಮೇಕಮುಶಂತಿ ವತ್ಸರಂ ॥
ದ್ವಿಷಟ್ ಸಹಸ್ರೈರಪಿ ತೈಶ್ಚತುರ್ಯುಗಂ
ತ್ರೇತಾದಿಭಿಃ ಸಾದಶ ಏವ ಹೀನೈಃ ॥೫೮॥

ಅ ॥ ಮನುಷ್ಯರ ಮಾನದೆಶೆಯಿಂದ ವರ್ಷಗಳು ಅರ್ವತ್ತ್ರಿಂದ ಸಹಿತವಾದ ಮುನ್ನೂರು ಸಂವತ್ಸರಗಳು ದೇವತೆಗಳಿಗೆ ಒಂದು ಸಂವತ್ಸರವನ್ನಾಗಿ ಇಚ್ಛಿಸುತ್ತಾರೆ. ಒಂದೊಂದು ಪಾದದಿಂದಲೇ ರಹಿತಗಳಾದ, ತ್ರೇತಾದಿ ಯುಗಗಳಿಂದ ಕೂಡಿಕೊಂಡು ಹನ್ನೆರಡುಸಹಸ್ರ ಸಂಖ್ಯಾಕ ಗಳಾದ ಆ ದೇವವರ್ಷಗಳಿಂದ ಚತುರ್ಯುಗವನ್ನು ಇಚ್ಛಿಸುತ್ತಾರೆ.

ವಿಶೇಷಾಂಶ— (1) ಮನುಷ್ಯರ ಮುನ್ನೂರ ಅರವತ್ತು (360) ವರುಷಗಳಿಗೆ ದೇವತೆಗಳಿಗೆ ಒಂದು (1) ವರುಷವಾಗುತ್ತದೆ. (2) ದೇವತೆಗಳ ಹನ್ನೆರಡು ಸಹಸ್ರ (12,000) ವರುಷಗಳಿಗೆ ನಾಲ್ಕು ಯುಗವಾಗುತ್ತದೆ. ೧ ಕೃತಯುಗಕ್ಕೆ ನಾಲ್ಕು ಸಹಸ್ರ (4000) ವರ್ಷಗಳು. ೨ ತ್ರೇತಾಯುಗಕ್ಕೆ ಏಕಸಹಸ್ರಾಖ್ಯಪಾದವು ಕಡಿಮೆ. ಮೂರು (3000) ಸಹಸ್ರವು. ಅಂತೂ ತ್ರೇತಾಯುಗವು ತ್ರಿಪಾದಿಯು. ೩ ಒಂದು ಪಾದವು ಕಡಿಮೆಯಾಗಿ ಎರಡು (2000) ಸಹಸ್ರವುಳ್ಳ ದ್ವಾಪರವೂ ಕೂಡ ದ್ವಿಪಾದಿಯು ಆಯಿತು. ೪ ಅದಕ್ಕಿಂತ ಒಂದು ಪಾದವು ಕಡಿಮೆಯಾಗಿ ಒಂದು (1000) ಸಹಸ್ರ ವರ್ಷಾತ್ಮಕವಾದುದು ಕಲಿಯುಗವು. ಇದಕ್ಕೆ ಒಂದು ಪಾದವು. ಅಂತೂ ಹತ್ತು (10,000) ಸಹಸ್ರ ವರ್ಷವಾಯಿತು. ಅವಶಿಷ್ಟವಾದುದು ಎರಡು (2000) ಸಹಸ್ರ ವರುಷ. ಅದರಲ್ಲಿ ಕಲಿಯುಗ-ಕೃತಯುಗ ಸಂಧಿಯಲ್ಲಿ ಎಂಟು ನೂರು (800) ವರುಷಗಳು, ಕೃತ-ತ್ರೇತಾಯುಗಸಂಧಿ ಆರುನೂರು (600), ತ್ರೇತಾ ದ್ವಾಪರಸಂಧಿ ನಾಲ್ಕು ನೂರು (400), ದ್ವಾಪರ-ಕಲಿಸಂಧಿ ಎರಡು ನೂರು (200), ಅಂತೂ ನಾಲ್ಕು ಯುಗವು ॥೫೮॥

ಮೂ ॥ ಸಹಸ್ರವೃತ್ತಂ ತದಹಃ ಸ್ವಯೆಂಭುವೋ
ನಿಶಾ ಚ ತನ್ಮಾನಮಿತಂ ಶರಚ್ಛತಂ ॥
ತ್ವದಾಜ್ಞಯಾ ಸ್ವಾನನುಭೂಯೆ ಭೋಗಾನ್
ಉಪೈತಿ ಸೋಽಪಿ ತ್ವರಿತಸ್ತ್ವದಂತಿಕಂ ॥೫೯॥

ಅ ॥ ನಾಲ್ಕು ಯುಗವು ಸಹಸ್ರವಾರ ಆವರ್ತಿತವಾದರೆ ಬ್ರಹ್ಮನ ದಿನವು (ಹಗಲು) ಆಗುತ್ತದೆ. ರಾತ್ರಿಯೂ ಕೂಡ ಅಷ್ಟೆ. (ಅಂದರೆ, ನಾಲ್ಕು ಯುಗವು ಸಹಸ್ರವೃತ್ತಿಯಾದರೆ ರಾತ್ರಿಯೂ ಆಗುತ್ತದೆ. ಹಿಂದೆಹೇಳಿದ ಅಹೋರಾತ್ರಿಮಾನದಿಂದ ಪರಿಮಿತವಾದುದು ನೂರು ಸಂವತ್ಸರಗಳಲ್ಲಿ ನಿನ್ನ ಆಜ್ಞೆಯಿಂದ ಸ್ವಕೀಯ ಭೋಗಗಳನ್ನು ಅನುಭವಿಸಿ ತ್ವರೆಯುಳ್ಳ ಆಬ್ರಹ್ಮನು ನಿನ್ನ ಸಮೀಪಕ್ಕೆ ಬರುತ್ತಾನೆ ॥೫೯॥

ಪ್ರಸಂಗಾನುಗುಣವಾದ ಸ್ತೋತ್ರವನ್ನು ಹೇಳುತ್ತಾರೆ—

ಮೂ ॥ ತ್ವಯಾ ಪುರಾ ಕರ್ಣಪುಟಾದ್ವಿನಿರ್ಮಿತೌ
ಮಹಾಸುರೌ ತೌ ಮಧುಕೈಟಭಾಖ್ಯೌ ॥
ಪ್ರಭಂಜನಾವೇಶವಶಾತ್ತ್ವದಾ (ತ್ತ್ವಯಾ) ಜ್ಞಯಾ
ಬಲೋದ್ಧತಾವಾಶು ಜಲೇಽಭ್ಯವರ್ಧತಾಂ ॥೬೦॥

ಅ ॥ ದೇವಸರ್ಗಗಿಂತ ಮೊದಲು ನಿನ್ನಿಂದ ಕರ್ಣಪುಟದೆಸೆಯಿಂದ ಯಾವ ಮಹಾಸುರರು ನಿರ್ಮಿಸಿಕೊಳ್ಳಲ್ಪಟ್ಟಿರುವರೋ ಆ ಮಧುಕೈಟಭನಾಮಕರಾದ ಮಹಾಸುರರು (ಅವರಲ್ಲಿ ಪ್ರವೇಶ ಮಾಡಬೇಕೆನ್ನುವ) ನಿನ್ನ ಆಜ್ಞೆಯಿಂದ ಪ್ರಳಯಮಾರುತದ ಆವೇಶದಿಂದ ದೃಪ್ತರಾಗಿ ಶೀಘ್ರದಲ್ಲಿ ಪ್ರಳಯ ಜಲದಲ್ಲಿ ಬೆಳೆದರು ॥೬೦॥

ಮೂ ॥ ತ್ವದಾಜ್ಞಯಾ ಬ್ರಹ್ಮವರಾದವಧ್ಯೌ
ಚಿಕ್ರೀಡಿಷಾಸಂಭವಯಾ ಮುಖೋದ್ಗತಾನ್ ॥
ಸ್ವಯೆಂಭುವೋ ವೇದಗಣಾನಹಾರ್ಷತಾಂ
ತದಾಭವಸ್ತ್ವಂ ಹಯಶಿರ್ಷ ಈಶ್ವರಃ ॥೬೧॥

ಅ ॥ ಕ್ರೀಡಿಸುವುದಕ್ಕೋಸ್ಕರ ಇಚ್ಛೆಯಿಂದ ಉತ್ಪತ್ತಿಯುಳ್ಳ (ಅಂದರೆ—ಕ್ರೀಡೇಚ್ಛೆಯಿಂದ ಕೊಡಲ್ಪಟ್ಟ) ನಿನ್ನ ಆಜ್ಞೆಯಿಂದ ಬ್ರಹ್ಮನ ವರದಿಂದ ಅವಧ್ಯರಾದ, ಬ್ರಹ್ಮನ ಮುಖದಿಂದ ಹೊರಗೆ ಬಂದಿರತಕ್ಕ ದೇಹಧಾರಿಗಳಾದ ವೇದಗಳಿಗೆ ಅವಾಂತರಾಭಿಮಾನಿಗಳಾದ ದೇವತೆಗಳನ್ನು ಸಂತೋಷಪಡಿಸಿದರು. ಆಗ ಈಶ್ವರನಾದಾಗ್ಯೂ ನೀನು ಹಯಗ್ರೀವರೂಪಿಯು ಆಗಿರುತ್ತಿ ॥೬೧॥

ಮೂ ॥ ಆಹೃತ್ಯ ವೇದಾನಖಿಲಾನ್ ಪ್ರದಾಯೆ
ಸ್ವಯೆಂಭುವೇ ತೌ ಚ ಜಘಂಥ ದಸ್ಯೂ ॥
ನಿಷ್ಪೀಡ್ಯ ತಾ ಊರುತಲೇ ಕರಾಭ್ಯಾಂ
ತನ್ಮೇದಸೈವಾಶ್ಮಚಕರ್ಥ ಮೇದಿನೀಂ ॥೬೨॥

ಅ ।। ನೀನು ಎಲ್ಲಾ ದೇವತೆಗಳನ್ನೂ ಅಪಹರಿಸಿ ತಂದು ಬ್ರಹ್ಮನಿಗೋಸ್ಕರ ವೇದಗಳನ್ನು ಕೊಟ್ಟು, ದಸ್ಯುಭೂತರಾದ ಮಧುಕೈಟಭರನ್ನು ಸಂಹರಿಸುತ್ತಿ. (ಹನನ ಪ್ರಕಾರವನ್ನೇ ತೋರಿಸುತ್ತಾರೆ) . ತೊಡೆಯ ಪ್ರದೇಶದಲ್ಲಿ ಹಸ್ತಗಳಿಂದ ಆ ಮಧುಕೈಟಭರನ್ನು ಪುಡಿಮಾಡಿ, ಆ ಮಧುಕೈಟಭರ ಮೇದಸ್ಸನ್ನುವ ಧಾತುವಿಶೇಷದಿಂದಲೇ ಭೂಮಿಯನ್ನು ಮಾಡಿರುತ್ತಿ ॥೬೨॥

ಮೂ ॥ ವಿನಂ ಸುರಾಣಾಂ ಚ ನಿಸರ್ಗಜಂ ಬಲಂ
ತಥಾಸುರಾಣಾಂ ವರದಾನಸಂಭವಂ ॥
ವಶೇ ತನ್ಮೈತದ್ದ್ವಯಮಪ್ಯತೋ ವಯಂ
ನಿವೇದಯಾಮಃ ಪಿತುರೇವ ತೇಽಖಿಲಂ ॥೬೩॥

ಅ ॥ ಹೀಗೆ ದೇವತೆಗಳಿಗೆ ಸ್ವಾಭಾವಿಕ ಬಲವು. ಹಾಗೆಯೇ ಅಸುರರಿಗೆ ವರವನ್ನು ಕೊಟ್ಟೋಣದರಿಂದುಂಟಾದ ಬಲವು. ಈ ಎರಡು ಬಲವು ಯಾವ ಕಾರಣದಿಂದ ನಿನ್ನ ಅಧೀನದಲ್ಲಿದೆಯೋ, ಆ ಕಾರಣ ನಾವು ತಂದೆಯಾದ ನಿನಗೆ ಎಲ್ಲವನ್ನೂ ತಿಳಿಸುತ್ತೇವೆ ॥೬೩॥

ಮೂ ॥ ಇಮೌ ಚ ರಕ್ಷೋಧಿಪತೀ ವರೋದ್ಧತೌ
ಜಹಿ ಸ್ವವೀರ್ಯೇಣ ನೃಷು ಪ್ರಜಾ (ಭೂ)ತಃ ॥
ಇತೀರಿತೇ ತೈರಖಿಲೈಃ ಸುರೇಶ್ವರೈಃ
ಬಭೂವ ರಾಮೋ ಜಗತೀಪತಿಃ ಪ್ರಭುಃ ॥೬೪॥

ಅ ॥ ನೀನು ಮನುಷ್ಯರಲ್ಲಿ ಹುಟ್ಟಿದವನಾಗಿ ತಮ್ಮ ಶೌರ್ಯದಿಂದ, ವರದಿಂದ ದೃಪ್ತರಾದ ರಾಕ್ಷಸರಿಗೆ ಅಧಿಪತಿಗಳಾದ ಈ ರಾವಣ ಕುಂಭಕರ್ಣರನ್ನು ಸಂಹರಿಸು. ಈ ಪ್ರಕಾರ ಎಲ್ಲಾ ದೇವಶ್ರೇಷ್ಠರಿಂದ ಹೇಳಿಸಿಕೊಳ್ಳಲ್ಪಡುತ್ತಿರಲು ಸರ್ವಜಗತ್ತುಗಳಿಗೆ ಅಧಿಪತಿಯಾದ ಶ್ರೀಹರಿಯು ರಾಮನಾಗಿ ಅವತರಿಸಿದನು ॥೬೪॥

ಮೂ ॥ ಸ ಕಶ್ಯಪಸ್ಯಾದಿತಿಗರ್ಭಜನ್ಮನೋ
ವಿವಸ್ವತಸ್ತಂತುಭವಸ್ಯ ಭೂಭೃತಃ ॥
ಗೃಹೇ ದಶಸ್ಯಂದನನಾಮಿನೋಽಭೂತ್
ಕೌಸಲ್ಯಕಾನಾಮ್ನಿ ತದರ್ಥಿತೇಷ್ಟಃ ॥೬೫॥

ಅ ॥ ತದರ್ಥಿತೇಷ್ಟಃ = ರಾಮಾಖ್ಯನಾದ ಪುತ್ರನನ್ನು ಇಚ್ಛಿಸುತ್ತಾ ಯಾಗದಿಂದ ಪೂಜಿಸಿಕೊಳ್ಳಲ್ಪಟ್ಟ ಶ್ರೀರಾಮನು ಕಶ್ಯಪಋಷಿಯ ಸಕಾಶದೆಶೆಯಿಂದ, ಅದಿತಿಗರ್ಭದೆಶೆಯಿಂದ ಉತ್ಪತ್ತಿಯುಳ್ಳ, ಸೂರ್ಯನ ವಂಶದಲ್ಲಿ ಹುಟ್ಟಿರುವ ದಶರಥನೆಂದು ಹೆಸರುಳ್ಳ ರಾಜನ ಕೌಸಲ್ಯಾ ಎಂದು ಹೆಸರುಳ್ಳ ಹೆಂಡತಿಯಲ್ಲಿ ಅವತರಿಸಿದನು ॥೬೫॥

ಮೂ ॥ ತದಾಜ್ಞಯಾ ದೇವಗಣಾ ಬಭೂವಿರೇ
ಪುರೈವ ಪಶ್ಚಾದಪಿ ತಸ್ಯ ಭೂಮ್ನಃ ॥
ನಿಷೇವಣಾಯೋರುಗುಣಸ್ಯ ವಾನರೇ-
ಷ್ವಥೋ ಸರೇಷ್ವೇವ ಚ ಪಶ್ಚಿಮೋದ್ಭವಾಃ ॥೬೬॥

ಅ ॥ ಪೂರ್ಣಗುಣಗಳುಳ್ಳ ಭೂಮಶಬ್ದವಾಚ್ಯನಾದ ಶ್ರೀ ಹರಿಯ ಸೇವೆಗೋಸ್ಕರ ಶ್ರೀ ಹರಿಯ ಆಜ್ಞೆಯಿಂದ ದೇವತೆಗಳ ಸಮೂಹಗಳು ಶ್ರೀ ಹರಿಯ ಅವತಾರಕ್ಕಿಂತ ಮೊದಲೇ ಕಪಿಗಳಲ್ಲಿ ಅವತರಿಸಿದರು. ಮನುಷ್ಯರಲ್ಲಿ ಹುಟ್ಟಿರುವ ಲಕ್ಷ್ಮಣಾದಿಗಳು ಮೇಲೆ ಹುಟ್ಟಿದವರೆ.

ವಿಶೇಷಾಂಶ — (1) ಮೈಂದ, ವಿವಿಧ, ಜಾಂಬವಂತ-ಮೊದಲಾದವರು ವಾಲಿ, ಸುಗ್ರೀವ, ಹನುಮದಾದಿಗಳು–ಪ್ರಧಾನರು ಮೊದಲೇ ಹುಟ್ಟಿರುವರು. (2) ಪ್ರತಿ ದ್ವೀಪದಲ್ಲಿಯೂ, ಕೆಲವು ಅಂಗದಾದಿಗಳು ಶ್ರೀ ಹರಿಯ ಅವತಾರಕ್ಕಿಂತ ಮೇಲೆಯೂ ಕಪಿಗಳಲ್ಲಿ ಹುಟ್ಟಿರುವರು ॥೬೭॥

ಯಾರು ಎಲ್ಲಿ ಹುಟ್ಟಿರುತ್ತಾರೆ ಎಂದರೆ—

ಮೂ ॥ ಸ ದೇವತಾನಾಂ ಪ್ರಥಮೋ ಗುಣಾಧಿಕೋ
ಬಭೂವ ನಾಮ್ನಾ ಹನುಮಾನ್ಪ್ರಭಂಜನಃ ॥
ಸ ಸಂಭವನ್ಕೇಸರಿಣೋ ಗೃಹೇ ಪ್ರಭು-
ರ್ಬಭೂವ ವಾಲ್ಲೀ ಸ್ವತ ಏವ ವಾಸವಃ ॥೬೭॥

ಅ" ದೇವತೆಗಳಲ್ಲಿ ಆದ್ಯರಾದ, ಗುಣಗಳಿಂದ ಶ್ರೇಷ್ಠರಾದ, ಸಮರ್ಥರಾದ ಆ ವಾಯು ದೇವರು ಮರುತ್ಪರಾವತಾರಭೂತನಾದ ಕಪಿಯ ಭಾರ್ಯಳಾದ ಅಂಜನಾದೇವಿಯಲ್ಲಿ ಸ್ವೇಚ್ಛೆಯಿಂದಲೇ ಉತ್ಪತ್ತಿಯುಳ್ಳ, ಆಥವಾ ಸ್ವಶಬ್ದವಾಚ್ಯನಾದ ಪರಮಾತ್ಮನ ಆಜ್ಞೆಯಿಂದಲೇ ಉತ್ಪತ್ತಿಯುಳ್ಳ, ಹನುಮಾನ್ ಎನ್ನುವ ನಾಮದಿಂದ ಅವತರಿಸಿದರು. ದೇವೇಂದ್ರನು ಸ್ವೇಚ್ಛೆಯಿಂದಲೇ, ಪರ್ಯಾಜ್ಞೆಯಿಂದಲೇ ವಾಲಿಯಾಗಿ ಅವತರಿಸಿದನು ॥೬೭॥

ಮೂ ॥ ಸುಗ್ರೀವ ಆಸೀತ್ಪರಮೇಷ್ಠಿ ತೇಜಸಾ
ಯುತೋ ರವಿಃ ಸ್ವಾತ್ಮತ ಏವ ಜಾಂಬವಾನ್ ॥
ಯ ಏವ ಪೂರ್ವಂ ಪರಮೇಷ್ಠಿನಕ್ಷಸ-
ಸ್ತ್ವಗುದ್ಭವೋ ಧರ್ಮ ಇಹಾಸ್ಯತೋಽಭವತ್ ॥೬೮॥

ಅ ॥ ಸೂರ್ಯನು ಬ್ರಹ್ಮನ ಆವೇಶದಿಂದ ಯುಕ್ತನಾಗಿ ತನ್ನ ಮನಸ್ಸಿನಿಂದಲೇ ಶ್ರೀ ಹರಿಯ ಆಜ್ಞೆಯಿಂದಲಾಗಲೀ ಸುಗ್ರೀವನು ಆದನು. ಯಾರು ಮೊದಲು ಬ್ರಹ್ಮನ ವಕ್ಷಃಸ್ಥಳದ ತ್ವಕ್(ಚರ್ಮ)ನಿಂದ ಹುಟ್ಟಿದ ಧರ್ಮನೋ ಆತನು ಇಲ್ಲಿ ಬ್ರಹ್ಮನ ಆವೇಶದಿಂದ ಕೂಡಿದವನಾಗಿ ಬ್ರಹ್ಮನ ಮುಖದಿಂದ ಜಾಂಬವಂತನಾಮಕನಾಗಿ ಹುಟ್ಟಿದನು ॥೬೮॥

ಹಿಂದೆ ಹೇಳಿದ ಅರ್ಥವನ್ನೇ ವಿವರಿಸುತ್ತಾರೆ—

ಮೂ ॥ ಯ ಏವ ಸೂರ್ಯಾತ್ಮನರೇವ ಸಂಜ್ಞಯಾ
ನಾಮ್ನಾ ಯಮೋ ದಕ್ಷಿಣ ದಿಕ್ಪ ಆಸೀತ್ ॥
ಸ ಜಾಂಬವಾನ್ ದೈವತಕಾರ್ಯದರ್ಶಿನಾ
ಪುರೈವ ಸೃಷ್ಟೋ ಮುಖತಃ ಸ್ವಯಂಭುವಾ ॥೬೯॥

ಅ ॥ ಯಾವಾತನು ಸೂರ್ಯನದೆಶೆಯಿಂದ ಮತ್ತೊಂದಾವರ್ತಿಯೇ ಸಂಜ್ಞಾದೇವಿಯಿಂದ ನಾಮಧೇಯದಿಂದ ಯಮನೆಂದು ಪ್ರಸಿದ್ಧನಾಗಿ ದಕ್ಷಿಣದಿಕ್ಕಿಗೆ ಪಾಲಕನು ಆದನು. ಆ ಜಾಂಬವಂತನು ದೇವತೆಗಳ ಕಾರ್ಯವನ್ನು ಕಾಣತಕ್ಕ ಬ್ರಹ್ಮನ ಮುಖದಿಂದ ಮೊದಲೇ ಸೃಷ್ಟಿಸಲ್ಪಟ್ಟನು ॥೬೯॥

ಮೂ ॥ ಬ್ರಹ್ಮೋದ್ಭವಃ ಸೋಮ ಉತಾಸ್ಯ ಸೂನೋ-
ರತ್ರೇರಭೂತ್ಸ್ರೋಕಂಗದ ಏವ ಜಾತಃ ॥
ಬೃಹಸ್ಪತಿಸ್ತಾರ ಉತೋ ಶಚೀ ಜ
ಶಕ್ರಸ್ಯ ಭಾರ್ಯ್ಯೇವ ಬಭೂವ ತಾರಾ ॥೭೦॥

ಅ ॥ (ಯಾರು) ಮೊದಲು ಬ್ರಹ್ಮನಿಂದ ಹುಟ್ಟಿದವನು ಅಂದರೆ ಬ್ರಹ್ಮನ ಶ್ರೋತ್ರದಿಂದ ಹುಟ್ಟಿದ ಸೋಮನೋ ಮತ್ತು ಯಾರು ಈ ಬ್ರಹ್ಮನ ಮಗನಾದ ಅತ್ರಿಋಷಿಯಿಂದಲೂ ಹುಟ್ಟಿರುವನೋ ಅವನೇ ಅಂಗದನಾಗಿ ಹುಟ್ಟಿರುವನು. ಬೃಹಸ್ಪತಿಯೇ ತಾರನಾಮಕ ಕಪಿಯಾಗಿ ಹುಟ್ಟಿದನು. ಮತ್ತು ದೇವೇಂದ್ರನ ಹೆಂಡತಿಯಾದ ಶಚೀದೇವಿಯೇ ತಾರಾ ನಾಮಕಳಾದಳು.

ವಿಶೇಷಾಂಶ— (1)ಧರ್ಮಃ ಎಂದೂ, ವೈವಸ್ವತಯಮ ಎಂದೂ ಎರಡು ರೂಪಗಳಿವೆ. (2) ಸೋಮನಿಗೂ ಬ್ರಹ್ಮನ ಶ್ರೋತ್ರೋತ್ಪತ್ತಿಯು, ಅತ್ರಿನೇತ್ರದಿಂದ ಉತ್ಪತ್ತಿಯು ಹೀಗೆ ಎರಡು ಪ್ರಕಾರವಿದೆ ॥೭೦॥

~~ಮೂ ॥ ಬೃಹಸ್ಪತಿರ್ಬ್ರಹ್ಮಸುತೋಽಪಿ ಪೂರ್ವಂ~~
ಸಹೈವ ಶಚ್ಯಾ ಮನಸೋಽಭಿಜಾತಃ ॥
ಬ್ರಹ್ಮೋದ್ಭವಸ್ಯಾಂಗಿರಸಃ ಸುತೋಽಭೂ-
ನ್ಮಾರೀಚಜಸ್ಯೈವ ಶಚೀ ಪುಲೋಮ್ನಃ ॥೭೧॥

ಅ ॥ ಬೃಹಸ್ಪತಿಯು ಮೊದಲು ಶಚೀದೇವಿಯಿಂದೊಡಗೂಡಿ ಮನಸ್ಸಿನಿಂದ ಹುಟ್ಟಿರುವನು. ಈ ಕಾರಣದಿಂದ ಬ್ರಹ್ಮನ ಪುತ್ರನಾದಾಗ್ಯೂ ಬ್ರಹ್ಮನಿಂದ ಹುಟ್ಟಿರುವ ಆಂಗೀರಸ ಋಷಿಗೆ ಮಗನೂ ಆದನು, ಕಾಶ್ಯಪನಿಂದ ಹುಟ್ಟಿದ ಪುಲೋಮಋಷಿಗೆ ಶಚೀದೇವಿಯೇ ಪೌಲೋಮಿಯಾಗಿ ಹುಟ್ಟಿದಳು ॥೭೧॥

ಬೃಹಸ್ಪತಿಗೆ ಮೊದಲು ತನ್ನ ಇಚ್ಛೆಯಿಂದ ಉತ್ಪತ್ತಿಯನ್ನು ಹೇಳಿರುವುದರಿಂದ ಆದನ್ನು ಹೇಳುವುದಕ್ಕಾಗಿ ಪುನಃ ಹೇಳುತ್ತಾರೆ—

ಮೂ ॥ ಸ ಏವ ಶಚ್ಯಾ ಸಹ ವಾನರೋಽಭೂ-
ತ್ಸ್ವಯಂಭುವೋ ದೇವಗುರುರ್ಬೃಹಸ್ಪತಿಃ ॥
ಅಭೂತ್ಪುಷೇಣೋ ವರುಣೋಽಶ್ವಿನೌ ಚ
ಬಭೂವತುಸ್ತೌ ವಿವಿದಶ್ಚ ಮೈಂದಃ ॥೭೨॥

ಅ ॥ ದೇವಗುರುವಾದ ೪ ಬ್ರಹಸ್ಪತ್ಯಾಚಾರ್ಯರೇ ಶಚಿಯಿಂದ ಕೂಡಿಕೊಂಡು ಬ್ರಹ್ಮನ ದೆಶೆಯಿಂದ ಅಥವಾ ತನ್ನಿಂದಲೇ ಉತ್ಪತ್ತಿಯುಳ್ಳವನಾಗಿ ಕಪಿಯು ಆಗನು, ವರುಣನು ಸುಷೇಣನಾಗಿ ಹುಟ್ಟಿದನು. ಆ ಅಶ್ವಿನೀದೇವತೆಗಳು-ವಿವಿದನೂ-ಮೈಂದನೂ ಆಗಿಜನಿಸಿದರು॥೭೨॥

ಮೂ ॥ ಬ್ರಹ್ಮೋದ್ಭವೌ ತೌ ಪುನರೇವ ಸೂರ್ಯ್ಯಾ-
ದ್ಬಭೂವತುಸ್ತತ್ರ ಕನೀಯಸಸ್ತು ॥
ಆವೇಶ ಐಂದ್ರೋ ವರದಾನತೋಽಭೂ-
ತ್ತತೋ ಬಲೀಯಾನ್ವಿವಿದೋ ಹಿ ಮೈಂದಾತ್ ॥೭೩॥

ಅ ॥ ಬ್ರಹ್ಮನ ನಾಸಾಪುಟದಿಂದ ಹುಟ್ಟಿರುವ ಆ ಅಶ್ವಿನೀದೇವತೆಗಳು ಮತ್ತೊಂದಾವರ್ತಿಯೇ ಸೂರ್ಯನದೆಶೆಯಿಂದ ಬಡಬಾರೂಪಿಣಿಯಾದ ಸೂರ್ಯನ ಪತ್ನಿಯಲ್ಲಿ ಹುಟ್ಟಿರುವರು. ಅದರಲ್ಲಿ ಕನಿಷ್ಠನಾದ ವಿವಿದನಿಗೆ ಇಂದ್ರಸಂಬಂಧಿಯಾದ ಆವೇಶವು ವರದಾನದಿಂದ ಆಯಿತು. ಆದಕಾರಣ ವಿವಿದನು ಮೈಂದನದೆಶೆಯಿಂದ ಬಲಿಷ್ಠನು, ಪ್ರಸಿದ್ಧವು. (ಅಂದರೆ ಕೃಷ್ಣಾವತಾರದಲ್ಲಿ ನರಕಾಸುರನ ಸಹಾಯದಿಂದ ಹೆಚ್ಚು ಬಲವಿದ್ದಪ್ರಯುಕ್ತ ಬಲೀಯಸ್ತ್ವವು ಪ್ರಸಿದ್ಧವು) ॥೭೩॥

ಮೂ ॥ ನಿಲೋಽಗ್ನಿರಾಸೀತ್ಕಮಲೋದ್ಭವೋತ್ಥಃ
ಕಾಮಃ ಪುನಃ ಶ್ರೀರಮಣಾದ್ರುಮಾಯಾಂ ॥
ಪ್ರದ್ಯುಮ್ನನಾಮಾಽಭವದೀವಿಶಾ-
ತ್ಸ ಸ್ಕಂದತಾಮಾಪ ಸ ಚಕ್ರತಾಂ ಚ ॥೭೪॥

ಅ ॥ ಬ್ರಹ್ಮನ ಮುಖದಿಂದ ಹುಟ್ಟಿದ ಅಗ್ನಿಯು ನೀಲನು ಆದನು. (ಹೀಗೆ ಮಾನರರಲ್ಲಿ ಹುಟ್ಟಿರತಕ್ಕ ದೇವತೆಗಳನ್ನು ಹೇಳಿ ಮನುಷ್ಯರಲ್ಲಿ ಹುಟ್ಟಿರುವವರನ್ನು ಹೇಳುವುದಕ್ಕಾಗಿ ಅವರ ಮೂಲರೂಪವನ್ನು ಬಿಡಿಸುತ್ತಾ ಪ್ರಸಂಗಸಂಗತಿಯಿಂದ ಕಥಾಂತರವನ್ನೂ ಹೇಳುತ್ತಾರೆ.) ಬ್ರಹ್ಮನ ಮನಸ್ಸಿನಿಂದ ಹುಟ್ಟಿರುವ ಕಾಮನು ಪುನಃ ಶ್ರೀಕೃಷ್ಣನದೆಶೆಯಿಂದ ರುಗ್ಮಿಣೀದೇವಿಯಲ್ಲಿ ಪ್ರದ್ಯುಮ್ನನಾಮಕನಾಗಿ ಹುಟ್ಟಿದನು. ಹೀಗೆಯೇ ಆ ಕಾಮನು ರುದ್ರನದೆಶೆಯಿಂದಲೂ ಸ್ಕಂದತ್ವವನ್ನು ಹೊಂದಿದನು. ಆ ಕಾಮನೇ ಶ್ರೀ ಹರಿಯ ಚಕ್ರಸ್ವರೂಪತ್ವವನ್ನು ಹೊಂದಿದನು॥೭೪॥

ಹಾಗಾದರೆ ಕಾಮನಿಗೆ ಚಕ್ರಸ್ವರೂಪತ್ವವಿದ್ದರೆ ಬ್ರಹ್ಮಪ್ರಳಯದಲ್ಲಿ ಚಕ್ರವು ಇಲ್ಲದೆ ಹೋಗಬೇಕಾಗುವುದು.

ಮೂ ॥ ಪೂರ್ವಂ ಹರೇಶ್ಚಕ್ರಮಭೂದ್ದುರ್ಗಾ
ತಮಃ ಸ್ಥಿತಾ ಶ್ರೀರಿತಿ ಯಾಂ ವದಂತಿ ॥
ಸತ್ತ್ವಾತ್ಮಿಕಾ ಶಂಖಮುಖೋ ರಜಸ್ಥಾ
ಭೂರ್ನಾಮಿಕಾ ಪದ್ಮಮಭೂದ್ಧರೇರ್ಹಿ ॥ ೭೫ ॥

ಅ ॥ ಮೊದಲು ತಮೋಭಿಮಾನಿನಿಯೊದ ದುರ್ಗಾದೇವಿಯು ಶ್ರೀ ಹರಿಗೆ ಚಕ್ರ ಸ್ವರೂಪಳು ಆದಳು, ಯಾವ ದುರ್ಗಾದೇವಿಯನ್ನು 'ಶ್ರೀಃ' ಎಂದು ಹೇಳುತ್ತಾರೋ, ಅವಳು

ಸತ್ವಸ್ವರೂಪಳಾಗಿ ಶಂಖಸ್ವರೂಪಳಾದಳು. ಆ ಮೇಲೆ ರಜೋಭಿಮಾನಿನಿಯೂ 'ಭೂಃ' ಎಂದು ಹೆಸರುಳ್ಳ ದೇವಿಯು ಶ್ರೀ ಹರಿಗೆ ಪದ್ಮವು ಆದಳು.

ವಿಶೇಷಾಂಶ— (1) ಚಕ್ರಕ್ಕೆ ಲೌಕಿಕ ಸಾದೃಶ್ಯಕ್ಕಾಗಿ ಸೂರ್ಯಬಿಂಬದಂತೆ ಆತ ನ್ಯೀತವಾದಪ್ರಯುಕ್ತ ನೀಲವರ್ಣ ತಮೋಭಿಮಾನಿನಿಯಾದ ದುರ್ಗಾಸ್ವರೂಪಶ್ವನ್ನು ಹೇಳಿರುವರು. (2) ಶಂಖವು ಶುಕ್ಲವರ್ಣವಾದಪ್ರಯುಕ್ತ ಶುಕ್ಲ ಸತ್ವಗುಣಕ್ಕೆ ಅಭಿಮಾನಿನಿಯಾದ ಶ್ರೀರೂಪವು. (3) ಪದ್ಮವು ರಕ್ತವರ್ಣವಾದಪ್ರಯುಕ್ತ ರಕ್ತವರ್ಣ ರಜೋಭಿಮಾನಿನಿಯಾದ ಭೂದೇವಿಯ ಸ್ವರೂಪವು ॥೭೫॥

ಮೂ ॥ ಗದಾ ತು ವಾಯುರ್ಬಲಸಂವಿದಾತ್ಮಾ
ಶಾರ್ಙ್ಗಂ ಚ (ರ್ಙ್ಗಶ್ಚ) ವಿದ್ಯೇತಿ ರಮೈವ ಖಡ್ಗಃ ॥
ದುರ್ಗಾತ್ಮಿಕಾ ಸೈವ ಚ ಚರ್ಮನಾಮ್ನಾ
ಪಂಚಾತ್ಮಕೋ ವಾರುತ ಏವ ಬಾಣಃ (ಣಾಃ) ॥೭೬॥

ಅ ॥ ಬಲಜ್ಞಾನಾತ್ಮಕರಾದ ವಾಯುದೇವರು ಗದಾ ಸ್ವರೂಪರು ಆದರು. (**'ಯೋ ದೇವೀ ಸರ್ವಭೂತೇಷು ವಿದ್ಯಾರೂಪೇಣ ಸಂಸ್ಥಿತಾ'** ಎನ್ನುವ ವಚನದೆಶೆಯಿಂದ್ದ ವಿದ್ಯಾಭಿಮಾನಿನಿಯಾದ ರಮಾದೇವಿಯೇ ಶಾರ್ಙ್ಗಾಖ್ಯ ಚಾಪಸ್ವರೂಪಳು. ದುರ್ಗಾಸ್ವರೂಪಳಾದವಳು—ಖಡ್ಗಶಬ್ದವಾಚ್ಯಳು, ಖಡ್ಗಾಭಿಮಾನಿನಿಯು. ಅವಳೇ ಚರ್ಮನಾಮಕಳೂ, ಚರ್ಮಾಭಿಮಾನಿನಿಯೂ ಆವಳು ಪ್ರಾಣಾದಿ ಪಂಚಸ್ವರೂಪರಾದ ವಾಯುದೇವರೇ ಬಾಣಶಬ್ದವಾಚ್ಯರೂ, ಬಾಣಾಭಿಮಾನಿನಿಯೂ ಆದರು ॥೭೬॥

ಮೂ ॥ ಏವಂ ಸ್ಥಿತೇಷ್ವೇವ ಪುರಾತನೇಷು
ವರಾವ್ರಥಾಂಗತ್ವನುವಾಪ ಕಾಮಃ ॥
ತತ್ಸ್ಥಾನತಾಮಾಪ ಚ ಸೋऽನಿರುದ್ಧೋ
ಬ್ರಹ್ಮೋದ್ಭವಃ ಶಂಖತನುಃ ಪುರಾತ್ಮಾ ॥೭೭॥

ಅ ॥ ಪೂರ್ವೋಕ್ತಪ್ರಕಾರ ಪುರಾತನರು ಅಭಿಮಾನಿಗಳಾಗಿರುತ್ತಿರಲು ಕಾಮನು ವರದೆಶೆಯಿಂದ ಚಕ್ರಶಬ್ದವಾಚ್ಯತ್ವವನ್ನೂ, ಚಕ್ರಾಭಿಮಾನಿತ್ವವನ್ನೂ ಕೂಡ ಹೊಂದಿದನು. ಬ್ರಹ್ಮನಿಂದ ಹುಟ್ಟಿದ ಯಾವ ಅನಿರುದ್ಧನಾಮಕ ದೇವನೋ ಅತನು ಶ್ರೀ ಕೃಷ್ಣಾವತಾರದಲ್ಲಿ ಪ್ರದ್ಯುಮ್ನನ ಪುತ್ರತ್ವವನ್ನು ಹೊಂದಿದನು. ಪುರುಷಾಕಾರರೂಪಿಯಾದ ಆ ಅನಿರುದ್ಧನು ಶಂಖಾಭಿಮಾನಿಯೂ, ಶಂಖನಾಮಕನೂ ಆದನು. ॥೭೭॥

ತಾವೇವ ಜಾತೌ ಭರತಶ್ಚ ನಾಮ್ನಾ
ಶತ್ರುಘ್ನ ಇತ್ಯೇವ ಚ ರಾವರೋऽನು ॥
ಪೂರ್ವಂ ಸುಮಿತ್ರಾತನಯಶ್ಚ ಶೇಷಃ
ಸ ಲಕ್ಷ್ಮಣೋ ನಾಮ ರಘೂತ್ತಮಾದನು ॥೭೮॥

ಅ ॥ ಆ ಪ್ರದುಮ್ನಾನಿರುದ್ಧರೇ ಭರತನೆನ್ನುವ ನಾಮದಿಂದಲೂ, ಶತ್ರುಘ್ನನೆನ್ನುವನಾಮದಿಂದಲೂ ಶ್ರೀರಾಮನ ಅನಂತರದಲ್ಲಿ ಹುಟ್ಟಿದರು. ಪೂರ್ವದಲ್ಲಿ (ಯಾರು) ಶೇಷನೋ, ಅವನು ಲಕ್ಷ್ಮಣನೆಂದುಪ್ರಸಿದ್ಧನಾಗಿ ಶ್ರೀರಾಮನ ಅನಂತರದಲ್ಲಿ ಸುಮಿತ್ರಾದೇವಿಯ ಮಗನಾಗಿ ಹುಟ್ಟಿದನು.

ವಿಶೇಷಾಂಶ— (ವಾದಿರಾಜೀಯ) (1) ಪ್ರದ್ಯುಮ್ನ-ಅನಿರುದ್ಧರೇ ಭರತಶತ್ರುಘ್ನರಾಗಿ ಹುಟ್ಟಿರುವರು. ಶ್ರೀ ರಾಮನ ಅನಂತರದಲ್ಲಿ ಕೈಕೇಯಿಯಾ ದೇವಿಯಲ್ಲಿ ಭರತನು ಹುಟ್ಟಿದನು, ಶತ್ರುಘ್ನನೂ, ಲಕ್ಷ್ಮಣನೂ ಕೂಡ ಸುಮಿತ್ರಾದೇವಿಯಲ್ಲಿ ಶ್ರೀ ರಾಮಚಂದ್ರದೇವರ ನಂತರ ಹುಟ್ಟಿರುವರು. (2) ಶ್ರೀ ರಾಮನ ನಂತರ ಹುಟ್ಟಿದ, ಭರತನ ಅನಂತರದಲ್ಲಿ ಹುಟ್ಟಿದ ಲಕ್ಷ್ಮಣ–ಶತ್ರುಘ್ನರೂ ಕೂಡ ಸುತರಾಂ ಶ್ರೀ ರಾಮನ ನಂತರ ಹುಟ್ಟಿದವರಾದುದರಿಂದ ರಘೂತ್ತಮಾದನು ಎಂದು ಹೇಳಿರುವರು, ತಥಾಚ ಭರತನು ಸಾಕ್ಷಾದನುಜನು. ಲಕ್ಷ್ಮಣ–ಶತ್ರುಘ್ನರು ಪರಂಪರಯಾ ಶ್ರೀ ರಾಮನ ತಮ್ಮಂದಿಯರು, (3) **'ಭರತೋನಾಮ ಕೈಕೇಯ್ಯಾಂ ಜಾತಃ ಸತ್ಯಪರಾಕ್ರಮಃ । ಅಥ ಲಕ್ಷ್ಮಣಶತ್ರುಘ್ನೌ ಸುಮಿತ್ರಾ ಸುಷುವೇ ಯಮೌ'** ॥ ಭರತನು ಕೈಕೇಯಿಯಲ್ಲಿ ಹುಟ್ಟಿದನು. ಆಮೇಲೆ ಲಕ್ಷ್ಮಣ–ಶತ್ರುಘ್ನರು ಸುಮಿತ್ರಾದೇವಿಯಲ್ಲಿ ಹುಟ್ಟಿದರು ಎಂದು ಬಾಲಕಾಂಡದಲ್ಲಿ ಹೇಳಿರುವರು.

(4) **'ಸೀತಾಯಾಃ ಲಕ್ಷ್ಮಣಸ್ಯಾಪಿ ವವಂದೇ ಚರಣಾವಸೌ'** ಎಂದು ಸಂಗ್ರಹದಲ್ಲಿ ಲಕ್ಷ್ಮಣನು ಭರತನಕ್ಕಿಂತ ದೊಡ್ಡವನೆಂದು ಹೇಳಿದೆ. ॥೭೮॥

ಸಾಮಾನ್ಯವಾಗಿ ನಾಲ್ಕು ಜನರಿಗೂ ಉತ್ಪತ್ತಿಯನ್ನು ಹೇಳಿ, ಈಗ ಮಾತೃ ವಿವೇಕವನ್ನು ಹೇಳುತ್ತಾರೆ—

ಮೂ ॥ ಕೌಸಲ್ಯಕಾ ಪುತ್ರ ಉರುಕ್ರಮೋಽಸಾ-
ವೇಕಸ್ತಥೈಕೋ ಭರತಸ್ಯ ಮಾತುಃ ॥
ಉಭೌ ಸುಮಿತ್ರಾತನಯೌ ನೃಪಸ್ಯ
ಚತ್ವಾರ ಏತೇ ಹ್ಯಮರೋತ್ತಮಾಃ ಸುತಾಃ ॥೭೯॥

~~ಅ ॥ ಈ ದಾವ ಬಹುಪರಾಕ್ರಮವುಳ್ಳ ಶ್ರೀ ಭಗವಾನೊಬ್ಬನು ಕೌಸಲ್ಯೆಯ ಮಗನು.~~
ಹಾಗೆಯೇ ಭರತನ ತಾಯಿಯಾದ ಕೈಕೇಯಿಗೆ ಭರತನೊಬ್ಬನು. ಸುಮಿತ್ರಾದೇವಿಯ ಮಕ್ಕಳಿಬ್ಬರೂ ಲಕ್ಷ್ಮಣ–ಶತ್ರುಘ್ನರು. ರಾಜನಿಗೆ ಈ ದೇವೋತ್ತಮರು ನಾಲ್ಕು ಜನರು ಮಕ್ಕಳು ॥೭೯॥

ಸಂಕರ್ಷಣಾದ್ಯೈಸ್ತ್ರಿಭಿರೇವ ರೂಪೈ
ರಾವಿಷ್ಟ ಆಸೀತ್ತ್ರಿಷು ತೇಷು ವಿಷ್ಣುಃ ॥
ಇಂದ್ರೋಽಂಗದೇ ಚೈವ ತತೋಽಂಗದೋ ಹಿ
ಬಲೀ ನಿತಾಂತಂ ಸ ಬಭೂವ ಶಶ್ವತ್ ॥೮೦॥

ಅ ॥ ಶ್ರೀ ಹರಿಯು ಆ ಮೂವರಲ್ಲಿ ಸಂಕರ್ಷಣ ಮೊದಲಾದ ಮೂರು ರೂಪಗಳಿಂದಲೇ ಪ್ರವಿಷ್ಟನು ಆದನು; ಇಂದ್ರನು ಅಂಗದನಲ್ಲಿ ಪ್ರವಿಷ್ಟನಾದನು. ಆ ಕಾರಣ ಆ ಅಂಗದನು ಯಾವಾಗಲೂ ಅತ್ಯಂತವಾಗಿ ಬಲಿಷ್ಟನು ಆದನು.

ವಿಶೇಷಾಂಶ— (1) **'ದುಷ್ಟಾನಾಂ ನಿಗ್ರಹಾರ್ಥಾಯ ಚತುರ್ಮೂರ್ತಿರ್ಜನಾರ್ದನಃ । ಜಾತೋ ರಘುಕುಲೇ ರಾಜನ್ ಪುತ್ರೋ ದಶರಥಸ್ಯ ತು ॥ ಅಂಶೇನ ವಾಸುದೇವಸ್ಯ ಜಾತೋ ರಾಮೋ ಮಹಾಯಶಾಃ । ಸಂಕರ್ಷಣಸ್ಯ ಚಾಂಶೇನ ಲಕ್ಷ್ಮಣಃ ಪರವೀರಹಾ ॥ ಪ್ರದ್ಯುಮ್ನಸ್ಯ ತಥಾಂಶೇನ ಭರತೋ ಧರ್ಮವತ್ಸಲಃ । ಅನಿರುದ್ಧಸ್ಯ ಚಾಂಶೇನ ಶತ್ರುಘ್ನಸ್ತು ಮಹಾಬಲಃ'** ॥ ಎಂದು ಹೇಳಿಯದೆ ॥೮೦॥

ಆವೇಶ ಪ್ರಸಂಗದಿಂದ, ಒಂದೇ ಉಕ್ತಿಯಿಂದ ವಿಶೇಷಾವೇಶವನ್ನು ಹೇಳುತ್ತಾರೆ—

ಮೂ ॥ ಯೇಽನ್ಯೇ ಚ ಭೂಪಾಃ ಕೃತವೀರ್ಯಜಾದ್ಯಾ
ಬಲಾಧಿಕಾಃ ಸಂತಿ ಸಹಸ್ರಶೋಽಪಿ ॥
ಸರ್ವೇ ಹರೇಃ ಸನ್ನಿಧಿಭಾವಯುಕ್ತಾ
ಧರ್ಮಪ್ರಧಾನಾಶ್ಚ ಗುಣಪ್ರಧಾನಾಃ ॥೮೧॥

ಅ ॥ ಯಾವ ಇತರರಾದ ಬಲಾಧಿಕರೂ, ಧರ್ಮಪ್ರಧಾನರೂ, ಗುಣಪ್ರಧಾನರೂ ಆದ ಕೃತವೀರ್ಯಜನಾದ ಕಾರ್ತವೀರ್ಯ, ಸಹಸ್ರಾರ್ಜುನನೇ ಮೊದಲಾದವರು ಇರುತ್ತಾರೋ ಅವರೆಲ್ಲರೂ ಶ್ರೀಹರಿಯ ಸನ್ನಿಧಾನದಿಂದಲೂ ಯುಕ್ತರಾಗಿರುತ್ತಾರೆ ॥೮೧॥

ಶ್ರೀರಾಮನಿಗೆ ಉತ್ಪತ್ತಿಯನ್ನು ಹೇಳಿ ರಾಮನಿಂದ ಅವಿನಾಭೂತಗಳಾದ ಲಕ್ಷ್ಮಿಗೂ ಉತ್ಪತ್ತಿಯನ್ನು ಸಕಾರಣವಾಗಿ ಹೇಳುತ್ತಾರೆ—

ಮೂ ॥ ಸ್ವಯಂ ರಮಾ ಶ್ರೀರತ ಏವ ಜಾತಾ
ಸೀತೇತಿ ರಾಮಾರ್ಥಮನೂಪಮಾಯಾ ॥
ವಿದೇಹರಾಜಸ್ಯ ಹಿ ಯಜ್ಞಭೂಮ್ಯಾಂ
ಸುತೇತಿ ತಸ್ಯೈವ ತತಸ್ತು ಸಾಽಭೂತ್ ॥೮೨॥

ಅ ॥ ಅತ್ಯುತ್ಕರ್ಷವಿಮ್ದದರಿಂದ ಸಾದೃಶ್ಯವಿಲ್ಲದಿರುವ ಸ್ವತಂತ್ರನಾದ ಪರಮಾತ್ಮನಿಂದ ತಾನೇವೇ ಸದಾ ರಮಿಸುವಪ್ರಯುಕ್ತ ಸ್ವಯಂ ರಮಾ, ಇಂತಹ ಯಾವ ರಮಾದೇವಿಯೋ ಅವಳು ಜನಕರಾಜನ ಯಜ್ಞಭೂಮಿಯಲ್ಲಿ ಲಾಂಗಲದಿಂದಲೇ ರಾಮನಿಗೋಸ್ಕರ ಸೀತಾ ಎಂದು ನಾಮಕರಣವಾಗಿ ಹುಟ್ಟಿದಳು. ಆ ಮೇಲೆ ಆ ಸೀತಾದೇವಿಯು ಜನಕರಾಜನಿಗೇನೇ ಮಗಳು ಎಂದು ಪ್ರಸಿದ್ಧಳಾದಳು ॥೮೨॥

ಉಪಸಂಹಾರ ವ್ಯಾಜದಿಂದ ಈ ಸೃಷ್ಟಿಯು ತಾರತಮ್ಯಕ್ಕೆ ಜ್ಞಾಪಕವೆನ್ನುತ್ತಾರೆ—

ಮೂ ॥ ಇತ್ಯಾದಿಕಲ್ಪೋತ್ಥಿತ ಏಷ ಸರ್ಗೋ
ಮಯಾ ಸನುಸ್ತಾಗನುನಿರ್ಣಯೇನ ॥
ಸಹಾನುಸರ್ಗಃ ಕಥಿತೋಽತ್ರ ಪೂರ್ವೋ
ಯೋ ಯೋ ಗುಣೈರ್ನಿತ್ಯಮುಸೌ ವರೋ ಹಿ ॥೮೩॥

ಅ ॥ ಆದಿಕಲ್ಪದಲ್ಲಿ ಉಂಟಾದ ಸಮಸ್ತ ಆಗಮಗಳ ನಿರ್ಣಯವನ್ನುಂಟುಮಾಡತಕ್ಕ ಈ ತತ್ವಸರ್ಗವು ಬ್ರಹ್ಮಾಂಡದೊಳಗೆ ಇರತಕ್ಕುದು; ಅಂಡದ ಅಂತಃಸೃಷ್ಟಿಯಿಂದ ಸಹಿತವಾದುದು. ಎಂದು ನನ್ನಿಂದ ಹೀಗೆ ಹೇಳಲ್ಪಟ್ಟಿದೆ. ತತ್ವಸೃಷ್ಟಿ, ಪಾದ್ಮಸೃಷ್ಟಿಗಳ ಮಧ್ಯದಲ್ಲಿ ಯಾವುಯಾವುದು ಪೂರ್ವೋತ್ಪನ್ನವೋ ಇದು ಗುಣಗಳಿಂದ ನಿತ್ಯದಲ್ಲಿಯೂ ಶ್ರೇಷ್ಠವಾದುದು.

ವಿಶೇಷಾಂಶ — (1) 'ಅನುಸರ್ಗೇಣ ಸಹಿತಃ ಸಹಾನುಸರ್ಗಃ' ಬ್ರಹ್ಮಾಂಡದ ಹೊರಗೆ ಶ್ರೀ ಹರಿಯಿಂದ ಮಾಡಲ್ಪಟ್ಟ ಸರ್ಗವು ಆದಿಸರ್ಗವೆನ್ನಿಸುತ್ತದೆ. ಬ್ರಹ್ಮಾಂಡದ ಒಳಗೆ ಬ್ರಹ್ಮನಿಂದ ಮಾಡಲ್ಪಟ್ಟ ಸರ್ಗವು ಅನುಸರ್ಗವೆನ್ನಿಸುತ್ತದೆ ॥೮೩॥

ಮೂ ॥ ಪಾಶ್ಚಾತ್ಯಕಲ್ಪೇಷ್ವಪಿ ಸರ್ಗಭೇದಾಃ
ಶ್ರುತೌ ಪುರಾಣೇಷ್ವಪಿ ಚಾನ್ಯಥೋಕ್ತಾಃ ॥
ನೋತ್ಕರ್ಷಹೇತುಃ ಪ್ರಥನುತ್ವಮೇಷು
ವಿಶೇಷವಾಕ್ಯೈರವಗಮ್ಯತೇ (ನೋ) ತತ್ ॥೮೪॥

ಅ ॥ ಪಾದ್ಮಕಲ್ಪದಿಂದ ಪಶ್ಚಿಮಕಲ್ಪಗಳಲ್ಲಿ ಅಂದರೆ ಪಾದ್ಮಕಲ್ಪದಿಂದ ಹಿಂದುಕಡೆಯಲ್ಲಿಯೂ, ಮುಂದುಕಡೆಯಲ್ಲಿಯೂ ಇರತಕ್ಕ ಎಲ್ಲಾ ಕಲ್ಪಗಳಲ್ಲಿಯೂ, ಶ್ರುತಿಯಲ್ಲಿಯೂ, ಪುರಾಣಗಳಲ್ಲಿಯೂ ಸೃಷ್ಟಿಪ್ರಭೇದಗಳು ಆದಿಕಲ್ಪದಲ್ಲಿ ಹೇಳಿದ ಸರ್ಗದಿಂದ ವಿಪರೀತವಾಗಿ ಹೇಳಲ್ಪಟ್ಟಿವೆ. ಈ ಪಾಶ್ಚಾತ್ಯಕಲ್ಪಗಳಲ್ಲಿ ಆದಿಯಲ್ಲಿ ಉತ್ಪತ್ತಿಯು ಉತ್ತಮತ್ವಕ್ಕೆ ಕಾರಣವಲ್ಲ, (ಹೀಗಾದರೆ ನಿರ್ಣಯವು ಹೇಗೆಂದರೆ —) ವಿಶೇಷ ಪ್ರಮಾಣಗಳಿಂದ ತಾರತಮ್ಯಾದಿಗಳು ತಿಳಿಯಲ್ಪಡುತ್ತವೆ ॥೮೪॥

ಇತಿ ಶ್ರೀಮದಾನಂದತೀರ್ಥಭಗವತ್ಪಾ (ದ) ದಾಚಾರ್ಯವಿರಚಿತೇ
ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯೇ ಸರ್ಗಾನುಸರ್ಗ (ಲಯ)
ಪ್ರಾದುರ್ಭಾವನಿರ್ಣಯೋನಾಮ ತೃತಿಯೋಽಧ್ಯಾಯಃ ॥೩॥

ಹೀಗೆ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರಿಂದ ನಿರ್ಮಿಸಿಕೊಳ್ಳಲ್ಪಟ್ಟ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯದಲ್ಲಿ ಸರ್ಗ — ಅನುಸರ್ಗ ಪ್ರಾದುರ್ಭಾವ ನಿರ್ಣಯವೆನ್ನುವ ಮೂರನೇ ಅಧ್ಯಾಯವು ಸಮಾಪ್ತವಾಯಿತು.

॥ ಶ್ರೀ ಕೃಷ್ಣಾರ್ಪಣಮಸ್ತು ॥